ಸಂಪಾದಕೀಯ

ಕವಿ ಬೇಂದ್ರೆ

ಕನ್ನಡದಲ್ಲಿ ಕಾವ್ಯರಚನೆ ಮಾಡುತ್ತಿರುವ ಎಲ್ಲರಿಗೂ ತೀರ್ಥರೂಪ ಸಮಾನರಾದ ಕವಿ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಇನ್ನಿಲ್ಲ. ಅವರು ಹುಟ್ಟು ಕವಿ. ಕನ್ನಡದ ಅತ್ಯುತ್ತಮ ಕವಿಗಳಲ್ಲಿ ಒಬ್ಬರು. ಇಪ್ಪತ್ತನೆಯ ಶತಮಾನದ ಪೂರ್ವಾರ್ಧದ ಅತ್ಯಂತ ಶ್ರೇಷ್ಠ ಕವಿ, ಬಹುಶಃ ಈ ಶತಮಾನದ ಅತ್ಯಂತ ಶ್ರೇಷ್ಠ ಕವಿ ಕೂಡ. ಇಂಥ ಕವಿ ತುಂಬು ವಯಸ್ಸಿನಲ್ಲಿ ಹೆಚ್ಚು ನಪೆಯದೆ ತೀರಿಕೊಂಡರೂ ಅವರನ್ನು ಬಲ್ಲವರಿಗೆ, ಅವರಿಗೆ ಅತ್ಯಂತ ಆಪ್ತರಾದವರಿಗೆ ಈ ಸಹಜ ಮರಣವೂ ದುಃಖಕರವೇ. ಆದರೆ ಬಹಳ ಮಹತ್ವದ ಈ ಕವಿ ತಮ್ಮ ವಿಶಾಲವಾದ ಕಾವ್ಯಶರೀರದಲ್ಲಿ ತಮ್ಮ ಅತ್ಯಂತ ಸೂಕ್ಷ್ಮವೂ ಆಪ್ತವೂ ಗಾಢವೂ ಆದ ಅನುಭವಗಳನ್ನು ಇಟ್ಟು ಹೋಗಿದ್ದಾರಾಗಿ ಅವರು ಮೃತರು ಅನ್ನುವಂತಿಲ್ಲ. ದೊಡ್ಡ ಕವಿಗಳ ಕೃತಿಗಳನ್ನು ಓದಿ ತಮ್ಮ ಬದುಕನ್ನು ಸಮೃದ್ಧಗೊಳಿಸಿಕೊಳ್ಳದೇ ಅವರನ್ನು ಪೂಜಿಸುತ್ತ ಹೊಗಳುತ್ತ ಅವರ ಪರವಾಗಿ ಕೈಯೆತ್ತುತ್ತ ಇರುವವರೇ ಹೆಚ್ಚು ಮಂದಿ. ಇನ್ನಾದರೂ ಬೇಂದ್ರೆ ಕಾವ್ಯದ ಸರಿಯಾದ ಅಭ್ಯಾಸವೂ ತೂಕವೂ ಪರೀಕ್ಷಣವೂ ಕನ್ನಡ ಕಾವ್ಯದ ಇತಿಹಾಸದ ದೃಷ್ಟಿಯಿಂದ, ಜಗತ್ತಿನ ಮಹಾ ಮಹಾ ಕವಿಗಳ ಜೊತೆಯಲ್ಲೇ ನಡೆಯಬೇಕಾಗಿದೆ. ಆದಕ್ಕೆ ತಕ್ಕ ನಿಷ್ಠುರ, ನಿಷ್ಪಕ್ಷಪಾತ, ವಸ್ತುನಿಷ್ಠವೂ, ಕೃತಿನಿಷ್ಠವೂ ಆದ ಕಾವ್ಯಾಭ್ಯಾಸಕ್ಕೆ ತಕ್ಕ ನೈತಿಕ, ವ್ಯಕ್ತಿ ನಿರಪೇಕ್ಷ ವಾತಾವರಣವನ್ನು ಕನ್ನಡದಲ್ಲಿ ನಿರ್ಮಿಸುವುದು ಸಾಹಿತ್ಯಪ್ರಿಯರೆಲ್ಲರ ಕರ್ತವ್ಯ. ಸದಾ ಆಸಂತುಷ್ಟರೂ ಆತೃಪ್ತರೂ ವೃದ್ಧಾಪ್ಯದಲ್ಲಿ 'ಕ್ರುದ್ಧವೃದ್ಧ'ರೂ ಆಗಿದ್ದ ಬೇಂದ್ರೆಯವರ ಆತ್ಮ ಶಾಂತಿಪಡೆಯಲಿ; ಅವರ ಕಾವ್ಯ ನಮ್ಮ ಮನಃಸ್ವಾಸ್ಥ್ಯ ರಕ್ಷಣೆಗೆ ಅನುಕೂಲಕರವಾಗಲಿ ಎಂದು ಹಾರೈಸುತ್ತೇವೆ.

ಸಾಹಿತ್ಯ–ಬದುಕು

ಸಾಹಿತ್ಯ ಬದುಕಿಗೆ ಕನ್ನಡಿ ಎಂಬ ಮಾತಿನಲ್ಲಿ ಸತ್ಯಾಂಶ ಇದೆ. ಆದರೆ ಅದು ಬದುಕಿನ ಕನ್ನಡಿ ಅಲ್ಲ. ಕನ್ನಡಿ ತೋರಬಲ್ಲದ್ದು ಹೊರಗೆರೆಗಳನ್ನೂ ಹೊರರೂಪವನ್ನೂ ಮಾತ್ರ; ಹೊರಗಿನದಕ್ಕೆ ಜೀವ ಕೊಡುವಂಥ ಬೆಳಗಿನದನ್ನು ಅದು ತೋರಲಾರದು. ಅದನ್ನು ತೋರಬಲ್ಲದ್ದು ಕಲಾಕೃತಿ. ಒಳಗಿದ್ದದ್ದನ್ನು ಸರಿಯಾಗಿ ಕಂಡಾಗ ಆದರಲ್ಲಿ ನಮಗೆ ಕಾಣುವುದು ವರ್ತಮಾನದ ವೇಷದಲ್ಲಿರುವ ನಿರಂತರತೆಯ ಮೂಲಬಿಂಬ. ಈ ಮಾತನ್ನು ಮರೆತು ರಚಿಸುವ ಲೇಖನ ಸಾಹಿತ್ಯವಲ್ಲ; ಕೇವಲ ವಾಚ್ಯವಾದ, ವರದಿ, ಒಂದೇ ಆಯಾಮವಿದ್ದು ಸುಳ್ಳನ್ನೇ ಸತ್ಯವೆಂದು ಭ್ರಮಿಸುವಂತೆ ಮಾಡುವ ಕೃತಕ; ಸಹಜ ಚಿತ್ರವಲ್ಲ. ಸಾಹಿತ್ಯವೆಂದರೆ ಶಬ್ದಗಳ ಆಡಂಬರವಲ್ಲ. ಶಬ್ದಗಳನ್ನು ಹಾಗೂ ಹೀಗೂ ಪೋಣಿಸಿ ದೊಡ್ಡ ದೊಡ್ಡ ವಿಚಾರಗಳನ್ನು ಹಾಗೆ ಸಣ್ಣದಾಗಿ ತೋರಿಸುವ ನಾಟಕವೂ ಅಲ್ಲ. ಅನುಭವ ರಕ್ತಗತವಾಗಿ, ರಕ್ತ ಧಾತುವಾಗಿ, ತಕ್ಕ ವಸ್ತುವಿನ ಗರ್ಭ ಪ್ರವೇಶ ಮಾಡಿ ತಿಂಗಳು ತುಂಬಿ ಹೊರಕ್ಕೆ ಬರುವ ಸಹಜವಾದರೂ ಅತ್ಯದ್ಭುತವಾಗಿರುವ ಸೃಷ್ಟಿ; ಸಾಮಾನ್ಯದಂತೆ ಕಂಡರೂ ಅಸಾಮಾನ್ಯ ವೈಶಿಷ್ಟ್ಯವುಳ್ಳ ಕೃತಿ. ಈ ರೀತಿ ಭಾವಮಿಸಿ ಪರಿಭಾವಿಸಿ ತಾಳ್ಮೆಯಿಂದ ವಿನಯದಿಂದ ಅನಂತಕಾಲದ ಪ್ರಜ್ಞೆಯಿಂದ ಭಾಷೆಯೆಂಬ ಅಮೂಲ್ಯ ಮಾನವ ಸಾಧನವನ್ನು ನಮ್ರತೆಯಿಂದ ಉಪಯೋಗಿಸಲು ಕಲಿಯುವುದೇ ಸಾಹಿತ್ಯದ ರಚನೆಯ ವ್ರತ; ಈ ವ್ರತ ಸಫಲವಾಗುವುದು ಕೂಡ ಆಕಸ್ಮಿಕವೇ ಎಂಬ ಅರಿವೂ ಆಗತ್ಯ. ಇಂಥ ಆಕಸ್ಮಿಕಗಳು ಮತ್ತೆ ಮತ್ತೆ ಸಂಭವಿಸುವುದೇ ದೊಡ್ಡ ಕವಿಯ ಅದೃಷ್ಟ. ಅದಿಲ್ಲದಿದ್ದರೆ ಎಲ್ಲವೂ ವ್ಯರ್ಥ: ಜೊಳ್ಳು ಕುಟ್ಟಿದ ಹಾಗೆ, ನೀರು ಕಡೆದ ಹಾಗೆ; ಕನಸಿನಲ್ಲಿ ಕಂಡ ಮಾಣಿಕ್ಯದ ಹಾಗೆ. ಮೂಲತಃ ಸಾಹಿತ್ಯ

ವೆಂದರೆ ಭಾಷೆಯನ್ನು ಕಲಾತ್ಮಕವಾಗಿ ಎಂದರೆ ಸಂತೋಷ ಕೊಡುವ ಹಾಗೆ ಲಯಬದ್ಧವಾಗಿ ಬಳಸುವ ಶಕ್ತಿ. ದೊಡ್ಡ ದೊಡ್ಡ ಶಬ್ದಗಳ ಮೂಲಕ ಬರವಣಿಗೆ ಸಾಹಿತ್ಯ ವಾಗುವುದಿಲ್ಲ ; ದೊಡ್ಡ ದೊಡ್ಡ ವಸ್ತುಗಳನ್ನು ಆಯ್ದು ಕೊಳ್ಳುವುದರಿಂದಲೂ ಆಗುವುದಿಲ್ಲ. ಭಾವಕ್ಕೆ, ಸ್ವಾನು ಭವಕ್ಕೆ ತಕ್ಕ ಭಾಷೆಯನ್ನು ಓದಿದೊಡನೆ ಸಂತೋಷ ಕೊಡುವ ಹಾಗೆ ಬಳಸಬಲ್ಲ ವಿಶೇಷ ಶಕ್ತಿಯೇ ಸಾಹಿತ್ಯ ಸೃಷ್ಟಿ ಶಕ್ತಿ. ಅದು ಇಲ್ಲದೆ ಏನು ಮಾಡಿದರೂ ನಿರರ್ಥಕ.

ಈಗ ನಮ್ಮ ದೇಶದ ಬದುಕು ಅಸ್ವಸ್ಥವಾಗಿರುವುದು ನಮ್ಮೆಲ್ಲರ ಅನುಭವಕ್ಕೆ ಬರುವ ಸಂಗತಿ. ಪರಸ್ಪರ ವಿರೋಧ ಎಂದು ತೋರುವ, ಸ್ವಾರ್ಥ–ಪರಾರ್ಥ, ಇಹ–ಪರ, ರಾಗ–ವಿರಾಗ, ಭೋಗ–ತ್ಯಾಗ,—ಈ ದ್ವಂದ್ವಗಳನ್ನು ಸಮತೂಕದಲ್ಲಿಡುವುದನ್ನು ಕಲಿತಾಗಲೇ ಮನಸ್ಸು ಸ್ವಸ್ಥವಾಗುತ್ತದೆ. ಸಮಾಜ ಸ್ವಾಸ್ಥ್ಯವೂ ಸಿದ್ಧಿಸುತ್ತದೆ. ಅಂಥ ಸ್ವಾಸ್ಥ್ಯ ಈಗ ಇಲ್ಲವಾಗಿ ಸೃಷ್ಟಿ ಶಕ್ತಿಯೇ ನಷ್ಟವಾದಂತಾಗಿದೆ. ಎಲ್ಲೆಲ್ಲೂ ಕೋಲಾಹಲ, ಹಾಹಾಕಾರ, ಅಸೂಯೆ, ಸ್ವಾರ್ಥವೊಂದರ ಚಿಂತೆ, ಅನೀತಿ, ಅತ್ಯಾಚಾರ, ಕೊಲೆ, ಸುಲಿಗೆ. ಇಂಥ ದುಷ್ಕೃತ್ಯ ಗಳನ್ನು ನಡಸುವವರ ಸಂಖ್ಯೆ ಕಡಿಮೆ. ಆದರೆ ತನ್ನ ಸ್ವಸ್ಥತೆಯನ್ನು ಕಳೆದುಕೊಂಡ ಇಡೀ ಸಮಾಜವೇ ಈ ಎಲ್ಲವಕ್ಕೂ ಜವಾಬುದಾರ. ಸಮಾಜ ಎಂದರೆ ನಾನಲ್ಲ, ಬೇರೆಯವರು ಎಂದೂ ತಿಳಿಯಲಾಗದು. ಈ ಎಲ್ಲ ಅಮಾನುಷ, ಪಾಶವಿಕ, ರಾಕ್ಷಸಕೃತ್ಯಗಳಿಗೆ ನಾವೆಲ್ಲರೂ ಜವಾಬುದಾರರು. ನಮ್ಮ ನಿಷ್ಕ್ರಿಯತೆ, ನಮ್ಮ ಮೌನ, ನಮ್ಮ ಜಡವಾದ ಒಳ್ಳೆಯತನ ಇವು ದೌರ್ಜನ್ಯದ ಆಟಕ್ಕೆ ತಕ್ಕ ಹಿನ್ನೆಲೆಯನ್ನು ಒದಗಿಸುತ್ತಿವೆ. ಸಮತೂಕ ತಪ್ಪಿದ, ಸಮತೂಕವನ್ನು ಹೊಂದಲೂ ಯತ್ನಿಸದ ಇಂಥ ಸಾಮಾಜಿಕ ಪರಿಸ್ಥಿತಿಯಲ್ಲಿ ಅತ್ಯಂತ ಕೆಳಮಟ್ಟದ ಬದುಕು ಹೇಗೆ ಚೈತನ್ಯ ಭರಿತವಾಗುವುದೋ ಹಾಗೆಯೇ ಅತ್ಯಂತ ಕೆಳಮಟ್ಟದ ಬರವಣಿಗೆಯೂ ಪ್ರಾಶಸ್ತ್ಯಗಳಿಸು ತ್ತದೆ—ಕೋಳಿ ಕಾಳಗ, ಟಗರುಗಳ ಕಾಳಗ, ಚಾಕು ಬ್ಲೇಡು ಬಾಟ್ಲಿಗಳ ಮಹಾಸ್ತ್ರಪ್ರಯೋಗಗಳ ಹಾಗೆ. ಹಿಂದಿನ ಜಾತಿ ವ್ಯವಸ್ಥೆ, ವರ್ಗವ್ಯವಸ್ಥೆ, ರಾಷ್ಟ್ರವ್ಯವಸ್ಥೆ ಈ ಎಲ್ಲವೂ ಈಗ ವಿಘಟಿತವಾಗಿ ಹೋಗಿವೆ. ಹಿಂದಿನ ಆ ವ್ಯವಸ್ಥೆಗಳು ಮಾನವ ಸಮಾಜದ ಬೇರೆ ಬೇರೆ ಅಂಗ ಗಳೆಲ್ಲವೂ ಸಮಾಂತರವಾಗಿ ಇದ್ದೂ ತಮ್ಮ ಸ್ವಸ್ಥತೆ ಯನ್ನು ತಕ್ಕ ಮಟ್ಟಿಗೆ ಕಾದುಕೊಳ್ಳಲು ಸಮರ್ಥ ವಾಗಿದ್ದುವು. ಈಗ ಹಿಂದಿನ ವ್ಯವಸ್ಥೆಯೆಲ್ಲ ನಷ್ಟವಾಗಿ ಮಾನವ ಜಗತ್ತು ಹೊಸ ವ್ಯವಸ್ಥೆಗಾಗಿ ಹಾತೊರೆಯು ತ್ತಿದೆ. ಅದು ಸಿದ್ಧಿಸುವ ತನಕ ಶಾಂತಿ ಇಲ್ಲ. ಅಂಥ ಶಾಂತಿಗಾಗಿ ಹೆಣಗುವುದೇ ನಮ್ಮೆಲ್ಲರ, ಸಾಹಿತಿಗಳದ್ದೂ ಕೂಡ, ಪ್ರಯತ್ನ ಆಗಬೇಕಾಗಿದೆ. ಇಲ್ಲವಾದರೆ ಅಲ್ಪಕ್ಕೆ ಪಟ್ಟಾಭಿಷೇಕ, ಮಹತ್ತಾದುದಕ್ಕೆ ವನವಾಸ. ಆದರೆ ಅಲ್ಪವಾದದ್ದೂ ಮಹತ್ತಾದದ್ದೂ ತಮ್ಮ ತಮ್ಮ ಸ್ಥಾನ ಗಳನ್ನು ಹೊಂದಿಯೇ ತೀರುತ್ತವೆ ಕಾಲಕ್ರಮದಲ್ಲಿ ಎಂಬುದೊಂದೇ ಈಗ ನಮ್ಮನ್ನು ಬದುಕಿಸಬಹುದಾದ ನಂಬಿಕೆ.

ತನ್ನತನ–ಜೀವಜಗತ್ತು

ತನ್ನತನದ ಪ್ರಜ್ಞೆ ಎಲ್ಲಿ ನಿಚ್ಚಳವಾಗಿ ಇಲ್ಲವೋ ಅಲ್ಲಿ ಸಹಜವಾದ ಅರಿವೂ ಇಲ್ಲ, ಎಲ್ಲವನ್ನೂ ತಬ್ಬಬಲ್ಲ ಒಲವೂ ಮೂಡುವುದಿಲ್ಲ. ಆದಕಾರಣ ಪ್ರತಿಯೊಬ್ಬ ಮಾನವನ ವ್ಯಕ್ತಿತ್ವ ವಿಕಾಸ ಹೇಗೆ ಆಗಬೇಕು ಎಂಬುದರ ಬಗ್ಗೆ ಇಡೀ ಸಮಾಜ ಯೋಚಿಸಿ ಅದಕ್ಕೆ ತಕ್ಕ ಸಂಸ್ಕಾರ ವನ್ನು ಕೊಡಬಲ್ಲ ಶಿಕ್ಷಣ ಕ್ರಮವನ್ನು ರೂಪಿಸುವುದು ನಮ್ಮ ಸರಕಾರದ ಆದ್ಯ ಕರ್ತವ್ಯವಾಗಿತ್ತು. ಪ್ರತಿ ಯೊಬ್ಬನ ಒಂದೊಂದು ಓಟಿನ ಮೇಲೂ ಅವಲಂಬಿಸಿ ಕೊಂಡಿರುವ ರಾಜ್ಯ ಪದ್ಧತಿಯನ್ನು ಸ್ವೀಕರಿಸಿ ಅಂಥ ಒಂದು ಸಂವಿಧಾನವನ್ನು ಮಾಡಿಕೊಂಡು ಆ ಮೂಲಕವೇ ಅಧಿಕಾರಕ್ಕೆ ಬಂದ ನಮ್ಮ ಸರಕಾರಗಳು (ಅಲ್ಲ, ನಮ್ಮ ಸರಕಾರ) ನಮ್ಮ ದೇಶದ ಬಹುಜನವನ್ನು ಇನ್ನೂ ಅಜ್ಞಾ ರಾಗಿ, ವ್ಯಕ್ತಿತ್ವಶೂನ್ಯರಾಗಿ, ವಿವೇಕದಿಂದ ತಮ್ಮ ಹಕ್ಕನ್ನು ಚಲಾಯಿಸಲಾರದಂಥ ದುಃಸ್ಥಿತಿಯಲ್ಲಿಟ್ಟು ಮಂದೆಮತಗಳಿಂದಲೇ ಅಧಿಕಾರಕ್ಕೆ ಬರುತ್ತಾ ಇರು ವುದು ಭಾರೀ ದೊಡ್ಡ ದೇಶದ್ರೋಹದ ಕೆಲಸ. ರಾಜ್ಯ ಪದ್ಧತಿ ಮತ್ತು ಅಧಿಕಾರಕ್ಕೆ ಬರುವ ಸಾಧನ ಎರಡರ ನಡುವೆ ಇರುವ ಈ ಅಗಾಧ ವ್ಯತ್ಯಾಸ ನಮ್ಮ ಎಲ್ಲ ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಸಂಕಷ್ಟಗಳಿಗೆ ಮೂಲಕಾರಣ. ಇದರಿಂದ ಉತ್ಪನ್ನವಾದ ಅತಿಭೋಗಲಾಲಸೆ, ಯಾವ ಮಿತಿಯನ್ನೂ ಮನ್ನಿಸದ ಸ್ವೈರಾಚಾರ ಇವು ಇಡೀ ದೇಶದ ವಾತಾವರಣವನ್ನೇ ಕಲುಷಿತಗೊಳಿಸಿ ದೀನರೂ ದರಿದ್ರರೂ ಸಜ್ಜನರೂ

ಸಭ್ಯರೂ ಇಲ್ಲಿ ಬದುಕುವುದೇ ಅಸಾಧ್ಯ ಎನ್ನಿಸುವಂಥ ಪರಿಸ್ಥಿತಿ ಬಂದಿದೆ. ಸರ್ವಾಧಿಕಾರದ ರಾಕ್ಷಸ ಆಕಾಂಕ್ಷೆಗೆ ಸ್ವಾತಂತ್ರ್ಯದ ಗೋಡೆಗಳೆಲ್ಲ ಒಂದೊಂದಾಗಿ ಮುರಿದು ಬೀಳುತ್ತಿವೆ. ಕೊನೆಯದಾಗಿ ಉಳಿದಿರುವ ಪತ್ರಿಕಾ ಸ್ವಾತಂತ್ರ್ಯ, ನ್ಯಾಯಾಂಗ ಸ್ವಾತಂತ್ರ್ಯ ಇವೂ ಬಿರುಕು ಬಿಡುತ್ತಿವೆ. ಗಾಢಾಂಧಕಾರ ಮತ್ತೆ ಕವಿಯುವುದೋ ಎಂಬ ಶಂಕೆ ದಿನದಿನಕ್ಕೆ ಬಲವಾಗುತ್ತಿದೆ. ಸುತ್ತಲೂ ನರಿಗಳು ಊಳಿಡುತ್ತಿವೆ, ಹುಲಿ ಗರ್ಜಿಸುತ್ತಿವೆ; ಅವಕ್ಕಿಂತ ಹೆಚ್ಚಾಗಿ ಮನುಷ್ಯರೂಪದಲ್ಲೆ ಈ ರಾಕ್ಷಸ ಶಕ್ತಿಗಳು ನರ್ತನ ನಡೆಸತೊಡಗಿವೆ.

ಆದರೆ ಯಾವುದೂ ಕೊನೆಯದಲ್ಲ, ಪ್ರತಿಯೊಂದಕ್ಕೂ ಒಂದು ಕೊನೆ ಇದೆ ಎಂಬ ತಿಳಿವಳಿಕೆಯಿಂದ ನಾವು ನಮ್ಮ ವ್ಯಕ್ತಿತ್ವವನ್ನು ವಿಕಾಸಗೊಳಿಸುತ್ತ ಅದರ ಪರಿಧಿಯೊಳಗೆ ಸಕಲ ಮಾನವಲೋಕ ಮಾತ್ರವಲ್ಲ, ಪಶುಲೋಕವೂ ವನಸ್ಪತಿಲೋಕವೂ ಬರುವ ಹಾಗೆ ನಮ್ಮ ವಿವೇಕವನ್ನೂ ಪ್ರೇಮಶಕ್ತಿಯನ್ನೂ ಬೆಳೆಸಿಕೊಳ್ಳುತ್ತ ಹೋಗುವುದು ನಮ್ಮ ಕರ್ತವ್ಯ. ಇದು ಈ ಯುಗದ ಕರೆ : ತನ್ನತನ–ಜೀವಜಗತ್ತು, ಅಂತರಂಗ–ಬಹಿರಂಗ, ಇವೆಲ್ಲವೂ ಒಂದೇ ಎಂದ ಹೊಸ ಅರಿವನ್ನು ಪಡೆ, ಇಲ್ಲ ನಾಶವಾಗು.

ಸಾಕ್ಷಿಯ ಭವಿಷ್ಯ

ಹೊಸರೂಪದಲ್ಲಿ ಕಳೆದ ಮಾರ್ಚ್ ತಿಂಗಳಲ್ಲಿ ಆರಂಭವಾದ 'ಸಾಕ್ಷಿ'ಯ ಹನ್ನೊಂದನೆಯ ವರ್ಷದ ಡಿಸೆಂಬರ್ ಸಂಚಿಕೆ ಈಗ ಸಿದ್ಧವಾಗುತ್ತಿದೆ. ಮಾರ್ಚ್ ಸಂಚಿಕೆ ಯೊಂದನ್ನು ಬಿಟ್ಟು ಉಳಿದ ಯಾವುದನ್ನೂ ಕಾಲಕ್ಕೆ ಸರಿಯಾಗಿ ಹೊರತರುವುದು ಸಾಧ್ಯವಾಗಲೇ ಇಲ್ಲ. ಇದಕ್ಕೆ ಮುಖ್ಯವಾದ ಕಾರಣ 'ಸಾಕ್ಷಿ' ಬಯಸುವಂಥ ಲೇಖನಗಳನ್ನು ಸಂಗ್ರಹಿಸಲು ಆಗುತ್ತಿರುವ ಕಷ್ಟ. ಒಂದೊಂದು ಲೇಖನಕ್ಕಾಗಿ ತಿಂಗಳುಗಟ್ಟಲೆ ಕಾಯಬೇಕಾಗುತ್ತದೆ. ಇದರಿಂದ ಚಂದಾದಾರರಿಗೆ ಆಗಿರಬಹುದಾದ ತೊಂದರೆಗೆ ಇಲ್ಲಿ ಕ್ಷಮೆ ಕೋರುತ್ತೇವೆ. ಇಷ್ಟು ತಡವಾಗಿ ಸಂಚಿಕೆಗಳು ಬರುತ್ತಿದ್ದರೂ ನಮ್ಮ ಪ್ರಾಮಾಣಿಕತೆಯನ್ನೇ ಶಂಕಿಸಿ ಪತ್ರ ಬರೆದವರ ಸಂಖ್ಯೆ ಅತ್ಯಲ್ಪ — ಎರಡು ಮೂರಕ್ಕಿಂತ ಹೆಚ್ಚಿಲ್ಲ. ಇದು ಕೊಂಚ ಸಮಾಧಾನ ತರುವ ಸಂಗತಿ. ಈ ಕಷ್ಟದಿಂದ ಪಾರಾಗಲು 'ಸಾಕ್ಷಿ'ಯನ್ನು ನಿಲ್ಲಿಸಿ ಬಿಡೋಣವೇ ಅಂತಲೂ ಅನ್ನಿಸಿತ್ತು. ಆದರೆ ಇನ್ನೂ ಒಂದು ವರ್ಷ ನೋಡಿ, ಸಾಧ್ಯವಾದರೆ ಹೊಸ ಲೇಖಕರನ್ನು ಹೊಂದಿಸಿಕೊಂಡು 'ಸಾಕ್ಷಿ'ಯನ್ನು ಕಾಲಕ್ರಮಬದ್ಧವಾಗಿ ಹೊರತರಲು ಆಗಲೂ ಅಸಾಧ್ಯ ಎನ್ನಿಸಿದರೆ ನಿಲ್ಲಿಸುವುದು ಎಂದು ಕೊನೆಗೆ ನಿರ್ಧರಿಸಲಾಗಿದೆ. ಆದರೆ ಈ ನಡುವೆ 'ಸಾಕ್ಷಿ'ಗೆ ಬೆಂಬಲವಾಗಿ ನಿಂತ ಎಲ್ಲ ಚಂದಾದಾರರಿಗೂ, ಲೇಖಕರಿಗೂ, ಸಂಸ್ಥೆಗಳಿಗೂ, ಜಾಹೀರಾತು ನೀಡಿ ಸಹಕರಿಸಿದ ಬಂಧುಗಳಿಗೂ ಆ ದಿಕ್ಕಿನಲ್ಲಿ ಅತ್ಯಂತ ಪ್ರೀತಿಯಿಂದ ಸಹಕಾರ ನೀಡಿದ ಗೆಳೆಯರೊಬ್ಬರಿಗೂ ಇಲ್ಲಿ ಹೃತ್ಪೂರ್ವಕವಾದ ಕೃತಜ್ಞತೆಯನ್ನು ಸಲ್ಲಿಸುತ್ತೇವೆ.

ಬಸವರಾಜ ನಾಯ್ಕರ

ಎಡ್ಗರ್ ಆಲನ್ ಪೋ ಅವರ ಕಾವ್ಯರಚನಾ ತತ್ವ

ಎಡ್ಗರ್ ಆಲನ್ ಪೋ ಅವರು ಅಮೆರಿಕನ್ ಸಾಹಿತ್ಯದಲ್ಲಿ ಉನ್ನತ ಸ್ಥಾನವನ್ನು ಪಡೆದಿದ್ದಾರೆ. ಅಮೆರಿಕಾ ದೇಶದ ದಾಸ್ಪನ್ನಿನಲ್ಲಿ ಹುಟ್ಟಿದ ಎಡ್ಗರ್ ಚಿಕ್ಕಂದಿನಲ್ಲಿಯೆ ತಂದೆ ತಾಯಿಗಳ ವಾತ್ಸಲ್ಯಕ್ಕೆ ಎರವಾಗಿ ಸಾಕು ತಂದೆತಾಯಿ ಗಳಾದ ಶ್ರೀಯುತ ಜಾನ್ ಆಲನ್ ಮತ್ತು ಶ್ರೀಮತಿ ಆಲನ್ ಅವರ ಅಧೀನದಲ್ಲಿ ಬೆಳೆದು ದೊಡ್ಡವರಾದರು. ಪರದೇಶಿಯಾದ ಎಡ್ಗರ್ ತಮ್ಮ ಬಾಲ್ಯ ಮತ್ತು ಯೌವನದಲ್ಲಿ ಸಾಕಷ್ಟು ಕಷ್ಟಗಳನ್ನನುಭವಿಸಿ, ಕೊನೆಗೆ ತಮ್ಮ ನಾಲ್ವತ್ತನೆಯ ವಯಸ್ಸಿನಲ್ಲಿಯೆ ನಿಗೂಢವಾದ ರೀತಿಯಲ್ಲಿ ಮರಣಹೊಂದಿದರು. ಎಡ್ಗರ್ ಅವರ ಜೀವನ ಸಂಕ್ಷಿಪ್ತವಾಗಿದ್ದರೂ ಅವರು ನಿರ್ಮಿಸಿದ ಸಾಹಿತ್ಯ ಮಾತ್ರ ಅವರಿಗೆ ಅಮೆರಿಕೆಯ ಸಾಹಿತ್ಯ ಲೋಕದಲ್ಲಿ ಅಜರಾಮರವಾದ ಸ್ಥಾನವನ್ನು ದೊರಕಿಸಿಕೊಟ್ಟಿತು. ಎಡ್ಗರ್ ಆಲನ್ ಪೋ ಅವರು ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಕೃಷಿಮಾಡಿದವರು. ಅವರು ಸಣ್ಣಕಥೆ, ಕಾವ್ಯ ಮತ್ತು ವಿಮರ್ಶೆಯಲ್ಲಿ ಅನೇಕ ವರುಷ ಸಾಧನೆ ಮಾಡಿ ತಮ್ಮದೆ ಆದ ವಿಶಿಷ್ಟ ಸಾಹಿತ್ಯವನ್ನು ರೂಪಿಸಿ ದರು. The Fall of the House of Usher ಮುಂತಾದ ಕಥೆಗಳೂ, The Raven ಮುಂತಾದ ಕವಿತೆ ಗಳೂ, The Philosophy of Composition ಮತ್ತು The Poetic Principle ಮುಂತಾದ ವಿಮರ್ಶಾ ಲೇಖನಗಳೂ ಜಗತ್ಪ್ರಸಿದ್ಧವಾಗಿವೆ. ಹೀಗೆ ಅವರೂ ಒಬ್ಬ ಕವಿ–ವಿಮರ್ಶಕರಾಗಿರುವುದರಿಂದ ಅವರ ವಿಚಾರ ಗಳಿಗೆ ವಿಶೇಷ ಮಹತ್ವ ಬರುತ್ತದೆ. ಆದ್ದರಿಂದ ಎಡ್ಗರ್ ಆಲನ್ ಪೋ ಅವರು ಕಾವ್ಯರಚನೆಯನ್ನು ಕುರಿತು ಚರ್ಚಿ-ಸಿದ ವಿಚಾರಗಳನ್ನು ಇಲ್ಲಿ ನೋಡಬಹುದು.

ಕಾವ್ಯ ಹೇಗೆ ಹುಟ್ಟುತ್ತದೆ? ಕಾವ್ಯದಲ್ಲಿಯ ಪ್ರತಿಮೆಗಳು, ಸಂಕೇತಗಳು, ಶಬ್ದಗಳು ಎಲ್ಲಿಂದ ಬರುತ್ತವೆ ? ಮತ್ತು ಕವಿ ಅವುಗಳನ್ನು ಹೇಗೆ ಆರಿಸಿಕೊಂಡಿರುತ್ತಾನೆ? ಇಷ್ಟೆಲ್ಲ ಪ್ರಯತ್ನಪಟ್ಟು ಕೊನೆಗೆ ಕವಿ ಹೇಗೆ ಕಾವ್ಯಸೌಂದರ್ಯ ವನ್ನುಂಟುಮಾಡುತ್ತಾನೆ ? ಎಂಬಿವೇ ಪ್ರಶ್ನೆಗಳು ಅನೇಕ ಕವಿಗಳನ್ನು, ವಿಮರ್ಶಕರನ್ನು, ಮನೋವಿಜ್ಞಾನಿಗಳನ್ನು ಮತ್ತು ಸೌಂದರ್ಯ ಮೀಮಾಂಸಕರನ್ನು ಕಾಡಿವೆಯಲ್ಲದೆ ಈಗಲೂ ಕಾಡುತ್ತಲಿವೆ. ಇವೆಲ್ಲ ಪ್ರಶ್ನೆಗಳಿಗೆ ಈ ಎಲ್ಲ ವಿಷಯಗಳ ಪಂಡಿತರು ತಮ್ಮ ತಮ್ಮ ವಿಶಿಷ್ಟ ರೀತಿಯಲ್ಲಿ ಅತ್ಯಂತ ಪಾಂಡಿತ್ಯಪೂರ್ಣವಾದ ಉತ್ತರಗಳನ್ನು ಕೊಟ್ಟಿ ದ್ದಾರೆ. ಇವೆಲ್ಲ ಉತ್ತರಗಳೂ ಕಾವ್ಯಸೌಂದರ್ಯವನ್ನು ಸವಿಯುವುದರಲ್ಲಿ ಬಹಳವಲ್ಲದಿದ್ದರೂ ಕೆಲಮಟ್ಟಿಗಾದರೂ ನೆರವಾಗುವುದರಲ್ಲಿ ಸಂದೇಹವಿಲ್ಲ. ಕಾವ್ಯದ ವಿವಿಧ ಪೈಲುಗಳನ್ನು, ಹಂತಗಳನ್ನು ವಿವಿಧ ದೃಷ್ಟಿಕೋನಗ ಳಿಂದ ಅಭ್ಯಸಿಸುವುದರ ಸಲುವಾಗಿ ತಮ್ಮ ಜೀವಮಾನ ವನ್ನೇ ಕಳೆದ ಪಂಡಿತರಿದ್ದಾರೆ. ಆದರೆ ಇವರೆಲ್ಲರ ಪೈಕಿ ಸ್ವತಃ ಕವಿಯಾದವ ಕಾವ್ಯರಚನೆಯ ವಿಷಯದ ಮೇಲೆ ಪ್ರಾಮಾಣಿಕವಾಗಿ ಬರೆದರೆ ಇಲ್ಲವೆ ಚರ್ಚಿಸಿದರೆ ಅವನ ಮಾತಿಗೆ ಬರುವಷ್ಟು ಬೆಲೆ ಮತ್ತಾವ ಪಂಡಿತನ ಮಾತಿಗೂ ಬರುವುದಿಲ್ಲ. ಇದರರ್ಥ ಪಂಡಿತರ ವಿದ್ವ ತ್ಪೂರ್ಣ ವಿಚಾರಗಳು ನಿರುಪಯುಕ್ತವೆಂದು ಖಂಡಿತ ಇಲ್ಲ. ಅನೇಕಸಾರೆ ಕವಿಯು ಕಾವ್ಯ ಕುರಿತು ಬರೆದ ಲೇಖನಕ್ಕಿಂತ ಪಂಡಿತರು (ಕಾವ್ಯಮೀಮಾಂಸಕರೆ ಆಗಿ ರಲಿ, ಮನೋವಿಜ್ಞಾನಿಯೆ ಆಗಿರಲಿ, ಇಲ್ಲವೆ ತತ್ವ ಜ್ಞಾನಿಯೆ ಆಗಿರಲಿ) ಬರೆದ ಲೇಖನಗಳು ಹೆಚ್ಚು ಸ್ಪಷ್ಟ ವಾಗಿಯೂ, ತರ್ಕಬದ್ಧವಾಗಿಯೂ, ಉನ್ನತಮಟ್ಟದವೂ ಆಗಿರುತ್ತವೆ. ಅನೇಕವೇಳೆ ಈ ಪಂಡಿತರಿಗಿದ್ದಷ್ಟು ವಿಶಾಲವಾದ ಶಾಸ್ತ್ರೀಯ ಜ್ಞಾನವಾಗಲಿ, ಶಬ್ದಭಂಡಾರ ವಾಗಲಿ ಕವಿಗೆ ಇರುವುದಿಲ್ಲ. ಆದರೂ ಕವಿಯ ಮಾತಿಗೆ ಬೆಲೆಬರುವುದು ಕೇವಲ ಪ್ರಾಮಾಣಿಕತೆಯಿಂಱ.

ಕವಿಯು ಕಾವ್ಯ ಕುರಿತು ಬರೆದುದು ಸಂಕ್ಷಿಪ್ತವಾಗಿರ ಬಹುದು, ಅತಿಸರಳವಾಗಿರಬಹುದು, ಅಥವಾ ಅಸ್ತ ವ್ಯಸ್ತವಾಗಿರಬಹುದು. ಆದರೆ ಅದರಲ್ಲಿ ಕವಿಯು ಯಾವ ತರಹದ ಸೋಗುಹಾಕದೆ, ಮುಖವಾಡವನ್ನು ಧರಿಸದೆ, ಆತ್ಮವಂಚನೆಯನ್ನು ಮಾಡಿಕೊಳ್ಳದೆ ತನ್ನಂತ ರಂಗದ ನೋವುನಲಿವುಗಳನ್ನು, ತೊಂದರೆಗಳನ್ನು, ಭಯು ಗಳನ್ನು, ಜಿದ್ದುಗಳನ್ನು, ರಾಜಿಗಳನ್ನು ಅತ್ಯಂತ ಪ್ರಾಮಾ ಣಿಕವಾಗಿ ಅಭಿವ್ಯಕ್ತಪಡಿಸಿದರೆ ಅದರಿಂದ ಓದುಗರ ರಸಾನುಭವಕ್ಕೆ ಸಾಕಷ್ಟು ನೆರವಾಗುತ್ತದೆ. ಯಾವುದೋ ಒಂದು ಘಳಿಗೆಯಲ್ಲಿ ಕವಿಯ ಮನಸ್ಸಿನಲ್ಲಿ ಉದ್ಭವಿಸಿದ ವಿಚಾರ ಅಥವಾ ಭಾವನೆ ಹೇಗೆ ಹಂತಹಂತವಾಗಿ ಬೆಳೆದು ಕೊನೆಗೆ ಸಜೀವ ಪದ್ಯವಾಗಿ ಆವಿರ್ಭವಿಸುವವರೆಗಿನ ತನಕ ನಡೆಯುವ ಮನೋವ್ಯಾಪಾರವನ್ನು ಕವಿಗಳು ಸಾಮಾನ್ಯ ವಾಗಿ ಬಯಲಿಗೆಳೆಯಲು ಹಿಂಜರಿಯುತ್ತಿರುತ್ತಾರೆ. ಏಕೆಂ ದರೆ ಅವರಿಗೆ ತಮ್ಮ ರಹಸ್ಯ (trade secret) ವನ್ನು ಬಿಟ್ಟುಕೊಟ್ಟರೆ ಎಲ್ಲಿ ಬೇರೆಯವರು ಅದನ್ನು ಕದ್ದು ಕೊಂಡು ತಮಗಿಂತ ಮೊದಲೆ ಮುಂದೆ ಬಂದುಬಿಡು ತ್ತಾರೋ ಎನ್ನುವ ಭೀತಿಯಿರುತ್ತದೆ. ಇನ್ನು ಕೆಲವೊಮ್ಮೆ ತಮ್ಮ ಒಳಗುಟ್ಟುಗಳನ್ನು ಬಿಟ್ಟುಕೊಟ್ಟರೆ ಓದುಗರಿಗೆ ತಮ್ಮ ನ್ಯೂನತೆಗಳೇನಾದರೂ (ಅವು ಇದ್ದಲ್ಲಿ) ಗೊತ್ತಾಗಿ ಬಿಡುತ್ತದೆಯೋ ಅದರಿಂದ ತಮ್ಮ ಪ್ರತಿಷ್ಠೆಗೆ ಎಲ್ಲಿ ಕುಂದು ಬರುತ್ತದೆಯೋ ಎಂಬ ಭಯವೂ ಇರುತ್ತದೆ. ಮತ್ತೆ ಕೆಲವೊಮ್ಮೆ ತಮ್ಮ ಒಳಗುಟ್ಟುಗಳನ್ನು ಬಿಟ್ಟು ಕೊಡದೆ ತಮ್ಮ ಕಾವ್ಯಕ್ಕೆ ಬೇರೆ ಬೇರೆ ಪಂಡಿತರು ಯಾವ ಅರ್ಥವನ್ನು ಹಚ್ಚುತ್ತಾರೆ ಎಂಬುದನ್ನು ನೋಡಿಯೇ ಬಿಡೋಣವೆಂಬ ಧೀಮಾಕೂ ಸಹ ಇರುತ್ತದೆ. ಆದರೆ ಜೀವನದ ಎಲ್ಲ ರಂಗಗಳಲ್ಲಿಯೂ ಕೆಲವರಾದರೂ ಪ್ರಾಮಾಣಿಕರಿರುವಂತೆ ಕಾವ್ಯರಂಗದಲ್ಲಿಯೂ ಕೆಲವು ಪ್ರಾಮಾಣಿಕ ವ್ಯಕ್ತಿಗಳಿರುತ್ತಾರೆ. ಎಡ್ಗರ್ ಅಲನ್ ಪೋ ಅವರು ಇಂಥ ಪ್ರಾಮಾಣಿಕ ಕವಿವಿಮರ್ಶಕರಲ್ಲಿ ಒಬ್ಬರು. ಅಂತೆಯೇ ಅವರು ಸ್ವತಃ ಬರೆದ ಕವಿತೆಯೊಂದನ್ನೇ ಉದ್ದರಿಸುತ್ತ ಅದನ್ನು ಹೇಗೆ ಮತ್ತು ಏಕೆ ಬರೆದರೆಂಬು ದನ್ನು ಹಂತಹಂತವಾಗಿ ವಿಶ್ಲೇಷಿಸಿ ತೋರಿಸುತ್ತಾರೆ. ಅವರ ವಿಶ್ಲೇಷಣೆಯಲ್ಲಿ ಅವರ ಪ್ರಾಮಾಣಿಕತೆ ಮತ್ತು ವೈಚಾರಿಕ ಸರಳತೆ ಮತ್ತು ಸ್ಪಷ್ಟತೆಗಳು ನಿರಾಯಾಸ ವಾಗಿಯೆ ಎದ್ದು ಕಾಣುತ್ತವೆ.

ಕಾವ್ಯವು ಸಂಪೂರ್ಣ ಮೂರ್ತರೂಪ ತಾಳಿ ಹಾಳೆಯ ಮೇಲೆ ಮೂಡಿ, ಅಲ್ಲಿಯೂ ಕೆಲವು ಬದಲಾವಣೆಗಳನ್ನು ಹೊಂದುವ ಸಾಧ್ಯತೆಯಿದ್ದರೆ ಹೊಂದಿ, ಕೊನೆಗೆ ಅಚ್ಚಾ ಗುವ ಸ್ಥಿತಿಗೆ ಬರಬೇಕಾದರೆ ಅದಕ್ಕೆ ಬೇಕಾಗುವ ಪೂರ್ವ ಸಿದ್ಧತೆಗಳು ಅನೇಕಾನೇಕವೆಂದು ಹೇಳಬಹುದು. ರಂಗದ ಮೇಲೆ ನಾಟಕವೊಂದು ನಡೆದು ಪ್ರೇಕ್ಷಕರ ಮನಸ್ಸನ್ನು ತಣಿಸಬೇಕಾದರೆ ನೇಪಥ್ಯದ ಹಿಂದೆ ಮತ್ತು ಎರಡೂ ಬದಿಗಳಲ್ಲಿ ಅದೃಶ್ಯವಾಗಿ ನಡೆಯುವ ಕಾರ್ಯಗಳು ಎಷ್ಟು ಮಹತ್ವವಿರುತ್ತವೆಯೊ ಹಾಗೆಯೆ ಕಾವ್ಯವೊಂದು ಅಚ್ಚಾಗುವ ಸ್ಥಿತಿಗೆ ಬರಬೇಕಾದರೆ ಅದರ ಹಿಂದೆ ಸಾಕಷ್ಟು ಚಿಂತನ ನಡೆದಿರಬೇಕಾಗುತ್ತದೆ. ಕವಿಯು ಅನೇಕ ಪ್ರತಿಮೆಗಳನ್ನು ಅರ್ಥವಿನ್ಯಾಸದಲ್ಲಿ ಹೊಂದಿಸ ಬೇಕಾಗುತ್ತದೆ. ಭಾಷೆಯೊಂದಿಗೆ ಹೋರಾಡಬೇಕಾಗು ತ್ತದೆ. ಕೆಲವೊಮ್ಮೆ ಅನಿರೀಕ್ಷಿತವಾದ ಸಂಗತಿಗಳೂ ಆತನ ಕಾವ್ಯವನ್ನು ನಿಯಂತ್ರಿಸಬಹುದು. ಕವಿತೆ ಯೆಂಬುದು ಒಮ್ಮೆಲೆ ಆಕಾಶದಿಂದ ಬೀಳುವುದಿಲ್ಲ. ಅದು ಕವಿಯ ಮನಸ್ಸಿನ ಗರ್ಭದಲ್ಲಿ ಹಂತಹಂತವಾಗಿ ಬೆಳೆದು ದಿನಗಳು ತುಂಬಿದಮೇಲೆ ಹೊರಬರುವ ಕೂಸು ಇದ್ದಂತೆ. ಕವಿತೆ ಕವಿಯ ಮನಸ್ಸಿನಲ್ಲಿ ಹೇಗೆ ಹಂತಹಂತವಾಗಿ ಬೆಳೆ ಯುತ್ತ ಹೋಗುತ್ತದೆ ಎಂಬುದನ್ನು ಕವಿಯು ಹೇಳ ಬೇಕೆ ವಿನಾ ಇತರರಲ್ಲ. ಸ್ವಾನುಭವದ ಬಲದಿಂದ ಕವಿಯು ಹೇಳಿದ ಮಾತುಗಳಿಗೆ ಮಾತ್ರ ಬೆಲೆ ಬರುತ್ತದೆ. ಆದ ರಲ್ಲಿಯೂ ಕವಿಯು ಪ್ರಾಮಾಣಿಕವಾಗಿ ತನ್ನ ಮನಸ್ಸಿ ನಲ್ಲಿ ನಡೆಯುವ ವ್ಯಾಪಾರವನ್ನೆಲ್ಲ ಬಿಚ್ಚು ಮನಸ್ಸಿನಿಂದ ಹೊರಗೆಡಹಿದರೆ ಆ ಮಾತುಗಳಿಗೆ ಇನ್ನೂ ಹೆಚ್ಚಿನ ಬೆಲೆ ಬರುತ್ತದೆ. ಕವಿಯಾದವರೆಲ್ಲ ಇಂಥ ಕೆಲಸ ಮಾಡಿದರೆ ಓದುಗರಿಗೆ ಮಹದುಪಕಾರವಾಗುತ್ತದೆ. ಆದರೆ ದುರ್ದೈವದಿಂದ ಎಲ್ಲ ಕವಿಗಳಿಗೂ ಈ ಕರ್ತವ್ಯವನ್ನು ನಿರ್ವಹಿಸುವ ಮನಸ್ಸಾಗಲಿ, ತಾಳ್ಮೆಯಾಗಲಿ, ವೇಳೆ ಯಾಗಲಿ ಅಥವಾ ಪ್ರಾಮಾಣಿಕತೆಯಾಗಲಿ ಇರುವುದಿಲ್ಲ.

ಎಡ್ಗರ್ ಅಲನ್ ಪೋ ಅವರು ಇಂಥ ಪ್ರಾಮಾಣಿಕ ಸಾಹಸವನ್ನು ಕೈಕೊಂಡು ಯಶಸ್ವಿಯಾಗಿದ್ದಾರೆಂದು ಹೇಳಬಹುದು. ಅವರು ಕಾವ್ಯ ವಿಶ್ಲೇಷಣೆಗಾಗಿ ತಮ್ಮ The Raven ಎಂಬ ಪದ್ಯವನ್ನೇ ಉದಾಹರಣೆಯಾಗಿ ಆರಿಸಿಕೊಂಡಿದ್ದಾರೆ. ಇಲ್ಲಿ ಅವರ ವಿಚಾರಗಳನ್ನು ಒಂದೊಂದಾಗಿ ಅವಲೋಕಿಸಬಹುದು. ಅವರ ಅಭಿ

ಪ್ರಾಯದಲ್ಲಿ ಕಾವ್ಯದಲ್ಲಿ 'ಪ್ರಮಾಣ'ವು (ಅಥವಾ ಉದ್ದ) ಅತ್ಯಂತ ಮಹತ್ವಪೂರ್ಣ ತತ್ವವಾಗಿರುತ್ತದೆ. ಯಾವುದೇ ಕಾವ್ಯವನ್ನಾಗಲಿ ಅಥವಾ ಸಾಹಿತ್ಯಕೃತಿಯನ್ನಾಗಲಿ ಒಂದೇ ಬಾರಿಗೆ (one sitting) ಓದಿ ಮುಗಿಸಲಾಗದಿದ್ದರೆ ಸ್ವಾಭಾವಿಕವಾಗಿಯೆ ಆ ಕಾವ್ಯದ ಅಥವಾ ಸಾಹಿತ್ಯಕೃತಿಯ ಪ್ರಭಾವದ ಐಕ್ಯ ನಮ್ಮ ಮೇಲೆ ಆಗುವುದು ಸಾಧ್ಯವಿಲ್ಲ. ಏಕೆಂದರೆ ನಾವು ಅದನ್ನು ಎರಡು ಬಾರಿ ಅಥವಾ ಅದಕ್ಕಿಂತಲೂ ಹೆಚ್ಚು ಬಾರಿ ಕುಳಿತು ಓದಿದಾಗ ಎರಡು ಓದುಗಳ ನಡುವೆ ಜೀವನದಲ್ಲಿ ಅನೇಕ ಘಟನೆಗಳು ನಮ್ಮ ಲಕ್ಷ್ಯವನ್ನು ಸೆಳೆದಿರುತ್ತವೆ. ಹೀಗಾಗಿ ನಾವು ಓದಿ ಮುಗಿಸುವ ಕಾವ್ಯದಿಂದಾಗುವ ಪ್ರಭಾವದ ಸಮಗ್ರತೆಗೆ ಭಂಗಬರುತ್ತದೆ. ಹಾಗಿದ್ದರೆ ಸುದೀರ್ಘ ಕಾವ್ಯಗಳಾಗಲಿ ಅಥವಾ ಮಹಾಕಾವ್ಯಗಳಾಗಲಿ ಓದುಗರ ಮೇಲೆ ಹೇಗೆ ಪ್ರಭಾವ ಬೀರುತ್ತವೆ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಏಕೆಂದರೆ ಕಾವ್ಯವನ್ನು ಒಂದೇ ಬಾರಿಗೆ ಓದಿ ಮುಗಿಸಲು ಬರಬೇಕಾಗಿದ್ದರೆ ಕಾವ್ಯವು ಅಷ್ಟು ಚಿಕ್ಕದಾಗಿಯೆ, ಸಂಕ್ಷಿಪ್ತವಾಗಿಯೆ ಇರಬೇಕಲ್ಲವೆ? ಹಾಗಿದ್ದರೆ ಸುದೀರ್ಘಕಾವ್ಯಗಳು ಇಲ್ಲವೆ? ಅಥವಾ ಇರಬಾರದೆ? ಎಂಬ ಪ್ರಶ್ನೆಗಳೂ ತಲೆಯೆತ್ತುತ್ತವೆ. ಎಡ್ಗರ್ ಆಲನ್ ಪೋ ಅವರ ಅಭಿಪ್ರಾಯದಲ್ಲಿ ಸುದೀರ್ಘ ಕವಿತೆಯೆಂಬುದು ಸಂಕ್ಷಿಪ್ತ ಕವಿತೆಯ ಮಾಲಿಕೆಯೆ ಆಗಿದೆ. ಅಂದರೆ ಅದು ಸಂಕ್ಷಿಪ್ತ ಕಾವ್ಯಮಯ ಪ್ರಭಾವಗಳ ಮಾಲಿಕೆಯೆ ಆಗಿದೆ. ಇದೇ ವಿಚಾರವನ್ನು ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಕವಿತೆಯು ನಮ್ಮ ಅಂದರೆ ಓದುಗರ ಭಾವನೆಗಳನ್ನು ಬಡಿದೆಬ್ಬಿಸಿ ಅವರ ಆತ್ಮವನ್ನು ಎತ್ತರಕ್ಕೊಯ್ಯುವುದರಿಂದಲೆ ಕವಿತೆಯೆನ್ನಿಸಿಕೊಳ್ಳುತ್ತದೆ. ಇಂಥ ಭಾವತೀವ್ರತೆಗಳು ಮಾನವನ ಮಾನಸಿಕ ಪರಿಮಿತಿಯಿಂದಾಗಿಯೆ ಸಂಕ್ಷಿಪ್ತವಾಗಿರುತ್ತವೆ. ಇದೇ ಕಾರಣದಿಂದಲೆ ಪೋ ಅವರು ಮಿಲ್ಟನ್ ಮಹಾಕವಿಯ The Paradise Lost ಎಂಬ ಮಹಾಕಾವ್ಯದ ಅರ್ಧಭಾಗ ಗದ್ಯವಿದೆಯೆಂದು ಹೇಳುತ್ತಾರೆ. ಈ ಮಹಾಕಾವ್ಯದಲ್ಲಿ ಸಂಕ್ಷಿಪ್ತವಾದ ಕಾವ್ಯಮಯ ಭಾಗಗಳು ಇದ್ದರೂ ಅವುಗಳ ಮಧ್ಯದಲ್ಲಿ ಅನೇಕ ನೀರಸಭಾಗಗಳೂ ಅನಿವಾರ್ಯವಾಗಿ ಬಂದುಬಿಟ್ಟಿವೆ. ಆದ್ದರಿಂದ ಈ ಮಹಾಕಾವ್ಯದ ಸುದೀರ್ಘತೆಯಿಂದಾಗಿ ಅದು ತನ್ನ ಪ್ರಭಾವದ ಐಕ್ಯವನ್ನು ಅಥವಾ ಸಮಗ್ರತೆಯನ್ನುಂಟು ಮಾಡುವುದರಲ್ಲಿ ವಿಫಲವಾಗುತ್ತದೆ.

ಆದ್ದರಿಂದ ಪ್ರತಿಯೊಂದು ಸಾಹಿತ್ಯಕೃತಿಯು ಇಂತಿಷ್ಟೆ ಉದ್ದವಾಗಿರಬೇಕೆಂದೂ, ಅಂದರೆ ಅದನ್ನು ಒಂದೇ ಬಾರಿಗೆ ಕುಳಿತು ಓದಿಮುಗಿಸುವಂತಿರಬೇಕೆಂದೂ ಪೋ ಅವರು ಹೇಳುತ್ತಾರೆ. ಇಂಥ ನಿಯಮ ಗದ್ಯಸಾಹಿತ್ಯಕ್ಕೆ ಅನ್ವಯಿಸುವುದಿಲ್ಲ. ರಾಬಿನ್‌ಸನ್ ಕ್ರೂಸೋದಂಥ ಗದ್ಯಕೃತಿಗಳನ್ನು ಒಮ್ಮೆಯಲ್ಲದಿದ್ದರೆ ಎರಡು ಮೂರು ಸಾರೆ ಕುಳಿತು ಓದಿ ಮುಗಿಸಬಹುದು. ಆದರೆ ಕಾವ್ಯದಲ್ಲಿ ಮಾತ್ರ ಹೀಗಾದರೆ ನಡೆಯುವುದಿಲ್ಲ. ಪೋ ಅವರು ಕಾವ್ಯದ ಮಟ್ಟವನ್ನು ಅದರ ಸಂಕ್ಷಿಪ್ತತೆಯ ಮೇಲಿಂದಲೆ ನಿರ್ಧರಿಸುತ್ತಾರೆ. ಏಕೆಂದರೆ ಅವರ ಅಭಿಪ್ರಾಯದಲ್ಲಿ ಕಾವ್ಯದ ಸಂಕ್ಷಿಪ್ತತೆ ಅದರ ಭಾವತೀವ್ರತೆಗೆ ಸಾಕ್ಷಿಯಾಗಿರುತ್ತದೆ. ಕವಿತೆಯ ಉದ್ದಕ್ಕೂ ಮತ್ತು ಅದರ ಭಾವತೀವ್ರತೆಗೂ ಗಣಿತದ ಪ್ರತಿಲೋಮ ಸಂಬಂಧವಿರುತ್ತದೆ. ಹಾಗಿದ್ದರೆ ಇದೇ ತರ್ಕವನ್ನು ಅತಿಯಾಗಿ ಬೆಳೆಯಿಸಿ ಕವಿತೆ ಎಷ್ಟೆಷ್ಟು ಚಿಕ್ಕದಾಗಿರುತ್ತದೆಯೋ ಅದು ಅಷ್ಟಷ್ಟು ಭಾವತೀವ್ರತೆಯನ್ನು ಹೊಂದಿರುತ್ತದೆ ಎಂದು ಹೇಳುತ್ತ ಹೇಳುತ್ತ ಕೊನೆಗೆ ಎರಡು ಸಾಲಿನ ಇಲ್ಲವೆ ಒಂದು ಸಾಲಿನ ಕವಿತೆಯೇ ಆದರ್ಶವಾದ ಕವಿತೆಯೆಂಬ ನಿರ್ಣಯಕ್ಕೆ ಬರಬಹುದು. ಆದರೆ ಪೋ ಅವರು ಈ ವಿಷಯದಲ್ಲಿ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಅದೇನೆಂದರೆ ಕವಿತೆಯೆಂಬುದು ಓದುಗರ ಮನಸ್ಸಿನ ಮೇಲೆ ಪ್ರಭಾವವನ್ನುಂಟುಮಾಡಬೇಕೆಂದಿದ್ದರೆ ಅದು ಕವಿತೆಯೆನಿಸಿಕೊಳ್ಳುವಷ್ಟಾದರೂ ಉದ್ದವಾಗಿರಬೇಕು ಎಂದು ಅವರು ಹೇಳುತ್ತಾರೆ. ಅತಿಚಿಕ್ಕ ಕವಿತೆಯೆಂದರೆ ಎಷ್ಟು ಸಾಲುಗಳನ್ನು ಹೊಂದಿದುದಾಗಿರಬೇಕು ಎಂದು ಯಾರಾದರೂ ಕೇಳಬಹುದು. ಅದಕ್ಕೆ ಪೋ ಅವರು ಸ್ವತಃ ತಾವೇ ಪ್ರಯೋಗಮಾಡಿ ಒಂದು ಸಂಖ್ಯೆಯನ್ನು ಸೂಚಿಸಿದ್ದಾರೆ. ಅವರ ಪ್ರಕಾರ ಒಂದು ಆದರ್ಶ ಕವಿತೆ ನೂರು ಸಾಲುಗಳಷ್ಟು ಉದ್ದವಿರಬಹುದು. ಅವರೇ ಬರೆದ The Raven ಎಂಬ ಪದ್ಯ ಒಂದುನೂರಾಎಂಟು ಸಾಲುಗಳನ್ನು ಹೊಂದಿದೆ.

ಕವಿತೆಯ ಉದ್ದವನ್ನು ನಿಗದಿಪಡಿಸಿದ ನಂತರ ಪೋ ಅವರು ತಮ್ಮ The Raven ಎಂಬ ಕವಿತೆ ತಮ್ಮ ಮನಸ್ಸಿನಲ್ಲಿ ಹೇಗೆ ಹಂತಹಂತವಾಗಿ ರೂಪುಗೊಳ್ಳುತ್ತ ಹೊರಟಿತು ಎಂಬುದನ್ನು ವಿವರವಾಗಿ ಬಹಿರಂಗಪಡಿಸುತ್ತಾ ಹೋಗುತ್ತಾರೆ. ಕವಿತೆ ಬರೆಯಬೇಕೆಂಬ ಸಂಕಲ್ಪ

ವುಂಟಾದ ಕೂಡಲೆ ಪೋ ಅವರನ್ನು ಕಾಡಿದ ಪ್ರಶ್ನೆ ಯೆಂದರೆ ಎಂಥ ಪ್ರಭಾವವನ್ನುಂಟುಮಾಡುವ ಕವಿತೆ ಯನ್ನು ಬರೆಯಬೇಕು ? ಎಂಬುದು. ಏಕೆಂದರೆ ಕವಿತೆ ಯನ್ನು ಬರೆದರೆ ಅದನ್ನು ಜನರು ಸಾರ್ವತ್ರಿಕವಾಗಿ ಆಸ್ವಾದಿಸಬೇಕು ಎಂಬುದು ಅವರ ಆಶೆ. ಅಂದರೆ ಅವರು ಕವಿತೆಗಾಗಿ ಆಯ್ದುಕೊಂಡ ಕಥಾವಸ್ತು ಸರ್ವ ಸಾಮಾನ್ಯವಾಗಿ ಎಲ್ಲರಿಗೂ ಅರ್ಥವಾಗುವಂಥದಿರಬೇಕು. ಅದರ ಅರ್ಥವೇನೆಂದು ಮತ್ತೆ ಕವಿ ಪ್ರತ್ಯೇಕವಾಗಿ ತಿಳಿಸಿ ಹೇಳಬೇಕಾಗುವಂಥದಿರಬಾರದು. ಇವೆಲ್ಲ ಸಮಸ್ಯೆಗಳನ್ನು ಪರಿಹರಿಸಿಕೊಂಡು ಕೊನೆಗೆ ಪೋ ಅವರು ತಮ್ಮ ಕವಿತೆಗೆ 'ಸೌಂದರ್ಯ'ವನ್ನೇ ಅತ್ಯುತ್ತಮ ಕಥಾವಸ್ತುವೆಂದು ಆಯ್ದುಕೊಂಡರು. ಏಕೆಂದರೆ 'ಸೌಂದರ್ಯ'ವೆನ್ನುವುದು ಒಂದು ಪ್ರಭಾವವಾಗಿದೆಯೆ ವಿನಾ ಒಂದು ಗುಣವಿಶೇಷ ವಲ್ಲ. ಸೌಂದರ್ಯವನ್ನು ಕುರಿತು ಚಿಂತನಗೈಯುವುದ ರಿಂದಾಗುವ ಆತ್ಮಾನಂದದಲ್ಲಿಯೆ ಸೌಂದರ್ಯದ ಸಾರ್ಥ ಕತೆ ಅಡಗಿದೆ. ಆದ್ದರಿಂದ ಪೋ ಅವರು ತಮ್ಮ ಕವಿತೆ ಗಾಗಿ ಸೌಂದರ್ಯವನ್ನೆ ಕಥಾವಸ್ತುವನ್ನಾಗಿ ಆರಿಸಿ ಕೊಂಡರು. ಬುದ್ಧಿ ಸಂತೃಪ್ತಿಯನ್ನಾಗಲಿ (ಅಂದರೆ ಸತ್ಯ) ಅಥವಾ ಭಾವಸಂತೃಪ್ತಿಯನ್ನಾಗಲಿ ಕಾವ್ಯದಲ್ಲಿ ಸಾಧಿ ಸಲು ಸಾಧ್ಯವಿದ್ದರೂ ಅವುಗಳನ್ನು ಗದ್ಯದಲ್ಲಿಯೆ ಹೆಚ್ಚು ಸರಳವಾಗಿ ಸಾಧಿಸಲು ಸಾಧ್ಯವಿದೆ. ಪೋ ಅವರ ಅಭಿಪ್ರಾಯದಲ್ಲಿ ಸತ್ಯವನ್ನು (Truth) ನಿರೂಪಿಸಬೇಕಾ ದರೆ ಸಾಹಿತಿಯಲ್ಲಿ ನಿರ್ದಿಷ್ಟತೆ (Precision) ಇರಬೇಕು. ಅದರಂತೆಯೆ ಭಾವವನ್ನು (Passion) ನಿರೂಪಿಸಬೇಕಾ ದರೆ ಆತನಲ್ಲಿ ಮುಗ್ಧ ಸಹಜತೆ (homeliness) ಇರ ಬೇಕು. ಆದರೆ ಇವೆರಡೂ ಆತ್ಮೋತ್ಥಾನದ ಮೂಲಕ ಆತ್ಮಾನಂದ ನೀಡುವ 'ಸೌಂದರ್ಯ'ಕ್ಕಿಂತ ಭಿನ್ನವಾಗಿರು ತ್ತವೆ. ಇದರರ್ಥ ಸತ್ಯವಾಗಲಿ ಅಥವಾ ಭಾವವಾಗಲಿ ಕವಿತೆಯಲ್ಲಿ ಬರಲೇಬಾರದೆಂದಲ್ಲ. ಅವು ಸಂಗೀತದಲ್ಲಿ ವಿರುದ್ಧ ಸ್ವರಗಳು ವಿರೋಧ ತತ್ವದ ಮೂಲಕ ಮಾಧು ರ್ಯವನ್ನು ವರ್ಧಿಸುವಂತೆ ಕವಿತೆಯಲ್ಲಿ ಸರಿಯಾದ ವಾತಾ ವರಣವನ್ನುಂಟುಮಾಡಲು ಅಥವಾ ವಿವರಿಸಲು ಸಹಾ ಯಕವಾಗುತ್ತವೆ. ಆದರೆ ಕವಿಯು ಅವುಗಳನ್ನು ಕವಿ ತೆಯ ಅಂತರಾತ್ಮವಾದ ಸೌಂದರ್ಯದಿಂದ ಆಚ್ಛಾದಿಸಿ, ಸೌಂದರ್ಯದ ಪೂರಕಗಳನ್ನಾಗಿಸಬೇಕು. ಅಂದರೆ ಮಾತ್ರ ಆತನ ಕವಿತೆ ಯಶಸ್ಸನ್ನು ಸಾಧಿಸುವುದು.

'ಸೌಂದರ್ಯ'ವೆ ತಾವು ಬರೆಯಲಿರುವ ಕವಿತೆಯು ವಸ್ತು ವೆಂದು ನಿರ್ಧರಿಸಿದ ಮೇಲೆ ಅವರನ್ನು ಮತ್ತೊಂದು ಪ್ರಶ್ನೆ ಕಾಡತೊಡಗುತ್ತದೆ. ಅದು ಏನೆಂದರೆ ಯಾವ ರಸವನ್ನು ಚಿತ್ರಿಸಿದರೆ 'ಸೌಂದರ್ಯ'ದ ಪೂರ್ಣಾಭಿವ್ಯಕ್ತಿ ಸಾಧ್ಯವಾಗುತ್ತದೆ ? ಎಂಬುದು. ಪೋ ಅವರು ತಮ್ಮ ಅನುಭವದ ಬಲದಿಂದ ಶೋಕರಸವೆ ಅವರ ಕವಿತೆಗೆ ಅತ್ಯಂತ ಔಚಿತ್ಯಪೂರ್ಣವಾದ ರಸವೆಂಬ ತೀರ್ಮಾನಕ್ಕೆ ಬರುತ್ತಾರೆ. ಏಕೆಂದರೆ ಸೌಂದರ್ಯವು ಪರಾಕಾಷ್ಠತೆ ಯನ್ನು ಮುಟ್ಟಿದಾಗಲೆಲ್ಲ ಅನಿವಾರ್ಯವಾಗಿ ಸಂವೇದನಾ ಶೀಲರಾದ ಜನರ ಕಣ್ಣಲ್ಲಿ ನೀರು ತರಿಸುತ್ತದೆ. ಆದ್ದರಿಂದ ಎಲ್ಲ ರಸಗಳಲ್ಲಿ ಶೋಕರಸವೆ ಕಾವ್ಯಕ್ಕೆ ಅತ್ಯಂತ ಯೋಗ್ಯ ವಾದ ರಸವೆಂದು ಪೋ ಅವರು ಪರಿಗಣಿಸುತ್ತಾರೆ.

ಹೀಗೆ ಕವಿತೆಯ ಉದ್ದ, ಕಥಾವಸ್ತು, ಮತ್ತು ರಸವನ್ನು ನಿರ್ಧರಿಸಿದ ಮೇಲೆ ಕವಿತೆಯನ್ನು ಹೇಗೆ ಕಲಾತ್ಮಕವಾಗಿ ನಿರೂಪಿಸಬೇಕೆಂಬ ಪ್ರಶ್ನೆ ಅವರನ್ನು ಕಾಡುತ್ತದೆ. ಇಡೀ ಕವಿತೆಯ ರಚನೆಗೆ ಕೇಂದ್ರೀಯವಾದ ಸೂತ್ರವೊಂದನ್ನು ಹುಡುಕಲಾರಂಭಿಸುತ್ತಾರೆ. ಕೊನೆಗೆ ಸಾರ್ವತ್ರಿಕವಾಗಿ ಎಲ್ಲ ಕವಿಗಳೂ ಉಪಯೋಗಿಸುವ "ಪಲ್ಲವಿ" (refrain) ಯನ್ನೆ ಉಪಯೋಗಿಸಬೇಕೆಂದು ನಿರ್ಧರಿಸುತ್ತಾರೆ. ಏಕೆಂದರೆ ಅದು ಎಲ್ಲರಿಗೂ ಗೊತ್ತಿರುವುದರಿಂದ ಅದನ್ನು ನಿರಾಯಾಸವಾಗಿ ಬಳಸಬಹುದೆಂದುಕೊಂಡರು. ಆದರೆ 'ಪಲ್ಲವಿ'ಗೂ ತನ್ನದೆ ಆದ ಮಿತಿಯುಂಟು. ಅದು ಹೇಗೆಂದರೆ ಪಲ್ಲವಿ ಕೇವಲ ಭಾವಗೀತಕ್ಕೆ ಸೀಮಿತವಾಗಿರು ವುದಲ್ಲದೆ ಅದರ ಧ್ವನಿ ಮತ್ತು ವಿಚಾರಗಳ ಏಕತಾನ ತೆಯ ಮೇಲೆಯೆ ಅದರ ಯಶಸ್ಸು ಅವಲಂಬಿಸಿರುವುದು. ಪೋ ಅವರಿಗೆ ಈ ಸಾಂಪ್ರದಾಯಿಕ ಏಕತಾನತೆ ಸರಿ ದೋರಲಿಲ್ಲ. ಆದ್ದರಿಂದ ಅವರು 'ಪಲ್ಲವಿ'ಯಲ್ಲಿಯೆ ಹೊಸತರಹದ ಪ್ರಯೋಗಮಾಡಲಿಚ್ಛಿಸಿದರು. ಅದೇ ನೆಂದರೆ ಅವರು ಪಲ್ಲವಿಯಲ್ಲಿ ಧ್ವನಿಯ ಏಕತಾನತೆಯನ್ನು ಉಳಿಸಿಕೊಂಡರೂ ವಿಚಾರದ ಏಕತಾನತೆಯನ್ನು ತಪ್ಪಿ ಸಲು ನಿರ್ಧರಿಸಿದರು. ಅಂದರೆ 'ಪಲ್ಲವಿ'ಯನ್ನು ಬದ ಲಾಯಿಸುತ್ತ ಹೋಗದಿದ್ದರೂ ಪಲ್ಲವಿಯನ್ನುಪಯೋಗಿ ಸುವ ಪದ್ಧತಿಯನ್ನಿ ಬದಲಾಯಿಸುತ್ತ ಹೋದರು.

ಇದೆಲ್ಲ ಪ್ರಶ್ನೆಗಳಿಗೆ ಉತ್ತರಗಳನ್ನು ದೊರಕಿಸಿದ ಮೇಲೆ 'ಪಲ್ಲವಿ'ಯ ಸ್ವರೂಪವೆಂಥದಿರಬೇಕು ಎಂಬ ಪ್ರಶ್ನೆ

ಉದ್ಭವಿಸುತ್ತದೆ. ಏಕೆಂದರೆ ಪಲ್ಲವಿಯನ್ನು ಬೇರೆಬೇರೆ ರೀತಿಯಲ್ಲಿ ಉಪಯೋಗಿಸಿಕೊಂಡರೂ ಪಲ್ಲವಿಯನ್ನು ಬದಲಾಯಿಸುವುದಿಲ್ಲವಾದ್ದರಿಂದ ಅದು ಓದುಗರ ಮನಸ್ಸಿಗೆ ಬೇಜಾರುತರಿಸುವಂಥದಿರಬಾರದು. ಆದ್ದರಿಂದ ಒಂದೇ ಶಬ್ದದ 'ಪಲ್ಲವಿ'ಯನ್ನುಪಯೋಗಿಸಬೇಕೆಂದು ಪೋ ಅವರು ಯೋಚಿಸಿದರು. ಹಾಗಿದ್ದರೆ 'ಪಲ್ಲವಿ' ಯಾಗುವ ಆ ಶಬ್ದದ ರೂಪ ಹೇಗಿರಬೇಕು ಎಂಬುದು ಮುಂದಿನ ಪ್ರಶ್ನೆ. ಪಲ್ಲವಿಯನ್ನುಪಯೋಗಿಸಬೇಕೆಂದು ನಿರ್ಧರಿಸಿದಮೇಲೆ ಪಲ್ಲವಿಗೆ ಅನುಕೂಲವಾಗುವಹಾಗೆ ಕವಿತೆಯನ್ನು ನುಡಿಗಳಾಗಿ ವಿಭಜಿಸಬೇಕಾಯಿತು. ಪ್ರತಿಯೊಂದು ನುಡಿಯ ಕೊನೆಗೆ ಪಲ್ಲವಿ ಬರಬೇಕು ಎಂಬುದೂ ಸ್ಪಷ್ಟವಾಯಿತು. ಪ್ರತಿಯೊಂದು ನುಡಿಯ ಕೊನೆಗೆ ಬರುವ ಪಲ್ಲವಿ ಶಕ್ತಿಯುತವಾಗಿರಬೇಕಲ್ಲದೆ ಎಳೆದು ಅನ್ನುವ ಹಾಗಿರಬೇಕು. ಇದಕ್ಕೆಲ್ಲ ಅನುಕೂಲವಾಗಬೇಕಾದರೆ ಆ ಪಲ್ಲವಿಯ ಶಬ್ದದಲ್ಲಿ ಅತ್ಯಂತ ಸುಂದರವಾಗಿ ಬಾಯಿತುಂಬ ಉಚ್ಚರಿಸಲಿಕ್ಕೆ ಬರುವ r ಎಂಬ ವ್ಯಂಜನವೂ ಅತ್ಯಂತ ಮಧುರಗಂಭೀರವಾದ o ಎಂಬ ಸ್ವರವೂ ಮಿಲಿತವಾಗಿರಬೇಕೆಂದು ಪೋ ಅವರು ಬಯಸುತ್ತಾರೆ.

ಅಂಥ ಶಬ್ದವೂ ಶೋಕರಸವನ್ನು ಉದ್ದೀಪಿಸುವಂಥದಿರಬೇಕು ಎಂಬುದು ಅವರ ಆಶೆಯಾಗಿದ್ದುದರಿಂದ ಅವರ ತಲೆಗೆ ತಟ್ಟನೆ ಹೊಳೆದ Nevermore ಎಂಬ ಶಬ್ದವನ್ನೆ ಆರಿಸಿಕೊಂಡರು. ಇದಾದ ನಂತರ ಈ ಶಬ್ದವನ್ನು ಕವಿತೆಯುದ್ದಕ್ಕೂ ಪುನಃಪುನಃ ಉಪಯೋಗಿಸಲು ಬರುವಂಥ ನೆವವೊಂದನ್ನು ಹುಡುಕಬೇಕಾಯಿತು. ಪೋ ಅವರಿಗೆ ಅದು ಸ್ವಲ್ಪ ಕಠಿಣವೇ ಆಯಿತು. ಒಪಳ ವಿಚಾರಿಸಿದ ನಂತರ ಅವರಿಗೆ ಒಂದು ಉಪಾಯ ಹೊಳೆಯಿತು. ಅದು ಏನೆಂದರೆ ಆ ಶಬ್ದವನ್ನು ಮನುಷ್ಯನು ಒಂದೇ ಸಮನೆ ಪುನರಾವರ್ತಿಸಿದರೆ ಓದುಗರಿಗೆ ಅತಿ ಬೇಜಾರುಬರುತ್ತದೆಯಾದ್ದರಿಂದ ಅದನ್ನು ಒಂದು ವಿವೇಕರಹಿತ, ಆದರೆ ಮಾತನಾಡುವ ಜೀವಿಯ ಬಾಯಿಂದ ಅನ್ನಿಸಬೇಕೆಂದು ಪೋ ಅವರು ತೀರ್ಮಾನಿಸಿದರು. ಅವರು ಅಂಥ ಜೀವಿಯ ಬಗೆಗೆ ವಿಚಾರಿಸುತ್ತಿರುವಾಗ ಅವರಿಗೆ ಹೊಳೆದದ್ದು 'ಗಿಳಿ'. ಗಿಳಿಯೊಂದು ಪಕ್ಷಿಯಾದುದರಿಂದ ಕೂಡಲೆ ಪಕ್ಷಿಜಾತಿಗೆ ಸೇರಿದ ಇನ್ನೊಂದು ಪಕ್ಷಿಯೂ ಅವರಿಗೆ ಹೊಳೆಯಿತು. ಅದು 'ಡೊಂಬ ಕಾಗೆ' (Raven). ಏಕೆಂದರೆ ಡೊಂಬಕಾಗೆ ಗಿಳಿಯಂತೆ ಮಾತನಾಡಬಲ್ಲುದು; ಅಷ್ಟೇ ಅಲ್ಲದೆ ಕವಿತೆಯ ಶೋಕರಸಕ್ಕೂ ಪೂರಕವಾದ ಪಕ್ಷಿ.

ಪೋ ಅವರು ಈ ಪ್ರಕಾರ ಒಂದು ನೂರು ಸಾಲುಗಳುದ್ದದ ಶೋಕರಸಪೂರಿತ ಕವಿತೆಯ ಪ್ರತಿಯೊಂದು ನುಡಿಯ ಕೊನೆಗೆ ಅಪಶಕುನದ ಹಕ್ಕಿಯಾದ ಡೊಂಬಕಾಗೆಯ ಬಾಯಿಂದ Nevermore ಎಂಬ ಪಲ್ಲವಿಯನ್ನು ನುಡಿಸಲು ನಿರ್ಧರಿಸಿದರು. ಯಾವಾಗಲೂ ಉತ್ಕೃಷ್ಟವಾದುದನ್ನೆ ಅಥವಾ ಪರಿಪೂರ್ಣವಾದುದನ್ನೆ ಬಯಸುವ ಮನೋವೃತ್ತಿಯುಳ್ಳವರಾದ ಪೋ ಅವರು ಶೋಕಗಳಲ್ಲಿಯೆ ಅತ್ಯಂತ ಶೋಕಪೂರ್ಣವಾದ ಶೋಕ ಯಾವುದು ಎಂಬುದನ್ನು ವಿಚಾರಿಸಿ ವಿಚಾರಿಸಿ ಕೊನೆಗೆ 'ಸಾವು' ಅತ್ಯಂತ ಶೋಕಪೂರ್ಣವಾದದ್ದು ಎಂದು ನಿರ್ಣಯಿಸುತ್ತಾರೆ. ಹಾಗಿದ್ದರೆ ಶೋಕ ಅತ್ಯಂತ ಕಾವ್ಯಮಯವಾಗುವುದು ಯಾವಾಗ ? ಎಂಬ ಪ್ರಶ್ನೆಯನ್ನು ಎತ್ತಿ ಆದಕ್ಕೆ ಉತ್ತರವನ್ನು ಕಂಡುಹಿಡಿಯುತ್ತಾರೆ. ಆದು ಏನೆಂದರೆ ಶೋಕವು ಸೌಂದರ್ಯದೊಂದಿಗೆ ಮಿಲಿತವಾದಾಗ ಮಾತ್ರ ಅದು ಕಾವ್ಯವಾಗುವುದು ಎಂಬುದು. ಈ ತತ್ವದ ಪ್ರಕಾರ ಸುಂದರಿಯೊಬ್ಬಳ ಸಾವೆ ಜಗತ್ತಿನಲ್ಲಿ ಅತ್ಯಂತ ಕಾವ್ಯಮಯವಾದ ವಸ್ತುವಾಗಿರುತ್ತದೆ. ಇಂಥ ಕಾವ್ಯಮಯವಾದ ವಸ್ತುವನ್ನು ಹಾಡಲು ಅತ್ಯಂತ ಯೋಗ್ಯವಾದ ತುಟಿಗಳೆಂದರೆ ಭಿನ್ನಹೃದಯಿಯಾದ ಪ್ರೇಮಿಯ ತುಟಿಗಳೆ ಆಗಿವೆ ಎಂಬುದನ್ನು ಪೋ ಅವರು ಖಚಿತಗೊಳಿಸಿದರು.

ಪ್ರಿಯತಮನೊಬ್ಬ ತನ್ನನ್ನು ಬಿಟ್ಟು ಪರಲೋಕವಾಸಿಯಾದ ಪ್ರೇಯಸಿಯನ್ನು ನೆನೆದು ಶೋಕಿಸುತ್ತಿರುವುದನ್ನೂ ಮತ್ತು ಡೊಂಬಕಾಗೆ ಪ್ರತಿಸಾರೆ Nevermore ಎಂಬ ಪಲ್ಲವಿಯನ್ನು ಪುನರುಕ್ತಿಸುವುದನ್ನೂ ಪೋ ಅವರು ತಮ್ಮ ಕವಿತೆಯಲ್ಲಿ ಮೇಳವಿಸಲು ನಿರ್ಧರಿಸಿದರು. ಆದರೆ ಪಲ್ಲವಿಯನ್ನು ಪುನಃಪುನಃ ಉಪಯೋಗಿಸಿದಾಗಲೂ ಏಕತಾನತೆಯುಂಟಾಗದಂತೆ ನೋಡಿಕೊಳ್ಳಬೇಕೆಂಬ ಪ್ರಜ್ಞೆಯೂ ಅವರಲ್ಲಿದ್ದುದರಿಂದ ಅದಕ್ಕೆ ತಕ್ಕಂಥ ಉಪಾಯವೊಂದನ್ನು ಪಡುಕುತ್ತಾರೆ. ಅದು ಏನೆಂದರೆ ಶೋಕತಪ್ತನಾದ ಪ್ರಿಯತಮನು ಕೇಳುವ ಪ್ರಶ್ನೆಗಳಿಗೆ ಡೊಂಬಕಾಗೆಯ ಬಾಯಿಂದ Nevermore

ಎಂಬ ಉತ್ತರವನ್ನು ಕೊಡಿಸುವುದು. ಪ್ರಿಯತಮನು ಕೇಳುವ ಮೊದಲನೆಯ ಪ್ರಶ್ನೆ ತೀರ ಸಾಮಾನ್ಯವಾಗಿರ ಬೇಕು. ಅದಕ್ಕೆ ಡೊಂಬಕಾಗೆ Nevermore ಎಂದು ಉತ್ತರಿಸುತ್ತದೆ. ಎರಡನೆಯ ಪ್ರಶ್ನೆ ಮೊದಲನೆಯ ಪ್ರಶ್ನೆಗಿಂತ ಗಂಭೀರವಾಗಿರಬೇಕು. ಹೀಗೆ ಮುಂದೆ ಬರುವ ಪ್ರಶ್ನೆಗಳು ಒಂದಕ್ಕಿಂತ ಒಂದು ಹೆಚ್ಚು ಗಂಭೀರ ವಾಗುತ್ತ ಹೋಗಬೇಕು. ಹೀಗೆ ಪ್ರಶ್ನೋತ್ತರ ನಡೆ ದಾಗ ಮೊದಮೊದಲು ಡೊಂಬಕಾಗೆ ಉತ್ತರಿಸುವ ಪಲ್ಲವಿಯನ್ನು ನಿರ್ಲಕ್ಷಿಸಿದ ಪ್ರಿಯತಮ ಅಪಶಕುನದ ಹಕ್ಕಿಯ ಬಾಯಿಂದ ಬರುವ ಆ ಶಬ್ದಗಳನ್ನು ಕೇಳಿ, ಆತನ ಮನಸ್ಸಿನಲ್ಲಿ ಮೂಢನಂಬುಗೆ ಉಂಟಾಗಿ ಆತ ಗಂಭೀರನಾಗುತ್ತಾನೆ. ಆ ಹಕ್ಕಿಯ ಅಪಶಕುನದ ಬಗೆಗೂ, ಅದರ ಭವಿಷ್ಯವಾಣಿಯ ಬಗೆಗೂ ಭಯ ವುಂಟಾಗುತ್ತದೆ. ಹೀಗೆ ಮೂಢನಂಬುಗೆಯಿಂದಲೂ ಮತ್ತು ನಿರಾಶೆಯಿಂದಾಗುವ ವಿಚಿತ್ರ ಸಂತೋಷ ದಿಂದಲೂ ಪ್ರಿಯತಮನು ಆ ಪಕ್ಷಿಗೆ ಗಂಭೀರ ಪ್ರಶ್ನೆ ಗಳನ್ನು ಕೇಳುತ್ತ ಹೋಗುತ್ತಾನೆ. ಆ ಪಕ್ಷಿಯ ಬಾಯಿಂದ Nevermore ಎಂದು ಉತ್ತರ ಬರುವ ಹಾಗೆಯೆ ಪ್ರಿಯ ತಮ ತನ್ನ ಪ್ರಶ್ನೆಗಳನ್ನು ರೂಪಿಸುತ್ತ ಹೋಗುತ್ತಾನೆ. ಏಕೆಂದರೆ ಅತ್ಯಂತ ಅಸಹನೀಯವಾದ ದುಃಖವೇ ಆ ಪ್ರಿಯತಮನಿಗೆ ಅತ್ಯಂತ ಸಂತೋಷಭರಿತವಾದುದಾಗಿ ರುತ್ತದೆ. ಪೋ ಅವರು ಹೀಗೆ ಎಲ್ಲವನ್ನೂ ತರ್ಕಬದ್ಧ ವಾಗಿ ವಿಚಾರಿಸಿ, ಕವಿತೆಯ ಶಿಖರ ಅಥವಾ ಕೊನೆ (climax) ಹೇಗಿರಬೇಕೆಂಬುದನ್ನೂ ಮೊದಲೆ ನಿರ್ಧರಿಸು ತ್ತಾರೆ. ಪ್ರಿಯತಮನು ಕೇಳುವ ಪ್ರಶ್ನೆಗೂ ಡೊಂಬ ಕಾಗೆ Nevermore ಎಂದು ಉತ್ತರಿಸಿದಾಗ ಅತ್ಯಂತ ಶೋಕಭರಿತ ಮತ್ತು ನಿರಾಶಾಪೂರ್ಣವಾದ ವಾತಾವರಣ ಕವಿತೆಯಲ್ಲಿ (ಆದ್ದರಿಂದ ಓದುಗರಲ್ಲಿ ಕೂಡ) ಉಂಟಾಗ ಬೇಕು ಎಂಬುದು ಪೋ ಅವರ ಆಶೆಯಾಗಿತ್ತು.

ಇಷ್ಟೆಲ್ಲ ಹಿಂದೆಮುಂದೆ ವಿಚಾರಿಸಿ ಪೋ ಅವರು ತಮ್ಮ ಕವಿತೆಯ ಮೊದಲ ನುಡಿಯನ್ನು ಬರೆದರು. ಅದು ಹೀಗಿದೆ :

"Prophet," said I, "thing of evil ! Prophet still of bird or devil !
By that heaven that bends above us - by that God we both adore,
Tell this soul with sorrow laden if, within the distant Aidenn,
It still clasp a sainted maiden whom the angels name Lenore,
Clasp a rare and radiant maiden whom the angels name Lenore."
Quoth the Raven "Nevermore."

ಈ ನುಡಿಯನ್ನು ಬರೆದ ನಂತರ ಪೋ ಅವರು ತಮ್ಮ ಕವಿತೆಯಲ್ಲಿ ಛಂದಸ್ಸು ಹೇಗಿರಬೇಕು ಎಂಬುದರ ಬಗೆಗೂ ವಿಚಾರಿಸಹತ್ತಿದರು. ಅವರು ಛಂದಸ್ಸಿನಲ್ಲಿಯೂ ಸ್ವಂತಿಕೆ ಯನ್ನು ಸಾಧಿಸಬಯಸಿದರು. ಅವರ ಅಭಿಪ್ರಾಯದಲ್ಲಿ ಅನೇಕ ಶತಮಾನಗಳವರೆಗೆ ಆಂಗ್ಲಭಾಷೆಯ ಕವಿಗಳು ಛಂದಸ್ಸಿನಲ್ಲಿ ಪ್ರಯೋಗಗಳನ್ನು ನಡೆಯಿಸಿ, ಸ್ವಂತಿಕೆ ಯನ್ನು ಸಾಧಿಸಿರಲಿಲ್ಲ. ಏಕೆಂದರೆ ಸ್ವಂತ ಛಂದಸ್ಸನ್ನು ಉಪಯೋಗಿಸುವುದು ಸಾಮಾನ್ಯವಾಗಿ ಎಲ್ಲರೂ ತಿಳಿ ದಂತೆ ಯಾವುದೋ ಆಂತರಂಗ ಪ್ರೇರಣೆ ಅಥವಾ ಅನು ಭೂತಿಯ ಪರಿಣಾಮವಾಗಿರುವುದಿಲ್ಲ. ಪೋ ಅವರ ಪ್ರಕಾರ ಕವಿಯಾದವನು ಸ್ವಂತ ಛಂದಸ್ಸನ್ನು ರೂಪಿಸಿ ಕೊಳ್ಳಬೇಕಾದರೆ ಸಾಕಷ್ಟು ಪ್ರಯತ್ನಪಡಬೇಕಾಗುವುದು. ಪೋ ಅವರು ತಮ್ಮ ಪದ್ಯವನ್ನು ಇದೇ ತತ್ವದ ಪ್ರಕಾರ ಬರೆದರು. ಮೊದಲನೆಯ ಸಾಲು octameter ನಲ್ಲಿರು ತ್ತದೆ. ಅಂದರೆ ಅದರಲ್ಲಿ ಎಂಟು trochee ಗಳಿರುತ್ತವೆ. ಎರಡನೆಯ ಸಾಲಿನಲ್ಲಿ ಏಳೂವರೆ trochee ಗಳಿರುತ್ತವೆ. ಮೂರನೆಯ ಸಾಲಿನಲ್ಲಿ ಮತ್ತೆ ಎಂಟು, ನಾಲ್ಕನೆಯ ಮತ್ತು ಐದನೆಯ ಸಾಲಿನಲ್ಲಿ ಏಳೂವರೆ trochee ಗಳಿ ದ್ದರೆ, ಆರನೆಯ ಸಾಲಿನಲ್ಲಿ ಮೂರೂವರೆ trochee ಗಳಿ ರುತ್ತವೆ. ಈ ಛಂದಸ್ಸುಗಳನ್ನು ಬೇರೆಬೇರೆ ಕವಿಗಳು ತಮ್ಮ ಕಾವ್ಯದಲ್ಲಿ ಬಳಸಿದ್ದಾರೆ. ಆದರೆ ಈ ಕವಿತೆಯಲ್ಲಿ ಪೋ ಅವರ ಸ್ವಂತಿಕೆ ಎಲ್ಲಿದೆಯೆಂದರೆ ಈ ವಿಧವಿಧವಾದ ಛಂದಸ್ಸಿನ ಸಾಲುಗಳನ್ನು ಒಂದೇ ನುಡಿಯಲ್ಲಿ ಬಳಸುವು ದರಲ್ಲಿಯೆ. ಇದರೊಡನೆ ಅಂತ್ಯಪ್ರಾಸ ಮತ್ತು ಅಂತ ರ್ಪ್ರಾಸಗಳನ್ನು ಜೋಡಿಸುವುದರಿಂದ ಪೋ ಅವರ ಕಾವ್ಯಕ್ಕೆ ವಿಶಿಷ್ಟ ತರಹದ ನಾವೀನ್ಯ ಬರುತ್ತದೆ.

ಕವಿತೆಯಲ್ಲಿ ಪ್ರಿಯತಮನನ್ನು ಮತ್ತು ಡೊಂಬಕಾಗೆ ಯನ್ನು ಹೇಗೆ ಮತ್ತು ಯಾವ ಸ್ಥಳದಲ್ಲಿ ಭೇಟಿಮಾಡಿಸ ಬೇಕೆಂಬುದು ಪೋ ಅವರಿಗೆ ಮತ್ತೊಂದು ಸಮಸ್ಯೆ

ಯಾಯಿತು. ಸಾಮಾನ್ಯವಾಗಿ ಡೊಂಬಕಾಗೆ ಅರಣ್ಯ ದಲ್ಲಿ ಇಲ್ಲವೆ ಹೊಲಗಳಲ್ಲಿ ಕಂಡುಬರುತ್ತದೆ. ಆದರೆ ಪ್ರಿಯತಮ ಮತ್ತು ಡೊಂಬಕಾಗೆ ಪರಸ್ಪರ ದೂರವಿರ ಬಾರದು. ಹಾಗಿದ್ದರೆ ಕಾವ್ಯದ ಪ್ರಭಾವಕ್ಕೆ ಕುಂದು ಬರುತ್ತದೆ. ಆದ್ದರಿಂದ ಪ್ರಿಯತಮ ಮತ್ತು ಹಕ್ಕಿ ಸಮೀಪದಲ್ಲಿಯೆ ಇರುವಂತೆ ಚಿತ್ರಿಸಬೇಕು. ಪ್ರಿಯತಮ ತನ್ನ ಕೋಣೆಯಲ್ಲಿರಬೇಕು. ಮತ್ತು ಆ ಕೋಣೆಯಲ್ಲಿ ಆತನ ಪ್ರೇಯಸಿ ಇದ್ದುದರಿಂದ ಅವನಿಗೆ ಆ ಕೋಣೆ ವಿಚಿತ್ರವಾಗಿರುತ್ತದೆ. ಅಲ್ಲದೆ ಆ ಕೋಣೆಯನ್ನು ಚೆನ್ನಾಗಿ ಅಲಂಕರಿಸಿರಬೇಕು. ಏಕೆಂದರೆ ಆ ಅಲಂಕಾರವೆಲ್ಲ ಕಾವ್ಯವಸ್ತುವಿನ ಸೌಂದರ್ಯವನ್ನು ವರ್ಧಿಸುತ್ತದೆ. ಪ್ರಿಯತಮನನ್ನು ಆತನ ಕೋಣೆಯಲ್ಲಿ ಕೂಡಿಸಿದ ಮೇಲೆ ಪಕ್ಷಿಯನ್ನು ಪ್ರಿಯತಮನ ಕಡೆಗೆ ಹೇಗೆ ತರ ಬೇಕು ? ಅದಕ್ಕೆ ಪೋ ಅವರು ಒಂದು ಉಪಾಯ ಕಂಡು ಹಿಡಿಯುತ್ತಾರೆ. ಪಕ್ಷಿಯು ಪ್ರಿಯತಮನ ಕೋಣೆಯ ಕಿಟಕಿಯಿಂದಲೆ ಪ್ರವೇಶಿಸಬೇಕಲ್ಲವೆ ? ಆದ್ದರಿಂದ ಪೋ ಅವರು ಪಕ್ಷಿಯು ಬಂದು ಕಿಟಕಿಯ ಬಾಗಿಲಿಗೆ ರೆಕ್ಕೆ ಯಿಂದ ಬಡಿಯುವಂತೆ ಮಾಡುತ್ತಾರೆ. ಏಕೆಂದರೆ ಹೊರಗೆ ಬಿರುಗಾಳಿಯಿರುತ್ತದೆ. ಬಿರುಗಾಳಿಯಿಂದ ತಪ್ಪಿಸಿಕೊಂಡು ಕೋಣೆಯ ಬೆಚ್ಚಗಿನ ವಾತಾವರಣದಲ್ಲಿ ಆಶ್ರಯ ಪಡೆಯುವುದಕ್ಕೆ ಪಕ್ಷಿ ಹಾತೊರೆಯುವಂತೆ ಮಾಡುತ್ತಾರೆ. ಇದರಿಂದ ಕೋಣೆಯ ಹೊರಗಿನ ಆಲ್ಲೋಲಕಲ್ಲೋಲ ಮತ್ತು ಒಳಗಿನ ಶಾಂತತೆಯ ನಡುವೆ ಒಂದು ವಿರೋಧವೇರ್ಪಡುತ್ತದೆ. ಅಲ್ಲದೆ ಪಕ್ಷಿ, ಅದೂ ರಾತ್ರಿಯ ವೇಳೆಯಲ್ಲಿ ಕಿಟಕಿಯ ಗಾಜಿಗೆ ರೆಕ್ಕೆ ಬಡಿದಾಗ ಅದು ಪ್ರಿಯತಮನಿಗೆ ತನ್ನ ಪ್ರೇಯಸಿಯ ಭೂತವೆ ಬಂದು ಬಾಗಿಲು ಬಡಿದಂತೆ ಭಾಸವಾಗುತ್ತದೆ. ಆದ್ದರಿಂದ ಪ್ರಿಯತಮ ಲಗುಬಗೆಯಿಂದ ಎದ್ದು ಕಿಟಕಿಯ ಬಾಗಿಲು ತೆರೆಯುತ್ತಾನೆ. ಅನಂತರ ಪೋ ಅವರು ಪಕ್ಷಿ ಕೋಣೆಯ ಒಳಗೆ ಬಂದು ಪಲ್ಲಸ್ ದೇವತೆಯ ಶಿಲಾ ಮೂರ್ತಿಯ ಮೇಲೆ ಕೂಡ್ರುವಂತೆ ಮಾಡುತ್ತಾರೆ. ಇದ ರಿಂದ ಪಕ್ಷಿಯ ಗರಿಗಳು (ಮೃದುತ್ವ) ಮತ್ತು ಶಿಲಾ ಮೂರ್ತಿ (ಕಾಠಿಣ್ಯ) ಗಳ ನಡುವೆ ವಿರೋಧವೇರ್ಪಡು ತ್ತದೆ. 'ಪಲ್ಲಾಸ್' ಎಂಬ ಶಬ್ದದ ನಾದಮಾಧುರ್ಯ ಮತ್ತು ಪ್ರಿಯತಮನ ಪಾಂಡಿತ್ಯವನ್ನು ಸಂಕೇತಿಸುವ ಶಿಲಾಮೂರ್ತಿ ಇವೆರಡೂ ಈ ಪಕ್ಷಿಯಿಂದಲೆ ಸೂಚಿತ ವಾಗಿವೆ. ಕವಿತೆಯ ಮಧ್ಯಭಾಗದಲ್ಲಿ ಪೋ ಅವರು ತಮ್ಮ ಕಾವ್ಯದ ಪ್ರಭಾವವನ್ನು ತೀವ್ರಗೊಳಿಸುವುದರ ಸಲುವಾಗಿ ವಿರೋಧ ತತ್ವವನ್ನು ಅನುಸರಿಸಲಿಚ್ಛಿಸಿದರು. ಕಾಲ್ಪನಿಕ (fantastic) ವಾದುದನ್ನು ತೀರ ಹಾಸ್ಯಾಸ್ಪದ ವನ್ನಾಗಿಸಬೇಕೆಂದು ಬಯಸಿದರು. ಆದ್ದರಿಂದ ಡೊಂಬ ಕಾಗೆ ಕೋಣೆಯೊಳಗೆ ಪ್ರವೇಶಿಸುವುದನ್ನು ಹೀಗೆ ವರ್ಣಿ ಸುತ್ತಾರೆ :

Not the least obeisance made he – not a
moment stopped or stayed he
But with mien of lord or lady, perched above
my chamber door.

ಆದರಂತೆ ಮುಂದಿನ ಎರಡು ನುಡಿಗಳಲ್ಲಿಯೂ ಅದೇ ತತ್ವವನ್ನು ಅನುಸರಿಸಿದ್ದಾನೆ :

Then this ebony bird beguiling my sad fancy
into smiling
By the grave and stern decorum of the
countenance it wore,
"Though thy crest be shorn and shaven,
thou", I said, "art sure no craven,
Ghastly grim and ancient Raven wandering
from the nightly shore—
Tell me what thy lordly name is on the
Night's Plutonian shore ?"
Quoth the Raven "Nevermore".

Much I marvelled this ungainly fowl to hear
discourse so plainly,
Though its answer little meaning–little rele-
vancy bore ;
For we cannot help agreeing that no living
human being
Ever get was blessed with seeing bird above
his chamber door—
Bird or beast upon the sculptured bust
above his chamber door,
With such name as "Nevermore."

ಹೀಗೆ ಕವಿತೆಯ ಅಂತ್ಯ ಪರಿಣಾಮ (denouement) ವನ್ನು ವಿರೋಧ ತತ್ವದ ಮೂಲಕ ಮುನ್ಸೂಚಿಸಿದ ನಂತರ ಪೋ ಅವರು ಮತ್ತೆ ಗಂಭೀರವಾದ ವರ್ಣನೆ

ಯಲ್ಲಿ ತೊಡಗುತ್ತಾರೆ. ಕೆಳಗಿನ ಸಾಲಿನಿಂದ ಆ ಗಾಂಭೀರ್ಯವನ್ನು ಪ್ರಾರಂಭಿಸುತ್ತಾರೆ

But the Raven, sitting lonely on that placid bust, spoke only

ಇಲ್ಲಿಂದ ಪ್ರಿಯತಮನು ಡೊಂಬಕಾಗೆಯ ಮಾತಿನಲ್ಲಿ ಕಾಲ್ಪನಿಕವಾದುದನ್ನು ಕಾಣದೆ ನಿಜವಾಗಿ ಗಂಭೀರವಾಗಿ ಯೋಚಿಸತೊಡಗುತ್ತಾನೆ. ಆತನಿಗೆ ಆ ಪಕ್ಷಿ "grim, ungainly, ghastly, gaunt, and ominous bird of yore" ಆಗಿ ಕಾಣಿಸುತ್ತದೆ. ಪ್ರಿಯತಮನ ಮನಸ್ಸಿನಲ್ಲಿ ಮೂಡಿದ ಭಾವನೆಗಳು ಓದುಗರಲ್ಲಿಯೂ ಮೂಡುತ್ತವೆ.

ಇವೆಲ್ಲ ಹಂತಗಳನ್ನು ದಾಟಿ ಕೊನೆಗೆ ಕವಿತೆಯ ಕೇಂದ್ರ ಪರಿಣಾಮಕ್ಕೆ ಬರುತ್ತೇವೆ. ಆಲ್ಲಿ ಪ್ರಿಯತಮ ತಾನು ತನ್ನ ಪ್ರೇಯಸಿಯನ್ನು ಪರಲೋಕದಲ್ಲಿಯಾದರೂ ಭೇಟಿಯಾಗುತ್ತೇನೆಂಬ ಎಂಬ ಕೊನೆಯ ಪ್ರಶ್ನೆಯನ್ನು ಕೇಳಿದಾಗ ಡೊಂಬಕಾಗೆ Nevermore ಎಂದು ಉತ್ತರಿಸುತ್ತದೆ. ಈಗ ಕವಿತೆ ಸಂಪೂರ್ಣಾವಸ್ಥೆಯನ್ನು ಮುಟ್ಟುತ್ತದೆ.

ಪೋ ಅವರ ಅಭಿಪ್ರಾಯದಲ್ಲಿ ಕವಿತೆ ಯಶಸ್ವಿಯಾಗ ಬೇಕಾದರೆ ಕವಿಯು ಆ ಕವಿತೆಯಲ್ಲಿ ಎರಡು ಮಹತ್ವ ಪೂರ್ಣ ಗುಣಗಳನ್ನು ಸಾಧಿಸಬೇಕು. ಒಂದು : ಸಂಕೀರ್ಣತೆ ; ಎರಡು : ಸೂಚ್ಯಾರ್ಥ. ಇವೆರಡನ್ನೂ ಸಾಧಿಸಬೇಕಾದರೆ ಕವಿ ಸಾಕಷ್ಟು ಹೋರಾಡಬೇಕಾಗುತ್ತದೆ. ಇದೇ ತತ್ವವನ್ನು ಮನಸ್ಸಿನಲ್ಲಿಟ್ಟುಕೊಂಡು ಪೋ ಅವರು ತಮ್ಮ ಕವಿತೆಯಃ ಕೊನೆಯ ಎರಡು ನುಡಿಗಳನ್ನು ಬರೆಯುತ್ತಾರೆ. ಈ ಕೆಳಗಿನ ಸಾಲುಗಳಲ್ಲಿ ಕವಿಯು ಉದ್ದೇಶಿಸಿದ ಸೂಚ್ಯಾರ್ಥ ಗೋಚರಿಸುತ್ತದೆ.

"Take thy back from out my heart, and take thy form from off my door!"
Quoth the Raven "Nevermore!"

ಪೋ ಅವರೆ ಅದನ್ನು ಹೀಗೆ ವಿವರಿಸುತ್ತಾರೆ. "from out my heart" ಶಬ್ದ ಸಂಕುಲ ಕವಿತೆಯಲ್ಲಿ ಮೊದಲ ಬಾರಿ ಬಂದ ರೂಪಕಾಭಿವ್ಯಕ್ತಿಯಾಗಿದೆ. ಅದಕ್ಕೆ ಉತ್ತರವಾಗಿ ಪಕ್ಷಿ ಹೇಳಿದ Nevermore ಶಬ್ದ ಓದುಗರಲ್ಲಿ ಮೊದಲಿನ ನುಡಿಗಳಲ್ಲಿ ವರ್ಣಿತವಾದುದರಲ್ಲೆಲ್ಲ ಒಂದು ನೀತಿಯನ್ನರಸಲು ಹಚ್ಚುತ್ತವೆ. ಈ ಕಾರಣ ದಿಂದಾಗಿ ಡೊಂಬಕಾಗೆ ಬರಿ ಪಕ್ಷಿಯಾಗಿರದೆ 'ಶೋಕ ಮತ್ತು ನೆನಪಿ'ನ ಸಂಕೇತವಾಗುತ್ತದೆ. ಕೆಳಗಿನ ನುಡಿಯಲ್ಲಿ ಅದನ್ನು ಕಾಣಬಹುದು :

And the Raven, never flitting, still is sitting, still is sitting
On the pollid bust of Pallas, just above my chamber door ;
And his eyes have all the seeming of a demon's that is dreaming,
And the lamp light o'er him streaming throws his shadow on the floor
And my soul from out that shadow that lies fleating on the floor
shall be lifted—nevermore.

* * * *

ಹೀಗೆ ಮೇಲೆ ಚರ್ಚಿಸಿದ ಪೋ ಅವರ ಕವಿತೆಯ ವಿಮರ್ಶೆಯಲ್ಲಿ ಅವರ ಪ್ರಾಮಾಣಿಕತೆ, ಆತ್ಮವಿಮರ್ಶಕ ಪ್ರಜ್ಞೆ, ಮತ್ತು ಅಂತರಂಗದ ಸಮಸ್ಯೆಗಳನ್ನು ಬಹಿರಂಗಗೊಳಿಸಲು ಬೇಕಾಗಿದ್ದ ಧೈರ್ಯ ಮುಂತಾದ ಗುಣಗಳನ್ನು ಕಂಡುಕೊಳ್ಳಬಹುದು. ಇವೆಲ್ಲದರ ಹಿಂದೆ ಸೂಚ್ಯವಾಗಿರುವ ಅವರ ಕಾವ್ಯಸಿದ್ಧಾಂತವೂ ಗಮನಾರ್ಹವಾಗಿದೆ. ಅವರ ಸಿದ್ಧಾಂತದ ಪ್ರಕಾರ ಯಶಸ್ವಿ ಕವಿತೆಗಳೆಲ್ಲ ಸಂಕ್ಷಿಪ್ತ ಅಥವಾ ಚಿಕ್ಕ ಕವಿತೆಗಳೆ ಆಗಿವೆ. ಮತ್ತು ನೀಳ್ಗವಿತೆಗಳಾಗಲಿ, ಮಹಾಕಾವ್ಯಗಳಾಗಲಿ ಇಡೀ ಕವಿತೆಗಳಾಗಿರದೆ ಅಸಂಖ್ಯಾತ ಚಿಕ್ಕ ಕವಿತೆಗಳ ಮಾಲಿಕೆ ಅಥವಾ ಜೋಡಣೆಗಳಾಗಿವೆ. ಈ ಮಾತುಗಳನ್ನು ಸ್ವತಃ ಕವಿಯಾದವರೆ ಹೇಳಿರುವುದರಿಂದ, ಮತ್ತು ಸ್ವತಃ ಅವುಗಳನ್ನು ಕಾರ್ಯರೂಪಕ್ಕಿಳಿಸಿ ತೋರಿಸಿರುವುದರಿಂದ ಅವರ ವಿಚಾರಗಳಿಗೆ ಬಹಳಷ್ಟು ಬೆಲೆಬರುತ್ತವೆ. ಪೋ ಅವರ ವೈಶಿಷ್ಟ್ಯಪೂರ್ಣ ಕಾವ್ಯ ತತ್ವ ಅಥವಾ ಸಿದ್ಧಾಂತವು ಕಾವ್ಯವಿಮರ್ಶೆ ಮತ್ತು ಮನೋವೈಜ್ಞಾನಿಕ ಕ್ಷೇತ್ರಗಳಲ್ಲಿ ಮೂಲಭೂತವಾದ ಪ್ರಶ್ನೆಗಳನ್ನು ಕೆರಳಿಸುತ್ತದೆ. ಉದಾಹರಣೆಗೆ ಚಿಕ್ಕ ಕವಿತೆಯೆ ನಿಜವಾದ ಮತ್ತು ಯಶಸ್ವಿಯಾದ ಕವಿತೆಯೆಂದು ಪೋ ಅವರ ವಾದವನ್ನು ಒಪ್ಪಿಕೊಳ್ಳುವುದಾದರೆ ಜಗತ್ತಿನಲ್ಲಿ

ಸಾರ್ವತ್ರಿಕವಾಗಿ ಮಾನ್ಯವಾಗಿರುವ ನೀಳ್ಗವಿತೆಗಳು ಮತ್ತು ಮಹಾಕಾವ್ಯಗಳು ನಿರರ್ಥಕವಾದವುಗಳೆ ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಮಹಾಕವಿ ದಾಂತೆಯ The Divine Comedy, ವ್ಹರ್ಜಿಲ್ ಕವಿಯ The Iliad ಮತ್ತು The Odyssey, ಮಿಲ್ಟನ್ ಕವಿಯ The Paradise Lost, ವ್ಯಾಸ ಮಹಾಭಾರತ, ವಾಲ್ಮೀಕಿ ರಾಮಾಯಣ, ಶ್ರೀ ಅರವಿಂದರ The Savithri ಮುಂತಾದ ಮಹಾಕಾವ್ಯಗಳನ್ನೆಲ್ಲ ಶವಾಗಾರಕ್ಕೆ ಕಳುಹಿಸ ಬೇಕೆ ? ಎಂಬುದು ಒಂದು ಅತ್ಯಂತ ಮಹತ್ವದ ಪ್ರಶ್ನೆ. ಪೋ ಅವರ ಉದಾಹರಣೆ ಇನ್ನೊಂದು ಸಮಸ್ಯೆ ಯನ್ನು ಉಂಟುಮಾಡುತ್ತದೆ. ಅದು ಏನೆಂದರೆ ಒಂದು ವೇಳೆ ಕವಿ ತನ್ನ ಕವಿತೆಯನ್ನು ಹೇಗೆ ಬರೆದನೆಂದು ಹೇಳಿ, ಒಳಗುಟ್ಟುಗಳನ್ನು ಬಹಿರಂಗಪಡಿಸಿ, ಅದರ ಅರ್ಥವನ್ನು ಓದುಗರಿಗೆ ವಿವರಿಸಿದರೆ ಕವಿತೆಯ ಅರ್ಥವನ್ನು ಸೀಮಿತಗೊಳಿಸಿದಂತಾಗಲಿಲ್ಲವೆ ? ಮತ್ತು ಕವಿತೆಯಲ್ಲಿ ಕವಿ ಹೇಳುವ ಅರ್ಥವೊಂದೇ ಇರಬೇಕೆ ? ಓದುಗರು ತಮ್ಮ ಅರ್ಥವನ್ನು ಅದರಲ್ಲಿ ಓದಬಾರದೆ ? ಓದುಗರ ಅರ್ಥ ಕವಿಯ ಅರ್ಥಕ್ಕಿಂತ ಭಿನ್ನವಾಗಿಯೂ, ಹೆಚ್ಚು ಶ್ರೀಮಂತವಾಗಿಯೂ ಇರಲಾರದೆ ? ಇರಬಾರದೆ ? ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ. ಯೂರೋಪ್ ಮತ್ತು ಅಮೇರಿಕಾ ದೇಶದಲ್ಲಿ ಅಸಂಖ್ಯಾತ ವಿಮರ್ಶಕರು ಈ ಪ್ರಶ್ನೆಗಳನ್ನು ಇಂದಿನವರೆಗೂ ಚರ್ಚಿಸುತ್ತಲಿದ್ದಾರೆ. ಈ ಲೇಖನದ ಉದ್ದೇಶ ಇಂಥ ಪ್ರಶ್ನೆಗಳನ್ನು ತಿಳಿದು ಕೊಳ್ಳುವುದೆ ಆಗಿದೆ ಹೊರತು ಅವುಗಳಿಗೆ ಉತ್ತರಗಳನ್ನು ಹುಡುಕುವುದಲ್ಲ. ಕನ್ನಡದಲ್ಲಿ ಅಡಿಗ, ಕಣವಿ, ಶಿವ ರುದ್ರಪ್ಪನಂಥ ಪ್ರಮುಖ ಕವಿಗಳು ತಮ್ಮ ಕವಿತೆಗಳಲ್ಲಿ ಒಂದನ್ನಾದರೂ ಏಕೆ ಮತ್ತು ಹೇಗೆ ಹಂತಹಂತವಾಗಿ ಬರೆದರೆಂಬುದನ್ನು ಬಹಿರಂಗವಾಗಿ ಚರ್ಚಿಸಿದರೆ ಕಾವ್ಯಾ ಭಿಮಾನಿಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ಮಹದುಪಕಾರ ಮಾಡಿದಂತಾಗುತ್ತದೆ ಅಲ್ಲವೆ ?

ಆದಿವಾಸಿಗಳ ಅರಸ

(ಮಧ್ಯ ಪ್ರದೇಶದಲ್ಲಿ)

ಅಭ್ಯಾಸ – ೩

ಭಾರತ, ರಾಜ–ಮಹಾರಾಜರ ನಾಡೆಂದು ವಿದೇಶಿ ಪ್ರವಾಸಿಕರನ್ನು ಆಕರ್ಷಿಸಿದರೂ ಇತ್ತೀಚಿನರಾಜರನ್ನಷ್ಟೇ ಅವರು ನೋಡಿ ಹಿಂತಿರುಗಬೇಕಾದ ಪರಿಸ್ಥಿತಿ ನಿಜಕ್ಕೂ ಶೋಚನೀಯ. ಅವರ ಕೋಟೆ-ಕೊತ್ತಳ ಗಳನ್ನು, ಅರಮನೆ, ರಾಜವಾಡೆಗಳನ್ನು ತಮ್ಮ ದರಬಾ ರೆಂಬಂತೆ ಪ್ರವಾಸಿ ಉದ್ದಿಮೆಯವರು ಬಳಸುತ್ತಿದ್ದದ್ದು ಇನ್ನೂ ವಿಷಾದನೀಯ. ಮೈಸೂರು, ಹೈದರಾಬಾದ, ಬಡೋದೆಗಳಂತೆ, ಚಿಕ್ಕಪ್ರಮಾಣದಲ್ಲಿ ಆದರೂ ಬಸ್ತರ ಸಂಸ್ಥಾನ (ಮಧ್ಯ ಪ್ರದೇಶ) ಒಮ್ಮೆ ಆಳರಸರ ಕಾಲಕ್ಕೆ ಶಾಂತಿ-ಸೌಂದರ್ಯಗಳ ಬೀಡಾಗಿತ್ತು. ರಾಜಧಾನಿ ಜಗದಲಪುರ, ವಿವಿಧ ಚಟುವಟಿಕೆಗಳ ಕೇಂದ್ರವಾಗಿತ್ತು. ಆದರೆ ಇಂದು... ಸ್ಮಶಾನ ಶಾಂತಿ ತಾಂಡವವಾಡುವ ಹಾಳುಬಿದ್ದ ಕೊಂಪೆಯಾಗಿದೆ. ಇದರ ಕಾರಣಗಳನ್ನು ಅರಿಯಲು ಒಮ್ಮೆ ಅಲ್ಲಿ ಹೋಗಬೇಕು.

ಚಳಿಗಾಲದ ಮುಂಜಾವಿನ ಮಂಜು ಎಲ್ಲೆಡೆ ಹಬ್ಬಿದೆ. ಊರ ಹೃದಯಸ್ಥಾನದಲ್ಲಿ ನಿಂತ ಅರಮನೆಯ ಗೋಪುರ, ದೇವಸ್ಥಾನದ ಕಳಸಗಳು ಮುಸುಕು ಹೊತ್ತು ತಲೆ ತಗ್ಗಿಸಿದ ಕೋಮಲಾಂಗಿಯರಂತೆ ಭಾಸವಾದವು. ಮಂಜಿ ನಂತೆಯೇ ದೂರದ ಅರಮನೆ ಆಕರ್ಷಕವಾಗಿ ಕಂಡು ಹತ್ತಿರ ಹೋದಾಗ ಕರಗಿ ಹೋಗಿದ್ದಿತು. ಮಹಾದ್ವಾರ, ಕಮಾನುಗಳು, ಹೂದೋಟಗಳೆಲ್ಲ ಬಡಕಲಾಗಿ ನಿರ್ಜೀವ ವಾಗಿ ನಿಂತಿದ್ದವು. ರಾಜ–ರಾಣಿಯರಿಗೆ ವಿಲಾಸದ ತಾಣ ವಾಗಿದ್ದ ಭವ್ಯ ಉದ್ಯಾನ, ಊರವರಿಗೆ ಕಕ್ಕಸಿನ ಸ್ಥಳ ವಾಗಿದ್ದು ನೋಡಿ ಕರುಳು ಕಿವುಚಿದಂತಾಯಿತು. ಅರಸರ ವಿಹಾರ, ಆತಿಥಿಗಳ ಬಿಡಾರಕ್ಕೆ ಮೀಸಲಾಗಿದ್ದ ಅಶ್ವರಥ ಮುರಿದು ಒಂದೆಡೆ ಬಿಕೋ ಎಂದು ನಿಂತಿತ್ತು. ಅದರ ಕುದುರೆಗಳು ಹೊಟ್ಟೆಗಿಲ್ಲದೇ ಅದೆಲ್ಲೊ ಪ್ರವಾಸಿಗರ ಟಾಂಗಾ ಎಳೆಯುತ್ತಿರಬೇಕು. ಪ್ರಭುವನ್ನು ದೂರದೂರಿಗೆ ಹೊತ್ತು ಓಡುವ ಶ್ವೇತ ವರ್ಣದ ರೋಲ್ಸರಾಯ್ಸುಕಾರು ಪೊರ್ಟಿಕೊದಲ್ಲಿ ಜಂಗು ತಿನ್ನುತ್ತ ನಿಂತಿದೆ. ಅದರ ಎಂಜಿನ್ನು ಕದ್ದೊಯ್ದು ವರ್ಷಗಳೇ ಕಳೆದಿರಬೇಕು. ಅವಸರದ ಕೆಲಸಕ್ಕೆ ಮೀಸಲಾಗಿದ್ದ ಜೀಪ್ ನರನಾಡಿ ಕಳೆದುಕೊಂಡು, ಬಸ್ತರ್–28 ಎಂಬ ಫಲಕವೊಂದನ್ನು ಗತಸ್ಮೃತಿಯ ಕುರುಹಾಗಿ ಹೊತ್ತು ನಿಂತಿದೆ. ಅರಮನೆಯ ಧೀಮಂತರು ಓದಿ ಅರಗಿಸಿಕೊಳ್ಳಬೇಕಾಗಿದ್ದ ಗ್ರಂಥಗಳು ಹಸಿದ ವರಲೆ (ಗೆದ್ದಲು) ಗೆ ಆಹಾರವಾಗಿದ್ದವು. ಮುಚ್ಚಿದ ಗಾಜಿನ ಬಾಗಿಲೊಳಗಿಂದ ಆದಿವಾಸಿ ಹೆಂಗಳೆಯರ ತಂಡವೊಂದು ಕುತೂಹಲದಿಂದ ಗಾಜಿನ ಒಳಗಿನ ನೋಟ ವೀಕ್ಷಿಸುತ್ತಿತ್ತು. ಒಳಗಾದರೋ ಗೊಂಡ ಯುವತಿ ಯೊಬ್ಬಳು ಹಲವಾರು ಮಾಸಗಳಿಂದ ಸಂಚಯವಾದ ಕಸ ಬಳಿಯುವದರಲ್ಲಿ ತೊಡಗಿದ್ದಳು!

ಬಾಗಿಲೀಚೆಯ ಹಿರಿಯಳೊಬ್ಬಳು ಮೆಲುದನಿಯಲ್ಲಿ "ಪ್ರವೀರ ಪ್ರಭುಗಳು ಬದುಕಿದ್ದಾಗ ಅರಮನೆ ಬಂಗಾರ ದಂತೆ ಹೊಳೆಯುತ್ತಿತ್ತು. ಅವರೇ ಹೋದನಂತರ ಕೇಳುವವರ್ಯಾರು? ನೋಡುವ ನಮಗೇ ಇಷ್ಟು ನೋವಾ ಗುವಾಗ ಅವರ ಆತ್ಮ ಅದೆಷ್ಟು ಚಡಪಡಿಸುತ್ತದೋ... ಎಂದು ಅರಸರು ಕೇಳಿಸಿಕೊಳ್ಳದಿರಲಿ" ಎಂದು ಪಿಸುಮಾತಿ ನಲ್ಲಿ ಉಸುರಿದಳು. "ಪ್ರಭುಗಳ ಅಕಾಲಿಕ ಮೃತ್ಯುವಿಗೆ ಕಾರಣ ನಿಮಗೆ ಗೊತ್ತೇ?" ಎಂದು ನಡುವಯಸ್ಕಳು ವಿಚಾರಿಸಿದಾಗ "ಅದೆಲ್ಲ ನನಗೆ ತಿಳಿಯದು. ಊರ ಮಾಂಝಿ (ಹಳ್ಳಿಯ ಹಿರಿಯ) ಗೆ ಗೊತ್ತು ಎಂದು ಹಿರಿಯಳು ಜಾರಿಕೊಳ್ಳಲು ಯತ್ನಿಸಿದಳು. ಅರಸಂ-

ಅರಸಿಯ ದರ್ಶನ ಮಾಡಿಸುವದಿಲ್ಲೇನಮ್ಮಾ? ಎಂದು ಮಗಳು ನಡುವೆಯೇ ಕೇಳಿದ ಪ್ರಶ್ನೆಗೆ ಪ್ರಭುಗಳು ಸೂರ್ಯವಂಶಕ್ಕೆ ಸೇರಿದವರಂತೆ. ಹೆಂಡತಿಯೂ ಆ ದೇವರ ವಂಶದವಳು. ಆದರೆ ಈಗಿನ ಯುವರಾಜನ ತಾಯಿ ಶೂದ್ರ ಮನೆತನದವಳಾದ್ದರಿಂದ ಅರಸು ಮನೆ ತನಕ್ಕೆ ಅಳಿಗಾಲ ಬಂತೆಂದು ಜನ ಆಡಿಕೊಳ್ಳುತ್ತಾರೆ...." ಎಂದು ಹಿರಿಯಳು ವಿವರಣೆ ಕೊಡುತ್ತಿದ್ದಂತೆ ಮುಚ್ಚಿದ ಬಾಗಿಲು ತೆರೆದುಕೊಂಡದ್ದರಿಂದ ಹಳ್ಳಿಯ ಹೆಂಗಸರ ತಂಡ ಬೆಚ್ಚಿ ಬಿದ್ದು ಹಿಂದೆ ಸರಿಯಿತು. ಮೆಟ್ಟಿಲುಗಳನ್ನು ಗುಡಿಸಲು ಬಂದ ಗೊಂಡತಿಗೆ, ಹಿರಿಯಳು, 'ಇವರಿಗೆಲ್ಲ ಒಳಗೆ ತೋರಿಸಿಕೊಂಡು ಬರಲೇನಮ್ಮಾ?' ಎಂದು ಕೇಳಿದಾಗ, ಆಕೆ ತಾನೇ ಅರಸಿ ಎಂಬ ಭಾವ ತಳೆದು, 'ಸಂಜೆಗೆ ಬನ್ನಿ, ಈಗ ಸಾಧ್ಯವಿಲ್ಲ' ಎಂದು ಅಸಡ್ಡೆಯಿಂದ ಹೋಗಿಯೇ ಬಿಟ್ಟಳು. "ಇವರ ಸೊಕ್ಕು ಇನ್ನೂ ಇಳಿದಿಲ್ಲ. ಪ್ರಭುಗಳಾದರೋ ನಮ್ಮನ್ನೆಲ್ಲ ಬರಮಾಡಿಕೊಂಡು ತಾವೇ ತೋರಿಸಿ ಊಟ ಹಾಕಿ ಕಳಿಸುತ್ತಿದ್ದರು ..." ಎಂದು ತನ್ನ ಕಾಲ್ಪನಿಕ ಅರಸರ ಗುಣಗಾನ ಮಾಡುತ್ತ ತಂಡದವರೊಡನೆ ಕಾಲುಕಿತ್ತಳು.

ಅರಮನೆಯ ಒಳಭಾಗದ ದರ್ಶನ ಸಾಯಂಕಾಲದ ತನಕ ಸಾಧ್ಯವಾಗದ್ದರಿಂದ ನಾಶ್ತಾಕ್ಕೆ ಒಳ್ಳೆಯ ಹೊಟೇಲನ್ನು ಹುಡುಕುತ್ತ ಹೊರಟಾಗ ಎಲ್ಲ ಬೀದಿಗಳಲ್ಲೂ ಪೋಲಿಸರೇ ಅಧಿಕ ಸಂಖ್ಯೆಯಲ್ಲಿರುವದು ಗಮನಕ್ಕೆ ಬಂದಿತು. ಬೀರ ಬಲ್ ಹೋಟೇಲ್ ಮಾಲಕನೇ ಪೂರಿ-ಛೋಲೆ (ಕಡಲೆ ಪಲ್ಯ) ಪೂರೈಸಿದ. ಅರಮನೆಯ ಅಧೋಗತಿಯ ಬಗ್ಗೆ ಆತನನ್ನು ವಿಚಾರಿಸಿದಾಗ ಅರಸರ ಮೇಲಿನ ಅಭಿಮಾನದಿಂದಲೋ, ಆಗಂತುಕರ ಕುತೂಹಲದಿಂದ ಪ್ರಭಾವಿತನಾಗಿಯೋ ಕೆಲಸವನ್ನು ಆಳಿಗೊಪ್ಪಿಸಿ ತಾನೇ ಈ ಅತಿಥಿಗಳಿಗೆ ವೈಯಕ್ತಿಕ ಲಕ್ಷಪೂರೈಸಿ ವಿವರಿಸಲಾರಂಭಿಸಿದ. "ನಾನು ಉತ್ತರ ಪ್ರದೇಶದವನು, ಬಾಬೂಜಿ. ಎರಡು ದಶಕಗಳ ಹಿಂದೆ, ಭವಿಷ್ಯ ಹುಡುಕುತ್ತ ಜಗದಲಪುರ ತಲುಪಿದಾಗ ರಾಜಾ ಪ್ರವೀರ ಚಂದ್ರಭಾಂಜ ದೇವರು ಅರಸರಾಗಿದ್ದರು. ಅವರ ತಾರುಣ್ಯ- ಸೌಂದರ್ಯ, ಸ್ನೇಹ ಪರತೆ, ಸರಳತೆಗಳಿಂದ ಪ್ರಭಾವಿತರಾಗಿದ್ದ ಜನಕೋಟಿಯಲ್ಲಿ ನಾನೂ ಒಬ್ಬ. ಅವರು ಯಾವದೇ ಲಂಪಟತನ ತೋರದೇ ನೆಮ್ಮದಿಯಿಂದ ಬಾಳಲು ಜನರಿಗೆ ಸರ್ವವಿಧದಿಂದಲೂ ಸಹಾಯ ಮಾಡಿದ್ದರಿಂದ, ಸರ್ವರೂ, ಆದರಲ್ಲೂ ಆದಿವಾಸಿಗಳು ಅವರನ್ನು ದೇವರಂದೇ ಪರಿಗಣಿಸುತ್ತಿದ್ದರು. ಅವರ ಆದೇಶ-ನಿರ್ಣಯಗಳನ್ನು ಶಿರಸಾವಹಿಸುತ್ತಿದ್ದರು. ಇಂಥ ವಿಶ್ವಾಸವೇ ಅವರಿಗೆ ಮೃತ್ಯುವಾಗಿ ಬಂದಿತೇ ಎಂದು ದುಃಖಿವಾಗುತ್ತದೆ...." ಎನ್ನುತ್ತಿದ್ದಂತೆ ಮಾತು ನಿಲ್ಲಿಸಿ, ಹೊರಗೆ ಯಾರಾದರೂ ತನ್ನ ಮಾತು ಕೇಳಿಸಿಕೊಳ್ಳುತ್ತಿದ್ದಾರೆಯೇ ಎಂದು ಪರೀಕ್ಷಿಸಿ ಇಲ್ಲವೆಂದು ಖಚಿತಪಡಿಸಿ ಮಾತು ಮುಂದುವರಿಸಿದ.

"ಚುನಾವಣೆಯ ಹೊತ್ತಿಗೆ ಅವರ ವರ್ಚಸ್ಸನ್ನು ಬಳಸಿಕೊಳ್ಳುವದಕ್ಕಾಗಿ ದಿಲ್ಲಿ-ಭೂಪಾಳಗಳ ರಾಜಕಾರಣಿಗಳು ಧಾವಿಸಿ ಬರುತ್ತಿದ್ದರು. ಅವರ ಅಸಹಾಯಕತೆ ಅರಿತು, ತಮ್ಮ ಪ್ರಜೆಗಳ ಅಭ್ಯುದಯವನ್ನು ಲಕ್ಷದಲ್ಲಿಟ್ಟುಕೊಂಡು ಆಶ್ವಾಸನೆ ಪಡೆದೇ ಅರಸರು ನೆರವು ನೀಡುತ್ತಿದ್ದರು. ಪುಲಿಯ ಹಾಲಿಗೂ ಒಪ್ಪಿಕೊಂಡವರು, ಒಮ್ಮೆ ತಮ್ಮ ಕೆಲಸವಾದ ನಂತರ ಹಸುವಿನ ಹಾಲಿಗೂ ಸೊನ್ನೆಕೊಡಲು ಹವಣಿಸಿದಾಗ, ಅರಸರ ವಿಶ್ವಾಸ ಕಳೆದುಕೊಳ್ಳದೇ ಇರುತ್ತಾರೆಯೇ? ಆ ನಂತರ ಪ್ರವೀರಚಂದ್ರರು ಅವರೊಡನೆ ಸಹಕರಿಸಲು ನಿರಾಕರಿಸಿದಾಗ, ರಾಜಕಾರಣಿಗಳು ರೊಚ್ಚಿಗೆದ್ದು ಅವರನ್ನು ಅಧಿಕಾರದಿಂದ ಇಳಿಸುವುದು ಒಂದೇ ಮಾರ್ಗವೆಂದು ಸಲ್ಲದ ಆರೋಪಗಳ ಮೇಲೆ ಪದಚ್ಯುತಿ ಮಾಡಿ, ಬಂಧನದಲ್ಲಿಡಿಸಿ, ಅವರ ತಮ್ಮ ವಿಜಯಚಂದ್ರರನ್ನು ರಾಜನನ್ನಾಗಿ ಮಾಡಿದರು. ಆತ ಮದುವೆಯಾದದ್ದು ಜನಸಾಮಾನ್ಯಳೊಬ್ಬಳನ್ನು. ಯುವರಾಜನೆಂದೇ ಆತನನ್ನು ಸ್ವೀಕರಿಸಿದ್ದ ಆದಿವಾಸಿಗಳು ರಾಜನೆಂದು ಒಪ್ಪಿಕೊಂಡಾರೇ? ಗಲಭೆ ಪ್ರಾರಂಭವಾಯಿತು. ತಮಗಾಗಿಯೇ ರಾಜಾ ಪ್ರವೀರಚಂದ್ರರು ಕಾರಾಗೃಹದಲ್ಲಿರುವಂತಾಯಿತೆಂದು ಜನರಿಗೆಲ್ಲ ಗೊತ್ತಿದ್ದರಿಂದ ಅವರ ಬಗ್ಗೆ ಗೌರವ ಇನ್ನೂ ಹೆಚ್ಚುವಂತಾಯಿತು. ಸರಕಾರ ಪ್ರವೀರರನ್ನು ಬಿಡುಗಡೆ ಮಾಡಲೇಬೇಕಾಯಿತು. ಆದರೆ ರಾಜರು ಬಗ್ಗಿ ನಡೆಯುವವರಲ್ಲ. ಮತ್ತೆ ಅವರನ್ನು ಬಂಧಿಸುವುದು, ಬಿಡುಗಡೆ ಮಾಡುವುದು, ಕೆಲ ಕಾಲ ನಡೆಯಿತು. ಹತ್ತು ಹನ್ನೆರಡು ವರ್ಷಗಳ ಹಿಂದೆ ಈ ನಾಟಕ ಪ್ರಕೋಪಕ್ಕೆ ಹೋಯಿತು. ಅರಸನಿಗಾಗಿ ದಂಗೆಯೆದ್ದ ಪ್ರಜೆಗಳು – ಪೋಲಿಸರಲ್ಲಿ ಚಕಮಕಿ ನಡೆಯಿತು. ಪ್ರಜೆಗಳು ಗುಂಡಿಗಾಹುತಿಯಾಗುವದನ್ನು ನೋಡಲಾಗದೇ, ಶಾಂತಗೊಳಿಸಲು ಹೊರಗೆ ಬಂದ

ಪ್ರಭುವನ್ನು ಬೀದಿನಾಯಿಯನ್ನು ಕೊಲ್ಲುವಂತೆ ಗುಂಡಿಕ್ಕಿ ಕೊಂದರು ಕೊಲೆಗಡುಕರು – ಬಾಬೂಜಿ....." ಮಾಲಕನ ಕೊರಳುಬ್ಬಿ ಕಣ್ಣು ತೇವವಾದುವು. ಸುಧಾರಿಸಿಕೊಂಡು ಮಾತು ಮುಂದರಿಸುವದರಲ್ಲಿದ್ದಾಗ, "ಪೋಲಿಸಸಾಹೇಬರು ಕೂಗುತ್ತಿದ್ದಾರೆ ಸಾಬ್" ಎಂಬ ಆಳಿನ ವರದಿಯಿಂದ ಲಗುಬಗೆಯಿಂದ ಎದ್ದು ಹೋದ.

ಮಾಲಕನ ಮಾತುಗಳನ್ನು ಕೇಳಿಸಿಕೊಂಡ ಸೇವಕನಿಗೆ ಅಂದಿನ ನೆನಪು ಮರುಕಳಿಸಿತು. "ಬಾಬೂಜಿ, ಆಗ ನಾನಿನ್ನು ನಾಲ್ಕಾಣೆ ದಿನಕೂಲಿಯ ಕೆಲಸಕ್ಕೆ ಹೋಗುವ ಹುಡುಗ ಗೋಳಿಬಾರಿನಲ್ಲಿ ಮೃತಪಟ್ಟವರನ್ನು ಲಾರಿ ತುಂಬ ಚಿತ್ರಕೂಟಕ್ಕೆ ಸಾಗಿಸಿದ್ದನ್ನು ಆರೆ ನಿಮಿಷ ಕಟ್ಟಡದ ಮರೆಯಲ್ಲಿ ನಿಂತು ನೋಡಿದ್ದೇನೆ. ರಾಜನನ್ನು ಕಳೆದುಕೊಂಡ ನಾವೆಲ್ಲ ಅತ್ತು ಅತ್ತು ಕಣ್ಣು ಊದಿಸಿಕೊಂಡಿದ್ದೆವು. ಲಕ್ಷಾಂತರ ಜನರಿಗೆ ಆಘಾತವಾಗಿದ್ದಿತು. ಯಾರ ಮನೆಯಲ್ಲೂ ಅಂದು ದೀಪ ಉರಿಯಲಿಲ್ಲ. ಅಡಿಗೆ ಆಗಲಿಲ್ಲ. ಇಂದ್ರಾವತಿ ನದಿಯಲ್ಲೂ ಹೆಣಗಳು ತೇಲಿದ್ದನ್ನು ಜನ ಆಡಿಕೊಳ್ಳುತ್ತಿದ್ದರು....." ಎನ್ನುತ್ತಿದ್ದಂತೆ ಮ್ಯಾನೇಜರರು ಬಂದು, "ಪೋಲಿಸ ಅಧಿಕಾರಿಗಳು ತಮ್ಮನ್ನು ಕಾಣಬೇಕೆಂದು ಆಸೆಪಡುತ್ತಾರೆ", ಎಂದು ಹೇಳಿದಾಗ ಇದೇನು ಗ್ರಹಚಾರ ಬಂತೆಂದು ಅಲ್ಲಿಗೆ ಹೋದಾಗ, "ಬನ್ನಿ ಸಾರ್, ಪ್ರಭುಗಳ ಬಗ್ಗೆ ತಮಗಿರುವ ಆದರ–ಅಭಿಮಾನಗಳ ಬಗ್ಗೆ ಮ್ಯಾನೇಜರ ಹೇಳಿದರು. ಕಳೆದ ಹನ್ನೊಂದು ವರ್ಷಗಳಲ್ಲಿ ಹೃದಯಾಂತರಾಳದಲ್ಲಿ ಅದುಮಿಟ್ಟ ಕೆಲಮಾತುಗಳನ್ನು ತಮಗರುಹಿ, ಚಿತ್ತಶಾಂತಿ ಪಡೆಯೋಣವೆಂದು ತೊಂದರೆ ಕೊಡುವ ಸಾಹಸ ಮಾಡಿದೆ" ಎಂದು ಚಹಾಕಪ್ಪ ಬರಿದುಮಾಡಿ, ಬಿಟ್ಟಿ ಸಿಗರೇಟು ಹೊತ್ತಿಸಿ ಪೋಲಿಸನು ಎಲ್ಲಿಂದ ಪ್ರಾರಂಭಿಸಬೇಕು ಎಂದು ಗೊತ್ತಾಗದೇ, ಒಂದು ನಿಮಿಷ ಗಗನ ಮಂಡಲದಲ್ಲಿ ಧೂಮಚಕ್ರಗಳನ್ನು ಕಳಿಸುತ್ತ ಮೆಲುದನಿಯಲ್ಲಿ ಪ್ರಾರಂಭಿಸಿದ.

"ಆ ದಿನಗಳಲ್ಲೆಲ್ಲ ಪೋಲಿಸ ಖಾತೆ ಸೇರಿದ್ದಕ್ಕಾಗಿ ಎಷ್ಟು ಸಲ ಪರಿತಪಿಸಿದ್ದೆನೋ ! ಪ್ರಭುಗಳು ನೆಲಕ್ಕುರುಳಿದ್ದನ್ನು ಕಣ್ಣಾರೆ ನೋಡಿದಾಗ ರಾಜೀನಾಮೆ ಕೊಡಬೇಕೆಂದು ಈ ಹತಭಾಗಿ ದೃಢಸಂಕಲ್ಪ ಮಾಡಿದರೂ ಹೆಂಡಿರು ಮಕ್ಕಳಿಂದಾಗಿ ಧೈರ್ಯವಿರಲಿಲ್ಲ. ಆ ಘಟನೆ ಇಂದಿಗೂ ಕಣ್ಣಿಗೆ ಕಟ್ಟಿದೆ. ಆರಸರ ಎಲ್ಲ ಬೇಡಿಕೆಗಳನ್ನು ಮನ್ನಿಸಲು ಆಳುವ ಪಕ್ಷದ ಧುರೀಣರಾಗಿದ್ದ ಸೂರ್ಯಪಾಲ ತಿವಾರಿಯ ಮನ ಒಲಿಸಲು ಆದಿವಾಸಿಗಳ ತಂಡ ಬಂದು ಅವರ ಗೃಹಕ್ಕೆ ತೆರಳಿತು. ಇದರಿಂದ ಶಾಂತತೆಗೆ ಭಂಗ ಬರುವ ಸಾಧ್ಯತೆ ಇದೆ ಎಂಬ ಊಹೆಯ ಮೇಲೆಯೇ ನೂರ ನಾಲ್ವತ್ತನಾಲ್ಕನೆಯ ಕಲಮು ಜಾರಿಗೆ ತರಲಾಯಿತು. ಆದರ ಕಾರ್ಯಾಚರಣೆಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಸಶಸ್ತ್ರ ಪಡೆಯನ್ನು ಅರಮನೆಯ ಆವಾರದಲ್ಲಿಡಲಾಯಿತು. ಸೂರ್ಯನು ನಡುನೆತ್ತಿಗೇರಿದಾಗ, ಬಂಧಿತ ಆದಿವಾಸಿ ಮುಖಂಡರನ್ನು ಜೈಲಿಗೆ ಸಾಗಿಸುತ್ತಿದ್ದಾಗ ಓರ್ವ ಹುಂಬನು ಜೈಜೈಕಾರ ಹಾಕಲಾರಂಭಿಸಿದ. ಉಳಿದವರೂ ಸೇರಿದರು. ತಮಾಷೆಯೇನೋ ನಡೆದಿರಬೇಕೆಂದು ಓಡಿ ಬಂದ ಪಳ್ಳಿಗರನ್ನು ಪೋಲಿಸರು ಹೀನಮಾನವಾಗಿ ಬೈಯ್ಯಲಾರಂಭಿಸಿದರು ಈ ಗದ್ದಲದಲ್ಲಿ ಕೈದಿಗಳು ತಪ್ಪಿಸಿಕೊಂಡದ್ದರಿಂದ, ಸುತ್ತುವರಿದ ಹಳ್ಳಿಗರ ಮೇಲೆ ಪೋಲಿಸರು ಆಕ್ರೋಶ ತೀರಿಸಿಕೊಂಡರು. ಆದಿವಾಸಿಗಳೂ ಸಿಟ್ಟಿಗೆದ್ದು ಬಾಣಗಳಿಂದ ಉತ್ತರಿಸಿದರು. ಓರ್ವ ಪೋಲಿಸ ನೆಲಕ್ಕೆ ಬಿದ್ದ. ಈ ಮುಂಡೇ ಮಕ್ಕಳಿಗೆ ನಮ್ಮ ಮೇಲೆ ಕೈ ಮಾಡುವಷ್ಟು ಧೈರ್ಯ ಬಂದಿತೇ ? ಎಂದು ಪೋಲಿಸ ಪಡೆಯವರು ಕೋವಿಗಳನ್ನು ಹೊತ್ತು ಬಿಲ್ಲುಬಾಣದವರನ್ನು ಬೆನ್ನಟ್ಟಿದರು. ಸರಿ ಆದಿವಾಸಿಗಳು ನೆರೆಯುತ್ತಿದ್ದಂತೆ ಗುಂಡು–ಬಾಣಗಳ ಕದನ ಪ್ರಾರಂಭವಾಯಿತು. ಇದು ಅತಿರೇಕಕ್ಕೆ ಹೋಗಬಾರದೆಂದು, ಅರಸರು, ಬೆಂಗಾವಲಿನ ಪರಿವೆಯಿಲ್ಲದೇ ಅವಸರದಿಂದ ಅರಮನೆಯ ಹೊರಾಂಗಣಕ್ಕೆ ಧಾವಿಸಿ ಬಂದರು. ಇದೇ ಅವಕಾಶಕ್ಕಾಗಿ ಕಾದಿದ್ದಂತೆ, ಕೋವಿಯೊಂದು ಅವರತ್ತ ತಿರುಗಿ ಗುಂಡಿನೇಟಿನಿಂದ ನೆಲಕ್ಕುರುಳಿಸಿತು. ಅವರ ಸಂರಕ್ಷಣೆಗೆ ಓಡಿದ ಎಂಟು ಆದಿವಾಸಿ ಮುಖಂಡರೂ ಮೃತಪಟ್ಟರು. ಕೈಯಲ್ಲಿ ಬೆತ್ತವನ್ನೂ ಹಿಡಿಯದ ಮಹಾಪುರುಷನನ್ನು ನಮ್ಮವರು ಈ ರೀತಿ ಹತ್ಯ ಮಾಡಬಹುದೆಂದು ನಮಗೇ ನಂಬಲು ಅಸಾಧ್ಯವಾದಾಗ ಜನಸಾಮಾನ್ಯರಿಗೆ ಹೆಚ್ಚಿನ ಆಘಾತವಾದದ್ದರಲ್ಲಿ ಏನೂ ಆಶ್ಚರ್ಯವಿಲ್ಲ. ಈ ಘಟನೆ ಇಂದಿಗೂ ನೆನಪಾದಾಗ ನಿದ್ರೆಯಿಲ್ಲದೇ ರಾತ್ರೆಯನ್ನು ಕಳೆಯಬೇಕಾಗುತ್ತದೆ..... ಎನ್ನುತ್ತಿದ್ದಂತೆ ಇದಕ್ಕೂ ಮುಂದೆ ಹೇಳಬೇಕೇ ಎಂದು ಸ್ವಲ್ಪ ಹಿಂಜರಿದು ಹೇಳಿದರೆ ತಪ್ಪೇನು ಎಂಬ ಭಾವದಿಂದ ಮುಂದರಿಸಿದ.

"ಅಧಿಕಾರಿಗಳು ಹೇಳುವಂತೆ ಪ್ರವೀರಚಂದ್ರರು ಆಕಸ್ಮಿಕವಾಗಿ ಗೋಳಿಬಾರಿಗೆ ಸಿಕ್ಕು ಮಡಿದಿದ್ದರೆ, ಅವರ ಆಸ್ತಿ ಪಾಸ್ತಿಗಳನ್ನು ಜಪ್ತಿಮಾಡಿ ಸಾಮಾನುಗಳನ್ನು ಒಂಬತ್ತು ಪೆಟ್ಟಿಗೆಗಳಲ್ಲಿ ತುಂಬಿಸಿ ಸರಕಾರಿ ಬೊಕ್ಕಸದಲ್ಲಿಡಿಸುವ ಅವಶ್ಯಕತೆ ಏನಿತ್ತು ? ಈ ದುಷ್ಕೃತ್ಯದ ಹಿಂದೆ ಏನಾದರೂ ಸಂಚು ಇದ್ದಿರಬೇಕು ಎಂದು ವಿಚಾರವಂತರಿಗೆಲ್ಲ ಅನಿಸದಿರಲಿಲ್ಲ. ಇಂತಹವರ ಬಾಯಿ ಮುಚ್ಚಿಸಲು ಕೆಲವರಿಗೆ ಅಧಿಕಾರದ ತಡೆಯಾಜ್ಞೆ ಹಾಕಿದರೆ ಹಲವರನ್ನು ವರ್ಗಾಯಿಸಲಾಯಿತು. ನಮ್ಮ ಕಣ್ಣಿಗೆ ಮಣ್ಣೆರೆಚಿದರೂ ದೇವರು ಕಣ್ಣುಮುಚ್ಚಿರುವುದಿಲ್ಲವಲ್ಲ ? ಈ ಘಟನೆ ನಡೆದ ಒಂದೇ ತಿಂಗಳಿನಲ್ಲಿ ಬಸ್ತರದ ಕಲೆಕ್ಟರ ಸಾಹೇಬರು (ಮೊಹಮ್ಮದ ಕಬೀರರು) ಪಾರ್ಶ್ವವಾಯುವಿನಿಂದ ಮರಣಹೊಂದಿದರು. ದಪ್ಪಪುಷ್ಪರಾಗಿದ್ದ ಸಹಾಯಕ ಕಲೆಕ್ಟರ ಮುಕಟೇಶ್ವರ ಸಿಂಗರು ಮಲೇರಿಯದಿಂದ ಹಾಸಿಗೆ ಹಿಡಿದರು. ಪೋಲಿಸ್ ಸರ್ವಾಧಿಕಾರಿಯಾಗಿದ್ದ ಎಸ್. ಪಿ. ಸಿಂಗರು ಅಪಘಾತದಲ್ಲಿ ಮೃತಪಟ್ಟರು. ಪೋಲಿಸ್ ಆ್ಯಕ್ಷನ್‌ಗೆ ಅನುಮತಿಯಿತ್ತ ಕಮೀಷನರ್ ಸಿ.ಎಸ್. ನೊರೊನ್ಹಾರು ತಮ್ಮ ಉತ್ತಮ ಜನಸೇವೆಗೆ, ಈ ದುಷ್ಕೃತ್ಯದ ಕಲಂಕ ಹೊತ್ತೇ ಮರುಗುತ್ತ ನಿವೃತ್ತರಾಗಬೇಕಾಯಿತು. ದಂತೇಶ್ವರಿ ಮಾತೆಯ ಶಾಪ ನನಗೂ ತಟ್ಟಿರಬೇಕು. ಜೊತೆಯವರೆಲ್ಲ ಮೇಲಿನ ಹುದ್ದೆಗೆ ಹೋದರೂ ನಾನುಮಾತ್ರ ಜಮಾದಾರನಾಗಿಯೇ ಇರಬೇಕಾಯಿತು" ಎಂದು ಪಕ್ಕಟೆ ನಾಶ್ತಾ–ಸಿಗರೇಟುಗಳನ್ನು ಮುಗಿಸುತ್ತ ಪೋಲಿಸನೆಂದ.

"ಈ ಘಟನೆಯ ಬಗ್ಗೆ ವಿಚಾರಣೆ ನಡೆಯಲಿಲ್ಲವೇ ?" ಎಂದು ಪ್ರಶ್ನಿಸಿದಾಗ, "ಆ ನಾಟಕ ಆಡದೇ ಇರಲು ಸಾಧ್ಯವೇ ? ರಾಜ್ಯದ ಹೈಕೋರ್ಟ್ ನ್ಯಾಯಾಧೀಶ ಕೆ. ಎಲ್. ಪಾಂಡೆಯವರಿಗೆ ಈ ಜವಾಬ್ದಾರಿ ನಿರ್ವಹಿಸಿದರು. ಈ ತನಿಖೆಗೆ ಲಕ್ಷಾಂತರ ರೂಪಾಯಿ ಖರ್ಚಾದರೂ ಒಂದು ಪಿಳ್ಳೆಗೂ ಶಿಕ್ಷೆಯಾಗದಿರುವುದೇ ಅದರ ವೈಶಿಷ್ಟ್ಯ ! ದಸರಾ ಹಬ್ಬದ ನಿಮಿತ್ತ ಇಂದು ಸಂಜೆ ಅರಮನೆಗೆ ಸಾರ್ವಜನಿಕರಿಗೆ ಪ್ರವೇಶವಿದೆ. ಪ್ರವೀರ ಚಂದ್ರರು ಮಡಿದ ಸ್ಥಳದ ದರ್ಶನವಾದರೂ ಪಡೆಯಲು ಸಾಧ್ಯವಾದೀತು. ಜೊತೆಗೆ ರಾಜಮಾತೆ ಹಿತೇಂದ್ರ ದೇವಿ, ಯುವರಾಜ ಭರತಸಿಂಗರನ್ನು ಕಾಣಬಹುದು" ಎಂದು ಕುಹಕದಿಂದ ನುಡಿದು, ಕೈಗಡಿಯಾರ ನೋಡಿ ದಿನಚರಿಯನ್ನು ಕೈಗೆತ್ತಿಕೊಂಡು, ಬೆತ್ತವನ್ನು ಕಂಕುಳಿಗೇರಿಸಿ, 'ನನ್ನ ಹೆಸರು ಎಲ್ಲಿಯೂ ಬಾರದಂತೆ ನೋಡಿಕೊಳ್ಳಿ ಸಾರ್' ಎಂದು ಹೊರಡಲು ಸಿದ್ಧನಾದ. "ನಿಮ್ಮ ಹೆಸರು ಕೇಳಲೂ ಇಲ್ಲ. ನೀವಾಗಿ ಹೇಳಲೂ ಇಲ್ಲ" ಎಂದು ನೆನಪು ಮಾಡಿದಾಗ ತನ್ನ ಮಂಕುತನಕ್ಕೆ ಮರುಗಿ ಹೊರಟುಹೋದ.

ಮೈಸೂರಿನ ನಾಲ್ಮಡಿ ಕೃಷ್ಣರಾಜ ಒಡೆಯರಂತೆ ಪ್ರವೀರ ಚಂದ್ರರು ತಮ್ಮ ಪ್ರಜೆಗಳಲ್ಲಿ ಅತ್ಯಂತ ಜನಪ್ರಿಯರಿದ್ದರು ಎಂಬುದು ಇಷ್ಟೆಲ್ಲ ವರ್ಷಗಳನಂತರವೂ ಮನೆಮನೆಯಲ್ಲಿ ಅವರ ಭಾವಚಿತ್ರಗಳನ್ನು ಇಟ್ಟು ಹೂಪೇರಿಸುತ್ತಿದ್ದ ಪರಿಪಾಠ ಸಾಕ್ಷಿ ಹೇಳಿತು. ದಸರಾಕ್ಕೆ ಮೂಲೆಮೂಲೆಗಳಿಂದ ಬರುತ್ತಿದ್ದ ಆದಿವಾಸಿಗಳು ಹಿಂದಿನ ನೆನಪಿನಿಂದ ಗಲಭೆಮಾಡಬಾರದೆಂದು ಆಪ್ಪೊಂದು ಪೋಲೀಸ ಪಡೆ ಇಟ್ಟಿರಬೇಕೆಂದು ಅನಿಸಿತು. ದೂರ ದೂರದ ಹಳ್ಳಿಗಳಿಂದ ತಮ್ಮ ಅತ್ಯುತ್ತಮ ವೇಷ ಭೂಷಣಗಳಲ್ಲಿ ಬಂದ ಆದಿವಾಸಿಗಳು ಅರಮನೆಯ ಒಳ-ಹೊರಗೆ ನೆರೆದಿದ್ದರು. ಅದೊಂದು ಯಾತ್ರಾ ಸ್ಥಳವೆಂಬಂತೆ, ಅಲ್ಲಿಯ ಪ್ರತಿಯೊಂದು ವಸ್ತುವನ್ನು ಗೌರವ-ಭಾವದಿಂದ ಕಾಣುತ್ತಿದ್ದರು. ಪ್ರವೀರರ ಬೈಠಕಖಾನೆಯಲ್ಲಿಯೇ 'ಯುವರಾಜ' ಭರತ ಚಂದ್ರನ 'ದರ್ಬಾರು' ಏರ್ಪಟ್ಟಿತ್ತು. ಸುಣ್ಣ ಬಣ್ಣಗಳಿಲ್ಲದೆ ಗೋಡೆಗಳ ಮೇಲೆ ಕಾಡು-ಕೋಣ ಜಿಂಕೆಗಳ ಅಲಂಕೃತ ಶಿರಗಳು ಧೂಳು ಝೂಡಿಸುವವರಿಗೂ ಗತಿ ಇಲ್ಲದೇ ಅನಾಥವಾಗಿದ್ದವು. ಮೂಲೆಯೊಂದರಲ್ಲಿ ಪ್ರವೀರರ ಭಾವಚಿತ್ರಕ್ಕೆ ಹಾಕಿದ ಹೂ ಮಾಲೆ ಬಾಡಿ ಹೋಗಿತ್ತು. ಅವರ ಪಟ್ಟದ ರಾಣಿ, ನೇಪಾಳರಾಜ ಮನೆತನದ ವೇದವತಿಯ ತೈಲಚಿತ್ರ ಹತ್ತಿರದಲ್ಲೇ ತೂಗಹಾಕಿದ್ದರು. ಸೌಮ್ಯ ಆರಳಿದ ಮುಖಭಾವ ಪ್ರವೀರರೇ ಹಿಂದೊಮ್ಮೆ ಅದನ್ನು ಮಾಡಿಸಿರಬೇಕು ಅನಿಸಿತು. ವಿಜಯಚಂದ್ರರ ವಿಧವೆ ಹಿತೇಂದ್ರದೇವಿ ಸೋಫಾದಲ್ಲಿ ಆಸೀನಳಾಗಿದ್ದರು. ಮುಖದಲ್ಲಿ ಇರಬೇಕಾದ ರಾಜಕಳೆಯ ಬದಲಾಗಿ ಜೀವನದ ಭೀಕರತೆ ಹಣಿಕಿತ್ತು. ಇನ್ನೊಂದು ಆಸನದಲ್ಲಿ ಸುಂದರ ಕೃಶವಾದ ದೇಹದ ಯುವರಾಜ ಭರತ ಚಂದ್ರ ದೇವನು ಹೇಗೆ ವರ್ತಿಸಬೇಕೆಂದು ತಿಳಿಯದೇ ನಾಚುತ್ತ ಕಂಗೆಟ್ಟಿದ್ದ. ಮುಂಜಾನೆ ದರ್ಪತೋರಿದ ಗೊಂಡಿತಿಯೇ ಪಟ್ಟದಾನೆಯಾಗಿ ಬಟ್ಟೆಯ ಬೀಸಣಿಗೆಯಿಂದ ರಾಜ

ಮಾತೆಗೆ ಗಾಳಿ ಬೀಸುತ್ತ ನಿಂತಿದ್ದಳು. ಆಗಂತುಕ ಆದಿವಾಸಿಗಳ ಭಯ-ಭಕ್ತಿಗಳು ಕಣ್ಣೀರು ತರಿಸುವಂತಿದ್ದವು. ದೇವರಿಗೆ ಸಲ್ಲಬೇಕಾದ ಭಯ ಭಕ್ತಿಗಳಿಂದ ರಾಜ ಪರಿವಾರದವರನ್ನು ನಮಿಸಿ ಐದು-ಹತ್ತು ಪೈಸಾಗಳ ಕಾಣಿಕೆ ಒಪ್ಪಿಸುತ್ತಿದ್ದರು. ಎರಡು ವರ್ಷದ ಹುಡುಗಿಯೊಬ್ಬಳು ಜೊತೆಯಲ್ಲಿ ತಂದ ಒಂದು ಪೈಸಾ ಪ್ರವೀರರ ಭಾವಚಿತ್ರದೆದುರು ಇಟ್ಟಾಗ ಮನಸ್ಸು ಕರಗದೇ ಇದ್ದೀತೆ ? ಕಡುಬಡವರಾದ ಆದಿವಾಸಿಗಳ ರಾಜನಿಷ್ಠೆ ಸಂಪನ್ನವಿದ್ದದ್ದು ಸ್ಪಷ್ಟವಿತ್ತು.

ಪ್ರವೀರಚಂದ್ರರು ಇನ್ನಿತರ ರಾಜರುಗಳಿಗಿಂತ ಬೇರೆಯಾಗಿದ್ದರು ಎಂದು ಖಚಿತವಾದ ನಂತರ ಅವರ ಮನೆತನದ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸಲು ವಾಚನಾಲಯಗಳಿಗೆ ಎಡತಾಕಬೇಕಾಯಿತು. ಒರಿಸ್ಸದಿಂದ ಬಂದ ಭಾಂಜದೇವ್ (ಮಯೂರಭಂಜ ಜಿಲ್ಲೆ) ಕುಟುಂಬದವರು. ಮೊದಲು ಮರಾಠರ ಮಾಂಡಲಿಕರಾಗಿದ್ದು ನಂತರ ಬ್ರಿಟಿಷರ ಆಧಿಪತ್ಯಕ್ಕೆ ಒಳಗಾದರು. ೧೯೦೮ರಲ್ಲಿ ರುದ್ರಪ್ರತಾಪದೇವನು ಪಟ್ಟವೇರಿದರೂ ಪ್ರಜೆಗಳ ಅಸಂತುಷ್ಟಿಯಿಂದ ಎರಡೇ ವರ್ಷಗಳಲ್ಲಿ ಬಂಡಾಯವೆದ್ದು, ಮಗಳು ಪ್ರಫುಲ್ಲ ದೇವಿ ರಾಜ್ಯಕಾರಭಾರವಹಿಸಿಕೊಂಡು ೧೯೩೬ರ ವರೆಗೆ ದಕ್ಷತೆಯಿಂದ ಪ್ರಜೆಗಳ ಯೋಗಕ್ಷೇಮ ನೋಡಿಕೊಂಡಳು. ನಂತರದ ದಶಕದ ಅರಸನೂ ದುರ್ಬಲನಾಗಿ ೧೯೪೭ರಲ್ಲಿ ಹದಿನೆಂಟರ ಹರೆಯದ ಪ್ರವೀರಚಂದ್ರರು ರಾಜ್ಯಕಾರಭಾರ ವಹಿಸಿಕೊಂಡರು. ಬಸ್ತರ ಸಂಸ್ಥಾನ ೧೯೪೮ರಲ್ಲಿ ಭಾರತ ಒಕ್ಕೂಟದಲ್ಲಿ ವಿಲೀನವಾಯಿತು. ಮಧ್ಯಪ್ರದೇಶದ ಈ ಜಿಲ್ಲೆಯ ಕ್ಷೇತ್ರ ಕೇರಳ ಪ್ರಾಂತದಷ್ಟಿದ್ದು, ದಟ್ಟವಾದ ಕಾಡು, ಎತ್ತರವಾದ ಪರ್ವತಾವಳಿ, ಹಳ್ಳಕೊಳ್ಳಗಳಿಂದ ಕೂಡಿದ್ದು ಜನವಸತಿ ಅತಿವಿರಳವಾಗಿದೆ. ಇವರಲ್ಲಿ ಶೇಕಡಾ ಎಂಬತ್ತರಷ್ಟು ಮೂಲ ಬುಡಕಟ್ಟಿನವರು ಎಂಬುದು ಗಮನಾರ್ಹ. ಶತಕಗಳಿಂದ ನಡೆದುಬಂದ ಅವರ ಜೀವನ ಪದ್ಧತಿಯಲ್ಲಿ ಪ್ರವೀರರು ಕೈಹಾಕಲಿಲ್ಲ. 'ಸುಧಾರಣೆ'ಯನ್ನು ಹೇರಲಿಲ್ಲ. ಆದರೆ ಒಳಿತನ್ನು ನಿರ್ಲಕ್ಷಿಸದಿದ್ದರಿಂದ ಬಲು ಬೇಗ ಜನಪ್ರಿಯರಾದರು. ಹೀಗಾಗಿ ಅವರು ಒಪ್ಪದ ಯಾವ ಕೆಲಸವೂ ಬಸ್ತರದಲ್ಲಿ ನಡೆಯದಾಯಿತು. ಅರಸರು ಬೆಂಬಲಕೊಡದ್ದರಿಂದ ೧೯೫೨ರ ವಿಧಾನ ಸಭೆಯ ಚುನಾವಣೆಯಲ್ಲಿ ಹತ್ತರಲ್ಲಿ ಎರಡು ಸ್ಥಾನಗಳನ್ನು ತಮ್ಮವನ್ನಾಗಿ ಮಾಡಿಕೊಳ್ಳಲು ಆಡಳಿತ ಪಕ್ಷಕ್ಕೆ ಕಷ್ಟಸಾಧ್ಯವಾಯಿತು. ಎರಡನೇ ಚುನಾವಣೆಯಲ್ಲಿ ಪ್ರವೀರರ ಬೇಡಿಕೆಗಳಿಗೆ ಆಶ್ವಾಸನೆಗಳನ್ನು ಕೊಟ್ಟದ್ದರಿಂದ ಎಲ್ಲ ಸ್ಥಾನಗಳೂ ಆಳುವ ಪಕ್ಷಕ್ಕೆ ಹೋದುವು.

ಗೆದ್ದ ನಂತರ ಕೊಟ್ಟ ಆಶ್ವಾಸನೆಗಳನ್ನು ನೆರವೇರಿಸಲು ಪ್ರವೀರಚಂದ್ರರು ಒತ್ತಾಯಿಸಿದ್ದರಿಂದ ಭೋಪಾಲ ಸರ್ಕಾರಕ್ಕೆ ಅಧಿಕಪ್ರಸಂಗತನವೆನಿಸಿರಬೇಕು. ಈ ಆದಿವಾಸಿ ಅರಸನಿಗೆ ಒಳ್ಳೆಯ ಪಾಠ ಕಲಿಸಬೇಕೆಂಬ ಒಪ್ಪಂದ, ಕೇಂದ್ರ-ರಾಜ್ಯಸರಕಾರಗಳಲ್ಲಿ ಆಗಿರಬೇಕು. ಅಂತೆಯೇ ಅವರ ಕರ್ತವ್ಯಚ್ಯುತಿಯ ಬಗ್ಗೆ ಹಲವಾರು ಆಪಾದನೆಗಳು ಬಂದವು. ಬಸ್ತರದಲ್ಲಿ ಮತ್ಸ್ಯನ್ಯಾಯ ಪದ್ಧತಿಯಿದೆಯೆಂದರು. ನಿರ್ಗತಿಕ ಆದಿವಾಸಿ ಕನ್ಯೆಯರನ್ನು ವೇಶ್ಯಾವಾಟಿಕೆಗಳಿಗೆ ಸಾಗಿಸುವುದರಲ್ಲಿ ಅರಸನ ಪಾತ್ರವಿದೆಯೆಂದರು. ಗಣಿಗಳಲ್ಲಿ ಸಂಪನ್ನವಾದ ಈ ಪ್ರದೇಶ ಹಿಂದುಳಿಯಲು ಆತನೇ ಕಾರಣವೆಂದರು. (ಸಂಪನ್ಮೂಲಗಳು ಸಮೃದ್ಧವಾದ ಬಿಹಾರ ಆಗೂ ಈಗೂ ಅಷ್ಟೇ ಹಿಂದುಳಿದಿದೆ) ದೇಶವೇ ಅಭ್ಯುದಯದಲ್ಲಿ ಹಿಂದಿದ್ದಾಗ, ಆದಿವಾಸಿಗಳ ಅಭ್ಯುದಯವನ್ನು ರಾಜಪ್ರಮುಖ ಅಲಕ್ಷಿಸಿದನಂತೆ! ಈ ಎಲ್ಲ ಆರೋಪಗಳ ಆಧಾರದ ಮೇಲೆ ಪ್ರವೀರರನ್ನು ಪದಚ್ಯುತಿಗೊಳಿಸಿ, ೧೨-೨-೧೯೬೧ರಂದು ಬಂಧಿಸಿ, ತಮ್ಮ ವಿಜಯಚಂದ್ರನನ್ನು ಅವರ ಸ್ಥಾನಕ್ಕೆ ತಂದರು. ಇದರಿಂದ ಆದಿವಾಸಿಗಳ ಅಭಿಮಾನ ಕೆರಳಿ, ಪ್ರತಿಭಟನೆ, ದಂಗೆ-ದೊಂಬಿಗಳು ತಲೆದೋರಿ ಎರಡೇ ತಿಂಗಳಲ್ಲಿ ಅರಸರನ್ನು ಬಿಡುಗಡೆ ಮಾಡಬೇಕಾಯಿತಲ್ಲದೆ ಅವರ ಸೊತ್ತನ್ನೆಲ್ಲ ಹಿಂದಿರುಗಿಸಬೇಕಾಯಿತು.

ರಾಜಕಾರಣಿಗಳು ಹೊತ್ತಿಸಿದ ದ್ವೇಷಾಗ್ನಿ ವಿಜಯಚಂದ್ರನಲ್ಲಿ ಪ್ರಖರವಾಗಿ ಉರಿಯ ಹತ್ತಿತು. ತಾನೇ ಅಧಿಕೃತ ನಾಯಕನಾದ್ದರಿಂದ ರಾಜಸ್ವವೆಲ್ಲ ನ್ಯಾಯವಾಗಿ ತನ್ನದೇ ಎಂದು ಮೊಕದ್ದಮೆ ಹೂಡಿದನಲ್ಲದೇ ತನಗೆ ಆದ ಮೂರೂಕಾಲು ಲಕ್ಷರೂಪಾಯಿಗಳ ಹಾನಿಯನ್ನು ತುಂಬಿಕೊಡಬೇಕೆಂದು ಕೋರಿದನು. ಈ ಗೊಂದಲದಿಂದಾಗಿ ೧೯೬೨ರ ಚುನಾವಣೆಯಲ್ಲಿ ಒಂದೇ ಒಂದು ಸ್ಥಾನ ಗೆಲ್ಲಲು ಆಡಳಿತ ಪಕ್ಷಕ್ಕೆ ದುಸ್ತರವಾಯಿತು. ಸರಿ, ಮತ್ತೆ ಪ್ರವೀರಚಂದ್ರರ ಮೇಲೆ ಕತ್ತಿ ಮಸೆಯಲಾರಂಭಿ

ಸಿದರು. ರಾಜ್ಯಕ್ಕೆ ಸೇರಿದ ಆಸ್ತಿಮಾರಿ ಹಣ ಸಂಪಾದನೆ ಮಾಡುತ್ತಿದ್ದಾರೆ, ಅನಧಿಕೃತವಾಗಿ ಬೊಕ್ಕಸದ ಬೆಲೆ ಬಾಳುವ ಒಡವೆ ಮಾರಿದ್ದಾರೆ ಎಂಬ ಆಪಾದನೆಗಳಿಂದಾಗಿ 'ದೇಶದ್ರೋಹಿ' ಎಂಬ ಬಿರುದು ದಯಪಾಲಿಸಿದರು. ಶಿಸ್ತು ಭಂಗದ ಆರೋಪದ ಮೇಲೆ ೮-೧೨-೬೫ರಲ್ಲಿ ಮತ್ತೆ ಬಂಧಿಸಿದರು. ನಂತರ ಜಾಮೀನಿನ ಮೇಲೆ ಬಿಟ್ಟರು. ಸರಕಾರದ ಕುತಂತ್ರದ ವಿರುದ್ಧ ಪ್ರವೀರರು ಉಪವಾಸ ಕೈಕೊಂಡರು. ಸಾವಿರಾರು ಆದಿವಾಸಿಗಳು ಸಹಾನುಭೂತಿ ತೋರಿದರು. ನಂತರ ಪ್ರತಿಬಂಧ ದಸ್ತಗಿರಿ, ಮತಪ್ರದರ್ಶನಗಳ ಕಣ್ಣಾಮುಚ್ಚಾಲೆ ಆಟಗಳು ನಡೆದೇ ಇದ್ದವು. ಈ ಅವಧಿಯಲ್ಲಿ ಶಾಂತತೆಗೆ ಭಂಗ ತರಲಾಯಿತೆಂಬ ಆಪಾದನೆಯ ಮೇಲೆ ಕೆಲ ಆದಿವಾಸಿಗಳನ್ನು ಬಂಧಿಸಿದ್ದರು. ಅವರನ್ನು ಜೈಲಿಗೆ ವರ್ಗಾಯಿಸುವಾಗ ಕೋಲಾಹಲವೆದ್ದು ಶಾಂತತೆ ಸ್ಥಾಪಿಸಲು ಹೊರಬಂದ ಪ್ರವೀರಚಂದ್ರರು ೨೫-೩-೧೯೬೬ರಂದು ಮರಣ ಹೊಂದಿದರೆಂದು ಇಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ. ಅಂದಿನ ದಿನಗಳಲ್ಲಿ ಕೂಡ ಚುನಾವಣೆಯಲ್ಲಿ ಆರಿಸಿ ಬರಲು ಆಳುವ ಪಕ್ಷ ಪ್ರಜಾತಂತ್ರ ಬಳಸುವ ಬದಲಾಗಿ ವಿರೋಧಿಯನ್ನು ನಿರ್ನಾಮ ಮಾಡುವ ಕುತಂತ್ರ ಬಳಸುವ ದರಲ್ಲಿ ಎಂದೂ ಹಿಂದೆ ಬೀಳಲಿಲ್ಲ ಎಂಬುದಕ್ಕೆ ಇದಕ್ಕೂ ಉತ್ತಮವಾದ ಬೇರೆ ಯಾವ ಉದಾಹರಣೆ ಬೇಕು?

ವಿಜಯಚಂದ್ರ, ಅರಸೊತ್ತಿಗೆಯ ಅಂತಸ್ತನ್ನು ಅನುಭವಿಸಲು ಹೆಚ್ಚು ಕಾಲ ಬದುಕಲಿಲ್ಲ. ಪ್ರವೀರರಿಗೆ ಸಂತಾನ ವಿರಲಿಲ್ಲ. ಹಿತೇಂದ್ರದೇವಿಯ ಮಕ್ಕಳು ತೀರ ಚಿಕ್ಕವರು. ಹೀಗಾಗಿ ಅಧಿಕಾರವನ್ನು ಸರಕಾರ ಸ್ವತಃ ವಹಿಸಿಕೊಂಡಿತು. ಇಷ್ಟಾದರೂ ಅರಸನ ದುರ್ಮರಣ ಜನತೆಯ ಮನಸ್ಸಿನಲ್ಲಿ ಹಸಿರಾಗಿಯೇ ಇದ್ದುದರಿಂದ ೧೯೬೭ರ ಚುನಾವಣೆಯಲ್ಲಿ ಕೇವಲ ಎರಡೇ ಸ್ಥಾನಗಳು ಸಿಕ್ಕವು. ಪ್ರವೀರಚಂದ್ರರ ಮರಣದ ನಂತರ ಜಪ್ತಿ ಮಾಡಿದ ಒಂಬತ್ತು ಪೆಟ್ಟಿಗೆ ತುಂಬ ಅರಸೊತ್ತಿಗೆಯ ಸಾಮಾನುಗಳ ಮೇಲೆ ತಮ್ಮ ಹಕ್ಕನ್ನು ಸ್ಥಾಪಿಸಲು ಇಬ್ಬರೂ ವಿಧವೆಯರು ಯತ್ನಿಸಿದ್ದರಿಂದ ಇಂದಿಗೂ ಅವು ಜಗದಲಪುರದ ಖಜಾನೆಯಲ್ಲಿ ಬೆಚ್ಚನೆ ಕುಳಿತಿವೆ. ೧೯೮೦ರಲ್ಲಿ ಅವುಗಳ ಬಿಡುಗಡೆಗೆ ಕೋರ್ಟು ಆಜ್ಞೆ ಕೊಟ್ಟರೂ ಅದನ್ನು ಯಾರ ವಶಕ್ಕೆ ಕೊಡುವದೆಂದು ತಿಳಿಯದೆ ಹಾಗೇ ಉಳಿದುಕೊಂಡಿವೆ. ಆಸ್ತಿಯ ಮನ ಸ್ತಾಪದಿಂದಾಗಿ ಅರಮನೆಯ ರಾಜಕಾರಣಕ್ಕೆ ಹೊಸ ತಿರುವು ಬಂದಿದೆ. ೧೯೬೭ರ ಚುನಾವಣೆಯಲ್ಲಿ ವೇದ ವತಿದೇವಿ ಜನತಾಪಕ್ಷಕ್ಕೆ ಬೆಂಬಲಕೊಟ್ಟರೂ ಈಗ ಆಳುವ ಪಕ್ಷಕ್ಕೆ ಸೇರಿದ್ದಾರೆ. ಇದಕ್ಕೆ ಮುಖ್ಯ ಕಾರಣ ಹಿತೇಂದ್ರ ದೇವಿ ವೃತ್ತ ಪತ್ರಿಕೆಗೆ ಕೊಟ್ಟ ಜಾಹೀರಾತು. ಅರಮನೆಯ ಆವಾರದ ಹೆಚ್ಚಿನ ಭಾಗವನ್ನು ಚಲಚ್ಚಿತ್ರ, ಹೊಟೇಲು, ವಸತಿಗೃಹ ಕಟ್ಟಲು ಬಯಸುವವರಿಗಾಗಿ ಮಾರಲಾಗುವದು ಎಂದು ಸಾರಿದ್ದರಿಂದ, ಕೋಟ್ಯಂತರ ಹಣಬರುವ ಈ ವ್ಯವಹಾರ ತಡೆಹಿಡಿಯುವದು ಆಳುವ ಪಕ್ಷದಿಂದ ಮಾತ್ರ ಸಾಧ್ಯವೆಂದು ಹಿಂದಿನ ಹಿರಿಯ ಅರಸಿ ಈ ಪಕ್ಷಾಂತರ ಮಾಡಿರಬೇಕು.

ಸಣ್ಣ ಪುಟ್ಟ ಸಂಸ್ಥಾನಗಳನ್ನು ಭಾರತದಲ್ಲಿ ವಿಲೀನಗೊಳಿಸುವಾಗ ಅವುಗಳ ಆಳರಸರಿಗೆ ಜೀವನಪರ್ಯಂತ ವರ್ಷಾಸನ ಕೊಡಲಾಗುವದೆಂದು ಸಾರ್ವತ್ರಿಕವಾಗಿ ಆಶ್ವಾಸನೆ ಕೊಡಲಾಗಿದ್ದರೂ ನಾವು ಸುಧಾರಕರು, ಸಮಾಜವಾದಿಗಳೆಂದು ವಿಶ್ವಕ್ಕೆ ಸಿದ್ಧ ಮಾಡಿ ತೋರಿಸಲು ಅದನ್ನು ರದ್ದುಗೊಳಿಸಬೇಕಾಯಿತು ! ರಾಜಕೀಯವಾಗಿ ತಲೆ ಎತ್ತಿದ ರಾಜಕುಮಾರ ಯುವರಾಜರ ಒಂದು ದಿನದ ರಾಜ್ಯದ ರಾಜಧಾನಿಯ ಭೇಟಿಗೆ ಕೋಟ್ಯಂತರ ರೂಪಾಯಿಗಳ ಹೊಳೆ ಹರಿಸಿದ ನಮಗೆ ಸರ್ವಸ್ವವನ್ನೂ ಕಳೆದುಕೊಂಡ ಈ ರಾಜ ಮಹಾರಾಜರಿಗೆಲ್ಲ ಒಟ್ಟು ಸೇರಿಸಿ, ಒಂದು ವರ್ಷಕ್ಕೆಕೊಡಬೇಕಾಗಿದ್ದ ಕೇವಲ ಐದು ಕೋಟಿ ರೂಪಾಯಿಗಳ ವರ್ಷಾಸನ ಕೊಡುವ ತ್ರಾಣ ವಿಲ್ಲದೇ ಹೋಯಿತು. (ಸಾಮಾನ್ಯ ಭಾರತೀಯನಿಗೆ ತಲಾ ಹತ್ತು ಪೈಸೆಯಮೊತ್ತವೂ ಬೀಳಲಿಲ್ಲ!) ತಮ್ಮನ್ನೇ ನಂಬಿದ ಆದಿವಾಸಿಗಳಿಗೆ ನೆಮ್ಮದಿಯ ಬಾಳನ್ನು ನಡೆಸಗೊಟ್ಟ ಪ್ರವೀರಚಂದ್ರರಿಗೆ ದೊರೆತ ನ್ಯಾಯ ಎಂಥಾದ್ದು? ಈ ದಿಸೆಯಲ್ಲಿ ನ್ಯಾಯಮೂರ್ತಿ ಪಾಂಡೆಯವರು ತಮ್ಮ ವರದಿಯಲ್ಲಿ ಪೇಳಿದ ಕೆಲಮಾತುಗಳು ಅತಿಗಮನೀಯ. "ಪೋಲಿಸ್ ಪಡೆಯವರು ಮುಂಜಾಗ್ರತೆಯಿಂದ ವರ್ತಿಸಿದ್ದರೆ, ಪ್ರವೀರಚಂದ್ರರ ಮೃತ್ಯುವನ್ನು ತಪ್ಪಿಸಬಹುದಾಗಿತ್ತು. ಅವರ ಅಕಾಲ ಮರಣ ಅನವಶ್ಯಕವಾಗಿತ್ತು" ಎಂದು ಅಭಿಪ್ರಾಯಪಟ್ಟಿದ್ದಾರೆ. ಚುನಾವಣೆ ಗೆಲ್ಲಲು ಆತಂಕ ತಂದೊಡ್ಡುವವರನ್ನು ಪರಲೋಕಕ್ಕೆ ಕಳಿಸುತ್ತ ಹೊರಟರೆ, ದೇಶದ ಪ್ರಜಾಪ್ರಭುತ್ವದ ಬೆಲೆ 1966ರ ಈ ಘಟನೆಯ ಹಿನ್ನೆಲೆಯಲ್ಲಿ ಏನು ಉಳಿದಿದೆ ಎಂದು ಧೀಮಂತರು ತಲೆಕೆಡಿಸಿಕೊಳ್ಳಬೇಕಾದ ಕಾಲ ಬಂದಿದೆ.

ಎನ್. ಪಿ. ಶಂಕರನಾರಾಯಣ ರಾವ್

ದಾರಿದ್ರ್ಯ ರೂಪಿಸುವ ಸಂಸ್ಕೃತಿ

ಆಸ್ಕರ್ ಲೆವಿಸ್ ಅವರ ಕೌಟುಂಬಿಕ ಅಧ್ಯಯನಗಳ ಪರಿಚಯ

ಸಮಾಜ ವಿಜ್ಞಾನಿಗಳ ನಡುವೆ ಆಸ್ಕರ್ ಲೆವಿಸ್ ವಿಶಿಷ್ಟರು. ಇತರ ಮಾನವಶಾಸ್ತ್ರಜ್ಞರು ಒಂದು ಸಮುದಾಯವನ್ನು ಆಯ್ದು ಅಧ್ಯಯನಮಾಡುವ ಸಂಪ್ರದಾಯದಲ್ಲಿದ್ದಾಗ ಇವರು ಕುಟುಂಬಗಳ ಆಳವಾದ ಅಧ್ಯಯನಗಳಿಂದ ಸಮಾಜ–ಸಂಸ್ಕೃತಿ–ವ್ಯಕ್ತಿ ಈ ತ್ರಿಕೋನದ ಮೇಲೆ ಹೆಚ್ಚು ಬೆಳಕುಬೀರಬಹುದು ಎಂದು ಪ್ರತಿಪಾದಿಸಿದವರು. ಈ ಕೌಟುಂಬಿಕ ಅಧ್ಯಯನಗಳ ಪರಿಣಾಮವಾಗಿ ಅವರು ದಾರಿದ್ರ್ಯ ರೂಪಿಸುವ ಸಂಸ್ಕೃತಿಯನ್ನು ವಿವರಿಸಿ ಆರ್ಥ ನಿರೂಪಣೆ ನೀಡಿದ್ದಾರೆ.

ಹಲವಾರು ಸಮಾಜಗಳಲ್ಲಿ ಅಧ್ಯಯನ ನಡೆಸುವ ಅವಕಾಶ ಪಡೆದವರು ಆಸ್ಕರ್ ಲೆವಿಸ್. ನ್ಯೂಯಾರ್ಕ್ ನಗರದ ಕೊಳೆಗೇರಿಗಳು, ಮೆಕ್ಸಿಕೋ ನಗರದ ಕೊಳೆಗೇರಿಗಳು, ಮೆಕ್ಸಿಕೋ ದೇಶದ ಯುಕಟಾನ್ ಪ್ರಾಂತದಲ್ಲಿ–ಪುರಾತನ ಮಾಯಾ ಜನರ ನೆಲೆ–ಟೆಪೊಜ್‌ಟ್ಲಾನ್ ಎಂಬ ಗ್ರಾಮ, ಅದೇ ದೇಶದಲ್ಲಿ ಮೆಕ್ಸಿಕೋ ನಗರದ ದಕ್ಷಿಣದಲ್ಲಿರುವ ಆಜ್ಟೆಕಾ ಗ್ರಾಮ, ದೆಹಲಿಗೆ ಸಮೀಪದಲ್ಲಿರುವ ರಾಂಪುರ–ಹೀಗೆ ಗ್ರಾಮ ಜೀವನ, ಕೊಳೆಗೇರಿಗಳು, ದಾರಿದ್ರ್ಯ ಇವು ಲೆವಿಸ್ ಅವರ ಅಧ್ಯಯನದ ವಸ್ತು ವ್ಯಾಪ್ತಿಯಲ್ಲಿ ಬಂದಿವೆ. ಸಾಮಾಜಿಕ ಬದಲಾವಣೆಯು ಅರ್ಥಪೂರ್ಣವಾಗಬೇಕಾದರೆ ಈಗ ಇರುವ ಸ್ಥಿತಿಯ ಸಂಪೂರ್ಣ ಪರಿಚಯ ಅವಶ್ಯಕ ಎಂದು ನಂಬಿರುವವರು ಲೆವಿಸ್. ಅವರ ಅಧ್ಯಯನ ಕ್ರಮದ ವೈಶಿಷ್ಟ್ಯ ಮತ್ತು ದಾರಿದ್ರ್ಯ ರೂಪಿಸುವ ಸಂಸ್ಕೃತಿಯ ಅರ್ಥವಿವರಣೆಯ ಪರಿಚಯ ನೀಡುವ ಪ್ರಯತ್ನ ಈ ಲೇಖನ.

ಸಹಭಾಗಿ ವೀಕ್ಷಣೆ

ಸಾಮಾಜಿಕ ಅಧ್ಯಯನಗಳಲ್ಲಿ ಮಾನವಶಾಸ್ತ್ರ ಒಂದು ವಿಶಿಷ್ಟಕ್ರಮವನ್ನು ಅನುಸರಿಸುತ್ತದೆ. ಈ ಕ್ರಮವನ್ನು ಸಹಭಾಗಿ ವೀಕ್ಷಣೆ ಎಂದು ಹೆಸರಿಸಬಹುದು. ಮಾನವ ಶಾಸ್ತ್ರಜ್ಞ ಅಧ್ಯಯನಕ್ಕಾಗಿ ಒಂದು ಸಮುದಾಯವನ್ನು ಆರಿಸಿಕೊಂಡು, ಆ ಜನರ ಭಾಷೆ ಕಲಿತು, ಅವರ ನಡುವೆ, ಅವರಂತೆ ಕೆಲವು ಕಾಲ ಬಾಳಿ, ಆ ಸಮುದಾಯದ ಜೀವನ ಕ್ರಮಗಳನ್ನು, ಮೌಲ್ಯ ಪದ್ಧತಿಯನ್ನು, ಆಚಾರ ವಿಚಾರಗಳನ್ನು ಅನುಭವದಿಂದ ಅರಿತುಕೊಳ್ಳುತ್ತಾನೆ. ಹೀಗೆ ಮಾಡುವಾಗ ಅವನು ಭಾಗಶಃ ಆ ಸಮುದಾಯದಲ್ಲಿ ವಿಲೀನವಾಗುತ್ತಾನೆ. ಈ ನಡುವೆ ಅವನ ಅಧ್ಯಯನವೂ ಸಾಗುತ್ತದೆ. ಹೀಗೆ ಸಹಭಾಗಿಯಾಗಿ, ವೀಕ್ಷಕನಾಗಿ ಏಕಕಾಲದಲ್ಲಿ ಸಮುದಾಯವನ್ನು ಅರಿತುಕೊಳ್ಳಲು ಪ್ರಯತ್ನಿಸುತ್ತಾನೆ. ಈ ಸಹಭಾಗಿತ್ವದಿಂದಾಗಿ ಅವನ ಮತ್ತು ಆ ಸಮುದಾಯದ ಜನರ ನಡುವಿನ ಸಂಕೋಚದ ಗೋಡೆ ಸರಿಯುತ್ತದೆ. ಒಮ್ಮೆ ಬಂದು ಹೋಗಿ ವಿಚಾರ ಸಂಗ್ರಹ ಮಾಡುವವನು ಕಾಣುವ ಹತ್ತರಷ್ಟನ್ನು ಈ ಸಹಭಾಗಿ ವೀಕ್ಷಕ ಕಾಣುತ್ತಾನೆ. ಆ ಸಮುದಾಯದ ಜನ ತಮ್ಮ ಜೀವನವು ಏನೆಂದು ಅರಿತಿದ್ದಾರೋ ಆ ದೃಷ್ಟಿಯಿಂದ ಜೀವನವನ್ನು ನೋಡಲು ಶಕ್ತನಾಗುತ್ತಾನೆ. ಹೊರಗಿನಿಂದ ನೋಡಿದಾಗ ವಿಚಿತ್ರವಾಗಿ, ಅರ್ಥಹೀನವಾಗಿ ಕಾಣುವ ಅಂಶಗಳು ಆ ಜನರ ಬಾಳಿನಲ್ಲಿ ಹೇಗೆ ಅರ್ಥಪೂರ್ಣತೆ ಗಳಿಸಿವೆ ಯಾವ ಪಾತ್ರ ನಿರ್ವಹಿಸುತ್ತವೆ ಎಂಬುದನ್ನು ಅರಿತುಕೊಳ್ಳಲು ಇದರಿಂದ ದಾರಿಯಾಗುತ್ತದೆ.

ಈ ಕ್ರಮವನ್ನು ಅನುಸರಿಸಿ ಆದಿವಾಸಿ ಸಮಾಜಗಳನ್ನು ಅಧ್ಯಯನ ಮಾಡಿ ಸಾಮಾಜಿಕ ಜೀವನ, ಸಂಸ್ಕೃತಿಯ ಸ್ವರೂಪ, ಸಂಸ್ಕೃತಿಯಲ್ಲಿ ಆಗುವ ಬದಲಾವಣೆಗಳು ಮುಂತಾದ ಮಹತ್ತರವಾದ ಸಾಮಾಜಿಕ-ಸಾಂಸ್ಕೃತಿಕ ಸಂಗತಿಗಳನ್ನು ಮಾನವಶಾಸ್ತ್ರಜ್ಞರು ಕಲೆಹಾಕಿದ್ದಾರೆ.

ಅಂಶೀಯ ಸಮಾಜ

ಇಂತಹ ಅಧ್ಯಯನಗಳಿಂದ ಗಳಿಸಿದ ಜ್ಞಾನದಿಂದ ಸಜ್ಜುಗೊಂಡು ಕೆಲವು ಮಾನವಶಾಸ್ತ್ರಜ್ಞರು ಗ್ರಾಮ ಸಮುದಾಯಗಳನ್ನೂ, ನಗರ ಸಮುದಾಯಗಳನ್ನೂ ಅರಿತುಕೊಳ್ಳಲು ತೊಡಗಿದರು. ಆಗ ಈ ಸಮುದಾಯಗಳನ್ನು ಆದಿವಾಸಿ ಸಮಾಜಗಳಂತೆ ಅಧ್ಯಯನದ ಅರ್ಥಪೂರ್ಣ ಘಟಕಗಳನ್ನಾಗಿ ಪರಿಗಣಿಸುವುದು ತಪ್ಪು ಎಂಬುದು ಹೊಳೆಯಿತು. ಈ ಸಮುದಾಯಗಳು ಒಂದು ಬೃಹತ್ ಸಮಾಜದ ಅಂಗಗಳು; ಅಂಶೀಯಸಮಾಜಗಳು. ಆಯಾದೇಶ, ಅದರ ಇತಿಹಾಸ, ರಾಜಕೀಯ ಸಾಮಾಜಿಕ ರಚನೆ, ಆಡಳಿತ ವ್ಯವಸ್ಥೆ, ಈ ವಿಚಾರಗಳ ವಿಚಿತವಾದ ಹಿನ್ನೆಲೆಯಿಲ್ಲದೆ ಈ ಅಂಶೀಯ ಸಮಾಜಗಳ ಪರಿಚಯ ವಿಕೃತಗೊಳ್ಳುವ ಸಂಭವವಪ್ಪುಂಟು.

ಅಂಶೀಯ ಸಮಾಜಗಳ ಅಧ್ಯಯನದಲ್ಲಿ ರಾಬರ್ಟ್ ರೆಡ್‌ಫೀಲ್ಡ್ ಅವರು ಅಧ್ಯಯನ ಮಾಡಿರುವ ರೈತ ಸಮಾಜಗಳು, ಎಲ್ಡನ್ ಮೇಯೋ ಅವರ ಚಿಕಾಗೋವಿನ ಕಾರ್ಖಾನೆಗಳು, ವಾರ್ನರ್ ಅವರ ಅಮೆರಿಕದ ಮಧ್ಯಮ ವರ್ಗದ ನೆಲೆಗಳು ಇವುಗಳಂತಹ ವಿಭಿನ್ನ ಸಾಮಾಜಿಕ ಘಟಕಗಳು ಸೇರಿವೆ.

ಅಧ್ಯಯನದ ಘಟಕವಾಗಿ ಕುಟುಂಬ

ಈ ಹಂತದಲ್ಲಿ ಆಸ್ಕರ್ ಲೆವಿಸ್ ಅವರು ತಮ್ಮ ಅಧ್ಯಯನದಲ್ಲಿ ಕುಟುಂಬವನ್ನು ಒಂದು ಘಟಕವಾಗಿ ಪರಿಗಣಿಸತೊಡಗಿದರು. ಅವರೇ 1967ರಲ್ಲಿ ಹೇಳಿರುವಂತೆ "ನಮಗೆ ಆದಿವಾಸಿ ಸಮಾಜಗಳ ಅತ್ಯುತ್ತಮ ಮೂಳೆ ಪಂದರ ದೊರೆತಿದೆ. ಆದರೆ ಅದಕ್ಕೆ ರಕ್ತ, ಮಾಂಸಗಳು ಇಲ್ಲವಾಗಿವೆ. ಆಯಾ ಸಮಾಜಗಳ ಚೌಕಟ್ಟನ್ನು ಕುರಿತು ಬಹಳಷ್ಟು ಅರಿತುಕೊಳ್ಳಲು ಸಾಧ್ಯವಾಗಿದೆ. ಆದರೆ ಮನುಷ್ಯನ ಜೀವನದ ತಥ್ಯ ಸತ್ಯಗಳನ್ನು ಅರಿತುಕೊಳ್ಳಲಾಗಲಿ, ಊಹಿಸಲಾಗಲಿ ಸಾಧ್ಯವಿಲ್ಲವಾಗಿದೆ."

ಈ ಕೊರತೆಯನ್ನು ತುಂಬಲು ಅವರು ಅಧ್ಯಯನದ ಘಟಕವನ್ನು ಕುಟುಂಬದ ಮಿತಿಗೆ ಇಳಿಸಿದರು. ತಂದೆ, ತಾಯಿ, ಮದುವೆಯಾಗಿಲ್ಲದ ಮಕ್ಕಳಿಂದ ಕೂಡಿದ ಅಣು ಕುಟುಂಬ ಇತರ ನಂಟರಿಷ್ಟರಿಂದ ಕೂಡಿದ ವ್ಯಾಪಕ ಕುಟುಂಬ ಇವುಗಳನ್ನು ಇತರ ಸಮುದಾಯಗಳನ್ನು ಅಧ್ಯಯನ ಮಾಡುವಾಗ ಅನುಸರಿಸಿದ್ದ ಕ್ರಮಗಳಿಂದಲೇ ಅಧ್ಯಯನ ಮಾಡಿದರು.

"ಕುಟುಂಬವು ಸಣ್ಣ ಘಟಕ. ಅದನ್ನು ಒಂದು ಒಟ್ಟು ಎಂದು ಪರಿಗಣಿಸಬಹುದು. ಸಂಸ್ಕೃತಿ–ವ್ಯಕ್ತಿ ಎಂಬ ಕಲ್ಪನೆಗಳು ಭಾವನಾತ್ಮಕವಾಗಿ ಎರಡು ಧ್ರುವಗಳು. ಕೌಟುಂಬಿಕ ಅಧ್ಯಯನಗಳು ಅವುಗಳ ನಡುವೆ ಒಂದು ಸೇತುವೆಯನ್ನು ನಿರ್ಮಿಸುತ್ತವೆ. ನಿಜ ಜೀವನದಲ್ಲಿ ಈ ಸಂಸ್ಕೃತಿ-ವ್ಯಕ್ತಿಗಳು ಹೇಗೆ ಕೂಡಿಸಲ್ಪಟ್ಟಿವೆ ಎಂಬುದನ್ನು ಕಾಣುತ್ತೇವೆ."

ಈ ಕ್ರಮದ ಪ್ರಯೋಜನಗಳು

ವ್ಯಕ್ತಿತ್ವವು ಸಾಂಸ್ಕೃತಿಕ ಮತ್ತು ವೈಯಕ್ತಿಕ ಅಂಶಗಳ ಪರಿಣಾಮ. ಈ ಎರಡು ಅಂಶಗಳ ಹೊಂದಾಣಿಕೆ, ಘರ್ಷಣೆ, ವಿರೋಧ–ಈ ಸಂದರ್ಭಗಳು ವ್ಯಕ್ತಿತ್ವವನ್ನು ರೂಪಿಸುತ್ತವೆ. ಕುಟುಂಬವನ್ನು ಅಧ್ಯಯನ ಮಾಡುವಾಗ ಈ ವಿಚಾರವು ನಿಜಜೀವನದಲ್ಲಿ ಹೇಗೆ ಹೇಗೆ ಏರು ಪೇರುಗಳನ್ನು ಕಂಡು ಒಂದೇ ಕುಟುಂಬದ ಹಿನ್ನೆಲೆಯಲ್ಲಿ ಬೇರೆ ಬೇರೆ ವ್ಯಕ್ತಿಗಳನ್ನು ರೂಪಿಸುತ್ತದೆಂಬುದನ್ನು ಅರಿತುಕೊಳ್ಳುವುದು ಸುಲಭ.

ಕುಟುಂಬದ ವ್ಯವಸ್ಥೆಯಲ್ಲಿ ವೈವಿಧ್ಯಗಳಿವೆ. ಹಿರಿಯ ಗಂಡಸೇ ಸರ್ವಾಧಿಕಾರಿಯಾಗಿರುವ ಕುಟುಂಬದಿಂದ, ಗಂಡಸು ಲೆಕ್ಕಕ್ಕೇ ಬಾರದವನಾಗಿರುವ ಕುಟುಂಬದವರೆಗೆ ವಿವಿಧ ವ್ಯವಸ್ಥೆಗಳಿವೆ. ಹೆಣ್ಣಿನ ಸ್ಥಾನಮಾನವೂ ಇಷ್ಟೆ. ಒಂದೊಂದು ರೀತಿಯ ಕುಟುಂಬ ವ್ಯವಸ್ಥೆಯು ತನ್ನ ವಿವಿಧ ರೀತಿಯ ಹೊಂದಾಣಿಕೆಗಳ ಪರಿಣಾಮವಾಗಿ ತನ್ನ ಆಶ್ರಯದಲ್ಲಿ ಇರುವವರಿಗೆ ತೃಪ್ತಿಯನ್ನೋ, ನಿರಾಶೆಯನ್ನೋ, ಸಮತೋಲನವನ್ನೋ, ಅದರ ಕೊರತೆಯನ್ನೋ ನೀಡುತ್ತದೆ. ಇವುಗಳನ್ನು ಒಂದು ಕುಟುಂಬದ ಅಧ್ಯಯನದಲ್ಲಿ ಸ್ಪಷ್ಟವಾಗಿ ಕಾಣಬಹುದು.

ಪ್ರತಿ ಕುಟುಂಬವೂ ಬೃಹತ್ ಸಾಮಾಜಿಕ ಜಾಲದ ಒಂದು ಕೇಂದ್ರಬಿಂದು. ಕುಟುಂಬ ಕುಟುಂಬಗಳ ಬಾಂಧವ್ಯ, ವಿರೋಧ, ಸಹಕಾರ, ಪರಸ್ಪರಾವಲಂಬನ, ಪರಸ್ಪರ ದ್ರೋಹ ಸಾಧನೆ, ಈ ಸಾಮಾಜಿಕ ಸಂಗತಿಗಳನ್ನು ಈ ತರಹದ ಅಧ್ಯಯನಗಳಲ್ಲಿ ಸಿಚ್ಚಳವಾಗಿ ನೋಡಬಹುದು.

ಅಧ್ಯಯನ ಕ್ರಮ

ಆಯ್ದ ಸಮುದಾಯದಲ್ಲಿ ನೆಲೆಸಿ ಅಲ್ಲಿನ ಸಾಮಾನ್ಯ ಸ್ಥಿತಿ ಗತಿಗಳನ್ನು ತಿಳಿದುಕೊಳ್ಳುತ್ತಾ, ಕೆಲವು ಕುಟುಂಬಗಳತ್ತ ಗಮನ ಹರಿಸಬೇಕು. ಆ ಕುಟುಂಬಗಳ ಪೂರ್ಣ ವಿವರಗಳನ್ನು ಸಂಗ್ರಹಿಸಬೇಕು. ಅವುಗಳ ಆಧಾರದ ಮೇಲೆ ಸಾಧ್ಯವಾದ ಮಟ್ಟಿಗೆ ಪ್ರಾತಿನಿಧಿಕವಾದ ಕುಟುಂಬವನ್ನು ಆಯಬೇಕು. ಅದರ ಸದಸ್ಯರು, ಅವರ ವಯಸ್ಸು, ವೃತ್ತಿ, ವಿವಾಹ ಜೀವನ, ಹವ್ಯಾಸಗಳು ಇಂತಹ ಗುಟ್ಟಲ್ಲದ ವಿವರಗಳನ್ನು ದೊರಕಿಸಿಕೊಳ್ಳಬೇಕು.

ಅನಂತರ ಕುಟುಂಬದ ಪ್ರಮುಖ ಮತ್ತು ಇತರ ಮುಖ್ಯ ಸದಸ್ಯರನ್ನು ಕಂಡು ವಿಶ್ವಾಸ ಬೆಳೆಸಿಕೊಳ್ಳುವ ಪ್ರಯತ್ನ. ಇದು ತಾನೇತಾನಾಗಿ ಆಗಬೇಕಾದುದು. ಕೆಲವೇಮ್ಮೆ ಸಂಶಯಗಳಿಂದ ಆರಂಭವಾಗುವ ಬಾಂಧವ್ಯಗಳು ಭದ್ರ ತಳಪಾಯದ ಮೇಲೆ ನಿಲ್ಲುವುದುಂಟು. ಲೆವಿಸ್ ಅವರು ಮಾರ್ಟಿನೆಜ್ ಪೆದ್ರೋ ಕುಟುಂಬದೊಂದಿಗೆ ಗಳಿಸಿದ ಸ್ನೇಹ ಇಪ್ಪತ್ತು ವರ್ಷಗಳಿಗಿಂತ ಹೆಚ್ಚು ಕಾಲ ನಿಂತಿದೆ. ಪೆದ್ರೋ ಮೊದಲು ಲೆವಿಸ್ ಅವರು ತನ್ನ ಮನೆಗೆ ಬಂದಾಗ ಒಳಕ್ಕೆ ಸಹ ಬರಹೇಳಲಿಲ್ಲ.

ಬಳಿಕ ಕುಟುಂಬದ ಸದಸ್ಯರಿಂದ ಪ್ರತ್ಯೇಕ ಪ್ರತ್ಯೇಕವಾಗಿ ಆತ್ಮವೃತ್ತಗಳನ್ನು ಪಡೆಯುವುದು. ಇದರಿಂದ ಒಬ್ಬರು ಮಾಡಬಹುದಾದ ಉತ್ಪ್ರೇಕ್ಷೆ, ಮುಚ್ಚುಮರೆ ಇವುಗಳಿಂದ ಸಂಗ್ರಹವಾಗುವ ಸಂಗತಿಗಳ ಖಚಿತತೆಗೆ ಧಕ್ಕೆ ಬರದಂತೆ ಆಗುತ್ತದೆ. ಕುಟುಂಬದ ಒಂದು ದಿನದ ಎಲ್ಲ ಕಾರ್ಯವಿವರಗಳ ವೀಕ್ಷಣೆ ಮಾಡಬಹುದು.

ಕುಟುಂಬಕ್ಕೆ ಸಂಬಂಧಿಸಿದ ಒಂದು ಸಮಸ್ಯೆಯನ್ನೋ, ಇಲ್ಲವೇ ಒಂದು ವಿಶೇಷ ಘಟನೆಯನ್ನೋ ವಿವರವಾಗಿ ಅಧ್ಯಯನ ಮಾಡುವುದರಿಂದ ಆ ಕುಟುಂಬವು ಹೊಸ ಸನ್ನಿವೇಶಗಳನ್ನು ಹೇಗೆ ಎದುರಿಸುತ್ತದೆ, ಅಂತಹ ಸಂದರ್ಭಗಳಲ್ಲಿ ವಿವಿಧ ಸದಸ್ಯರು ತೋರುವ ಮನೋಭಾವ ಎಂತೆಂತಹುದು ಮುಂತಾದ ಮಾಹಿತಿಗಳು ದೊರೆತು ಭೈರ್ಯ, ಅಂಜುಬುರುಕತನಗಳಂಥ ಗುಣಗಳ ಇರುವಿಕೆ ಅಥವಾ ಇಲ್ಲದಿರುವಿಕೆಯನ್ನು ಅರಿಯಬಹುದು.

ಹೀಗೆ ಸಂಗ್ರಹವಾದ ಮಾಹಿತಿಗಳನ್ನು ಬಳಸಿಕೊಂಡು, ಆದೇ ಕುಟುಂಬದ ಪ್ರಮುಖ ಸದಸ್ಯರ ಮಾತುಗಳಲ್ಲೇ ಅದರ ಕಥನವನ್ನು ಸಿದ್ಧಮಾಡಬಹುದು.

ಪೆದ್ರೋ ಮಾರ್ಟಿನೆಜ್

ಮೆಕ್ಸಿಕೋ ದೇಶದಲ್ಲಿ ಮೊರೆಲಾಸ್ ಪ್ರಾಂತದಲ್ಲಿ ಆಜ್ಟೆಕಾ ಒಂದು ಗ್ರಾಮ. ಮೆಕ್ಸಿಕೋ ನಗರಕ್ಕೆ ಅರವತ್ತು ಮೈಲಿ ದೂರದಲ್ಲಿದೆ. ಅಲ್ಲಿಯ ಒಬ್ಬ ರೈತ ಮಾರ್ಟಿನೆಜ್ ; ಸ್ವಂತ ಭೂಮಿಯಿಲ್ಲದವನು.

ಹಟ್ಟಿದ ಮೂರು ತಿಂಗಳಿಗೆ ತಂದೆಯನ್ನು ಕಳೆದುಕೊಂಡ. ತಾಯಿ ಬೇರೆ ಮದುವೆಯಾದಳು. ಮಗುವನ್ನು ಅಜ್ಜಿಯರು, ನಂಟರು ಸಾಕಿದರು. ತಾಯಿಯೂ, ನೆಂಟರು ಕ್ರೌರ್ಯ ತೋರಿದಾಗ ಮಗನನ್ನು ರಕ್ಷಿಸಿದಳು. ಪೆದ್ರೋ 1910ರಲ್ಲಿ ತಾಯಿಯನ್ನು ಕಳೆದುಕೊಂಡ. ಎಸ್ಟೆರಾನ್ಸ್ ಳನ್ನು ಮದುವೆಯಾದ. ಮನೆ ಕಟ್ಟಿದ.

ಸುಮಾರು ನಲವತ್ತು ವರ್ಷಕಾಲ ಪೋರ್ಫಿರಿಯೋ ಡಯಾಜನ ಅಧ್ಯಕ್ಷತೆಯಲ್ಲಿ ಬಡರೈತರ ಜೀವನ ಕುಸಿಯುತ್ತ ಹೋಗಿತ್ತು. 1910ರಲ್ಲಿ ಮೆಕ್ಸಿಕೋದ ಕ್ರಾಂತಿ ಆರಂಭವಾಯಿತು. 1914 ರಿಂದ 1917ರ ವರೆಗೆ ಮೂರು ವರ್ಷ ಪೆದ್ರೋ ಕ್ರಾಂತಿಕಾರಿ ಸೇನೆಗೆ ಸೇರಿ ಹೋರಾಡಿದ. ಕ್ರಾಂತಿಯ ಪ್ರಮುಖ ನಾಯಕ ಎಮಿಲಿಯಾನೋ ಜಪಾಟಾನ ಬೆಂಬಲಿಗ ಪೆದ್ರೋ. ರಾಜಕೀಯಕ್ಕೆ ಇಳಿದ ಮೇಲೆ ಪೆದ್ರೋ ಸೆರೆಮನೆ ಕಂಡ ; ಊರು ಬಿಟ್ಟು ಪರಾರಿಯಾದ. ಸಣ್ಣ ವಯಸ್ಸಲ್ಲಿ ಪರಿಚಯ ಪಡೆದಿದ್ದ ಅಕ್ಷರ ಜ್ಞಾನ ಬೆಳೆಸಿಕೊಂಡ. ತನ್ನ ಗ್ರಾಮದ ಆಡಳಿತದಲ್ಲಿ ಹಲವು ಬಾರಿ ಅಧಿಕಾರಗಳನ್ನು ಪಡೆದು ನಿರ್ವಹಿಸಿದ. ನ್ಯಾಯಾಧೀಶನೂ ಆದ.

ನಲವತ್ತು ವರ್ಷಕಾಲ ಕ್ಯಾಥೊಲಿಕ್ ಆಗಿದ್ದ ಪೆದ್ರೊ ಪ್ರಾಟೆಸ್ಟೆಂಟ್ ಪಂಗಡಕ್ಕೆ ಸೇರಿದ. ಆದ ಹನ್ನೊಂದು ಮಕ್ಕಳಲ್ಲಿ ನಾಲ್ಕು ಗಂಡು, ಎರಡು ಹೆಣ್ಣು ಉಳಿದುವು. ಎಸ್ಟೆರಾನ್ಸ್ – ಮೌನದಿಂದ ಬಂದ ಏರುಪೇರುಗಳನ್ನೆಲ್ಲ ತಾಳಿಕೊಂಡು ಬಾಳಿದ ಸಹನ ಶೀಲೆ. ಈ ದಂಪತಿಗಳ ಇಬ್ಬರು ಗಂಡು ಮಕ್ಕಳು, ಒಬ್ಬಳು ಮಗಳು ಉಪಾಧ್ಯಾಯ ವೃತ್ತಿಗೆ

ಏರಿದರು. ಪೆದ್ರೊ, ಎಪ್ಪತ್ನಾಲ್ಕು ವಯಸ್ಸಿನವನಾಗಿ ವಾಗ ಕಥನ ಕೊನೆಗೊಳ್ಳುತ್ತದೆ.

ಕಥೆ ಹೇಳುವವರು ಪೆದ್ರೊ, ಎಸ್ಪೆರಾನ್ಸಾ ಮತ್ತು ಅವರ ಹಿರಿಯ ಮಗ ಫೆಲಿಪ್. ಅನುಬಂಧಗಳ ರೂಪದಲ್ಲಿ ಕುಟುಂಬದ ಆಯವ್ಯಯ, ಇತರ ಮಕ್ಕಳ ಹೇಳಿಕೆಗಳು, ಆ ಗ್ರಾಮದ ಇತಿಹಾಸ ಎಲ್ಲ ಸೇರಿವೆ. ಮೆಕ್ಸಿಕೋ–ದೇಶ, ಆಜ್ಟೆಕಾ ಗ್ರಾಮ, ಪೆದ್ರೊ ಕುಟುಂಬ – ಈ ಮೂರು ಘಟಕಗಳ ಪ್ರಮುಖ ಘಟನೆಗಳನ್ನು ಹೊಂದಿಸಿ ಸಿದ್ಧಮಾಡಿದ ಕಾಲಸೂಚಿಯಿದೆ.

ಇಪ್ಪತ್ತನೆಯ ಶತಮಾನದ ಮುಖ್ಯ ಕ್ರಾಂತಿಗಳಲ್ಲಿ ಮೊದಲನೆಯದು ಮೆಕ್ಸಿಕೊ ಕ್ರಾಂತಿ; ಭೂಹೀನ ರೈತ ವರ್ಗವು ಸಾಮೂಹಿಕ ಒಡೆತನದ ಭೂಮಿಯನ್ನು ಶ್ರೀಮಂತರ ಪಾಲು ಮಾಡುವುದರ ವಿರುದ್ಧ ಎಬ್ಬಿಸಿದ ಕ್ರಾಂತಿ. ಅದರಲ್ಲಿ ರೈತ ಸಮೂಹ ಏನೇನು ಆಕಾಂಕ್ಷೆಗಳನ್ನು ಕಟ್ಟಿಕೊಂಡು ಭಾಗವಹಿಸಿತು, ಏನು ಸಾಧಿಸಿತು, ಎಷ್ಟು, ಮೆಕ್ಸಿಕೊ ದೇಶದ ಜನವರ್ಗದಲ್ಲಿ ಆದ ಬದಲಾವಣೆಗಳು, ಕ್ರಾಂತಿಯ ಏರಿಳಿತ – ಇವೆಲ್ಲವನ್ನೂ ಒಬ್ಬ ರೈತ ಹೇಗೆ ಕಂಡ ಎಂಬುದರ ದಾಖಲಾತಿ ಈ ಪುಸ್ತಕ. ಆದರೊಂದಿಗೇ ಒಬ್ಬ ರೈತ ಹೆಚ್ಚು ಕಡಿಮೆ ಅನಕ್ಷರಸ್ಥನಾಗಿದ್ದವನು ಸ್ವಪ್ರಯತ್ನದಿಂದ ಮುಂದುವರಿದ, ಎಷ್ಟು ಮಟ್ಟಿಗೆ ತನ್ನ ಆದರ್ಶಗಳಿಗೆ ಬದ್ಧನಾಗಿ ನಿಂತ ಎಂಬ ನಿಜ ಜೀವನದ ಚಿತ್ರಣ. ಲೈಂಗಿಕ ಜೀವನದಲ್ಲಿ ಅಸ್ಥಿರತೆ, ಮದುವೆಗೆ ಮೊದಲೇ ಮಕ್ಕಳನ್ನು ಪಡೆದು ಅವರ ಹೊಣೆ ಹೊರುವ, ಹುಡುಗಿಯರು, ಹಿಟ್ಟಿನ ಗಿರಣಿಯಂತಹ ಸೌಲಭ್ಯಗಳಿಂದ ಅಪಾರವಾಗಿ ಮಾರ್ಪಾಡಾಗುವ ಗ್ರಾಮ ಜೀವನ ಕ್ರಮ – ಎಲ್ಲದರ ಸ್ಪಷ್ಟ ಚಿತ್ರ ಮೂಡಿಬಂದಿದೆ ಜೀವನದ ಎಲ್ಲ ಮುಖಗಳನ್ನೂ ನೋಡಿ ಅರಿತುಕೊಳ್ಳಬಹುದು ಈ ಕೃತಿಯಿಂದ.

ಇದೇ ಕ್ರಮವನ್ನು ಅನುಸರಿಸಿ ಲೆವಿಸ್ ಅವರು ಮೆಕ್ಸಿಕೊ ನಗರದ ಕ್ಯಾಸಾ ಗ್ರಾಂಡೆ ಕೊಳೆಗೇರಿಯ ವಾಸಿಗಳಾದ ಸ್ಯಾಂಚೆಜ್ ಎಂಬಾತನ ಮಕ್ಕಳನ್ನು ಕುರಿತು "ಸ್ಯಾಂಚೆಜನ ಮಕ್ಕಳು" ಎಂಬ ಕೃತಿಯನ್ನೂ ರಚಿಸಿದ್ದಾರೆ. ಇದು ಅವರ ಅತ್ಯಂತ ಪ್ರಸಿದ್ಧ ಕೃತಿ. ವೇಶ್ಯಾವೃತ್ತಿಯಲ್ಲಿರುವವರನ್ನು ಕುರಿತು "ಲಾ ವಿಡಾ" ಎಂಬ ಪುಸ್ತಕ ಬರೆದಿದ್ದಾರೆ. ಇವರ "ಉತ್ತರ ಭಾರತದ ಗ್ರಾಮ ಜೀವನ" ಮತ್ತು ಟಿಪೊಜ್ಟ್ಲಾನ್ ಗ್ರಾಮವನ್ನು ಕುರಿತ ಕೃತಿಗಳು ಮಾತ್ರ ಇತರ ಮಾನವಶಾಸ್ತ್ರೀಯ ವರದಿಗಳ ರೂಪ ತಳೆದಿವೆ.

ದಾರಿದ್ರ್ಯ–ಸಂಸ್ಕೃತಿಯ ಮೇಲೆ ಆದರ ಪ್ರಭಾವ

"ನನ್ನ ಕೌಟುಂಬಿಕ ಅಧ್ಯಯನಗಳ ಫಲವಾಗಿ ಗ್ರಾಮಾಂತರ–ನಗರ ಎಂಬ ಭೇದವಿಲ್ಲದೆ, ರಾಷ್ಟ್ರೀಯ ಗಡಿಗಳ ಅಡ್ಡಿಯಿಲ್ಲದೆ ದಾರಿದ್ರ್ಯವು ಸಂಸ್ಕೃತಿಯೊಂದನ್ನು ಅಥವಾ ಉಪಸಂಸ್ಕೃತಿಯೊಂದನ್ನು ರೂಪಿಸುತ್ತದೆ ಎಂಬ ಭಾವನೆಮೂಡಿತು." ಆಸ್ಕರ್ ಲೆವಿಸ್ ಅವರು ದಾರಿದ್ರ್ಯವನ್ನೂ. ಅದು ಹುಟ್ಟಿಸುವ ಕೆಲವೊಂದು ಮನೋಭಾವಗಳು, ರೂಪಿಸುವ ಜೀವನಕ್ರಮಗಳು, ಆದರ್ಶಗಳು, ಮೌಲ್ಯಪದ್ಧತಿ–ಇವನ್ನೆಲ್ಲ ಒಗ್ಗೂಡಿಸಿ ದಾರಿದ್ರ್ಯ ಸಂಸ್ಕೃತಿಯೆಂದು ಅರ್ಥವಿವರಣೆ ನೀಡಿದ್ದಾರೆ; ಆದರ ಎಪ್ಪತ್ತು ಲಕ್ಷಣಗಳನ್ನು ಸೂಚಿಸಿದ್ದಾರೆ.

ಸಂಸ್ಕೃತಿಯು ಒಂದು ಜನ ಸಮೂಹಕ್ಕೆ ಬಾಳುವ ಕ್ರಮವೊಂದನ್ನು ನೀಡುತ್ತದೆ ಎಂದು ಮಾನವಶಾಸ್ತ್ರ ಹೇಳುತ್ತದೆ. ದಾರಿದ್ರ್ಯದ ಸಂಸ್ಕೃತಿಯೂ ಇದೇ ಕಾರ್ಯವನ್ನು ನಿರ್ವಹಿಸುತ್ತದೆ; ಆದ್ದರಿಂದ ಅದು ಸಂಸ್ಕೃತಿಯ ಒಂದು ಪ್ರಭೇದ.

ದಾರಿದ್ರ್ಯ ಸಂಸ್ಕೃತಿಯ ಮುಖ್ಯಲಕ್ಷಣ ಮದುವೆ ಎಂಬ ಸಾಮಾಜಿಕ ಮಾನ್ಯತೆಯನ್ನು ಪಡೆದು ಗಂಡು–ಹೆಣ್ಣು ಒಂದಾಗಿ ಬಾಳುವ ಪದ್ಧತಿಯ ಅವನತಿ. ಬೇಕೆಂದಾಗ, ಬೇಕಾದವರೊಡನೆ, ಬೇಕೆನಿಸಿದಷ್ಟುದಿನ ಬಾಳುವುದು ಈ ಸಂಸ್ಕೃತಿಯಲ್ಲಿ ಕಾರ್ಯತಃ ಮಾನ್ಯತೆ ಪಡೆಯುತ್ತದೆ. ಇದರ ಪರಿಣಾಮವಾಗಿ ತಾನು ಹೆತ್ತ ಮಕ್ಕಳನ್ನು ಸಾಕುವ ಹೊಣೆ ಹೆಣ್ಣಿನ ಮೇಲೆ ಬೀಳುತ್ತದೆ. ಗಂಡಿನ ನೆರವಿಲ್ಲದೆ ಈ ಹೊಣೆ ನಿರ್ವಹಿಸಬೇಕಾಗಿ ಬರುವುದರಿಂದ ಮಕ್ಕಳಿಗೆ ಆದರ್ಶವಾಗಿ ಯಾವ ವಯಸ್ಕ ಗಂಡಸೂ ಇಲ್ಲವಾಗುತ್ತಾನೆ. ಒಬ್ಬ ತಾಯಿ, ಅವಳು ಹೆತ್ತ ಮಕ್ಕಳು–ಕುಟುಂಬ ಇಷ್ಟಕ್ಕೆ ಮಿತವಾಗುತ್ತದೆ.

ಬಾಳಿನಲ್ಲಿ ಸಾಧಿಸಲು ಸಾಧ್ಯವಾಗದ ಆದರ್ಶಗಳನ್ನು ಸಾಧಾರಣವಾಗಿ ಯಾವನೂ ಕಟ್ಟಿಕೊಳ್ಳುವುದಿಲ್ಲ. ಸಾಧನೀಯವಾದ ಆದರ್ಶಗಳ ಮಟ್ಟ ಕೆಳಕ್ಕೆ ಇಳಿಯುತ್ತದೆ; ಆಕಾಂಕ್ಷೆ ಮಿತಗೊಳ್ಳುತ್ತದೆ. ಮುಂದಿನ ವರ್ಷ

ಈ ಬೆಳೆ ಇಡಬೇಕು; ತೋಟದಲ್ಲಿ ಇಂತಿಂತಹ ಮರ ಗಳನ್ನು ನೆಡಬೇಕು; ಮನೆ ಕಟ್ಟಿಸಬೇಕು, ಮಗಳಿಗೆ ಮದುವೆ ಮಾಡಬೇಕಂ – ಇಂತಹ ಆಕಾಂಕ್ಷೆಗಳಿಗೆ ಇಲ್ಲಿ ಎಡೆಯಿಲ್ಲ. ಇಂದು ಸಾಗುವುದು ಹೇಗೆ ಎಂಬುದೇ ಸಮಸ್ಯೆಯಾಗುತ್ತದೆ. ನಾಳೆಯನ್ನು ಕಲ್ಪಿಸಿಕೊಂಡು, ಆಕಾಂಕ್ಷೆ ಪಟ್ಟರೆ ಅದು ನಿರಾಶೆಗೆ, ಭಗ್ನ ಮನೋ ಭಾವಕ್ಕೆ ದಾರಿ.

ಹೀಗೆ ಈ ಸಂಸ್ಕೃತಿಯಲ್ಲಿ ಕಾಲದ ಕಲ್ಪನೆ ಬಹು ದೂರ ಹೋಗಲು ಅವಕಾಶವಿಲ್ಲದೆ ಇಂದಿಗೆ, ಈ ಕ್ಷಣ ಗಳಿಗೆ ಮಿತಗೊಳ್ಳುತ್ತದೆ. ಈಗ ಮನದಲ್ಲಿ ಹುಟ್ಟಿದ ಆಕಾಂಕ್ಷೆಗೆ ಈಗಲೇ ಪೂರೈಕೆಯ ದಾರಿ ಕಾಣಬೇಕು. ಸಾಧಾರಣವಾಗಿ ನಾವು ಆಕಾಂಕ್ಷೆಗಳನ್ನು ದಮನಗೊಳಿ ಸುವ, ಇಲ್ಲವೇ ತಡೆಹಿಡಿದು ಈಡೇರಿಸಿಕೊಳ್ಳುವ, ಇಲ್ಲವೇ ಈಡೇರಲು ಸೂಕ್ತ ಸಮಯಕ್ಕಾಗಿ ಕಾಯುವ ಮನೋಭಾವವನ್ನು ಬೆಳೆಸಿಕೊಂಡಿರುತ್ತೇವೆ. ದಾರಿದ್ರ್ಯ ಸಂಸ್ಕೃತಿಯಲ್ಲಿ ಆಕಾಂಕ್ಷೆಯ ದಮನಕ್ಕೆ ಅವಕಾಶ ಕಮ್ಮಿ. ಆಕಾಂಕ್ಷೆ ಮಿತವಾದುದು; ಅದು ಆಗಲೇ ಈಡೇರ ಬೇಕು; ಅದಕ್ಕಾಗಿ ಏನು ಮಾಡಲೂ ಸಿದ್ಧ.

ಒಮ್ಮೆ ಈ ದಾರಿದ್ರ್ಯ ಸಂಸ್ಕೃತಿಯು ಒಂದು ಸಮುದಾಯ ದಲ್ಲಿ ನೆಲೆಗೊಂಡರೆ ಈ ಬಗೆಯಲ್ಲಿ ಅದೇ ಸಂಸ್ಕೃತಿಯ ವಿಶ್ವದೃಷ್ಟಿ, ಮಿತಾಕಾಂಕ್ಷೆ, ಬಯಸಿದುದನ್ನು ಹೇಗಾ ದರೂ ಆಗಿಂದಾಗ ಪಡೆಯಬೇಕೆಂಬ ಆತುರ ಈ ಗುಣ ಗಳನ್ನೇ ಪಡೆದ ಮಕ್ಕಳು ಅದನ್ನು ಉಳಿಸಿ ಬೆಳೆಸುವವ ರಾಗುತ್ತಾರೆ.

ದಾರಿದ್ರ್ಯ ಎಂದರೇನು?

ದರಿದ್ರ ಎಂದ ಕೂಡಲೇ ನಮಗೆ ಹೊಳೆಯುವುದು ಆರ್ಥಿಕ ಸಂಕಷ್ಟ. ಆದರೆ ಬರಿಯ ಬಡತನವು ದಾರಿದ್ರ್ಯ ಸಂಸ್ಕೃತಿಯನ್ನು ಹುಟ್ಟಿಸುವುದಿಲ್ಲ. ಬಡತನವು ಪುರಾತನ ಸಮಾಜಗಳಲ್ಲಿ, ಆದಿವಾಸಿ ಸಮಾಜಗಳಲ್ಲಿ, ಗ್ರಾಮ ಸಮಾಜಗಳಲ್ಲಿ ವ್ಯಾಪ್ತಿಯಾಗಿದ್ದುದೇ. ಆ ಸಮಾಜಗಳಲ್ಲಿ ದಾರಿದ್ರ್ಯ ಸಂಸ್ಕೃತಿ ತಲೆದೋರದಿರಲು ಕಾರಣಗಳೇನು?

ಬಡತನ ಬೇರೆ, ಆಧುನಿಕ ಕೊಳೆಗೇರಿಗಳಲ್ಲಿ ತೋರಿ ಬಂದು ವ್ಯಾಪಿಸಿರುವ ದಾರಿದ್ರ್ಯ ಸಂಸ್ಕೃತಿ ಬೇರೆ. ದಾರಿದ್ರ್ಯ ಸಂಸ್ಕೃತಿ ತಲೆಎತ್ತಲು ವಿಶಿಷ್ಟವಾದ ಐತಿ ಹಾಸಿಕ ಮತ್ತು ಸಾಮಾಜಿಕ ಸಂದರ್ಭಗಳು ಕೂಡಿಬರ ಬೇಕು.

ಆಸ್ಕರ್ ಲೆವಿಸ್ ಈ ಸಂದರ್ಭಗಳನ್ನು ಸಂಕ್ಷಿಪ್ತವಾಗಿ ಸೂಚಿಸಿದ್ದಾರೆ. ಮೊದಲನೆಯದಾಗಿ ಲಾಭಕ್ಕಾಗಿ ಉತ್ಪಾದನೆ, ಕೂಲಿಗಾಗಿ ಕೆಲಸ ಎಂಬ ವ್ಯವಸ್ಥೆ. ಹಣ ವ್ಯವಸ್ಥೆಯು ಆರ್ಥಿಕ ವ್ಯವಹಾರಗಳ ಕೇಂದ್ರವಾಗು ವುದು. ಎರಡನೆಯದಾಗಿ ಅಕುಶಲ ಕಾರ್ಮಿಕರಿಗೆ ನಿರುದ್ಯೋಗ, ಕಡಿಮೆ ಉದ್ಯೋಗಾವಕಾಶಗಳಂ ಹಾಗೂ ಕಡಿಮೆ ಕೂಲಿ. ಮೂರನೆಯದಾಗಿ ಸಾಮಾಜಿಕ, ರಾಜ ಕೀಯ ಮತ್ತು ಆರ್ಥಿಕ ವ್ಯವಸ್ಥೆಯ ಕೊರತೆ. ನಾಲ್ಕ ನೆಯದಾಗಿ ತಾಯಿ ಇಲ್ಲವೇ ತಂದೆ – ಹೀಗೆ ಒಂದು ಕಡೆ ಯಿಂದ ನಡೆದು ಬಂದ ನಂಟಸ್ತಿಕೆಗೆ ಬದಲು ಎರಡೂ ಕಡೆಯ ನಂಟಸ್ತಿಕೆಗೆ ಮಾನ್ಯತೆ. ಕೊನೆಯದಾಗಿ ಸಮಾಜದ ಮೇಲು ವರ್ಗದಲ್ಲಿರುವವರು ಹಣ ಮತ್ತು ಆಸ್ತಿ ಕೂಡಿಸಿಕೊಳ್ಳುವುದೇ ಯಶಸ್ಸು, ಎಂದು ಪರಿಗಣಿಸಿದ್ದು ಆ ಸ್ಥಾನಗಳನ್ನು ಪಡೆಯಲು ಸಾಧ್ಯತೆಗಳೂ ಇದ್ದು, ಬಡವರ ದಾರಿದ್ರ್ಯ ಅವರ ವೈಯಕ್ತಿಕ ಕುಂದುಗಳು ಇಲ್ಲವೇ ಕೀಳುಮಟ್ಟ ಕಾರಣ ಎಂದು ಒತ್ತಿ ಹೇಳುವ ಮೌಲ್ಯಪದ್ಧತಿ ಪ್ರಚಲಿತವಾಗಿರುವುದು.

ಇವೆಲ್ಲಕ್ಕಿಂತಲೂ ಮುಖ್ಯವಾದ ಕಾರಣವನ್ನು ಲೆವಿಸ್ ಅವರು ಬಡತನದಲ್ಲಿದ್ದರೂ ದಾರಿದ್ರ್ಯ ಸಂಸ್ಕೃತಿ ಬೆಳೆ ಯಲು ಅವಕಾಶವಾಗದೆ ಹೋದ ಕೆಲವು ಸಮಾಜಗಳನ್ನು ಬೆಟ್ಟುಮಾಡಿ ತೋರಿಸಿದ್ದಾರೆ. ಆದಿವಾಸಿ ಸಮಾಜಗಳು, ಭಾರತದಲ್ಲಿ ಕೆಳಜಾತಿಗಳೆಂದು ಹೆಸರಾದ ಸಮಾಜಗಳು, ಯಹೂದಿ ಸಮಾಜ, ಸಮಾಜವಾದಿ ಸಮಾಜಗಳು,–ಇತ್ಯಾದಿಗಳನ್ನು ಅವರು ಸೂಚಿಸಿದ್ದಾರೆ. ಕಾರಣಗಳೇನೇ ಇದ್ದರೂ ಇವೆಲ್ಲವೂ ಭದ್ರವಾಗಿ ವ್ಯವಸ್ಥೆ ಗೊಂಡಿರುವ ಸಮಾಜಗಳು.

ಮುರಿದುಬಿದ್ದ ಸಮಾಜ ವ್ಯವಸ್ಥೆ

ದಾರಿದ್ರ್ಯ ಸಂಸ್ಕೃತಿಯು ತಲೆ ಎತ್ತದೆ ಹೋದ ಸಮಾಜ ಗಳೆಂದು ಲೆವಿಸ್ ಅವರು ಉದಾಹರಿಸಿರುವ ಸಮಾಜಗಳಲ್ಲಿ ಎದ್ದು ತೋರುವ ಲಕ್ಷಣಗಳು ಸಮಗ್ರತೆ ಮತ್ತು ವ್ಯವಸ್ಥೆ. ಆದಿವಾಸಿ ಸಮಾಜಗಳಂ ಒಂದು ಭೌಗೋಳಿಕ ನೆಲೆಯಲ್ಲಿ ಶತಮಾನಗಳ ಕಾಲ ನೆಲೆಸಿ, ಒಂದೊಂದೂ

ತನ್ನತನವನ್ನೂ ಸಾಧಿಸಿಕೊಂಡಿರುವಂತಹವು. ಜೀವನದ ಎಲ್ಲ ಅಂಗಗಳೂ ಸಮಗ್ರವಾಗಿ ಒಂದುಗೂಡಿರುವ ಸಮಾಜಗಳು ಅವು. ಯಾವ ವ್ಯಕ್ತಿಯಾಗಲಿ, ಗುಂಪಾಗಲಿ ತನಗೆ ತೋರಿಬಂದಂತೆ ವರ್ತಿಸಲು ಅವಕಾಶವಿಲ್ಲದ ಸಮಾಜಗಳು ಅವು. ತಾವು ಪ್ರತ್ಯೇಕ ಎಂದು ಎಣಿಸಿ, ತಮ್ಮ ವಿಶಿಷ್ಟ ಪರಂಪರೆಯನ್ನು ಕುರಿತು ಹೆಮ್ಮೆ, ಅಭಿಮಾನಗಳನ್ನು ತಳೆದಿರುವ ಸಮಾಜಗಳು ಅವು.

ಹಿಂದೂ ಸಮಾಜದ ಕೆಳಜಾತಿಗಳೆಂದು ಹೇಳಲ್ಪಡುವ ಅಂಶೀಯ ಸಮಾಜಗಳು ದೊಡ್ಡದೊಂದು ಸಮಾಜದಲ್ಲಿ, ಕೀಳಾದರೂ ಒಂದು ಸ್ಥಾನ ಗಳಿಸಿವೆ. ಜಾತಿಯ ಕಟ್ಟುಗಳು ಬಲವಾಗಿವೆ. ಮಾತೃ ಕುಲೀನವಾಗಲಿ, ಪಿತೃ ಕುಲೀನವಾಗಲಿ ತನ್ನ ಆಶ್ರಯದಲ್ಲಿರುವ ವ್ಯಕ್ತಿ ಮತ್ತು ಕುಟುಂಬಗಳಿಗೆ ಆ ಕುಲದ ಬೆಂಬಲ ಉಂಟು. ಅವರುಗಳ ನಡವಳಿಕೆಗೆ ಆ ಕುಲಗಳು ಹೊಣೆ ಹೊರುತ್ತವೆ. ಜಾತಿಯ ಪಂಚಾಯಿತಿ, ಕುಲದ ಕಟ್ಟುಗಳು, ಜಾತಿಯ ಕಟ್ಟುಗಳು ಸಡಿಲವಾಗದಂತೆ ನೋಡಿಕೊಳ್ಳುತ್ತವೆ.

ಯಹೂದಿ ಸಮಾಜ ಧರ್ಮದ ಆಶ್ರಯದಲ್ಲಿ ಸಮಗ್ರತೆ ಮತ್ತು ವ್ಯವಸ್ಥೆಗಳನ್ನು ಸಾಧಿಸಿರುವ ಪುರಾತನ ಸಮಾಜ. ಈಜಿಪ್ಟ್, ಬ್ಯಾಬಿಲಾನ್ ಹಾಗೂ ಈಚೆಗೆ ನಾಜಿ ಜರ್ಮನಿ–ಈ ಸಮಾಜದ ಮೇಲೆ ಪ್ರಯೋಗಿಸಿದ ದಬ್ಬಾಳಿಕೆ, ಈ ಸಮಗ್ರತೆ ಮತ್ತು ವ್ಯವಸ್ಥೆಗಳನ್ನು ಬಲಪಡಿಸಿವೆಯೇ ಹೊರತು ಸಡಿಲಗೊಳಿಸಿಲ್ಲ. ಸಮಾಜವಾದಿ ದೇಶಗಳಲ್ಲಿ ಬಡತನವು ಶಾಪ ಎಂದು ಭಾವಿಸುವುದಕ್ಕಿಂತ, ಬಡವನಾಗಿರುವುದರಿಂದ ಹೊಸ ಸಮಾಜದ ಪರಿಕಾರ ಎಂಬ ಭಾವನೆ ಪ್ರಚಲಿತವಾಗಿ ಬಡವರ್ಗಗಳಲ್ಲಿ ಒಂದು ತನ್ನತನದ ಅರಿವು ಮೂಡಿಬಂದಿದೆ.

ಹೀಗೆ ಸಮಗ್ರತೆ, ವ್ಯವಸ್ಥೆ, ಭಾವನಾತ್ಮಕವಾದ ಒಗ್ಗಟ್ಟು–ಇವು ತೋರಿ ಬಂದಿರುವ ಸಮಾಜಗಳೊಂದಿಗೆ, ಲೆವಿಸ್ ಅವರು ದಾರಿದ್ರ್ಯ ಸಂಸ್ಕೃತಿಯನ್ನು ನಿರೂಪಿಸಲು ಆಯ್ದುಕೊಂಡಿರುವ ಕೊಳೆಗೇರಿ ಸಮಾಜವನ್ನು ಹೋಲಿಸಿದರೆ ಏನನ್ನು ಕಾಣಬಹುದು ?

ಸ್ಯಾಂಚೆಜ್ ಕುಟುಂಬದ ನೆಲೆ ಮೆಕ್ಸಿಕೊ ನಗರದ ಅಂಚಿನ ಕ್ಯಾಸಾಗ್ರಾಂದೆ ಕೊಳೆಗೇರಿ. ಅಲ್ಲಿ ವಾಸಿಸುವ ಜನ ಇಪ್ಪತ್ತು ರಾಜ್ಯಗಳಿಂದ ಬಂದವರು. ತಮ್ಮ ತಮ್ಮ ಗ್ರಾಮಗಳಲ್ಲಿ ಪರಂಪರಾಗತವಾದ ಕಟ್ಟುಪಾಡುಗಳಲ್ಲಿದ್ದ ಈ ಜನ ಒಂಟೊಂಟಿಯಾಗಿ ನಗರಕ್ಕೆ ಬಂದು ಕೊಳೆಗೇರಿಯಲ್ಲಿ ನೆಲೆಸಿದ್ದಾರೆ. ಅಲ್ಲಿ ಯಾವನು ಏನು ಮಾಡಿದರೆ ಕೇಳುವವರಾರು ? ನೆರೆಹೊರೆಯ ಪ್ರಭಾವ ಕಡಿಮೆ. ಅದು ವ್ಯವಸ್ಥಿತವಾದುದಲ್ಲ ; ಅದಕ್ಕೆ ಪರಂಪರೆಯ ಬಲವಿಲ್ಲ. ಪೋಲಿಸರ ತನಕ ಹೋಗಬಹುದಾದ ಅಪರಾಧಗಳನ್ನು ಬಿಟ್ಟರೆ, ಉಳಿದ ರೀತಿಯಲ್ಲಿ ವ್ಯಕ್ತಿಯ ಮತ್ತು ಗುಂಪಿನ ವರ್ತನೆಯ ಮೇಲೆ ಯಾವ ರೀತಿಯ ನಿಯಂತ್ರಣವೂ ಸಾಧ್ಯವಿಲ್ಲ. ತಂದೆಯು ಯಾರೋ ಅರಿಯದ ಮಕ್ಕಳು, ಆಶ್ರಯ–ರಕ್ಷಣೆಗಳನ್ನು ನೀಡದೆ ಕ್ಷಣದ ಸುಖ ಹಾಗೂ ಮಕ್ಕಳನ್ನು ನೀಡುವ ಗಂಡಸರು, ತಾನು ಇಂತಹವನ ಹೆಂಡತಿ ಎಂದು ಹೇಳಿಕೊಳ್ಳಲಾಗದ ಹೆಣ್ಣುಗಳು–ಹೀಗಾಗಿ, "ಯಾರಿಗೆ ಯಾರುಂಟೋ" ಎಂಬ ಮಾತು ಅಕ್ಷರಶಃ ಕಾರ್ಯಗತವಾಗುತ್ತದೆ.

ಅಂದರೆ ದಾರಿದ್ರ್ಯ ಸಂಸ್ಕೃತಿಯು ಹುಟ್ಟಲು ಅತಿಮುಖ್ಯ ಕಾರಣ ಸಮಗ್ರತೆ ಮತ್ತು ವ್ಯವಸ್ಥೆ ಮಂರಿದು ಬೀಳುವುದು. ಯಾವುದಾದರೂ ಒಂದು ಆಧಾರದ ಮೇಲೆ, ಪ್ರಾದೇಶಿಕ, ಜಾತಿ, ಕುಲದ ಮೇಲ್ಮೆ, ಧಾರ್ಮಿಕ ಪಂಥ ಹೀಗೆ–ಸಮಗ್ರತೆ ಮತ್ತು ವ್ಯವಸ್ಥೆಗಳನ್ನು ಸಾಧಿಸಿರುವ ಸಮಾಜಗಳು ಒಂದೆಡೆಯಿಂದ ಒಂದೆಡೆಗೆ ಚಲಿಸಿದರೂ ದಾರಿದ್ರ್ಯ ಸಂಸ್ಕೃತಿಗೆ ಗುರಿಯಾಗಲಾರವು. ಕಟ್ಟುಕಿತ್ತ ಪಂಜುಗಳಂತಾದ ಬಡಜನ, ದಾರಿದ್ರ್ಯ ಸಂಸ್ಕೃತಿಯನ್ನು ರೂಢಿಸಿಕೊಳ್ಳುತ್ತಾರೆ ; ಹಾಗೆ ರೂಢಿಸಿಕೊಳ್ಳದೆ ಅವರ ಬಾಳು ಸಾಗುವಂತಿಲ್ಲ.

ಹೊಸ ದಾರಿ – ಹೊಸ ಕಲ್ಪನೆ

ಮಾನವ ಶಾಸ್ತ್ರೀಯ ಅಧ್ಯಯನಗಳಲ್ಲಿ ಆಸ್ಕರ್ ಲೆವಿಸ್ ಅವರ ಸ್ಥಾನ ಮಹತ್ವದ್ದು. ಕುಟುಂಬಗಳನ್ನು ಅಧ್ಯಯನ ಘಟಕಗಳಾಗಿ ಪರಿಗಣಿಸಿ, ಕಾದಂಬರಿಗಳ ರೂಪದಲ್ಲಿ ಆ ಕುಟುಂಬಗಳ ಕತೆಯನ್ನು ಹೇಳಿ, ಸಮಾಜ - ಸಂಸ್ಕೃತಿ-ವ್ಯಕ್ತಿ ಈ ಎಲ್ಲದರ ಮೇಲೆ ಹೊಸ ಬೆಳಕುಬೀರಿದ್ದಾರೆ. ಅವರ ಲಾವಿಡಾ, ಸ್ಯಾಂಚೆಜನ ಮಕ್ಕಳು– ಇವು ಸಾಮಾಜಿಕ ಅಧ್ಯಯನಗಳಾಗಿ ಖ್ಯಾತಿಗಳಿಸಿರುವಂತೆ, ಕಾದಂಬರಿಗಳಾಗಿಯೂ ಖ್ಯಾತಿಗಳಿಸಿವೆ.

ದಾರಿದ್ರ್ಯ ಸಂಸ್ಕೃತಿಯನ್ನು ಅವರು ನಿರೂಪಿಸಿ, ವಿವರಿಸಿರುವ ಜಾಡನ್ನು ಹಿಡಿದು ಇತರ ಸಂಸ್ಕೃತಿಗಳನ್ನೂ, ಉಪ ಸಂಸ್ಕೃತಿಗಳನ್ನೂ ಕೂರಿತು ಆಲೋಚಿಸಿದರೆ ಹಲವಾರು ಒಳಸುಳಿಗಳನ್ನು ಅರಿತುಕೊಳ್ಳಬಹುದು. ಅವರು ಮಂಡಿಸಿರುವ ಸಿದ್ಧಾಂತಗಳನ್ನು ಆಧಾರವಾಗಿಟ್ಟು ಕೊಂಡು ಹೊಸ ಸಂಶೋಧನೆ, ಅಧ್ಯಯನಗಳಲ್ಲಿ ತೊಡಗ ಬಹುದು. ಉದಾಹರಣೆಗೆ ಭಾರತದ ಪ್ರತಿ ನಗರದಲ್ಲೂ ಹೊಸ ಹೊಸ ಕೊಳೆಗೇರಿಗಳು ತಲೆ ಎತ್ತುತ್ತಿವೆ. ಕೆಲವು ಒಂದೇ ಜಾತಿಯ ಜನದವು; ಕೆಲವು ಒಂದೇ ವೃತ್ತಿಯ ಜನದವು; ಕೆಲವು ಕಲಬೆರಕೆಯವು. ಒಂದೊಂದರಲ್ಲೂ ಸಮುದಾಯಗಳು ಸಮಗ್ರತೆ ಹಾಗೂ ವ್ಯವಸ್ಥೆಯ ದೃಷ್ಟಿಯಿಂದ ಬೇರೆ ಬೇರೆ ರೀತಿಯಲ್ಲಿ, ಬೇರೆ ಬೇರೆ ಮಟ್ಟದಲ್ಲಿ ಇರಬಹುದು.

ಬೃಹತ್ ನಗರಗಳಲ್ಲಿ ಕೊಳೆಗೇರಿಗಳನ್ನು ನಿರ್ನಾಮ ಮಾಡುವುದಂತೂ ಸಾಧ್ಯವಿಲ್ಲ. ಆದರೆ ಅವು ಅಪರಾಧಗಳ ಸ್ಥಾವರಗಳಾಗದಂತೆ, ಕಳ್ಳಭಟ್ಟಿಯ ಬೀಡಾಗದಂತೆ, ಅಲ್ಲಿನ ಬಾಳು ದಾರಿದ್ರ್ಯ ಸಂಸ್ಕೃತಿಯ ಪ್ರತಿರೂಪವಾಗದಂತೆ ಮಾಡುವುದು ಹೇಗೆ? ಸಮಗ್ರತೆ ಮತ್ತು ವ್ಯವಸ್ಥೆಗಳಿಗೆ ಧಕ್ಕೆ ಬಾರದಂತೆ ಜನವಸತಿ ಏರ್ಪಟ್ಟರೆ ಇದು ಸಾಧ್ಯವಾದೀತೋ? ಹಳೆಯ ಕಟ್ಟುಪಾಡುಗಳನ್ನೆಲ್ಲ ಮೂಲೆಗೆ ಒತ್ತಿದರೆ ಜನ ಕಟ್ಟುಕಿತ್ತ ಪಂಜುಗಳಂತೆ ಆಗಲಾರರೋ?

ಇಂತಹ ನೂರು ಸಮಸ್ಯೆಗಳಿಗೆ ಆಸ್ಕರ್ ಲೆವಿಸ್ ಅವರ ಜಾಡು ಹಿಡಿದು ಉತ್ತರ ಪಡೆಯಬಹುದು. ಆಸ್ಥೆಯಿದ್ದರೆ ಅನುಷ್ಠಾನಕ್ಕೆ ತರಬಹುದು.

ಆದರೆ, ಅಷ್ಟೊಂದು ಮಾನವೀಯ ಹೊಣೆಗಾರಿಕೆ ವಹಿಸಿಕೊಳ್ಳುವಂತಹ ವ್ಯವಸ್ಥೆಯನ್ನು ಎಲ್ಲಿಂದ ತರೋಣ? ಮಾನವೀಯ ಅನುಭೂತಿಯು ವಿದ್ವತ್ತಿನಿಂದ ದೂರ ಸರಿಯುತ್ತಿರುವ ಈ ಕಾಲದಲ್ಲಿ ಎರಡೂ ಸಮ ಪ್ರಮಾಣದಲ್ಲಿ ಬೆರೆತ ಮಹನೀಯರನ್ನು ಎಲ್ಲಿಂದ ತರೋಣ?

ಡಾ|| ಎಚ್. ಎಂ. ಮರುಳಸಿದ್ದಯ್ಯ

ಅಭಿವೃದ್ಧಿಗಿರುವ ಆತಂಕಗಳು

ದಬ್ಬಾಳಿಕೆಯ ವ್ಯವಸ್ಥೆಗಳು

ಎರಡನೆಯ ಜಾಗತಿಕ ಯುದ್ಧದ ನಂತರ ರಾಜಕೀಯ ಸ್ವಾತಂತ್ರ್ಯವನ್ನು ಪಡೆದು 'ಅನಭಿವೃದ್ಧ' ಎನ್ನಿಸಿಕೊಂಡು, ಇತ್ತೀಚೆಗೆ 'ಅಭಿವೃದ್ಧಿಶೀಲ' ಎನ್ನಿಸಿಕೊಳ್ಳುತ್ತಿರುವ ಮೂರನೆಯ ಜಗತ್ತಿನ ರಾಷ್ಟ್ರಗಳು ವಿವಿಧ ರೀತಿಯ ಸಮಸ್ಯೆಗಳಿಗೆ ಈಡಾಗಿವೆ. ಬಂಡವಾಳಶಾಹಿ ಹಾಗೂ ಸಮತಾವಾದಿ ಜಗತ್ತುಗಳ ಆಡಕೊತ್ತಿನಲ್ಲಿ ಸಿಕ್ಕು ನಂಚಿಚ್ಚಿನೂರು ಆಗುವ ಸಾಧ್ಯತೆಯನ್ನು ತಪ್ಪಿಸಿಕೊಳ್ಳಲು, ಆ ಎರಡೂ ವ್ಯವಸ್ಥೆಗಳ ಅತ್ಯುತ್ತಮ ಅಂಶಗಳ ಮಿಶ್ರಣದ ಆಹಾರವನ್ನು ತಮ್ಮ ಸಮಾಜೋ-ರಾಜಕೀಯ ಹಾಗೂ ಆರ್ಥಿಕ ಪುನರ್‌ವ್ಯವಸ್ಥೆಗಾಗಿ ಭುಂಜಿಸುತ್ತಿರುವುದು ಸರ್ವವಿದಿತ. ವ್ಯಕ್ತಿ ಪ್ರಾಮುಖ್ಯತೆಯ ಪ್ರಜಾತಂತ್ರ ಹಾಗೂ ಸರ್ವರ ಸಮಾನತೆಯ ಸಮತಾವಾದಗಳಿರಡನ್ನೂ ಆಳವಡಿಸಿಕೊಂಡು ಕ್ಷೇಮ ರಾಜ್ಯವನ್ನು ಸಂಸ್ಥಾಪಿಸಿಕೊಳ್ಳುವ ಹಂಬಲವನ್ನು ಹೊಂದಿರುವ ಈ ರಾಷ್ಟ್ರಗಳು ನಾನಾ ರೀತಿಯ ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಂಡಿವೆ. ಈ ಯೋಜನೆಗಳ ತಾತ್ತ್ವಿಕ ನೆಲೆಯನ್ನಾಗಲಿ, ಚಾರಿತ್ರಿಕ ಅವಶ್ಯಕತೆಯನ್ನಾಗಲಿ ಪ್ರಶ್ನಿಸುವಂತಿಲ್ಲ. ಆದರೆ ಅಭಿವೃದ್ಧಿ ಯೋಜನೆಗಳು ಆಯಶಸ್ವಿಯಾಗಲು ಕಾರಣಗಳನ್ನು ಹುಡುಕುವುದು, ಅವುಗಳ ಹಾದಿಯಲ್ಲಿರುವ ಆಡ್ಡಿ ಆತಂಕಗಳನ್ನು ಗುರುತಿಸುವುದು, ಆತಂಕ ನಿವಾರಣೆಯ ಮಾರ್ಗೋಪಾಯಗಳನ್ನು ಕಂಡುಹಿಡಿದು ಅವುಗಳನ್ನು ಅನುಷ್ಠಾನಗೊಳಿಸುವುದು ಅತ್ಯಗತ್ಯ.

ಈ ಲೇಖನದಲ್ಲಿ ಅಭಿವೃದ್ಧಿಗೆ ಇರುವ ಆತಂಕಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಕೂಲಂಕಷವಾಗಿ ವಸ್ತುಸ್ಥಿತಿಯನ್ನು ಪರಿಶೀಲಿಸಿದರೆ, ತೊತ್ತಳತುಳಿಯುತ್ತಿರುವ ಅಥವಾ ದಬ್ಬಾಳಿಕೆಯ ವ್ಯವಸ್ಥೆಗಳು (Systems), ಅಭಿವೃದ್ಧಿ ಕಾರ್ಯದಲ್ಲಿ ತೊಡಗಿರುವ ಮತ್ತು ಅಭಿವೃದ್ಧಿಯ ಫಲಗಳನ್ನು ಅನುಭವಿಸಲಿರುವ ಜನರೊಳಗಿನ ಒಡಕು ಹಾಗೂ ಆನಾರೋಗ್ಯಕರ ಮನೋದೃಷ್ಟಿಗಳು ಅಭಿವೃದ್ಧಿಕಾರ್ಯಗಳಿಗೆ ಇರುವ ಮುಖ್ಯ ಆತಂಕಗಳು, ಎಂದು ಮನವರಿಕೆಯಾಗಿದೆ.

ಪರಂಪರೆಯ ಚೌಕಟ್ಟು

ಮೂರನೆಯ ಜಗತ್ತಿನ ಸಮಾಜಗಳು ಸಾಮಾನ್ಯವಾಗಿ ಪುರಾತನವಾದ ಪರಂಪರಾಗತ ಸ್ತರವಿನ್ಯಾಸಗಳಿಗೆ ಹೆಸರಾಗಿವೆ. ನಮ್ಮ ವಿಷಯದ ಸ್ಪಷ್ಟವಾದ ನಿರೂಪಣೆಗೆ ಭಾರತದ ಸಮಾಜವನ್ನು ಉದಾಹರಣೆಗಾಗಿ ತೆಗೆದುಕೊಳ್ಳಬಹುದು. ಇದನ್ನು ನಾಲ್ಕು ವ್ಯವಸ್ಥೆಗಳನ್ನಾಗಿ ವಿಂಗಡಿಸಬಹುದು. ಸಾಮಾಜಿಕ (Social), ಆರ್ಥಿಕ (Economic), ಕರಣಿಕ ಪ್ರಭುತ್ವ ಅಥವಾ ನೌಕರಶಾಹಿ (Bureaucracy) ಮತ್ತು ರಾಜಕೀಯ (Political). ಈ ನಾಲ್ಕೂ ವ್ಯವಸ್ಥೆಗಳು ಪರಸ್ಪರವಾಗಿ ಸ್ತರವಿನ್ಯಾಸಗೊಂಡಿವೆ. ಅಂದರೆ, ಇವು ಏಣಿ ಶ್ರೇಣಿಗತಗೊಂಡು ಒಂದರ ಮೇಲೆ ಒಂದು ಇಲ್ಲವೆ ಒಂದರ ಕೆಳಗೆ ಇನ್ನೊಂದು ಹೆಣೆದುಕೊಂಡಿವೆ. ಮೇಲೆ ನಮೂದಿಸಿದ ಕ್ರಮದಲ್ಲಿಯೇ ಹೇಳುವುದಾದರೆ, ರಾಜಕೀಯ ವ್ಯವಸ್ಥೆಯು ತೀರಾ ಕೆಳಗೆ ನಾಲ್ಕನೆಯ ಸ್ಥಾನವನ್ನು ಪಡೆದಿದ್ದರೆ ಸಾಮಾಜಿಕ ವ್ಯವಸ್ಥೆಯು ಎಲ್ಲ ವ್ಯವಸ್ಥೆಗಳ ಅಧಿಪತಿಯಾಗಿ ವಿಜೃಂಭಿಸುತ್ತಿದೆ. ಈ ಎರಡರ ನಡುವೆ ಕ್ರಮಾನುಗತವಾಗಿ ಆರ್ಥಿಕ ವ್ಯವಸ್ಥೆ ಮತ್ತು ಕರಣಿಕ ಪ್ರಭುತ್ವ ಕ್ರಿಯಾತ್ಮಕವಾಗಿವೆ.

ಆದರೆ, ಸಮಾಜವನ್ನು ಹೀಗೆ ನಾಲ್ಕು ವ್ಯವಸ್ಥೆಗಳಾಗಿ ಮತ್ತು ಅವುಗಳನ್ನು ಅನನ್ಯ ಘಟಕಗಳೆಂದು ವಿಂಗಡಿಸುವುದು ಸರಿಯಲ್ಲ. ಯಾಕೆಂದರೆ, ಸಮಾಜವು ಈ ವ್ಯವಸ್ಥೆಗಳೆಲ್ಲವನ್ನೂ ಒಳಗೊಂಡಿರುವುದರ ಜೊತೆಗೆ ಪ್ರತಿಯೊಂದು ವ್ಯವಸ್ಥೆಯಲ್ಲೂ ಇತರ ಮೂರೂ ವ್ಯವಸ್ಥೆಗಳ

ಗುಣಾಂಶಗಳ ಸೇರ್ಪಡೆಯಾಗಿರುತ್ತದೆ. ಎಲ್ಲ ವ್ಯವಸ್ಥೆಗಳೂ ಒಂದಕ್ಕೊಂದು ಕಾರಣ-ಪರಿಣಾಮಗಳ ಪ್ರಕ್ರಿಯೆಗೆ ಒಳಗಾಗಿರುತ್ತವೆ. ಆದರೂ ವಿಷಯವನ್ನು ವಿವರವಾಗಿ ಅರ್ಥಮಾಡಿಕೊಳ್ಳಲೂ, ಪ್ರತಿಯೊಂದು ಪ್ರಮುಖ ಅಂಶವನ್ನು ಸರಿಯಾಗಿ ತಿಳಿದುಕೊಳ್ಳಲೂ ಇಂತಹ ವಿಂಗಡನೆ ಅಗತ್ಯವೆನಿಸುತ್ತದೆ.

ಎರಡನೆಯದಾಗಿ, ಈ ರೀತಿಯಲ್ಲಿ ಈ ನಾಲ್ಕರ ಸ್ಥಾನ ನಿರ್ದೇಶನ ಮಾಡಿದ್ದುದನ್ನೂ ಪ್ರಶ್ನಿಸಬಹುದು. ಯಾಕೆಂದರೆ, ಸಾಮಾಜಿಕ ವ್ಯವಸ್ಥೆಯು ವ್ಯಾಪಕ (Inclusive) ಪರಿಕಲ್ಪನೆಯಾಗಿರುವುದಲ್ಲದೆ ಪ್ರತ್ಯೇಕವಾದದ್ದಲ್ಲ (Exclusive). ಅಂದರೆ, ಇತರ ಮೂರೂ ವ್ಯವಸ್ಥೆಗಳು ಇದರಲ್ಲಿ ಸಮಾವೇಶವಾಗಿವೆ. ಆಲ್ಲದೆ, ಆ ಮೂರೂ ಸಾಮಾಜಿಕ ವ್ಯವಸ್ಥೆಯ ಪ್ರಮುಖ ಅಂಶಗಳನ್ನು ಅಂತರ್ಗತ ಮಾಡಿಕೊಂಡು ಅದರ ಮೂಲ ರೂಪವನ್ನು ಪ್ರತಿಫಲಿಸುತ್ತವೆ. ಆದುದರಿಂದ ಆ ಮೂರನ್ನೂ ಸಾಮಾಜಿಕ ವ್ಯವಸ್ಥೆಯಿಂದ ಪ್ರತ್ಯೇಕಿಸಿ, ಅವುಗಳನ್ನು ಸ್ತರಗತಗೊಳಿಸುವುದು ಸಮಂಜಸವೆನಿಸುವುದಿಲ್ಲ. ಹಲವೊಮ್ಮೆ ರಾಜಕೀಯ ವ್ಯವಸ್ಥೆಯೇ ಇತರ ಮೂರೂ ವ್ಯವಸ್ಥೆಗಳನ್ನು ತನ್ನ ಅಡಿಯಲ್ಲಿ ಇರಿಸಿಕೊಂಡು ಆಳ್ವಿಕೆ ನಡೆಸುತ್ತದೆಯೇನೊ ಎಂಬ ಭ್ರಮೆಯಾಗುವ ಸಾಧ್ಯತೆಯೂ ಇದೆ. ಆದರೆ ವಾಸ್ತವ ಸ್ಥಿತಿಯನ್ನು ಕೂಲಂಕಷವಾಗಿ ಪರಿಶೀಲಿಸಿದರೆ, ರಾಜಕೀಯ ವ್ಯವಸ್ಥೆಯು ನಾಲ್ಕನೆಯ ಸ್ಥಾನವನ್ನು ಪಡೆದಿರುವುದು ವಿದಿತವಾಗುತ್ತದೆ.

ಸಾಮಾಜಿಕ ವ್ಯವಸ್ಥೆಗೆ ಇರುವಷ್ಟು ಚಾರಿತ್ರಿಕ ಹಿನ್ನೆಲೆಯಾಗಲಿ ವ್ಯಾಪ್ತಿಯಾಗಲಿ ಉಳಿದ ಮೂರು ವ್ಯವಸ್ಥೆಗಳಿಗೆ ಇರುವುದಿಲ್ಲ. ಕಾಲದ ದೃಷ್ಟಿಯಿಂದ ಸಾಮಾಜಿಕ ವ್ಯವಸ್ಥೆಗೆ ಸಹಸ್ರಾರು ವರ್ಷಗಳ ಇತಿಹಾಸವಿದೆ. ಇದರ ನಂತರದ್ದೇ ಆರ್ಥಿಕ ವ್ಯವಸ್ಥೆ. ಒಂದು ದೃಷ್ಟಿಯಿಂದ ಇದಕ್ಕೂ ದೀರ್ಘ ಹಿನ್ನೆಲೆಯಿದೆ. ಆದರೆ ಆಧುನಿಕ ಆರ್ಥಿಕತೆಯ ಆವಿರ್ಭಾವ ಆದದ್ದು ಪಾಶ್ಚಾತ್ಯರ ಪ್ರವೇಶ, ಔದ್ಯೋಗಿಕರಣ ಮತ್ತು ಬಂಡವಾಳಶಾಹಿಯ ಹಬ್ಬುವಿಕೆಯಿಂದ. ಪಾಶ್ಚಾತ್ಯರು, ಆದರಲ್ಲೂ ಆಂಗ್ಲರು ರಾಜ್ಯಭಾರ ತೊಡಗುವ ಮೊದಲು ಆರ್ಥಿಕ ಕ್ಷೇತ್ರದಲ್ಲಿ ಕಾಲಿಟ್ಟಿದುದೂ, ಆ ಕ್ಷೇತ್ರವನ್ನು ಕ್ರಾಂತಿಗೊಳಿಸಿದುದೂ ನವೀನ ಆರ್ಥಿಕ ನೆಲೆಯನ್ನು ಸೃಷ್ಟಿಸಿದುದೂ ಸರ್ವ ವಿದಿತ.

ನಿಧಾನವಾಗಿ ರಾಜಕೀಯದಲ್ಲಿ ಪ್ರವೇಶಿಸತೊಡಗಿದ ಪಾಶ್ಚಾತ್ಯರು ತಮಗೆ ಸೂಕ್ತವಾದ ಉಪಕರಣವನ್ನು ರಚಿಸಿಕೊಂಡು ರಾಜಕೀಯ ಸ್ಥಿರತೆಯನ್ನು ಸಾಧ್ಯಗೊಳಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಅವರು ರಚಿಸಿಕೊಂಡು ದೃಢಗೊಳಿಸಿದ ಉಪಕರಣವೇ ಕರಣಿಕಪ್ರಭುತ್ವ. ರಾಜಕೀಯ ಚಟುವಟಿಕೆಗಳಿಗೆ, ಆರ್ಥಿಕ ಕ್ರಮಗಳಿಗೆ, ಕ್ರೈಸ್ತ ಮಿಶನರಿಗಳ ವ್ಯಾಪಕ ಕಾರ್ಯಗಳಿಗೆ ಕರಣಿಕಪ್ರಭುತ್ವವು ಹಿತವಾದ, ಆರಕ್ಷಕ ನೆಲೆಯನ್ನು ಒದಗಿಸಿಕೊಟ್ಟಿತು. ಕಾಲಾನಂತರದಲ್ಲಿ ಅದು ಸ್ಥಿರಗೊಂಡು, ಅಸ್ಥಿಗತವಾಗಿ ಗಟ್ಟಿಗೊಂಡು ಸ್ವಾತಂತ್ರ್ಯಾನಂತರದಲ್ಲೂ ಅನಿವಾರ್ಯ ವ್ಯವಸ್ಥೆಯಾಗಿ ಉಳಿದುಕೊಂಡು ಬಂದಿತು; ನವೀನ ಆಳರಸರಿಗೆ ಊರುಗೋಲಾಯಿತು. ರಾಜಕೀಯ ವ್ಯವಸ್ಥೆಯು ಹೊರಗಿನದೂ ಮೇಲಣ ಮೇಲಿನದೂ ಆಗಿದ್ದರೆ ಕರಣಿಕ ಪ್ರಭುತ್ವವು ಒಳಗಿನದೂ ಆಳವಾಳದ್ದೂ ಆಗಿ ಬೇರುಬಿಟ್ಟುಕೊಂಡಿತು. ನಿಯಮಾವಳಿಗಳ, ನೀತಿ ಸಂಹಿತೆಯ ಭದ್ರ ಕವಚವನ್ನು ತೊಟ್ಟು ಭೀಮಬಲವನ್ನು ಅದು ಬೆಳೆಸಿಕೊಂಡಿತು.

ಪರದೇಶದ ಆಳರಸರು ಹೋಗಿ ಸ್ವದೇಶಿ ಆಳರಸರು ಬಂದಾಗ ಆದದ್ದು ಒಂದು ದೃಷ್ಟಿಯಲ್ಲಿ ಬಣ್ಣಗಳ ಬದಲಾವಣೆ; ಬಿಳಿ ಬಣ್ಣದ ಸ್ಥಾನವನ್ನು ಕಂದು ಬಣ್ಣವು ಆಕ್ರಮಿಸಿಕೊಂಡಿತು. ಆದರೂ ಆಗಿನ ರಾಜಕೀಯ ವ್ಯವಸ್ಥೆಯು ನವೀನ ರಾಜಕೀಯ ವ್ಯವಸ್ಥೆಗೆ ಎಡೆಮಾಡಿಕೊಟ್ಟಿತು, ಎಂಬುದನ್ನೂ ನಾವು ಗಮನಿಸಬೇಕು. ಒಂದು ಗುಂಪಿನ ಕೈಯಲ್ಲಿನ ಅಧಿಕಾರ ಸಾರ್ವಜನಿಕರ ಸ್ವತ್ತಾಗಿ ಹರಡಿಕೊಂಡಿತು ಎಂಬ ಭ್ರಮೆಯಿಂತೂ ಹಬ್ಬಿ ಹರಡಿತು.

ನಾವು ಬಹು ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿಯ ವಾಸ್ತವತೆ. ಅಭಿವೃದ್ಧಗೊಂಡ ರಾಷ್ಟ್ರಗಳು ಅರ್ವಾಚೀನ ಸಮಾಜಗಳಿಗೆ ಮತ್ತು ಹಳೆಯ ರಾಜ್ಯಪದ್ಧತಿಗೆ ಹೆಸರಾಗಿರುವಂತೆ ಅಭಿವೃದ್ಧಶೀಲ ರಾಷ್ಟ್ರಗಳು ಪ್ರಾಚೀನ ಸಮಾಜಗಳಿಗೆ ಮತ್ತು ನವೀನ ರಾಜ್ಯಪದ್ಧತಿಗೆ ಹೆಸರಾಗಿವೆ. ಇಲ್ಲಿನ ರಾಜಕೀಯ ವ್ಯವಸ್ಥೆಗೆ ದೀರ್ಘ

ಗುಣಾಂಶಗಳ ಸೇರ್ಪಡೆಯಾಗಿರುತ್ತದೆ. ಎಲ್ಲ ವ್ಯವಸ್ಥೆಗಳೂ ಒಂದಕ್ಕೊಂದು ಕಾರಣ-ಪರಿಣಾಮಗಳ ಪ್ರಕ್ರಿಯೆಗೆ ಒಳಗಾಗಿರುತ್ತವೆ. ಆದರೂ ವಿಷಯವನ್ನು ವಿವರವಾಗಿ ಅರ್ಥಮಾಡಿಕೊಳ್ಳಲೂ, ಪ್ರತಿಯೊಂದು ಪ್ರಮುಖ ಅಂಶವನ್ನು ಸರಿಯಾಗಿ ತಿಳಿದುಕೊಳ್ಳಲೂ ಇಂತಹ ವಿಂಗಡನೆ ಅಗತ್ಯವೆನಿಸುತ್ತದೆ.

ಎರಡನೆಯದಾಗಿ, ಈ ರೀತಿಯಲ್ಲಿ ಈ ನಾಲ್ಕರ ಸ್ಥಾನ ನಿರ್ದೇಶನ ಮಾಡಿದ್ದುದನ್ನೂ ಪ್ರಶ್ನಿಸಬಹುದು. ಯಾಕೆಂದರೆ, ಸಾಮಾಜಿಕ ವ್ಯವಸ್ಥೆಯು ವ್ಯಾಪಕ (Inclusive) ಪರಿಕಲ್ಪನೆಯಾಗಿರುವುದಲ್ಲದೆ ಪ್ರತ್ಯೇಕವಾದದ್ದಲ್ಲ (Exclusive). ಅಂದರೆ, ಇತರ ಮೂರೂ ವ್ಯವಸ್ಥೆಗಳು ಇದರಲ್ಲಿ ಸಮಾವೇಶವಾಗಿವೆ. ಆಲ್ಲದೆ, ಆ ಮೂರೂ ಸಾಮಾಜಿಕ ವ್ಯವಸ್ಥೆಯ ಪ್ರಮುಖ ಅಂಶಗಳನ್ನು ಅಂತರ್ಗತ ಮಾಡಿಕೊಂಡು ಅದರ ಮೂಲ ರೂಪವನ್ನು ಪ್ರತಿಫಲಿಸುತ್ತವೆ. ಆದುದರಿಂದ ಆ ಮೂರನ್ನೂ ಸಾಮಾಜಿಕ ವ್ಯವಸ್ಥೆಯಿಂದ ಪ್ರತ್ಯೇಕಿಸಿ, ಅವುಗಳನ್ನು ಸ್ತರಗತಗೊಳಿಸುವುದು ಸಮಂಜಸವೆನಿಸುವುದಿಲ್ಲ. ಹಲವೊಮ್ಮೆ ರಾಜಕೀಯ ವ್ಯವಸ್ಥೆಯೇ ಇತರ ಮೂರೂ ವ್ಯವಸ್ಥೆಗಳನ್ನು ತನ್ನ ಅಡಿಯಲ್ಲಿ ಇರಿಸಿಕೊಂಡು ಆಳ್ವಿಕೆ ನಡೆಸುತ್ತದೆಯೇನೊ ಎಂಬ ಭ್ರಮೆಯಾಗುವ ಸಾಧ್ಯತೆಯೂ ಇದೆ. ಆದರೆ ವಾಸ್ತವ ಸ್ಥಿತಿಯನ್ನು ಕೂಲಂಕಷವಾಗಿ ಪರಿಶೀಲಿಸಿದರೆ, ರಾಜಕೀಯ ವ್ಯವಸ್ಥೆಯು ನಾಲ್ಕನೆಯ ಸ್ಥಾನವನ್ನು ಪಡೆದಿರುವುದು ವಿದಿತವಾಗುತ್ತದೆ.

ಸಾಮಾಜಿಕ ವ್ಯವಸ್ಥೆಗೆ ಇರುವಷ್ಟು ಚಾರಿತ್ರಿಕ ಹಿನ್ನೆಲೆಯಾಗಲಿ ವ್ಯಾಪ್ತಿಯಾಗಲಿ ಉಳಿದ ಮೂರು ವ್ಯವಸ್ಥೆಗಳಿಗೆ ಇರುವುದಿಲ್ಲ. ಕಾಲದ ದೃಷ್ಟಿಯಿಂದ ಸಾಮಾಜಿಕ ವ್ಯವಸ್ಥೆಗೆ ಸಹಸ್ರಾರು ವರ್ಷಗಳ ಇತಿಹಾಸವಿದೆ. ಇದರ ನಂತರದ್ದೇ ಆರ್ಥಿಕ ವ್ಯವಸ್ಥೆ. ಒಂದು ದೃಷ್ಟಿಯಿಂದ ಇದಕ್ಕೂ ದೀರ್ಘ ಹಿನ್ನೆಲೆಯಿದೆ. ಆದರೆ ಆಧುನಿಕ ಆರ್ಥಿಕತೆಯ ಆವಿರ್ಭಾವ ಆದದ್ದು ಪಾಶ್ಚಾತ್ಯರ ಪ್ರವೇಶ, ಔದ್ಯೋಗಿಕರಣ ಮತ್ತು ಬಂಡವಾಳಶಾಹಿಯ ಹಬ್ಬುವಿಕೆಯಿಂದ. ಪಾಶ್ಚಾತ್ಯರು, ಆದರಲ್ಲೂ ಆಂಗ್ಲರು ರಾಜ್ಯಭಾರ ತೊಡಗುವ ಮೊದಲು ಆರ್ಥಿಕ ಕ್ಷೇತ್ರದಲ್ಲಿ ಕಾಲಿಟ್ಟಿದುದೂ, ಆ ಕ್ಷೇತ್ರವನ್ನು ಕ್ರಾಂತಿಗೊಳಿಸಿದುದೂ ನವೀನ ಆರ್ಥಿಕ ನೆಲೆಯನ್ನು ಸೃಷ್ಟಿಸಿದುದೂ ಸರ್ವ ವಿದಿತ.

ನಿಧಾನವಾಗಿ ರಾಜಕೀಯದಲ್ಲಿ ಪ್ರವೇಶಿಸತೊಡಗಿದ ಪಾಶ್ಚಾತ್ಯರು ತಮಗೆ ಸೂಕ್ತವಾದ ಉಪಕರಣವನ್ನು ರಚಿಸಿಕೊಂಡು ರಾಜಕೀಯ ಸ್ಥಿರತೆಯನ್ನು ಸಾಧ್ಯಗೊಳಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಅವರು ರಚಿಸಿಕೊಂಡು ದೃಢಗೊಳಿಸಿದ ಉಪಕರಣವೇ ಕರಣಿಕಪ್ರಭುತ್ವ. ರಾಜಕೀಯ ಚಟುವಟಿಕೆಗಳಿಗೆ, ಆರ್ಥಿಕ ಕ್ರಮಗಳಿಗೆ, ಕ್ರೈಸ್ತ ಮಿಶನರಿಗಳ ವ್ಯಾಪಕ ಕಾರ್ಯಗಳಿಗೆ ಕರಣಿಕಪ್ರಭುತ್ವವು ಹಿತವಾದ, ಆರಕ್ಷಕ ನೆಲೆಯನ್ನು ಒದಗಿಸಿಕೊಟ್ಟಿತು. ಕಾಲಾನಂತರದಲ್ಲಿ ಅದು ಸ್ಥಿರಗೊಂಡು, ಅಸ್ಥಿಗತವಾಗಿ ಗಟ್ಟಿಗೊಂಡು ಸ್ವಾತಂತ್ರ್ಯಾನಂತರದಲ್ಲೂ ಅನಿವಾರ್ಯ ವ್ಯವಸ್ಥೆಯಾಗಿ ಉಳಿದುಕೊಂಡು ಬಂದಿತು; ನವೀನ ಆಳರಸರಿಗೆ ಊರುಗೋಲಾಯಿತು. ರಾಜಕೀಯ ವ್ಯವಸ್ಥೆಯು ಹೊರಗಿನದೂ ಮೇಲಣ ಮೇಲಿನದೂ ಆಗಿದ್ದರೆ ಕರಣಿಕ ಪ್ರಭುತ್ವವು ಒಳಗಿನದೂ ಆಳವಾಳದ್ದೂ ಆಗಿ ಬೇರುಬಿಟ್ಟುಕೊಂಡಿತು. ನಿಯಮಾವಳಿಗಳ, ನೀತಿ ಸಂಹಿತೆಯ ಭದ್ರ ಕವಚವನ್ನು ತೊಟ್ಟು ಭೀಮಬಲವನ್ನು ಅದು ಬೆಳೆಸಿಕೊಂಡಿತು.

ಪರದೇಶದ ಆಳರಸರು ಹೋಗಿ ಸ್ವದೇಶಿ ಆಳರಸರು ಬಂದಾಗ ಆದದ್ದು ಒಂದು ದೃಷ್ಟಿಯಲ್ಲಿ ಬಣ್ಣಗಳ ಬದಲಾವಣೆ; ಬಿಳಿ ಬಣ್ಣದ ಸ್ಥಾನವನ್ನು ಕಂದು ಬಣ್ಣವು ಆಕ್ರಮಿಸಿಕೊಂಡಿತು. ಆದರೂ ಆಗಿನ ರಾಜಕೀಯ ವ್ಯವಸ್ಥೆಯು ನವೀನ ರಾಜಕೀಯ ವ್ಯವಸ್ಥೆಗೆ ಎಡೆಮಾಡಿಕೊಟ್ಟಿತು, ಎಂಬುದನ್ನೂ ನಾವು ಗಮನಿಸಬೇಕು. ಒಂದು ಗುಂಪಿನ ಕೈಯಲ್ಲಿನ ಅಧಿಕಾರ ಸಾರ್ವಜನಿಕರ ಸ್ವತ್ತಾಗಿ ಹರಡಿಕೊಂಡಿತು ಎಂಬ ಭ್ರಮೆಯಿಂತೂ ಹಬ್ಬಿ ಹರಡಿತು.

ನಾವು ಬಹು ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿಯ ವಾಸ್ತವತೆ. ಅಭಿವೃದ್ಧಗೊಂಡ ರಾಷ್ಟ್ರಗಳು ಅರ್ವಾಚೀನ ಸಮಾಜಗಳಿಗೆ ಮತ್ತು ಹಳೆಯ ರಾಜ್ಯಪದ್ಧತಿಗೆ ಹೆಸರಾಗಿರುವಂತೆ ಅಭಿವೃದ್ಧಶೀಲ ರಾಷ್ಟ್ರಗಳು ಪ್ರಾಚೀನ ಸಮಾಜಗಳಿಗೆ ಮತ್ತು ನವೀನ ರಾಜ್ಯಪದ್ಧತಿಗೆ ಹೆಸರಾಗಿವೆ. ಇಲ್ಲಿನ ರಾಜಕೀಯ ವ್ಯವಸ್ಥೆಗೆ ದೀರ್ಘ

ತ್ರಿಕವಾಗುತ್ತಿರುವುದೂ ನಿಜ.ಆದರೂ ಪ್ರಜಾತಂತ್ರಾತ್ಮಕ ರಾಜಕೀಯವು ಸಮಾನತೆಯನ್ನು ತರದೆ ಸ್ತರಗಳನ್ನು ಸೃಜಿಸಿತು. ಪಕ್ಷ ರಾಜಕೀಯವು ಇದಕ್ಕೆ ರಕ್ತಮಾಂಸ ವನ್ನಿತ್ತಿತು. ರಾಜಕೀಯ ಶಕ್ತಿಯನ್ನು ಕೇಂದ್ರೀಕರಿಸಿ ಕೊಂಡಿರುವ ಧ್ಯೇಯ-ಧೋರಣೆಯ ರೂವಾರಿಗಳೂ, ಇತರ ರಾಜಕೀಯ ವ್ಯಕ್ತಿಗಳ ನಿರ್ಮಾಪಕರೂ, ರಾಜ ಕೀಯ ಕಾರ್ಯಕ್ರಮಗಳ ನಿರ್ದೇಶಕರೂ ಅತ್ಯುನ್ನತ ಸ್ತರ ದಲ್ಲಿರುತ್ತಾರೆ. ಇವರ ಕೆಳಗಿನವರೇ ಶಾಸನ ಸಭೆಗಳ ಸದಸ್ಯರು. ಮೂರನೆಯ ವರ್ಗಕ್ಕೆ ಸೇರಿದವರು ಸಾಮಾನ್ಯ ರಾಜಕೀಯ ಕಾರ್ಯಕರ್ತರು, ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಅಧಿಕಾರಸ್ಥಾನದಲ್ಲಿರುವವರು, ಕೊನೆಯ ವರ್ಗಕ್ಕೆಸೇರಿರುವವರೇ ಮತದಾರರು. ಬಹುಶಃ ರಾಜಕೀಯ ಶಕ್ತಿಯು ಏನೆಂದು ತಿಳಿಯದ, ತಿಳಿದಿದ್ದರೂ ಇದರಲ್ಲಿ ನಿರಾಸಕ್ತರಾಗಿರುವವರೇ ಪಂಚಮ ವರ್ಗದ ಅಸ್ಪೃಶ್ಯರು. ಈ ವಿವಿಧ ವರ್ಗಗಳು ಪರಸ್ಪರವಾಗಿ ಅಂಕೆ-ಅಧೀನ ಸೂತ್ರಗಳಿಗೆ ಅನುಗುಣವಾಗಿ ನಡೆದು ಕೊಳ್ಳುತ್ತವೆ. ಅಧಿಕಾರವು ಕೇಂದ್ರೀಕೃತವಾಗುತ್ತಾ ಸಾಗುತ್ತಿದೆ. ಆದರೂ ಒಟ್ಟಿನಲ್ಲಿ, ಇಡಿಯಾಗಿ ಹಾಗೂ ಪ್ರತ್ಯೇಕವಾಗಿ ಕರಣಿಕ ಪ್ರಭುತ್ವವು ರಾಜಕೀಯ ವ್ಯವಸ್ಥೆ ಯನ್ನು ತನ್ನ ಅಂಕೆಯಲ್ಲಿ ಇರಿಸಿಕೊಂಡಿದೆ. ರಾಜ್ಯದ ಮುಖ್ಯಮಂತ್ರಿಗಿಂತ ಕಛೇರಿಯಲ್ಲಿನ ಎರಡನೆ ದರ್ಜೆಯ ಗುಮಾಸ್ತನಿಗೆ ಹೆಚ್ಚಿನ ಶಕ್ತಿ ಇರುತ್ತದೆ ಎಂದರೆ ಅಶ್ಚರ್ಯಪಡಬೇಕಾದದ್ದೇನೂ ಇಲ್ಲ.

ಗೊಂದಲಗೊಂಡ ವ್ಯವಸ್ಥೆಗಳು

ಈ ನಾಲ್ಕೂ ವ್ಯವಸ್ಥೆಗಳು ಒಂದರೊಳಗೊಂದು ಬೆರೆತು ಕೊಂಡು ಸಾಮಾಜಿಕ ವ್ಯವಸ್ಥೆಯ ಮೂಲ ಅಂಶ ಗಳನ್ನು ಪ್ರತಿಫಲಿಸಿಕೊಂಡು ಪಾರಸ್ಪರಿಕವಾಗಿ ಕಾರಣ-ಪರಿಣಾಮಗಳ ಪ್ರಕ್ರಿಯೆಗೆ ಒಳಗಾಗಿವೆ. ಸ್ತರವಿನ್ಯಾಸವೇ ದಟ್ಟವಾದ ಅನಿವಾರ್ಯ ಮೂಲದ್ರವ್ಯವಾಗಿರುವುದ ರಿಂದ ಈ ನಾಲ್ಕೂ ವ್ಯವಸ್ಥೆಗಳಲ್ಲಿನ ಒಳಪದರುಗಳು ಸ್ತರ ವಿನ್ಯಸ್ಥಗೊಂಡು ಒಂದರ ಮೇಲೊಂದು ಅಥವಾ ಒಂದರ ಕೆಳಗೊಂದು ಅಧಿಕಾರ ಅಧೀನತೆಯ ವಿಕಾರಕ್ಕೊಳಗಾಗಿವೆ

ಸ್ತರ ವಿನ್ಯಾಸವು ಪರಂಪರೆಯು ಲಕ್ಷಣವಾಗಿರುವುದು ಸಹಜವಾದುದಾದರೂ ನವೀನ ಸಂಚಲನಾತ್ಮಕ ಶಕ್ತಿಗಳು ಹುರಿಗೊಂಡು ಪ್ರವೇಶಿಸಿ ಅಲ್ಲಿ ಗೊಂದಲವನ್ನುಂಟು ಮಾಡುತ್ತಲಿವೆ. ಇದರಿಂದಾಗಿ ವ್ಯಕ್ತಿ-ವ್ಯಕ್ತಿಗಳೊಳಗೆ ವ್ಯಕ್ತಿ–ಗುಂಪುಗಳೊಳಗೆ, ಸ್ತರ-ಸ್ತರಗಳೊಳಗೆ, ವ್ಯವಸ್ಥೆ - ವ್ಯವಸ್ಥೆಗಳೊಳಗೆ ಘರ್ಷಣೆ ಉಂಟಾಗಿ ಪರಮೋದ್ದೇಶ ಗಳು ಸ್ಪಷ್ಟವಾಗಿ ಮೂಡದೆ ಗೋಜಲುಗೋಜಲಾಗಿ ಛಿದ್ರಗೊಂಡಿವೆ.

ಮೇಜಿನ ಸಂಗತಿಯೆಂದರೆ, ಎಲ್ಲ ವ್ಯವಸ್ಥೆಗಳ ಸ್ತರಗಳು ತಮ್ಮ ತಮ್ಮ ಸ್ಥಾನ ಸಂಖ್ಯೆಗಳಿಗೆ ಅನುಗುಣವಾಗಿ ಒಗ್ಗೂಡುತ್ತಲಿವೆ. ಉದಾಹರಣೆಗೆ, ಎಲ್ಲಾ ವ್ಯವಸ್ಥೆ ಗಳ ವೇಲ್‌ರಸ್ತೆಗಳು ಒಗ್ಗೂಡಿ ತಮ್ಮ ಸಹಜ ಶಕ್ತಿ ಗಳನ್ನು ಕ್ರೋಢೀಕರಿಸಿಕೊಂಡು ಇತರ ಸ್ತರಗಳ ಅನು ಕ್ರಮವಾದ ಒಗ್ಗೂಡುವಿಕೆಗೆ, ಕ್ರೋಢೀಕರಣಕ್ಕೆ ಅನುವು ಮಾಡಿಕೊಡುತ್ತಲಿವೆ. ಆದರೂ ತೀರಾ ಕೆಳಸ್ತರಗಳು ಪರಸ್ಪರವಾದ ಸಂವಹನ ಶಕ್ತಿಯನ್ನು ಅಷ್ಟಾಗಿ ಪಡೆದಿರ ದಿರುವುದರಿಂದ ಅವುಗಳ ಕ್ರೋಢೀಕರಣಕ್ಕೆ, ಸಂಯೋಜನೆಗೆ, ಸದೃಢೀಕರಣಕ್ಕೆ ಅವಕಾಶವಾಗುತ್ತ ಲಿಲ್ಲ. ಹಳೆಯ ಇತ್ಯಾತ್ಮಕ ಗುಣಗಳು ತಮ್ಮ ಹೊಗರು ಹೊಳಪುಗಳನ್ನು ಕಳೆದುಕೊಂಡು ನಿರ್ಲಕ್ಷ್ಯ-ಪರಾಙ್ಮುಖತೆ ಗಳಿಗೆ ಎಡೆಮಾಡಿಕೊಡುತ್ತಲಿರುವುದರಿಂದ ಗೊಂದಲ ಪರಿಸ್ಥಿತಿಗೆ ವಿಕಾರ ಸ್ವರೂಪದ ರಾಜನಿಕತೆಯು ಸಮೀ ಕರಣಗೊಳ್ಳುತ್ತಲಿದೆ.

ಒಡೆದ ಮನೆ

ಸ್ತರಗತಗೊಂಡ ಜನಪದಕ್ಕೆ ಅಭಿವೃದ್ಧಿ ಯೋಜನೆಯು ಪ್ರವೇಶಗೊಂಡಂದಿನಿಂದ ನವೀನ ಆಯಾಮ ದೊರೆ ಕೊಂಡಿತು. ಸಮಾಜ ಕಲ್ಯಾಣ-ಸಾಮಾಜಿಕ ಅಭ್ಯು ದಯಗಳನ್ನು ಮನದಲ್ಲಿರಿಸಿಕೊಂಡು ಇಡಿಯ ಜನರನ್ನು ಮುಖ್ಯವಾಗಿ ಮೂರು ಗುಂಪುಗಳನ್ನಾಗಿ ವಿಭಾಗಿಸ ಬಹುದು. ಸಾಮಾಜಿಕ ಕ್ಷೇಮ ಇತ್ಯಾದಿಗಳಲ್ಲಿ ತೊಡ ಗಿರುವ ಸರಕಾರದ ಸಿಬ್ಬಂದಿ ಮತ್ತು ಖಾಸಗಿ (ಅಂದರೆ ಸ್ವಯಂಸೇವಕ) ವಲಯದ ಕಾರ್ಯಕರ್ತರು ಹಾಗೂ ಸೇವೆಗಳನ್ನು ಸ್ವೀಕರಿಸಲಿರುವ ಅರ್ಥಿಗಳು (clients or beneficiaries). ವ್ಯಕ್ತಿ ಹಾಗೂ ಸಮಾಜದ ಅಭಿವೃದ್ಧಿ ಗೆಂದು ಕಾರ್ಯಕ್ರಮಗಳನ್ನು ಹಮ್ಮಿಕೊಂಡ ಸರಕಾರವು ಯೋಜನೆ-ಪ್ರಾಯೋಜನೆಗಳ ಅನುಷ್ಠಾನ ಕ್ಕೆಂದು ವಿವಿಧ ತೆರನ ಸಿಬ್ಬಂದಿಯವರನ್ನು ನೇಮಕ ಮಾಡಿರುತ್ತದೆ. ದಿನಕಳೆದ ಹಾಗೆಲ್ಲ ಸರಕಾರಿ ಕಾರ್ಯ

ಕ್ರಮಗಳ ಸಂಖ್ಯೆಯಲ್ಲಿ, ಪ್ರಮಾಣದಲ್ಲಿ ಮತ್ತು ವೈವಿಧ್ಯದಲ್ಲಿ ಹೆಚ್ಚಳವನ್ನು ನಾವು ಕಾಣುತ್ತೇವೆ. ಅಂತೆಯೇ ಸಿಬ್ಬಂದಿ ವರ್ಗ ಹೆಚ್ಚುತ್ತಲೇ ಸಾಗಿದೆ.

ಸರಕಾರದ ಸಮಾಜ ಕಲ್ಯಾಣ ಮತ್ತು ಅಭಿವೃದ್ಧಿಯ ಸಿಬ್ಬಂದಿಯು ಮುಖ್ಯವಾಗಿ ಸ್ವಾತಂತ್ರ್ಯೋತ್ತರದ ಸೃಷ್ಟಿ. ಆದರೆ ಖಾಸಗಿ ಸಂಘಟನೆಗಳ ಸೃಷ್ಟಿಕರ್ತರು ಮತ್ತು ಅಲ್ಲಿನ ಕಾರ್ಯಕರ್ತರು ಬಹು ಹಿಂದಿನವರು. ಸಮುದಾಯದಲ್ಲಿನ ಸಂಪನ್ಮೂಲಗಳನ್ನು ಹುಡುಕಿ, ಸಂಯೋಜಿಸಿ, ಸಜ್ಜುಗೊಳಿಸಿಕೊಂಡು ಸೇವಾ ಕ್ರಮಗಳನ್ನು ಕೈಕೊಂಡು ನಡೆಸುವವರ ಸಂಖ್ಯೆಯೂ ಇತ್ತೀಚೆಗೆ ಹೆಚ್ಚುತ್ತಲಿದೆ. ಆದರಲ್ಲೂ ಸರಕಾರದ ಅನುದಾನದ ಪ್ರಮಾಣದಲ್ಲಿ ಹೆಚ್ಚಳವಾದಂತೆಲ್ಲಾ ಖಾಸಗಿ ಸಂಘಟನೆಗಳ ಮತ್ತು ಅಲ್ಲಿನ ಸಿಬ್ಬಂದಿಯವರ ಸಂಖ್ಯೆಯಲ್ಲೂ ಹೆಚ್ಚಳವಾಗುತ್ತಿದೆ.

ಆರ್ಥಿ ಗುಂಪುಗಳು ನಾನಾ ವಿಧ. ದೈಹಿಕ, ಮಾನಸಿಕ ಹಾಗೂ ಸಾಮಾಜಿಕ ಊನಗಳಿಗೆ ಪಕ್ಕಾದ ಜನರು ವಿವಿಧ ರೀತಿಯ ಸೇವಾ ಕಾರ್ಯಗಳ ಪರಿಧಿಯೊಳಗೆ ಬರುತ್ತಾರೆ. ಇವರನ್ನು ಸರಕಾರದ ಮತ್ತು ಖಾಸಗಿ ಸಂಘಟನೆಗಳ ಸಿಬ್ಬಂದಿಯವರು ಉಪಚರಿಸುವಲ್ಲಿ ನಿರತರಾಗಿದ್ದಾರೆ. ವ್ಯಕ್ತಿಯ ವ್ಯಕ್ತಿತ್ವದ ಬೆಳವಣಿಗೆ, ಗುಂಪುಗಳ ಸಂವರ್ಧನೆ, ಸಮುದಾಯಗಳ ಸಂಘಟನೆ, ವಿಪರೀತ ಪರಿಸ್ಥಿತಿಯ ಪರಿಹಾರ, ಹೀಗೆ ಸೇವಾ ಕಾರ್ಯಗಳ ಉದ್ದೇಶಗಳು ನೆರವೇರಬೇಕಾದರೆ ಸರಕಾರಿ ಹಾಗೂ ಖಾಸಗಿ ಕಾರ್ಯಕರ್ತರ ನಿರಂತರ ಸೇವೆ ನಡೆಯಬೇಕಾಗಿದೆ.

ಹೋಳಾದ ಗುಂಪುಗಳು

ಆದರೆ ಕಾರ್ಯಕರ್ತರ ಮತ್ತು ಆರ್ಥಿಗಳ ಗುಂಪುಗಳು ಲಂಬವಾಗಿ ಹೋಳಾಗಿ ಒಡೆದುಹೋಗಿವೆ. ಸರಕಾರಿ ಸಿಬ್ಬಂದಿಯವರು ಎರಡು ಗುಂಪುಗಳಾಗಿ, ಖಾಸಗಿ ಕಾರ್ಯಕರ್ತರು ಎರಡು ಗುಂಪುಗಳಾಗಿ ಮತ್ತು ಸೇವೆಗಳನ್ನು ಪಡೆಯುವ ಆರ್ಥಿಗಳೂ ಎರಡು ಗುಂಪುಗಳಾಗಿ ಒಡೆದು ಹೋಗಿರುವುದನ್ನು ನಾವು ಕಾಣಬಹುದು.

ಹೀಗೆ ಮೂರು ಗುಂಪುಗಳು ಆರು (ಅಥವಾ ಹತ್ತಾರು) ಗುಂಪುಗಳಾಗಿ, ಛಿದ್ರಗೊಂಡು ಕ್ರಿಯಾತ್ಮಕವಾಗಿರುವುದು ಒಂದು ನಿಟ್ಟಿನ ಸ್ಥಿತಿಯಾದರೆ, ಅವುಗಳೊಳಗಿನ ಸಂಬಂಧಗಳು ಹೇಗೆ ಹೆಣೆದುಕೊಂಡಿವೆ ಎಂಬುದು ಇನ್ನೊಂದು ನಿಟ್ಟಿನ ಪರಿಸ್ಥಿತಿ. ಒಂದು ಭಾಗದ ಮೂರು ಗುಂಪುಗಳು ಸಮಾಜ ಕಲ್ಯಾಣ ಹಾಗೂ ಸಾಮಾಜಿಕ ಅಭಿವೃದ್ಧಿಯ ಬಗ್ಗೆ ಇತ್ಯಾತ್ಮಕವಾದ, ಉಚಿತವಾದ, ಆರೋಗ್ಯಕರವಾದ ದೃಷ್ಟಿಯನ್ನು ಹೊಂದಿದ್ದರೆ (ಇವರನ್ನು 'ಹುಣ್ಣಿವೆಯವರು' ಎನ್ನಲೂ ಬಹುದು), ಇನ್ನೊಂದು ಭಾಗದ ಮೂರು ಗುಂಪುಗಳು ನಿಷೇಧಾತ್ಮಕವಾದ, ರೋಗಿಷ್ಠವಾದ, ಶೋಷಣೆಯ ಪರವಾದ ದೃಷ್ಟಿಯನ್ನು ಹೊಂದಿವೆ (ಇವರನ್ನು 'ಅಮವಾಸೆಯವರು' ಎನ್ನಬಹುದೇನೊ !) ಹೀಗೆ ಈ ಎರಡು ಭಾಗಗಳು ವಿರುದ್ಧ ದೃಷ್ಟಿಗಳನ್ನು ಪಡೆದಿರುವುದರಿಂದ ಅವುಗಳ ವರ್ತನೆಯಲ್ಲೂ ತದ್ವಿರುದ್ಧ ಸ್ಥಿತಿಯನ್ನು ಕಾಣುತ್ತೇವೆ.

ಮತ್ತೊಂದು ಮಹತ್ವದ ವೈಲಕ್ಷಣ್ಯವನ್ನು ನಾವು ಗುರುತಿಸಬಹುದು : ಆರೋಗ್ಯಕರವಾದ ದೃಷ್ಟಿಯನ್ನು ಪಡೆದಿರುವ ಭಾಗದ ಗುಂಪುಗಳು ಹಾಗೂ ಅವುಗಳ ಸದಸ್ಯರು ಸಾಮಾನ್ಯವಾಗಿ ಸ್ವತಂತ್ರ ಮನೋಭಾವಗಳನ್ನು ಹೊಂದಿದ್ದು, ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಪಾರಸ್ಪರಿಕ ಸಂಬಂಧವನ್ನು ರೂಢಿಸಿಕೊಂಡು, ಸಂಯೋಜಿತವಾದ ಕಾರ್ಯವನ್ನು ಕೈಗೊಳ್ಳುವಲ್ಲಿ ಆಸಕ್ತಿಯನ್ನು ಹೊಂದಿರುವುದಿಲ್ಲ. ತಮತಮಗೆ ತೋಚಿದ ರೀತಿಯಲ್ಲಿ, ಅದೇ ಉಚಿತವಾದುದು ಎಂಬ ಭಾವನೆಯಿಂದ, ಸೇವಾ ಕಾರ್ಯದಲ್ಲಿ ಅವರು ತೊಡಗಿರುವುದೇ ಹೆಚ್ಚು. ಆದರೆ, ರೋಗಿಷ್ಠ ದೃಷ್ಟಿಯ ಇನ್ನೊಂದು ಭಾಗದ ಗುಂಪುಗಳು ಮತ್ತು ಅವುಗಳ ಸದಸ್ಯರು ಪರಸ್ಪರವಾಗಿ ಗಾಢವಾದ ಸಂಪರ್ಕ–ಸಂಬಂಧಗಳನ್ನು ಬೆಳೆಸಿಕೊಂಡು ಒಂದು ರೀತಿಯ ಒಳಸಂಚಿನ ಹೂಟವನ್ನು–ವ್ಯೂಹವನ್ನು–ರಚಿಸಿಕೊಂಡಿರುತ್ತಾರೆ. ಅವರೊಳಗಿನ ಸಂಪರ್ಕವು ಬಹು ಪರಿಣಾಮಕರವಾಗಿ ನೇರ್ಪಟ್ಟಿರುತ್ತದೆ.

ವ್ಯೂಹದ ವಿನ್ಯಾಸ

ಸಮಾಜ ಕಲ್ಯಾಣದ ಹಾಗೂ ಸಾಮಾಜಿಕ ಅಭ್ಯುದಯದ ಕಾರ್ಯಕ್ರಮಗಳಲ್ಲಿ ಹೂಡಿದ ಹಣವು ಸದುಪಯೋಗವಾಗದೇ ಹೋಗುತ್ತಲಿರುವುದು ಸಾಮಾನ್ಯ ಅನುಭವ. ಆಗುವ ಕೆಲಸ ಆಗದಿರುವುದು, ಆದರೂ ಆರೆಬರೆಯಾಗಿರುವುದೂ, ದುಷ್ಪರಿಣಾಮವೇ ಆದರ ಫಲವಾಗುವುದು

ಅಸಾಮಾನ್ಯವೇನೂ ಅಲ್ಲ. ಇದಕ್ಕೆ ಕಾರಣ ಒಳಸಂಚಿನ ವ್ಯೂಹ. ವ್ಯೂಹಕ್ಕೆ ಸೇರಿದ ಸರಕಾರಿ ಅಧಿಕಾರಿಗಳೂ, ಸ್ವಯಂಸೇವಕ ಸಂಘಟನೆಗಳ ಕಾರ್ಯಕರ್ತರೂ, ಸೇವಾ ಕಾರ್ಯಗಳನ್ನು ಪಡೆಯಬೇಕಾಗಿರುವ ಅರ್ಥಿಗಳೂ ಸಂಪನ್ಮೂಲಗಳನ್ನು ಹೇಗೆ ಲಪಟಾಯಿಸಬೇಕು ಎಂಬುದನ್ನು ಯೋಜಿಸಿ, ಅಮಾಯಕರಾದ ಇತರ ಅರ್ಥಿಗಳಿಗೆ ದೊರೆಯುವ ಸವಲತ್ತುಗಳು ಸಿಗದೇ ಇರುವಂತೆ ನೋಡಿ ಕೊಳ್ಳುವುದರಲ್ಲಿ ಸಿದ್ಧಹಸ್ತರಾಗಿರುತ್ತಾರೆ. ಆರೋಗ್ಯ ದೃಷ್ಟಿಯ ಅಧಿಕಾರಿಗಳೂ, ಖಾಸಗಿ ಕಾರ್ಯಕರ್ತರೂ, ಅರ್ಥಿಗಳೂ ಅಪೇಕ್ಷಿತ ಮಟ್ಟದಲ್ಲಿ ಕ್ರಿಯಾತ್ಮಕವಾಗಿರದೇ ಇರುವುದರಿಂದ ಸಂಪನ್ಮೂಲದ ದುರ್ವ್ಯಯಕ್ಕೆ ಹೆಚ್ಚಿನ ಅವಕಾಶವಾಗುತ್ತದೆ. ಈ ವರ್ಗದ ಜನರು ನ್ಯಾಯ ಸಮ್ಮತವಾದ ಕಾರ್ಯ ಮಾಡುವಲ್ಲಿ ಆಸಕ್ತರಾಗಿರುವರಾದರೂ ಅವರೆಲ್ಲರೂ ಕೂಡಿ ಆ ಕಾರ್ಯವನ್ನು ಸಾಧಿಸುವಷ್ಟು ಆತುರರಾಗಿರುವುದಿಲ್ಲ. ಜೊತೆಗೆ ಅನ್ಯಾಯ ಹಾಗೂ ದುರ್ವ್ಯಯವನ್ನು ಖಂಡಿಸಿ, ವಿರೋಧಿಸುವ ಸಾಹಸವನ್ನು ಅವರು ಮೆರೆಯುತ್ತಲಿಲ್ಲ. ಹೀಗಾಗಿ ದುಷ್ಟ ಕೂಟದವರ ಕೈವಾಡಕ್ಕೆ ಸಾಕಷ್ಟು ಅವಕಾಶ ದೊರೆತು, ಅವರ ವ್ಯೂಹದ ಸಂವರ್ಧನೆಗೆ ನೀರು ಗೊಬ್ಬರಗಳು ದೊರೆಯುತ್ತವೆ.

ನಿಷ್ಠಾವಂತ ಸರಕಾರದ ಅಧಿಕಾರಿಯು ಅನ್ಯಾಯದ ವಿರುದ್ಧ ಹೋರಾಡತೊಡಗಿದರೆ, ತನ್ನ ಅಧಿಕಾರದ ಪರಿಧಿಯೊಳಗಿನ ಸಂಪನ್ಮೂಲಗಳನ್ನು ಯೋಜಿಸಿದ ರೀತಿಯಲ್ಲಿ ವಿನಿಯೋಗಿಸತೊಡಗಿದರೆ, ದುಷ್ಟ ಅಧಿಕಾರಿಯ ಸಂಚನ್ನು ಬಯಲು ಮಾಡಿದರೆ, ಅವನ ಕೊನೆ ಸನ್ನಿಹಿತವಾದಂತೆಯೇ. ಯಾಕೆಂದರೆ, ಇತರ ಶಿಷ್ಟ ಸಹೋದ್ಯೋಗಿಗಳಾಗಲಿ ಸೇವೆಯನ್ನು ಪಡೆಯುತ್ತಿರುವ ಅರ್ಥಿಗಳಾಗಲಿ ಅವನ ಬೆಂಬಲಕ್ಕೆ ಬರುವುದಿಲ್ಲ. ಆದರೆ, ದುಷ್ಟಕೂಟದ ಅಧಿಕಾರಿಗಳೂ, ಕಾರ್ಯಕರ್ತರೂ, ಅರ್ಥಿಗಳೂ ಶಿಷ್ಟ ಅಧಿಕಾರಿಯ ದಮನಕ್ಕಾಗಿ ಎಂಥ ಹೀನ ಕ್ರಮವನ್ನಾದರೂ ಕೈಗೊಳ್ಳದೇ ಬಿಡುವುದಿಲ್ಲ. ಈ ಮಾತು ಖಾಸಗಿ ಕಾರ್ಯಕರ್ತರಿಗೂ, ಅರ್ಥಿ ವರ್ಗಕ್ಕೂ ಅನ್ವಯಿಸುತ್ತದೆ.

ಅಲಂಕಾರಿಕ–ಕ್ರಿಯಾತ್ಮಕ

ಪ್ರಗತಿಶೀಲ ರಾಷ್ಟ್ರಗಳಲ್ಲಿನ ಯೋಜನೆಗಳಾಗಲಿ, ಕಾರ್ಯಕ್ರಮಗಳಾಗಲಿ ಪ್ರಮುಖವಾಗಿ ಅಲಂಕಾರಿಕವಾಗಿರುವುದಲ್ಲದೆ (ornamental) ಕ್ರಿಯಾತ್ಮಕವಾಗಿರುವುದು (functional) ಬಹಳ ಕ್ವಚಿತ. ವರದಿಗಳ, ಕರಡುಗಳ, ಭಾಷಣಗಳ, ವೆರವಣಿಗೆಗಳ, ಇತ್ಯಾದಿಗಳ ವೇಷಗಳಲ್ಲಿ ಇಲ್ಲಿನ ಬಹತೇಕ ಯೋಜನೆ–ಪ್ರಾಯೋಜನೆಗಳು ಅಸ್ತಿತ್ವದಲ್ಲಿವೆ. ಅವುಗಳನ್ನು ಪ್ರಾಮಾಣಿಕವಾಗಿ ಅನುಷ್ಠಾನಗೊಳಿಸಬೇಕು, ಪರಿಣಾಮಗಳ ಕೂಲಂಕಷ ಮೌಲ್ಯಮಾಪನವಾಗಲೇ ಬೇಕು, ತಪ್ಪನ್ನು ತಿದ್ದಿಕೊಂಡು ಅಕಳಂಕ ಮರುಯೋಜನೆಯನ್ನು ರೂಪಿಸಬೇಕು ಎಂದು ಯಾರೂ ಹಟಹಿಡಿಯುವುದಿಲ್ಲ.

ಇಂಥ ಮನೋಗತಿಯ ಚಕ್ರದಲ್ಲಿ ಸಿಕ್ಕಿರುವ ಕಾರ್ಯಕರ್ತರು, ಅವರು ಎಷ್ಟೇ ಶಿಷ್ಟರಾಗಿರಲಿ, ತಮ್ಮ ಕಾರ್ಯವನ್ನು ಅಲಂಕಾರಿಕವಾಗಿ ಪರಿವರ್ತಿಸುತ್ತಾರೆಯೇ ಹೊರತು ಅದನ್ನು ಕ್ರಿಯಾತ್ಮಕವಾಗಿ ಅಭಿವ್ಯಕ್ತಗೊಳಿಸಲು ಯತ್ನಿಸುವುದಿಲ್ಲ. ಇದರಿಂದಾಗಿಯೂ ದುಷ್ಟಕೂಟದವರ ಕೈ ಬಲಗೊಂಡು ಸಂಪನ್ಮೂಲಗಳ ಧೂಳೀಪಟವಾಗಲು ಸಾಕಷ್ಟು ಅವಕಾಶವಾಗುತ್ತಲಿದೆ.

ನಿರ್ಲಕ್ಷ್ಯ ಹಾಗೂ ಪರಾಙ್ಮುಖತೆ

ಈ ಮನೋದೃಷ್ಟಿಯ ಜೊತೆಗೆ ಇನ್ನೊಂದು ಚಿಂತಾಜನಕ ಆಯಾಮವನ್ನು ನಾವು ಗುರುತಿಸಬಹುದು. ಇದು ಬಹುಜನರ ಮನೋಸ್ಥಿತಿಗೆ ಅನ್ವಯಿಸುತ್ತದೆ. ಜನರು ವೈಯಕ್ತಿಕವಾಗಿಯಾಗಲಿ ಸಾಮೂಹಿಕವಾಗಿಯಾಗಲಿ ಸಮಸ್ಯೆಗಳ ಬಗ್ಗೆ ತೀವ್ರ ಭಾವನೆಯನ್ನು ತಳೆದಿರದೆ ಸಂಪೂರ್ಣ ನಿರ್ಲಕ್ಷ್ಯ ಹೊಂದಿದ್ದಾರೆ. ಸಮಸ್ಯೆಯು ತಮ್ಮದಾದರೂ ಅದು ಅನ್ಯರದೇನೊ ಎಂಬ ಭಾವನೆ ಪ್ರಬಲವಾಗಿರುವುದರಿಂದ ಅನ್ಯರ ಸಮಸ್ಯೆಯನ್ನು ತಮ್ಮದೆಂದು ತಿಳಿದುಕೊಂಡು ಕಾರ್ಯಪ್ರವೃತ್ತವಾಗುವ ಪರಿಪಾಠವಿಂತು ?

ನಿರ್ಲಕ್ಷ್ಯವು (apathy) ಜೊತೆಗೆ ಪರಾಙ್ಮುಖತೆಯು (alienation) ರೋಗಸ್ಥರಾಗಿ ಜನರು ತಮ್ಮದರ ಬಗ್ಗೆ ಆಸಕ್ತಿಯನ್ನಾಗಲಿ, ಅಭಿಮಾನವನ್ನಾಗಲಿ ಹೊಂದಿರದೆ ಅನ್ಯರ ಜೀವನ ಸ್ಥಿತಿ, ಶೈಲಿ, ಇತ್ಯಾದಿಗಳೇ ತಮಗೆ (ತಮಗೇ) ಸೂಕ್ತವೆಂದು ಪರಿಭಾವಿಸಿಕೊಂಡು ಒಂದು ರೀತಿಯ ಕನಸಿನ ಸಾಮ್ರಾಜ್ಯವನ್ನು ಕಟ್ಟಿಕೊಂಡು ರಾಜ ಮಹಾರಾಜರಾಗಿ ಮೆರೆಯುವ ಆನಾರೋಗ್ಯಕರ ಮನಃಸ್ಥಿತರಾಗಿರುವುದರಿಂದ ಇಂದಿನ ಪರಿಸ್ಥಿತಿಯ ಸಹಜ

ಅರಿವಾಗಲಿ, ಅದರ ಬದಲಾವಣೆಯ ಬಗೆಗೆ ಆಸಕ್ತಿಯಾಗಲಿ, ಆದನ್ನು ಅಭ್ಯುದಯಗೊಳಿಸಿಕೊಳ್ಳಬೇಕೆಂಬ ಪ್ರಜ್ಞೆಯಾಗಲಿ ಅವರಿಗೆ ಇರದೇ ಹೋಗಿದೆ.

ಸಾಂಗ್ರಾಹಿಕ ಪರಿಣಾಮ

ಸ್ವಾತಂತ್ರ್ಯಾನಂತರದ ಸಮಾಜವು ಪ್ರಜಾಸತ್ತಾತ್ಮಕ ಸಮಾಜವಾದಿ ರಚನೆಯನ್ನು ಪಡೆಯಬೇಕೆಂಬುದು ರಾಜಕೀಯ ಆಶಾವಾದ. ಆದರೆ ಕೆಲಸದಲ್ಲಿನ ನಿರ್ಲಕ್ಷ್ಯ, ದೊರೆಕೊಳ್ಳದುದರ ಬಗೆಗೇ ಆಸಕ್ತಿ, ಆ ಕಾರಣದಿಂದ ಪರಾಙ್ಮುಖತೆ, ಮಾಡುವುದು ತೋರಿಕೆ ಆಲಂಕಾರಿಕವಾಗಿದ್ದು ಕ್ರಿಯಾತ್ಮಕತೆಯಿಲ್ಲದಿರುವುದು, ಕೆಲಸಗಾರರ ಹಾಗೂ ಅರ್ಥಿಗುಂಪುಗಳ ಒಡಕು ಮತ್ತು ಅವರಲ್ಲಿರುವ ಸಂಚಿನ ವ್ಯೂಹ, ವ್ಯವಸ್ಥೆಗಳ ತೊತ್ತಳ ತುಳಿತ, ಇತ್ಯಾದಿಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಅಭಿವೃದ್ಧಿ ಅಥವಾ ಅಭ್ಯುದಯ ಕಾರ್ಯಗಳು ಪುಸ್ತಕದ ಬದನೆಕಾಯಿಯಾಗಿಯೊ, ಆಕಾಶದ ಮಲ್ಲಿಗೆಯಾಗಿಯೊ ಅಲಂಕಾರ ವಸ್ತುಗಳಾಗಿವೆ. ಇಂಥ ಚಿಂತಾಜನಕ ಸ್ಥಿತಿಯನ್ನು ಹೋಗಲಾಡಿಸುವ ಬಗ್ಗೆ ಆಸಕ್ತರಿಲ್ಲರ ಆತುರ, ಸಾರ್ವಜನಿಕ ಪ್ರಜ್ಞೆಯ ಪ್ರಚೋದನೆಗೆ ಅವರ ನೆರವು ಅತ್ಯಗತ್ಯ.

ಬಿ. ಎಸ್. ಚಂದ್ರಶೇಖರ

ಮೂಢನಂಬಿಕೆಗಳು ಮತ್ತು ಸಂಪರ್ಕ ಮಾಧ್ಯಮ

ಕೇಂದ್ರ ಸೆನ್ಸಾರ್ ಮಂಡಲಿಯ ಅಧ್ಯಕ್ಷರಾಗಿ ಹೃಷಿಕೇಶ ಮುಖರ್ಜಿ ಹೊರಡಿಸಿದ ಒಂದು ಆದೇಶ ಕೆಲವರ ಕುತೂಹಲವನ್ನು ಕೆರಳಿಸಿತು. ಮೂಢನಂಬಿಕೆಗಳಿಗೆ ಪ್ರೋತ್ಸಾಹ ಕೊಡುವಂತಹ ದೃಶ್ಯಗಳಿಗೆ ಚಲನಚಿತ್ರಗಳಲ್ಲಿ ಅವಕಾಶ ಕೊಡುವುದಿಲ್ಲ ಎನ್ನುವುದೇ ಈ ಆದೇಶ. ಈ ಕ್ರಮದ ಬಗೆಗೆ ಪತ್ರಿಕೆಗಳಲ್ಲಿ ಅಲ್ಲಿ ಇಲ್ಲಿ ಟೀಕೆ ಟಿಪ್ಪಣಿಗಳು ಬಂದವು. ಕೆಲವರು ಸ್ವಾಗತಿಸಿದರು, ಇನ್ನು ಕೆಲವರು ವಿರೋಧಿಸಿದರು. ಆದರೆ ಈ ಕ್ರಮದಿಂದ ನಿಜವಾಗಿಯೂ ತೊಂದರೆಗೀಡಾಗಬೇಕಾಗಿದ್ದ ಚಿತ್ರನಿರ್ಮಾಪಕರು ಈ ಆದೇಶವನ್ನು ಗಮನಿಸಿದಂತೆ ಕಾಣಲಿಲ್ಲ. ಸಿದ್ಧ ಫಾರ್ಮುಲಾಗಳಲ್ಲಿ ಸಿನಿಮಾ ತೆಗೆದೂ ಹಣಗಳಿಸಿ ಬಯಸುವವರಿಗೆ, ತಮ್ಮ ಗುರಿಮುಟ್ಟಲು ಯಾವ ಆದೇಶ, ಆದರ್ಶಗಳೂ ಅಡ್ಡಿ ಬರುವುದಿಲ್ಲ. ಎಲ್ಲಾ ನಿಯಮಗಳಿಂದಲೂ ನುಣುಚಿಕೊಳ್ಳುವ ತಂತ್ರ ಅವರಿಗೆ ಕರಗತವಾಗಿದೆ.

ಇದೇನೆ ಇರಲಿ, ಸೆನ್ಸಾರ್ ಮಂಡಲಿಯ ಈ ಆದೇಶ ಒಂದು ಮುಖ್ಯ ಪ್ರಶ್ನೆಯತ್ತ ನಮ್ಮ ಗಮನ ಹರಿಸುತ್ತದೆ. ಜನರಲ್ಲಿರುವ ಮೂಢನಂಬಿಕೆಗಳನ್ನು ನಿವಾರಿಸಿ ಅವರಲ್ಲಿ ವೈಜ್ಞಾನಿಕ ಮನೋಭಾವ ಮೂಡಿಸಲು ಮಾಧ್ಯಮಗಳಿಂದ ಸಾಧ್ಯವಾಗಿದೆಯೆ ? ಅಥವಾ ಮಾಧ್ಯಮಗಳೇ ಇಂತಹ ಮೂಢನಂಬಿಕೆಗಳನ್ನು ಪೋಷಿಸುತ್ತಿವೆಯೇ ? ಎನ್ನುವುದೇ ಈ ಪ್ರಶ್ನೆ.

ಚಾರಿತ್ರಿಕವಾಗಿ ನೋಡಿದರೆ ಮಾಧ್ಯಮಗಳು ಬೆಳೆದಿರುವುದು ಕಳೆದ ನೂರು ವರ್ಷಗಳಲ್ಲಿ ಮಾತ್ರ ಎನ್ನುವುದು ಸ್ಪಷ್ಟ. ಇಂಗ್ಲೆಂಡಿನಲ್ಲಿ ಮೊದಲ ಪತ್ರಿಕೆ 17 ನೆಯ ಶತಮಾನದಲ್ಲೇ ಪ್ರಕಟವಾದರೂ, ಪತ್ರಿಕೆ ಸಮೂಹ ರೂಪ ಪಡೆದದ್ದು ಪೆನ್ನಿ ಪತ್ರಿಕೆ ಬಂದಮೇಲೆ, ಅಂದರೆ 19ನೆಯ ಶತಮಾನದಲ್ಲಿ. ರೇಡಿಯೋ ಹಾಗೂ ಚಲನಚಿತ್ರಗಳ ಆವಿಷ್ಕಾರವಾಗಿ ಇನ್ನೂ ನೂರು ವರ್ಷವೂ ಆಗಿಲ್ಲ. ಟೆಲಿವಿಷನ್ ಒಂದು ಮಾಧ್ಯಮವಾಗಿ ಬೆಳೆಯಲಾರಂಭಿಸಿದ್ದು ಎರಡನೆಯ ವಿಶ್ವಸಮರದ ನಂತರವೇ. ಆದರೆ ಇಷ್ಟು ಸಣ್ಣ ಕಾಲಮಾನದಲ್ಲೇ ಮಾಧ್ಯಮ ಬೃಹತ್ತಾಗಿ ಬೆಳೆದಿದೆ. ಇಂದು ಪತ್ರಿಕೆಗಳು ಅತ್ಯಂತ ಪ್ರಬಲ ದೇಶದ ಅತಿಬಲಿಷ್ಠ ನಾಯಕನನ್ನೂ ಅಧಿಕಾರದಿಂದಿಳಿಸಬಲ್ಲವು. ರೇಡಿಯೋ ಕ್ಷಣಕ್ಷಣದಲ್ಲೂ ವಿಶ್ವದಲ್ಲಾಗುತ್ತಿರುವ ಬದಲಾವಣೆಗಳನ್ನು ನಮ್ಮ ಕಿವಿಗೆ ತರಬಲ್ಲದು. ಚಲನಚಿತ್ರ ಮನರಂಜನೆಯ ರೂಪವನ್ನೇ ಬದಲಾಯಿಸಿದೆ. ಟೆಲಿವಿಷನ್ ಪಾಶ್ಚಾತ್ಯ ದೇಶಗಳ ಜನರ ಜೀವನ ವಿಧಾನವನ್ನೇ ಸಂಪೂರ್ಣವಾಗಿ ಮಾರ್ಪಡಿಸಿದೆ. ಇಂದು ಮಾಧ್ಯಮಗಳ ಪ್ರಭಾವ ವಿಲ್ಲದ ಜೀವನದ ಯಾವುದೇ ರಂಗವೂ ಇಲ್ಲ. ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮಾತ್ರವಷ್ಟೇ ಅಲ್ಲ, ಮಾಧ್ಯಮಗಳು ಜನರ ಯೋಚನೆ, ಭಾವನೆಗಳ ಮೇಲೂ ತಮ್ಮ ಮುದ್ರೆ ಒತ್ತುತ್ತಿವೆ.

ಸಂಪರ್ಕ ಸಾಧನಗಳ ಬೆಳವಣಿಗೆಯ ಮೊದಲ ಹಂತದಲ್ಲಿ ಇವುಗಳನ್ನು ಮಾನವನ ವೈಚಾರಿಕತೆ ಹಾಗೂ ಸ್ವತಂತ್ರ ವ್ಯಕ್ತಿತ್ವ ಬೆಳೆಯಲು ಸಹಾಯಕವಾಗುವ ಮಹಾಶಕ್ತಿಯಾಗಿ ವಿಚಾರವಂತರು ಕಂಡದ್ದರಲ್ಲಿ ಆಶ್ಚರ್ಯವಿಲ್ಲ. ಜನರ ಮೂಢನಂಬಿಕೆಗಳು, ಕಂದಾಚಾರ, ಅರ್ಥಹೀನ ಪದ್ಧತಿಗಳಿಗೆ ಅವರ ಅಜ್ಞಾನವೇ ಕಾರಣ. ಇಂತಹ ಅಜ್ಞಾನವನ್ನು ಹೊಡೆದೋಡಿಸುವ ಒಂದು ಮಹಾ ಸಾಧನ ಈಗ ಸಿಕ್ಕಿದೆ. ಮಾಧ್ಯಮಗಳಿಂದ ಅಜ್ಞಾನದ ಮೇಲೆ ಸಮರ ನಡೆಸಬಹುದು. ಇವುಗಳ ಮೂಲಕ ಜನರಿಗೆ ಹೊಸ ವಿಚಾರಗಳನ್ನು ಬೋಧಿಸಬಹುದು. ಅವರ ಮೌಢ್ಯವನ್ನು ಹೋಗಲಾಡಿಸಿ, ಅವರು ವಿಚಾರವಂತರಾಗುವಂತೆ, ಸ್ವತಂತ್ರವಾಗಿ ಯೋಚಿಸಲು ಶಕ್ತರಾಗುವಂತೆ ಮಾಡಬಹುದು ಎಂದು ಅಂದಿನ ಬುದ್ಧಿಜೀವಿ

ಗಳು ಭಾವಿಸಿದ್ದರು. ಅಂದರೆ ಮಾಧ್ಯಮಗಳು ಬೆಳೆದಂತೆ, ಅಕ್ಷರಸ್ಥರ ಸಂಖ್ಯೆ ಹೆಚ್ಚಾದಂತೆ, ಜನರೆಲ್ಲಾ ಪತ್ರಿಕೆ ಓದಿ, ರೇಡಿಯೋ ಕೇಳಿ, ಚಲನಚಿತ್ರ, ಟೆಲಿವಿಷನ್ ನೋಡಿ ಹೊಸವಿಚಾರಗಳನ್ನು ತಿಳಿದುಕೊಳ್ಳುತ್ತಾರೆ. ತಮ್ಮ ಜ್ಞಾನಾಭಿವೃದ್ಧಿಪಡಿಸಿಕೊಳ್ಳುತ್ತಾ ವಿಚಾರವಂತರಾಗುತ್ತಾರೆ, ಸಾಂಪ್ರದಾಯಿಕ ನಂಬಿಕೆಗಳ ಜಾಗದಲ್ಲಿ ಆಧುನಿಕ ವಿಚಾರಗಳನ್ನು ಒಪ್ಪಿಕೊಳ್ಳುತ್ತಾರೆ ಎನ್ನುವ ನಿರೀಕ್ಷೆ ಆಗ ಮೂಡಿತ್ತು.

ಆದರೆ ಈ ನಿರೀಕ್ಷೆ ಮಾಧ್ಯಮಗಳ ಪರಿಣಾಮದ ಬಗೆಗಿನ ತಪ್ಪು ಕಲ್ಪನೆಯಿಂದ ಹುಟ್ಟಿದ್ದು ಎಂದು ತಿಳಿಯಲು ಬಹಳಕಾಲ ಬೇಕಾಗಲಿಲ್ಲ. ಸಮೂಹ ಮಾಧ್ಯಮಕ್ಕೆ ವಿಶಾಲ ಶ್ರೋತೃವರ್ಗವಿದೆಯಾದರೂ, ಎಲ್ಲಾ ಶ್ರೋತೃಗಳೂ ಮಾಧ್ಯಮದಿಂದ ಪ್ರಭಾವಿತರಾಗುವುದಿಲ್ಲ ಎನ್ನುವುದು ಮುಂದೆ ಸ್ಪಷ್ಟವಾಯಿತು. ಒಂದು ಪತ್ರಿಕೆಯನ್ನು ಲಕ್ಷಾಂತರ ಜನ ಕೊಳ್ಳಬಹುದು. ಒಂದು ಸಿನಿಮಾವನ್ನು ಕೋಟ್ಯಂತರ ಜನ ನೋಡಬಹುದು. ಆದರೆ ಹೀಗೆ ಮಾಧ್ಯಮಕ್ಕೆ ಗಮನ ಕೊಡುವವರೂ ಸಹ ಅದು ಹೇಳುವುದನ್ನೆಲ್ಲಾ ಕೇಳುವುದಿಲ್ಲ. ಕೇಳಿದರೂ ಒಪ್ಪಿಕೊಳ್ಳುವುದಿಲ್ಲ, ಒಪ್ಪಿಕೊಂಡರೂ ಆಚರಿಸುವುದಿಲ್ಲ. ರೇಡಿಯೋ ಇರುವವರಲ್ಲಿ ಹೆಚ್ಚಿನ ಜನ ಚಿತ್ರಗೀತೆ ಮಾತ್ರ ಕೇಳುತ್ತಾರೆ. ಶೈಕ್ಷಣಿಕ ಕಾರ್ಯಕ್ರಮ ಬಂದಕೂಡಲೇ ರೇಡಿಯೋ ಆರಿಸುತ್ತಾರೆ. ಚಲನ ಚಿತ್ರ ನೋಡಲು ಬಂದಿರುವವರಲ್ಲಿ ಬಹಳ ಜನರ ಲಕ್ಷ್ಯ ಅದರ ನಾಯಕನ 'ಸ್ಟಂಟ್'ಗಳತ್ತ ಮಾತ್ರ ಇರಬಹುದು. ಚಿತ್ರಕಥೆ ಅಥವ ಸಂದೇಶ ಅವರ ಗಮನಕ್ಕೇ ಬರದಿರಬಹುದು. ಸಾಧಾರಣವಾಗಿ ಜನ ತಾವು ಬಯಸುವಂತಹ ವಸ್ತುವನ್ನೂ ಸಮೂಹ ಮಾಧ್ಯಮಗಳಲ್ಲಿ ಲಕ್ಷಿಸುತ್ತಾರೆ. ಇಂತಹ ಲಕ್ಷ್ಯ ಅವರಲ್ಲಿ ಮುಂಚೆಯೇ ಇರುವ ಆಸಕ್ತಿ, ನಿರೀಕ್ಷೆ, ಅಭಿರುಚಿಗಳಿಂದ ನಿರ್ಧರಿಸಲ್ಪಡುತ್ತದೆ ಎನ್ನುವ ಸತ್ಯ ಮುಂದೆ ಗೋಚರವಾಯಿತು. ಒಳ್ಳೆಯ ಅಭಿರುಚಿ ಬೆಳೆಸುವಲ್ಲಿ ಮಾಧ್ಯಮಗಳಿಗಿರುವ ಮಿತಿಗಳು ಸ್ಪಷ್ಟವಾಯಿತು.

ಉದಾಹರಣೆಗೆ ಒಂದು ಲಕ್ಷ ಪ್ರಸಾರವಿರುವ, ಹತ್ತು ಲಕ್ಷ ಜನ ಓದುಗರಿರುವ ಒಂದು ಪತ್ರಿಕೆ, ಅರ್ಧ ಪುಟದ ತುಂಬಾ ಒಂದು ವೈಜ್ಞಾನಿಕ ಆವಿಷ್ಕಾರದ ವರ್ಣನೆಯಿರುವ ಲೇಖನ ಪ್ರಕಟಿಸಬಹುದು. ಈ ಹೊಸ ಆವಿಷ್ಕಾರ ಈಗಿರುವ ನಂಬಿಕೆಗಳನ್ನು ಹೇಗೆ ಅಲುಗಾಡಿಸಬಲ್ಲದು ಎಂದು ತುಂಬಾ ಆಕರ್ಷಕವಾಗಿ ಬರೆದಿರಬಹುದು. ಆದರೆ ಈ ಲೇಖನವನ್ನು ಗಮನಿಸುವವರು, ಪುರುಸೊತ್ತಾಗಿ ಓದುವವರು, ಓದಿ ಅದರ ಬಗೆಗೆ ಚಿಂತಿಸುವವರು ತೀರಾ ಕಡಿಮೆ ಸಂಖ್ಯೆಯ ಜನ. ಆದರೆ ಅದೇ ಪತ್ರಿಕೆಯಲ್ಲಿರುವ ನಿತ್ಯಭವಿಷ್ಯದ ಸಣ್ಣಕಾಲಂ ಮಧ್ಯಾಹ್ನ 3ರಿಂದ ರಾಹುಕಾಲ, ಮೇಷರಾಶಿಯವರಿಗೆ ದಕ್ಷಿಣ ದಿಕ್ಕಿಗೆ ಪ್ರಯಾಣ ಒಳ್ಳೆಯದಲ್ಲ ಎನ್ನುವ 'ಮಾಹಿತಿ' ಸಾವಿರಾರು ಜನರಿಗೆ ಮಹತ್ವದ್ದಾಗಿ ಕಾಣಬಹುದು. ಅನೇಕ ಜನ ತಮ್ಮ ಪ್ರಯಾಣ ಕಾರ್ಯಕ್ರಮವನ್ನು ಬದಲಾಯಿಸಿಕೊಳ್ಳಬಹುದು. ಇಲ್ಲಿ ಪ್ರತಿಕೆ, ತನ್ನಷ್ಟರಿಂದಲೇ ಜನರನ್ನು ವಿಚಾರವಂತರನ್ನಾಗಿ ಮಾಡುತ್ತಿಲ್ಲ ಎನ್ನುವುದು ನಿಜವಾದಂತೆ, ಅದೇ ಜನರಿಗೆ ನಿತ್ಯ ಭವಿಷ್ಯವನ್ನು ನಂಬಿ ಎಂದೂ ಹೇಳುತ್ತಿಲ್ಲ ಎನ್ನುವುದನ್ನೂ ಗಮನಿಸಬೇಕು. ಇಂತಹ ಭವಿಷ್ಯದಲ್ಲಿ ಮುಂಚೆಯೇ ಆಸಕ್ತಿ ಬೆಳಸಿಕೊಂಡಿರುವವರು ಈ ಪತ್ರಿಕೆಯ ಈ ಕಾಲಂ ಆಸಕ್ತಿಯಿಂದ ಓದುತ್ತಾರೆ. ಅದರಂತೆ ಆಚರಿಸುತ್ತಾರೆ. ಈ ಪತ್ರಿಕೆ ನಿತ್ಯಭವಿಷ್ಯ ಕೊಡುವುದನ್ನು ನಿಲ್ಲಿಸಿದರೆ, ಈ ಪತ್ರಿಕೆಯ ಚಂದಾವನ್ನು ರದ್ದುಮಾಡಿ ನಿತ್ಯ ಭವಿಷ್ಯ ಕೊಡುವ ಬೇರೆ ಪತ್ರಿಕೆಯನ್ನು ಹುಡುಕಿಕೊಂಡು ಹೋಗುತ್ತಾರೆ. ಭವಿಷ್ಯದ ಬಗೆಗೆ ಆಸಕ್ತಿ ಹುಟ್ಟಿದ್ದಕ್ಕೆ ಈ ಪತ್ರಿಕೆ ಕಾರಣವಲ್ಲದಿರಬಹುದು. ಆದರೆ ಈ ತರಹದ ಆಸಕ್ತಿಯನ್ನು ಉಳಿಸಲು, ಬೆಳೆಸಲು ಪತ್ರಿಕೆ ಸಹಾಯ ಮಾಡುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ.

ಸಮೂಹ ಮಾಧ್ಯಮಗಳು ತಮ್ಮಷ್ಟರಿಂದಲೇ ಯೋಚನೆ ಆಚರಣೆಗಳಲ್ಲಿ ಮಹತ್ವದ ಬದಲಾವಣೆಗಳನ್ನು ಮಾಡಲಾರವು ಎನ್ನುವುದು ನಿಜವಾದಂತೆ, ಮಾಧ್ಯಮಗಳು ವ್ಯವಸ್ಥಿತವಾಗಿರುವ ರೀತಿ, ಈ ತರಹದ ಬದಲಾವಣೆಗಳನ್ನು ಪ್ರೋತ್ಸಾಹಿಸುವುದಿಲ್ಲ ಎನ್ನುವುದನ್ನು ಗಮನಿಸಬೇಕು. ಬಹಳ ಜನರಿಗೆ ಮಾಧ್ಯಮಗಳಿರುವುದು ಮನರಂಜನೆಗಾಗಿ. ಇರುವ ನಂಬಿಕೆಗೆ ಯಾವುದೇ ಸವಾಲು ಬಂದಾಗ ಅದು ಮನರಂಜನೆ ಆಗಿ ಉಳಿಯುವುದಿಲ್ಲ. ಅಂತಹುದನ್ನು ಕೇಳಲು, ಓದಲು, ನೋಡಲು ಬಹಳ ಜನ ಸಿದ್ಧರಿರುವುದಿಲ್ಲ, ಜನಮೆಚ್ಚುಗೆ ಬಯಸುವ

ಮಾಧ್ಯಮ ಈ ಕಾರಣದಿಂದಾಗಿ ಇಂತಹ ವಸ್ತುವನ್ನು ಕೊಡಲು ಹಿಂಜರಿಯುತ್ತದೆ. ಬಹು ಜನರ ಅಥವಾ ಬಲಿಷ್ಠ ಜನರ ಆದರ್ಶ, ನಂಬಿಕೆಗಳನ್ನು ಮಾತ್ರ ಎತ್ತಿ ಹಿಡಿಯಬಯಸುತ್ತದೆ. ಶೋತೃಗಳನ್ನು ಕೆಣಕಿ ಅವರ ಅವಕೃಪೆ ಪಡೆಯುವ ಬದಲು, ಅವರ ಮರ್ಜಿ ಹಿಡಿಯುತ್ತದೆ ಅಥವಾ ಅವರಿಗೆ ಮತ್ತು ಬರಸುತ್ತದೆ. ಜೊತೆಗೆ ಮಾಧ್ಯಮದ ಹತೋಟಿ ಹೊಂದಿರುವವರು, ಅವುಗಳಲ್ಲಿ ಕೆಲಸ ಮಾಡುವವರು ಇರುವ ಪರಿಸ್ಥಿತಿಯನ್ನು ಮುಂದುವರಿಸಿಕೊಂಡು ಬರುವವರ ಪರವಾಗಿರುತ್ತಾರೆ. ವ್ಯವಸ್ಥೆಯನ್ನು ಬೆಂಬಲಿಸುವುದು ಮಾಧ್ಯಮದ ಉಳಿವಿಗೆ ಅಗತ್ಯ ಎಂದು ನಂಬುತ್ತಾರೆ. ಇದರಿಂದಾಗಿ ಮಾಧ್ಯಮ ತೀರಾ ಅಪೇಕ್ಷಣೀಯವಾದ ಬದಲಾವಣೆಗಳನ್ನೂ ಪೂರ್ಣ ಮನಸ್ಸಿನಿಂದ ಬೆಂಬಲಿಸುವುದಿಲ್ಲ. ಬದಲಿಗೆ ವಿವಾದಕ್ಕೆ ಆಸ್ಪದವಿಲ್ಲದಂತಹ ಜನರು ಈಗಾಗಲೇ ಒಪ್ಪಿಕೊಂಡಿರುವಂತಹ ಚರ್ವಿತಚರ್ವಣವಾದ ವಿಷಯಗಳನ್ನೇ ಹೇಳುತ್ತಾ ಹೋಗುತ್ತದೆ.

ಇಂತಹ ವಿಷಯಗಳನ್ನೇ ಮತ್ತೆ ಮತ್ತೆ ಕೇಳಿದ ಜನ ಅವುಗಳೇ ಸರಿ ಎಂದು ನಂಬುತ್ತಾರೆ. ಅದೇ ಅಪೇಕ್ಷಿತ ಎಂದು ತಿಳಿಯುತ್ತಾರೆ. ಇಲ್ಲಿ ಒಂದು ರೀತಿಯ ವಿಷ ಚಕ್ರವಿದೆ. ಜನರಿಗೆ ಸುಲಭ ಮನರಂಜನೆ ಬೇಕು ಎಂದು ಮಾಧ್ಯಮ ಇಂತಹುದೇ ವಸ್ತು ಕೊಡುತ್ತದೆ. ಇಂತಹುದೇ ವಸ್ತುವಿನ ಪರಿಚಯ ಮಾತ್ರ ಇರುವ ಜನ ಮತ್ತೆ ಅಂತಹುದನ್ನೇ ಬಯಸುತ್ತಾರೆ. ಈ ಚಕ್ರವನ್ನು ಮುರಿಯುವ ಅರ್ಥಮನಸ್ಸಿನ ಪ್ರಯತ್ನಗಳು ಕೆಲವೊಮ್ಮೆ ನಡೆಯಬಹುದು. ಆದರೆ ಇಂತಹ ಪ್ರಯತ್ನಗಳಿಗೆ ಯಶಸ್ಸುಸಿಗುವುದು ಸುಲಭವಲ್ಲ. ಅಂತಹ ಯಶಸ್ಸಿಗೆ ತಾಳ್ಮೆ ಬೇಕು. ಅದು ಬರುವುದು ತುಂಬಾ ನಿಧಾನವಾಗಿ. ಮಾಧ್ಯಮಗಳ ಕಾರ್ಯರೀತಿಯಲ್ಲಿ ಇಂತಹ ಸಹನೆ ಸಾಧ್ಯವಿಲ್ಲ. ಯಶಸ್ಸಿಗೆ ಕಾಯುವ ಬದಲು, ಇಂತಹ ಅರ್ಥ ಮನಸ್ಸಿನ ಪ್ರಯತ್ನಗಳನ್ನು ಬಿಡುವ ಸಂದರ್ಭಗಳೇ ಹೆಚ್ಚು. ಮತ್ತೆ ಹಳೆಯ ರಾಗವೇ ಕೇಳಿಬರುತ್ತದೆ.

ಈ ಹಿನ್ನೆಲೆಯಲ್ಲಿ ನಮ್ಮ ದೇಶದಲ್ಲಿ ಮಾಧ್ಯಮಗಳು ಜನರ ನಂಬಿಕೆಗಳ ಮೇಲೆ ಹೇಗೆ ಪರಿಣಾಮ ಬೀರುತ್ತಿವೆ ನೋಡಬೇಕು. ನಮ್ಮದು ಆಧುನಿಕವಾಗುತ್ತಿರುವ ಸಮಾಜ ಎಂದು ಹೇಳಲಾಗುತ್ತದೆ. ಆಧುನಿಕತೆಯ ಒಂದು ಮುಖ್ಯ ಲಕ್ಷಣ ವೈಚಾರಿಕತೆ. ಯಾವುದೇ ವಿಚಾರವನ್ನು ಅದು ಹಿಂದಿನಿಂದಲೂ ಹೀಗೇ ಇದೆ ಆದ್ದರಿಂದ ಸರಿ ಎಂದು ಒಪ್ಪಿಕೊಳ್ಳುವ ಬದಲು, ಅದು ಹೀಗಿರುವುದು ಒಳ್ಳೆಯದೇ ? ಅದಕ್ಕಿಂತ ಉತ್ತಮವಾದ ವ್ಯವಸ್ಥೆ ಸಾಧ್ಯವಿಲ್ಲವೇ ಎಂದು ಪ್ರಶ್ನಿಸುವ, ಸಾಂಪ್ರದಾಯಿಕ ನಂಬಿಕೆಗಳನ್ನು ಒರೆಹಚ್ಚಿ ನೋಡುವಂತಹ ಮನೋಭಾವ. ಈ ಮನೋಭಾವ ಬೆಳೆಸಲು ಮಾಧ್ಯಮಗಳು ಪ್ರಯತ್ನಿಸುತ್ತಿವೆಯೆ? ಹಾಗೆ ಪ್ರಯತ್ನಿಸಿದ್ದರೆ ಯಶಸ್ಸು ಪಡೆದಿವೆಯೇ ಎನ್ನುವುದು ಪರಿಶೀಲಿಸಬೇಕಾದ ಪ್ರಶ್ನೆ.

ಈ ಸಂದರ್ಭದಲ್ಲಿ ನಮ್ಮ ಸಮಾಜದ ಒಂದು ವಿಶಿಷ್ಟ ಸಂಗತಿಯನ್ನು ಸಮನಿಸಬೇಕು. ನಮ್ಮಲ್ಲಿ ಬಹುಜನ ಒಂದು ಕ್ಷೇತ್ರದಲ್ಲಿ ಹೊಸ ವಿಚಾರವನ್ನು ಒಪ್ಪಿಕೊಂಡರೂ ಅದರಿಂದ ಏಳುವ ತಾರ್ಕಿಕ ಪರಿಣಾಮಗಳನ್ನು ಎದುರಿಸುವುದಿಲ್ಲ. ಅಸ್ಟ್ರೊಫಿಸಿಕ್ಸ್‌ನಲ್ಲಿ ಉನ್ನತ ಪದವಿಪಡೆದಿರುವ, ಗ್ರಹ, ನಕ್ಷತ್ರಗಳ ಬಗೆಗೆ ಅತ್ಯಂತ ಆಧುನಿಕ ವಿಚಾರಗಳನ್ನು ಅರಗಿಸಿಕೊಂಡಿರುವ ಪ್ರಾಧ್ಯಾಪಕರಿಗೂ ಸಹ ಗ್ರಹಣದ ದಿವಸ ಉಪವಾಸವಿರುವುದು, ಗ್ರಹಣದ 'ಮಲಿನತೆ'ಯಿಂದ ದರ್ಭೆ, ತುಳಸಿಗಳ ಮೂಲಕ ರಕ್ಷಿತವಾದ ಆಹಾರವನ್ನು ಮಾತ್ರ ಸೇವಿಸುವ ನಡವಳಿಕೆಯಲ್ಲಿ ಏನೂ ತಪ್ಪು ಕಾಣಿಸುವುದಿಲ್ಲ. ಪ್ರತಿದಿನ ದೈತ್ಯಯಂತ್ರಗಳೊಡನೆ ಕೆಲಸ ಮಾಡುವ, ಆ ಯಂತ್ರಗಳ ಪ್ರತಿಯೊಂದು ಕೀಲು, ಮೊಳೆಗಳ ರಚನೆ, ಕಾರ್ಯರೀತಿಯನ್ನು ಅರಿತಿರುವ ಇಂಜನಿಯರ್‌ಗೆ ಆಯುಧ ಪೂಜೆಯ ದಿನದಂದು ಇದೇ ಯಂತ್ರಕ್ಕೆ ಪೂಜೆ, ನೈವೇದ್ಯ ಮಾಡುವುದು ಅಗತ್ಯವೆನಿಸುತ್ತದೆ. ತಾವು ಕಲಿತ ವಿದ್ಯೆ ಹಾಗೂ ತಮ್ಮ ಆಚರಣೆ ಒಂದಕ್ಕೊಂದು ತಾಳೆಯಾಗುತ್ತಿಲ್ಲ ಎಂದು ಅನ್ನಿಸುವುದೇ ಇಲ್ಲ. ಇಂತಹ ಪರಿಸ್ಥಿತಿ ವೈಜ್ಞಾನಿಕ ಮನೋಭಾವ ಬೆಳೆಸಲು ಒಂದು ಮುಖ್ಯ ಅಡಚಣೆ ಎನುವುದರಲ್ಲಿ ಸಂಶಯವಿಲ್ಲ. ಮಾಧ್ಯಮದ ಸೋಲು–ಗೆಲುವುಗಳನ್ನು ನೋಡುವಾಗ ಈ ಅಂಶವನ್ನೂ ಗಮನಿಸಬೇಕಾಗುತ್ತದೆ.

ಮಾಧ್ಯಮದಲ್ಲಿರುವ ವೈಚಾರಿಕ – ಅವೈಚಾರಿಕ ವಸ್ತುಗಳನ್ನೆಲ್ಲಾ ಪರಿಶೀಲಿಸುವುದು ಅಸಾಧ್ಯ. ಅದು

ಅಗತ್ಯವೂ ಅಲ್ಲ. ಜನಪ್ರಿಯ ಮಾಧ್ಯಮಗಳಿಂದ ಕೆಲವು ನಿದರ್ಶನಗಳನ್ನು ಮಾತ್ರ ಉಲ್ಲೇಖಿಸಬಹುದು. ನಮ್ಮ ದೇಶದಲ್ಲಿ ತಯಾರಾದ ಮೊದಲ ಚಲನಚಿತ್ರಗಳೆಲ್ಲಾ ಪೌರಾಣಿಕ ಎನ್ನುವುದನ್ನು ಗಮನಿಸಬಹುದು. ಇಲ್ಲಿ ಚಲನಚಿತ್ರ ಅನಕ್ಷರತೆಯ ಮಿತಿಯನ್ನು ದಾಟಿ ಜನ ಸಮೂಹಕ್ಕೆ ಹೊಸ ಅನುಭವಗಳನ್ನು ಕೊಡಬಹುದಾದ ಒಂದು ಮಾಧ್ಯಮವಾಗಿ ಬರಲಿಲ್ಲ. ಜನರಿಗೆ ಮುಂಚೆಯೇ ತಿಳಿದಿದ್ದ ಕತೆಗಳನ್ನು ಆಕರ್ಷಕವಾಗಿ ಅವರ ಮುಂದೆ ಅಡಿತೋರಿಸಬಲ್ಲ ಒಂದು ಪ್ರಕಾರವಾಗಿ ಮಾತ್ರ ಬಂದಿತು. ಪೌರಾಣಿಕ ಚಲನಚಿತ್ರಗಳು ಬಂದ ಕೆಲವೇ ವರ್ಷಗಳಲ್ಲಿ 'ಸಾಮಾಜಿಕ'ವೆಂದು ಕರೆಸಿಕೊಂಡ ಚಿತ್ರಗಳೂ ಬಂದವು. ಆದರೆ ಇಲ್ಲೂ ಸಾಮಾಜಿಕತೆ, ಸಾಂಪ್ರದಾಯಿಕ ಆಚರಣೆಯ ಮಟ್ಟದಲ್ಲೇ ಉಳಿಯಿತು. ಕಳೆದ 60 ವರ್ಷಗಳಲ್ಲಿ ಈ ಪರಿಸ್ಥಿತಿಯಲ್ಲಿ ಏನೂ ಬದಲಾವಣೆಯಾಗಿಲ್ಲ. ಇಂದೂ ಸಹ 'ಭಕ್ತ ಸಿರಿಯಾಳ', 'ಎಡೆಯೂರು ಸಿದ್ಧಲಿಂಗೇಶ್ವರ'ದಂತಹ ಚಿತ್ರಗಳು ಸಾಕಷ್ಟು ಜನರನ್ನು ಆಕರ್ಷಿಸುತ್ತವೆ. ಇಲ್ಲಿ ಚಿತ್ರಗಳು ಪೌರಾಣಿಕ ಆಥವಾ ಧಾರ್ಮಿಕ ಎನ್ನುವ ಅಂಶ ಮುಖ್ಯವಲ್ಲ. ಅವುಗಳ ವೈಚಾರಿಕ ನಿಲುವನ್ನು ಮಾತ್ರ ಗಮನಿಸಬೇಕು. ನಮ್ಮ ಸಂಸ್ಕೃತಿಯ ಅತ್ಯಂತ ಮಹತ್ವದ ಕೃತಿಗಳು ಧಾರ್ಮಿಕ ಹಿನ್ನೆಲೆಯಲ್ಲಿಯೇ ಹುಟ್ಟಿವೆ ಎನ್ನುವುದನ್ನು ಮರೆಯಲಾಗುವುದಿಲ್ಲ. ಕ್ಲಾಸಿಕಲ್ ಸಾಹಿತ್ಯ, ಶಿಲ್ಪ, ಚಿತ್ರಕಲೆ, ಸಂಗೀತ ಎಲ್ಲಾ ಧಾರ್ಮಿಕ ಭಾವನೆಗಳನ್ನು ಪೋಷಿಸಿಕೊಂಡು ಬಂದಿವೆ. ಆದರಂತೆ ಚಲನಚಿತ್ರವೂ ಆಗಿದ್ದರೆ ಅದು ತೀರಾ ಸಹಜವಾಗುತ್ತಿತ್ತು. ಆದರೆ ವ್ಯಾಪಾರೀ ಚಿತ್ರನಿರ್ಮಾಪಕರಿಗೆ ಇಂತಹ ಯಾವ ಕಾಳಜಿಗಳೂ ಇರುವುದಿಲ್ಲ. ಅವರಿಗೆ ಮುಖ್ಯವಾದದ್ದು ಜನಗಳ ಮಿದುಸ್ಥಾನಗಳನ್ನು ಅರಿಯುವುದು ಮತ್ತು ಅವುಗಳ ಮೇಲೆ ಧಾಳಿಮಾಡಿ ಆ ಮೂಲಕ ತಾವು ಪ್ರಯೋಜನ ಪಡೆಯುವುದು. ದೈವಭಕ್ತಿಯನ್ನು ಹೇಗೆ ದುರುಪಯೋಗಪಡಿಸಿಕೊಳ್ಳಬಹುದು, ಹಾಗೆಯೇ ಸಂಪ್ರದಾಯನಿಷ್ಠೆಯನ್ನೂ ಸಹ. ಆದ್ದರಿಂದ 'ಪತಿಯೇ ದೇವರಮ್ಮ' ಎನ್ನುವ 'ತತ್ತ್ವ'ವನ್ನು ಎತ್ತಿಹಿಡಿಯುವ ಚಿತ್ರಕ್ಕೆ ಜನ ಬರುತ್ತಾರೆ ಎಂದು ತಿಳಿದರೆ ಅಂತಹುದೇ ಚಿತ್ರಗಳನ್ನು ತಯಾರಿಸುತ್ತಾರೆ. ಇಂದಿನ ಮಹಿಳಾ ಜಾಗೃತ ದಿನಗಳಲ್ಲಿ ಇಂತಹ ನಿಲುವು ಎಷ್ಟು ಅಸಮಂಜಸ, ಅಪಾಯಕಾರಿ ಎನ್ನುವತ್ತ ಅವರ ಗಮನವಿರುವುದಿಲ್ಲ.

ಚಲನಚಿತ್ರ ಹಲವಾರು ಕಾರಣಗಳಿಂದ ನಮ್ಮ ದೇಶದಲ್ಲಿ ಅಂತ್ಯಂತ ಪ್ರಭಾವಶಾಲಿ ಮಾಧ್ಯಮವಾಗಿದೆ. ಚಲನಚಿತ್ರ ಇತರ ಮಾಧ್ಯಮಗಳನ್ನೂ ನಿಯಂತ್ರಿಸುತ್ತದೆ. ರೇಡಿಯೋದಲ್ಲೂ ಚಿತ್ರಗೀತೆಗೆ ಸಿಂಹಪಾಲಿರಬೇಕು. ಈ ಗೀತೆಗಳು ಎತ್ತಿಹಿಡಿಯುವ ಮೌಲ್ಯಗಳು ತಾವು ಪ್ರತಿನಿಧಿಸುವ ಚಲನಚಿತ್ರಗಳದ್ದೇ. ಟೆಲಿವಿಷನ್‌ನಲ್ಲೂ ಜನ ಬಯಸುವುದು ಚಲನಚಿತ್ರಗಳನ್ನೇ. ಬಾನುಲಿಯಲ್ಲಿ, ಚಿತ್ರಗೀತೆಯ ನಂತರ ಅತಿ ಜನಪ್ರಿಯ ಕಾರ್ಯಕ್ರಮ ಭಕ್ತಿಸಂಗೀತ, ಹರಿಕಥೆ. ಯಾವುದೇ ಪತ್ರಿಕೆ ಬದುಕುಳಿಯಬೇಕಾದರೆ ರಾಶಿ ಭವಿಷ್ಯ ಕೊಡಲೇಬೇಕು. ಈ ಪರಿಸ್ಥಿತಿಯಲ್ಲಿ ಮಾಧ್ಯಮಗಳಿಂದ ವೈಚಾರಿಕತೆಗೆ ಪ್ರೋತ್ಸಾಹ ಸಿಗುವ ಬದಲು ಅವೈಜ್ಞಾನಿಕ ವಿಚಾರಗಳಿಗೆ ಹೆಚ್ಚಿನ ಪ್ರಚಾರ ಸಿಗುತ್ತದೆ. ಮಾಧ್ಯಮ ಮೂಢನಂಬಿಕೆಗಳನ್ನು ನಿವಾರಿಸುವ ಬದಲು, ಕೆಲವರಿಗೇ ಸೀಮೀತವಾಗಿದ್ದ ಇಂತಹ ನಂಬಿಕೆಗಳನ್ನು ಹೆಚ್ಚು ಜನರಿಗೆ ಹರಡುತ್ತದೆ.

ಭಾರತೀಯ ಸಮಾಜವನ್ನು ಆಳವಾಗಿ ಅಧ್ಯಯನ ಮಾಡಿರುವ ಮಿಲ್ಟನ್ ಸಿಂಗರ್ ಸಮೂಹ ಮಾಧ್ಯಮಗಳು ನಮ್ಮ ಧರ್ಮವನ್ನು ಸೆಕ್ಯೂಲರ್ ಮಾಡುವುದಕ್ಕಿಂತ ಹೆಚ್ಚಾಗಿ ಡೆಮಕ್ರಾಟಿಕ್ ಆಗಿ ಮಾಡುತ್ತಿವೆ ಎಂದು ಹೇಳಿದ್ದಾನೆ. ಇಲ್ಲಿನ ಸಂದರ್ಭದಲ್ಲಿ ಸೆಕ್ಯೂಲರ್ ಎಂದರೆ ಧಾರ್ಮಿಕವೆನಿಸುವ ಭಾವನೆಗಳ ಪ್ರಭಾವ ಕಡಿಮೆಯಾಗುವುದು ಮತ್ತು ಡೆಮಕ್ರಾಟಿಕ್ ಎಂದರೆ ಹೆಚ್ಚು ಜನ ಮತಾಚರಣೆಯಲ್ಲಿ ಪಾಲ್ಗೊಳ್ಳುವುದು ಎಂದು ಅರ್ಥ ಮಾಡಿಕೊಳ್ಳಬಹುದು. ಸಿಂಗರ್ ಹೇಳುವುದು, ಸಮೂಹ ಮಾಧ್ಯಮಗಳು ಹರಡಿದಂತೆ, ಜನರ ಮೇಲಿನ ಧರ್ಮದ ಹಿಡಿತ ಕಡಿಮೆಯಾಗುತ್ತಿಲ್ಲ–ಬದಲಿಗೆ ಹೆಚ್ಚು ಜನರು ಇದರ ಪರಿಧಿಗೆ ಬರುವಂತಾಗುತ್ತಿದೆ. ಹೆಚ್ಚು ಜನರಿಗೆ ಧರ್ಮ ಎಂದರೆ ಕುರುಡು ಆಚರಣೆ ಎಂದಷ್ಟೇ ಆಗುವುದರಿಂದ ಮಾಧ್ಯಮಗಳು ಬೆಳೆದಂತೆ, ಮೂಢನಂಬಿಕೆ, ಕಂದಾಚಾರ, ಪವಾಡಗಳಲ್ಲಿ ವಿಶ್ವಾಸ ಕಡಿಮೆ ಆಗುವ ಬದಲು ಹೆಚ್ಚು ಹೆಚ್ಚು ಜನ ಇಂತಪವುಗಳನ್ನು ನಂಬುವಂತಾಗುತ್ತಿದೆ. ಸಮೂಹ ಮಾಧ್ಯಮಗಳು ಬೆಳೆದಂತೆ ಹೊಸ ಹೊಸ ದೇವರುಗಳು, ಸ್ವಾಮಿಗಳನ್ನು ಹುಟ್ಟಿಕೊಳ್ಳುತ್ತಿದ್ದಾರೆ.

ತಿರುಪತಿ, ಮಂತ್ರಾಲಯ, ಶಬರಿಮಲೈ ಈಗ ಕೋಟ್ಯಂತರ ಜನರನ್ನು ಆಕರ್ಷಿಸುತ್ತಿದ್ದರೆ ಇದರಲ್ಲಿ

ಸಮೂಹ ಮಾಧ್ಯಮಗಳದೂ ದೊಡ್ಡ ಪಾಲಿದೆ ಎನ್ನುವುದನ್ನು ಗಮನಿಸಬೇಕು. ಈ ಕ್ಷೇತ್ರ ದೇವತೆಗಳ ಬಗೆಗಿನ ಚಲನಚಿತ್ರಗಳು, ಧ್ವನಿಮುದ್ರಿಕೆಗಳು, ಈ ಮುದ್ರಿಕೆಗಳ ಬಾನುಲಿ ಪ್ರಸಾರ, ಯಾವುದೇ ಜಾಹೀರಾತು ಆಂದೋಳನಕ್ಕಿಂತಲೂ ಹೆಚ್ಚು ಯಶಸ್ವಿಯಾಗಿ, ಈ ಕ್ಷೇತ್ರಗಳಿಗೆ ಜನಮತ್ತಿಕ್ಕುವಂತೆ ಮಾಡುತ್ತಿವೆ; ಇಲ್ಲಿ ಗಳಿಸಬಹುದಾದ ಲಾಭಗಳನ್ನು ಮನದಟ್ಟು ಮಾಡಿಕೊಡುತ್ತಿವೆ. ಎಲ್ಲರ ಇಷ್ಟಾರ್ಥಗಳನ್ನು ಸಾಧಿಸಲು ಇಲ್ಲಿ ಸಾಧ್ಯ ಎಂದು ಹೇಳುತ್ತಿವೆ. ಈ ಕ್ಷೇತ್ರಗಳ ಬೊಕ್ಕಸವನ್ನು ತುಂಬಿಸುತ್ತಿವೆ. ಎಲ್ಲಾ ಜನಪ್ರಿಯ 'ಹುಚ್ಚು'ಗಳಂತೆ ಇಲ್ಲಿಯೂ ಆಸಕ್ತಿ ಹೆಚ್ಚು ದಿನ ಉಳಿಯುವುದಿಲ್ಲ ನಿಜ. ಉತ್ಸಾಹ ಕೆಲವೇ ವರ್ಷಗಳಲ್ಲಿ ಕಡಿಮೆಯಾಗಬಹುದು. ಆಗ ಮಾಧ್ಯಮಗಳು ಬೇರೆ ಕ್ಷೇತ್ರಗಳನ್ನೂ ಬೇರೆ ದೇವರುಗಳನ್ನೂ ಹುಡುಕಿಕೊಳ್ಳುತ್ತವೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ್ದು ಇಂತಹ ಪ್ರವೃತ್ತಿಗಳಿಗೆ ಮಾಧ್ಯಮ ಪ್ರೋತ್ಸಾಹ ಕೊಡುತ್ತಿದೆ, ಇಂತಹ ಪ್ರೋತ್ಸಾಹ ತುಂಬಾ ಪರಿಣಾಮಕಾರಿ ಎನ್ನುವುದು.

ಇದರ ಜೊತೆಗೆ ಮಾಧ್ಯಮಗಳು ವೈಚಾರಿಕತೆಯ ಪರವಾದ ಕೆಲವು ಲೇಖನ ಭಾಷಣಗಳನ್ನೂ ಪ್ರಚಾರ ಮಾಡಬಹುದು. ಆಗೊಮ್ಮೆ ಈಗೊಮ್ಮೆ ಕೋವೂರು, ನರಸಿಂಹಯ್ಯನವರಂತಹ ಜನರ ವಿಚಾರಗಳಿಗೂ ಅವಕಾಶ ಕೊಡುತ್ತಿರಬಹುದು. ಇಂತಹ ವಿಚಾರಗಳನ್ನು ಜನರು ಒಪ್ಪಿಕೊಳ್ಳುವಂತೆ ಮಾಡಲು ಬೇಕಾದ ಸಿದ್ಧತೆ ಹಾಗೂ ಮುಂದೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗೆಗೆ ಆಗತ್ಯವಾದ ಶ್ರಮವನ್ನು ಮಾಧ್ಯಮದಲ್ಲಿ ಕಾಣುವುದು ಸಾಧ್ಯವಿಲ್ಲ.

ಈ ಪರಿಸ್ಥಿತಿಯಲ್ಲಿ ಸಮೂಹ ಮಾಧ್ಯಮಗಳಿಂದ ವೈಚಾರಿಕತೆ ಹರಡುವುದಕ್ಕೆ ಬೆಂಬಲ ಸಿಗುವ ಬದಲು ಅವೈಚಾರಿಕತೆ ಹರಡಲು ಅವುಗಳೇ ಕಾರಣವಾಗಿವೆ ಎನ್ನುವುದು ಗೋಚರವಾಗುತ್ತದೆ. ಆದರೆ ಸೆನ್ಸಾರ್ ಷಿಪ್ ನಂತಹ ಕ್ರಮದಿಂದ ಇದನ್ನು ತಡೆಗಟ್ಟಬಹುದು ಎಂದು ನಿರೀಕ್ಷಿಸಿದರೆ, ಅದು ಸಮಸ್ಯೆಯನ್ನು ತೀರಾ ಸರಳ ಮಾಡಿದಂತಾಗುತ್ತದೆ. ಪೂರ್ವಪರಿಶೀಲನೆ ಮುಖ್ಯವಾಗಿ ಒಂದು ನಕಾರಾತ್ಮಕ ಕ್ರಮ. ಅದು ಏನು ಇರಬಾರದು ಎಂದು ಹೇಳಬಹುದಷ್ಟೇ ಹೊರತು ಏನಿರಬೇಕು ಎಂದು ಹೇಳಲಾರದು. ಅಲ್ಲದೆ ಒಬ್ಬರ ಗಾಢ ನಂಬಿಕೆ, ಇನ್ನೊಬ್ಬರಿಗೆ ಮೌಢ್ಯದ ಪರಮಾವಧಿ ಎನಿಸುವುದು ಸಾಧ್ಯವಿರುವಾಗ ಯಾವುದು ಇರಬಾರದು ಎಂದು ಪಟ್ಟಿಮಾಡುವುದು ಸುಲಭವಲ್ಲ. ಇಂತಹ ಪ್ರಯತ್ನ ನಡೆದರೆ ಅದರಿಂದ ನಿಜವಾದ ಸೃಜನಶೀಲತೆಗೆ ಧಕ್ಕೆಯಾಗುತ್ತದೆಯೇ ಹೊರತು, ಅವೈಚಾರಿಕತೆಯ ಪ್ರಸಾರಕ್ಕೆ ತಡೆಯಾಗುವುದಿಲ್ಲ. ಹಿಂಸಾದೃಶ್ಯಗಳ ಪ್ರದರ್ಶನವನ್ನು ಪೂರ್ವಪರಿಶೀಲನೆಯ ಬಿಗಿಯಾದ ಕಾನೂನುಗಳೇ ತಡೆಹಿಡಿಯಲು ಶಕ್ತವಾಗಿಲ್ಲದಿರುವಾಗ, ಇದಕ್ಕಿಂತ ತುಂಬಾ ವ್ಯಾಪಕ ಅರ್ಥಹೊಂದುವ ಅವೈಚಾರಿಕತೆಯ ಮೇಲೆ ನಿಯಂತ್ರಣ ಹಾಕುವುದು ಆಗದ ಕೆಲಸ.

ಮುಖ್ಯವಾಗಿ ವೈಚಾರಿಕ ಮನೋಭಾವ ಬೆಳೆಯಬೇಕಾದದ್ದು ಶಿಕ್ಷಣದಿಂದ. ವಿಜ್ಞಾನ, ಸಮಾಜ ಶಾಸ್ತ್ರಗಳನ್ನು ಬೋಧಿಸುವಾಗ ವಿದ್ಯಾರ್ಥಿ ಯೋಚಿಸುವಂತೆ ಮಾಡಬೇಕು. ಏನು, ಏಕೆ, ಹೇಗೆ ಪ್ರಶ್ನೆಗಳನ್ನು ಕೇಳಲು, ಅವುಗಳಿಗೆ ಸಮಂಜಸ ಉತ್ತರ ಕಂಡುಕೊಳ್ಳಲು ಶಾಲೆಗಳಲ್ಲಿ ಅವಕಾಶಕೊಡಬೇಕು. ಈಗ ಪ್ರಾಥಮಿಕಶಾಲೆಯಿಂದಲೇ ವಿಜ್ಞಾನವನ್ನು ಬೋಧಿಸಂತ್ತಿದ್ದರೂ, ಅಲ್ಲಿರುವ ಗಮನವೆಲ್ಲಾ ಶುಷ್ಕ ವಿವರಗಳನ್ನು ಕೊಡುವುದರಲ್ಲಿದೆ. ಪಠ್ಯಪುಸ್ತಕಗಳಲ್ಲಿರುವುದನ್ನು ಬಾಯಿಪಾಠ ಮಾಡಿ ಪರೀಕ್ಷೆಗಳಲ್ಲಿ ಬರೆಯಲು ಮಾತ್ರ ಈಗ ಕಲಿಸಲಾಗುತ್ತಿದೆ. ಇದು ಬದಲಾಗಿ ವಿಜ್ಞಾನದ ಅತಿ ಆಕರ್ಷಕ ಪ್ರಪಂಚವನ್ನು ಮಕ್ಕಳ ಮುಂದೆ ತೆರೆದಿಟ್ಟಾಗ ಮಾತ್ರ ವೈಚಾರಿಕತೆಯ ಪರವಾದ ಮನೋಭಾವ ಬೆಳೆಯಬಹುದು.

ಇಂತಹ ಮನೋಭಾವ ಹುಟ್ಟಿರದೆ, ಅದನ್ನು ಬೆಳೆಸಿಕೊಂಡು ಹೋಗಲು ಮಾಧ್ಯಮಗಳಿಂದ ನೆರವು ಪಡೆಯಬಹುದು. ಆದರಲ್ಲೂ ಜನಪ್ರಿಯತೆಯ ಮೇಲೆ ಯಾವಾಗಲೂ ಅವಲಂಬಿಸಬೇಕಾಗಿಲ್ಲದ ರೇಡಿಯೋ ಅಂತಹ ಮಾಧ್ಯಮ ಈ ನಿಟ್ಟಿನಲ್ಲಿ ಹೆಚ್ಚು ಪ್ರಯೋಜನಕಾರಿಯಾಗಬಹುದು. ಸಮೂಹ ಮಾಧ್ಯಮ ವೈಚಾರಿಕತೆಯನ್ನು ಬೆಳಸಲಾರದು. ಆದರೆ ಇದು ಬೆಳೆಯುವಂತಹ ವಾತಾವರಣ ನಿರ್ಮಿಟ್ಟರೆ ಮಾಧ್ಯಮ ತುಂಬಾ ಪ್ರಭಾವಶಾಲಿಯಾಗಬಲ್ಲದು.

ಯು. ಆರ್. ಅನಂತಮೂರ್ತಿ

ಸಾಮಾಜಿಕ ಬದಲಾವಣೆಗಾಗಿ ಯುವಜನರ ಸಂಘಟನೆ

ನನ್ನನ್ನು ಆಳವಾಗಿ ಕಲಕಿದ ಘಟನೆಯೊಂದನ್ನು ಮೊದಲು ಹೇಳುತ್ತೇನೆ. ಕರ್ನಾಟಕದ ಜನತಾ ಪಾರ್ಟಿಯ ಕರ್ತಾರರೂ ಸೋಶಿಯಲಿಸ್ಟ್ ಟ್ರೇಡ್ ಯೂನಿಯನ್ನಿನ ನಾಯಕರೂ ಆದ ದಿವಂಗತ ಶ್ರೀ ವೆಂಕಟರಾಮ್‌ರವರ ಪ್ರಸ್ತಕ ವೊಂದರ ಬಿಡುಗಡೆಗಾಗಿ ಕೆಲವು ದಿನಗಳ ಹಿಂದೆ ನಾವು ನೆರೆದಿದ್ದಾಗ ಇದು ನಡೆಯಿತು. ಸಮಾಜವಾದಿ ಚಳವಳಿಯ ಪ್ರಮುಖ ನೆಲೆಯಾಗಿದ್ದ ನನ್ನ ತವರು ಜಿಲ್ಲೆ ಶಿವಮೊಗ್ಗದಿಂದ ಒಬ್ಬ ಯುವಕ ನನ್ನನ್ನು ನೋಡಲೆಂದು ಬಂದಿದ್ದ. ಆತ ಹಿಂದೆ ವಿದ್ಯಾರ್ಥಿ ಮುಖಂಡ; ತುರ್ತು ಪರಿಸ್ಥಿತಿಯ ಕಾಲದಲ್ಲಿ ನಿರ್ಭಯವಾಗಿ ಕೆಲಸಮಾಡಿದವ. ಗಂಜಿ ಹಾಕಿ ಇಸ್ತ್ರಿಮಾಡಿದ ಖಾದಿ ಬಟ್ಟೆಯ ಆ ಉಡುಪಲ್ಲಿ ಆತನನ್ನು ನಾನು ಮೊದಲೆಂದೂ ಕಂಡಿರಲಿಲ್ಲ. ಈ ಉಡುಪಿಂದಾಗಿ ಅವನು ನನಗೆ ಒಬ್ಬ 'ನಾಯಕಮಣಿ' ಯಂತೆ ಕಂಡರೂ ಆತನ ಮುಖ ಖಿನ್ನವಾಗಿದ್ದದ್ದು ನೋಡಿ ನನಗೆ ಆಶ್ಚರ್ಯವಾಗಿತ್ತು. ಆತ ಈಗ ಎಲ್ಲಿದ್ದಾನೆ? ಎನ್ನುವ ಅನಿವಾರ್ಯ ಪ್ರಶ್ನೆಯನ್ನು ನಾನು ಕೇಳಬೇಕೆಂದೂ, ತನ್ನ ಉತ್ತರ ಒಪ್ಪಿಸಿ ಪಾರಾಗಬೇಕೆಂದೂ ತವಕದಿಂದ ಅವನು ಕಾಯುತ್ತಿದ್ದ. ತಪ್ಪಿತಸ್ಥನ ಹಾಗೆ ಹೇಳಿದ: "ಬೇರೆಲ್ಲಿಗೆ ಹೋಗಲಿ? ನಮ್ಮ ನಾಯಕ ಈಗೆಲ್ಲಿ ದಾನೋ ಅಲ್ಲೇ ನಾನೂ ಇದ್ದೇನೆ". ಸರಿ, ಆತ ಹೊಸದಾಗಿ ಸಂಪಾದಿಸಿದ್ದ ಈ ಗಂಜಿ ಹಾಕಿ ಇಸ್ತ್ರಿಮಾಡಿದ ಉಡುಪನ್ನು ನೋಡಿ ನಾನು ಅರ್ಧ ಸಂಶಯಿಸಿದ್ದ ಹಾಗೇ, ಆತನ ನಾಯಕ – ಒಂದು ಕಾಲಕ್ಕೆ ನಮ್ಮ ಜಿಲ್ಲೆಯ ರೈತ ಚಳುವಳಿಯಲ್ಲಿ ಯುವ ಸಮಾಜವಾದಿ ನಾಯಕನಾಗಿ ಬಿರುಸಿನ ಹೋರಾಟಗಾರನಾಗಿದ್ದವ–ಕೂಡಾ ಕಾಂಗ್ರೆಸ್ (ಐ) ಸೇರಿ ಮಂತ್ರಿಯಾದುದರಿಂದ, ಇವನೂ ಕಾಂಗ್ರೆಸ್ (ಐ) ನಲ್ಲಿದ್ದ. ಹಾಗಿದ್ದರೂ, ಒಂದು ಕಾಲಕ್ಕೆ ತನ್ನ ಸ್ಫೂರ್ತಿಯ ಸೆಲೆಯಾಗಿದ್ದ ವೆಂಕಟರಾಮ್‌ರವರ ಬಗ್ಗೆ ದುಃಖ ಸೂಚಿಸಲು ಅಷ್ಟು ದೂರದಿಂದ ಬೆಂಗಳೂರಿಗೆ ಬಂದಿದ್ದನಲ್ಲ ಎಂಬುದು ನನ್ನನ್ನು ಕಲಕಿತ್ತು.

ಈ ಯುವಕನ ಈ ಕಥೆ, ನನಗನ್ನಿಸುವ ಹಾಗೆ, ಪ್ರಜಾ ಪ್ರಭುತ್ವವಾದೀ ರಾಜಕೀಯ ಪಕ್ಷಗಳ ಯುವ ಚಳುವಳಿಗಳಿಗೆ ಸೇರಿದ ಅನೇಕ ಯುವಜನರ ಕಥೆಯೂ ಕೂಡ. ತಮ್ಮ ವಿದ್ಯಾಭ್ಯಾಸವನ್ನು ನಿರ್ಲಕ್ಷಿಸಿ, ಈ ಸ್ಪರ್ಧಾ ಪ್ರಪಂಚದಲ್ಲಿ ಯಶಸ್ಸು ಪಡೆಯುವ ಆಕಾಂಕ್ಷೆಗಳನ್ನು, ಆದರ್ಶಗಳಿಗೆ ಕನಸುವ ತಮ್ಮ ಎಳೆಯ ಪ್ರಾಯದಲ್ಲಿ ತ್ಯಜಿಸಿ, ಎಡಪಂಥೀಯರಾದವರು ಇವರು. ಸಂಸಾರದ ಹಿರಿಯರಿಗೆ ಇವರ ಬಗ್ಗೆ ಚಿಂತೆ ಪತ್ತಿಕೊಂಡಿರುತ್ತದೆ, ತಮ್ಮ ಆಗತ್ಯದ ಖರ್ಚಿಗಾಗಿ ಸಹಾ ಮನೆಯಿಂದ ಹಣವನ್ನು ಇವರು ಕೇಳುವಂತಿಲ್ಲ. ಮನೆಯಿಂದ ದೂರಾಗುತ್ತ ಹೋದಹಾಗೆ ಅವರು ತಮ್ಮ ದೈನಂದಿನ ಆಗತ್ಯಗಳಿಗೆ ಯಾರಾದರೊಬ್ಬ ರಾಜಕೀಯ ಪಕ್ಷದ ಸ್ಥಳೀಯ ಮುಖಂಡನ ಮೇಲೇ ಹೆಚ್ಚು ಹೆಚ್ಚು ಆತುಕೊಳ್ಳಲಿಕ್ಕೆ ಪ್ರಾರಂಭಿಸುತ್ತಾರೆ. ಆತ ವಿರೋಧ ಪಕ್ಷದ ನಾಯಕ ನೇನಾದರೂ ಆಗಿದ್ದರೆ, ತನ್ನ ಸುತ್ತಲಿರುವ ಯುವ ಜನರಿಗೆ ತಾವೆಲ್ಲರೂ ಮೂಲಭೂತವಾದ ಹಾಗೂ ಪ್ರಮುಖವಾದ ಸಾಮಾಜಿಕ ಬದಲಾವಣೆಗಳಿಗಾಗಿ ಹೋರಾಡುತ್ತಿದ್ದೇವೆಂಬ ಭ್ರಮೆಯಲ್ಲಿರುವಂತೆ ಮಾಡುತ್ತಾನೆ. ಹೆಚ್ಚಿನ ಸಾರಿ, ರಾಜಕೀಯ ಸಂಘಟನೆಗಳಲ್ಲಿ ಕೆಲಸ ಮಾಡುವ ಈ ಯುವಕರಿಗೆ ಅವರ ನಾಯಕರ ಸೂಕ್ಷ್ಮವಾದ ಮತ್ತು ಗೊಂದಲಮಯವಾದ ಮನಸ್ಸಿನ ವ್ಯಾಪಾರಗಳ ಸುಳಿವು ತಿಳಿಯುವುದೇ ಇಲ್ಲ. ಅವರ ನಾಯಕರು ಆಡಳಿತದಲ್ಲಿರುವ ಪಕ್ಷದ ಜತೆಗೆ ನಿರಂತರಾಗಿರುವುದು ಕೇವಲ ಹುಸಿಯುದ್ಧದಲ್ಲಿ ಎಂಬುದು ಅವರಿಗೆ ಗೊತ್ತಿರುವುದಿಲ್ಲ. ತಮ್ಮ ನಾಯಕರ ಉದ್ರೇಕಕಾರಿ ಭಾಷಣಗಳನ್ನು, ಮಾತುಗಳನ್ನು ತಂಬ ಪ್ರಾಮಾಣಿಕವಾದದ್ದೆಂದು ಅವರು ಸ್ವೀಕರಿಸಿಬಿಡುತ್ತಾರೆ. ಹೆಚ್ಚೆಚ್ಚು ಉದ್ರೇಕಕಾರಿಯಾಗಿರುವ ಭಾಷಣಗಳು, ಪ್ರಾಯಶಃ, ಆಳುವ ಪಕ್ಷಕ್ಕೆ ಅವರು ತೀರ ಸಮೀಪವಾಗುತ್ತಿರುವುದನ್ನು ಮುಚ್ಚಿಡುವ ಉಪಾಯಗಳು ಇರ

ಬಹುದೆಂಬ ಅನುಮಾನ ಅವರನ್ನು ಕಾಡುವುದಿಲ್ಲ. ತನ್ನ ತಪ್ಪನ್ನು ಆತ ಗುರುತಿಸಿಕೊಳ್ಳುವಷ್ಟರೊಳಗೇ ತನ್ನ ದೈನಂದಿನ ಅಗತ್ಯಗಳಿಗೆ ಆತ ಎಂದಿಗಿಂತ ಹೆಚ್ಚಾಗಿ ತನ್ನ ನಾಯಕನ ಮೇಲೆ ಅವಲಂಬಿತನಾಗಿರುತ್ತಾನೆ; ಹಾಗಾಗಿ ಅವನ ಆದರ್ಶವಾದ ನಿಧಾನವಾಗಿ ಲಡ್ಡಾಗುತ್ತಿರುತ್ತದೆ. ತನ್ನ ನಾಯಕ ಪಕ್ಷಾಂತರಮಾಡಿ, ಆದಕ್ಕೆ ಕಾರಣಗಳನ್ನು ನೀಟಾಗಿ ತರ್ಕಸಮ್ಮತವಾಗುವ ಹಾಗೆ ವಿವರಿಸಿದ ಮೇಲೆ, ತನ್ನ ದಿನನಿತ್ಯ ಪೂರೈಕೆಗಳ ಆಗತ್ಯಗಳೂ ಅದರಲ್ಲಿ ಬೆರೆತು ಕೊಂಡಿರುವುದರಿಂದ ಆತ ಅದನ್ನು ಒಪ್ಪಿಕೊಂಡುಬಿಡುತ್ತಾನೆ. ಈಗ ಇವನು ಮಧ್ಯವರ್ತಿಯಾಗಿಬಿಟ್ಟ. ತನ್ನ ನಾಯಕನ ಏಜೆಂಟನಾಗುತ್ತಾನೆ. ಜನರು, ಆ ನಾಯಕನಿಂದ ತಮಗೆ ಆಗಬೇಕಾದ ಕೆಲಸಗಳಿಗಾಗಿ ಇವನನ್ನು ಓಲೈಸಲು ಬರುತ್ತಾರೆ. ಇವನಿಗೆ ಶೇಕಡಾವಾರು ಲಾಭ. ಆದರೆ ಪ್ರಾಯಶಃ, ಈಗಲೂ, ತನ್ನ ಅತ್ಯಂತ ಒಳ ಪ್ರಜ್ಞೆಯಲ್ಲಿ ಅವನಿಗೆ ತಾನು ತಪ್ಪಿತಸ್ಥನೆಂದು ಅನ್ನಿಸುತ್ತಲೇ ಇರುತ್ತದೆ.

ಎಲ್ಲರಿಗೂ ಹೀಗಾಗುತ್ತದೆಂದು ನಾನೇನೂ ಹೇಳುತ್ತಿಲ್ಲ. ಸತ್ವಪುಳ್ಳವರು ಈ ಸೆಳವುಗಳಿಂದ ತಪ್ಪಿಸಿಕೊಳ್ಳುತ್ತಾರೆ. ಆದರೆ ಉಳಿದ ಅಧಿಕ ಸಂಖ್ಯಾತರಿಗೆ ಇದು ಸಾಧ್ಯವಾಗುವುದಿಲ್ಲ.

ಇದನ್ನು ಹೇಗೆ ತಡೆಗಟ್ಟಬಹುದು ? ನನಗೆ ತಿಳಿದ ಹಾಗೆ, ಒಂದೇ ಒಂದು ದಾರಿಯೆಂದರೆ, ಒಂದು ಪಕ್ಷಕ್ಕೆ ಸಂಬಂಧಿಸಿ ಕೆಲಸ ಮಾಡುತ್ತಿರುವ ಕ್ರಿಯಾಶೀಲ ಯುವಕರಿಗೆ ಬದುಕನ್ನು ನಿರ್ವಹಿಸಲಿಕ್ಕೆ ಬೇಕಾದ ಆಗತ್ಯಗಳನ್ನು ಪೂರೈಸುವುದು. ಇದು ವ್ಯಕ್ತಿನಿರಪೇಕ್ಷವಾಗಿ ನಡೆಯಬೇಕು. ಒಂದು ರಾಜಕೀಯ ಸಂಘಟನೆಯಲ್ಲಿ ಕೆಲಸ ಮಾಡುತ್ತಿರುವ ಯುವಕರು ಯಾವನೇ ಒಬ್ಬ ವ್ಯಕ್ತಿಯ ನೇರ ಆಶ್ರಯದಲ್ಲಿ ಸಿಕ್ಕಿಕೊಳ್ಳಬಾರದು. ಹೊಸನಾಯಕತ್ವದ ಉದ್ಭವಕ್ಕೆ ಮತ್ತು ರಾಜಕೀಯ ಸಂಘಟನೆಯನ್ನು ಸತತವಾಗಿ ಜೀವಂತವಾಗಿಡುವುದಕ್ಕೆ ಸಾಧ್ಯವಾಗಬಲ್ಲ ಕ್ರಿಯಾತ್ಮಕ ಯುವಪಡೆಯೊಂದನ್ನು ಬೆಳೆಸಬೇಕಾಗಿದ್ದರೆ, ಇದು ಬಹಳ ಪ್ರಮುಖ ಹಾಗೂ ಅಗತ್ಯ.

ಒಂದು ಆರೋಗ್ಯಕಾರಿ ಯುವ ಚಳವಳಿಗಾಗಿ ನಾನು ಮುಂದಿಡುವ ಎರಡನೆಯ ಪರತ್ತೆಂದರೆ ಇದು : ನಮ್ಮ ರಾಜಕೀಯ ಭಾಷಣಗಳ ಹಾಗೂ ಚರ್ಚೆಗಳ ಸ್ವರೂಪದಲ್ಲಿ ಸಂಪೂರ್ಣವಾದ ಬದಲಾವಣೆಯಾಗಬೇಕು. ನಾವು ಸಾರ್ವಜನಿಕವಾಗಿ ಆಡುವ ಎಲ್ಲ ಮಾತುಗಳೂ ಸ್ಪಷ್ಟವಾದ ತಾತ್ತ್ವಿಕ ಮತ್ತು ವ್ಯಾವಹಾರಿಕ ತಿಳಿವಿನ ಮೇಲೆ ಭದ್ರವಾಗಿ ನೆಲೆಗೊಂಡಿರಬೇಕು. ಇಲ್ಲವಾದರೆ ಜನಸಾಮಾನ್ಯರು ದಿಗ್ಭ್ರಮೆಗೊಂಡು ಎಲ್ಲ ಚತುರ ರಾಜಕೀಯ ಭಾಷಣಗಳ ಬಗ್ಗೆಯೂ ಸಂಶಯಗ್ರಸ್ತರಾಗುತ್ತ ಹೋಗುತ್ತಾರೆ. ಯಾಕೆ ಒಬ್ಬ ರಾಜಕಾರಣಿ ಆಡಳಿತ ಪಕ್ಷದಲ್ಲಿದ್ದಾಗ ಒಂದು ರೀತಿ ಮಾತಾಡಿ, ವಿರೋಧ ಪಕ್ಷದಲ್ಲಿದ್ದಾಗ ಸಂಪೂರ್ಣ ಬೇರೆಯೇ ರೀತಿಯಲ್ಲಿ ಮಾತಾಡುತ್ತಾನೆ ? ಒಂದು ದಿನ, ಕ್ರಿಯಾಶೀಲ ದಲಿತ ಯುವ ಬರಹಗಾರ ದೇವನೂರು ಮಹಾದೇವ ನನಗೆ ಹೇಳಿದರು : "ಇದು ಬರೇ ನಾಟಕವೇ ? ಅವರು ಅವಸರದಲ್ಲಿ ವೇಷ ಬದಲಾಯಿಸಬಲ್ಲ ನಟರು ಮಾತ್ರರೆ?" ಈಗ ವಿರೋಧ ಪಕ್ಷದಲ್ಲಿರುವ ಈ ಯುವ ಸಮಾಜವಾದಿ ನಾಯಕನಿಗೆ ತಾನು ಮಂತ್ರಿಯಾಗಿದ್ದಾಗ ಈ ಸಾಮಾಜಿಕ–ಆರ್ಥಿಕ ಸಮಸ್ಯೆಗಳ ಬಗ್ಗೆ ತಿಳಿವೇ ಇರಲಿಲ್ಲವೇ ? ಅಷ್ಟು ಬೇಗ ಇವ ಮಾನವೀಯನೂ ಪ್ರಜ್ಞಾವಂತನೂ ಆಗಬಲ್ಲನೇ ? ವಾಸ್ತವವನ್ನು ಗುರುತಿಸುವ ನಮ್ಮ ಸಂವೇದನೆಗಳು ಅಷ್ಟು ಮೂಲಭೂತವಾಗಿ ಮತ್ತು ಅಷ್ಟು ಥಟ್ಟನೆ ಬದಲಾಗಬಲ್ಲವೇ ? ಇವರೆಲ್ಲರೂ ತಾವು ಸದ್ಯ ಹಾಕಿಕೊಂಡ ವೇಷದ ಆಗತ್ಯಗಳನ್ನು ಮಾತ್ರ ಪೂರೈಸುತ್ತಿದ್ದಾರೆಯೇ? – ನಮ್ಮ ರಾಜಕೀಯದ ಸ್ವರೂಪ ಈ ನಿಟ್ಟಿನಿಂದ ಬದಲಾಗದೇ ಉಳಿದರೆ ಜನರು ಇನ್ನಷ್ಟು ಅನುಮಾನಿಗಳಾಗಿ ರಾಜಕೀಯದ ನೈತಿಕತೆಯನ್ನೇ ಪ್ರಶ್ನಿಸುವುದು ಖಂಡಿತ. ಆದುದರಿಂದ ಈ ಕೆಳಗಿನ ವಿಷಯಗಳ ಬಗ್ಗೆ ನಿಮಗೆ ಸ್ಪಷ್ಟವಾದ ಅರಿವಿರಬೇಕೆಂಬುದು ನನ್ನ ಕಳಕಳಿಯ ಸೂಚನೆ :

ಅ) ನಮ್ಮ ದೇಶ ಎದುರಿಸುತ್ತಿರುವ ಕಡು ಕಷ್ಟಗಳು– ಯಾವುದೇ ರಾಜಕೀಯಪಕ್ಷ ಅಧಿಕಾರಕ್ಕೆ ಬಂದರೂ ಮಾಯವಾಗದೇ ಉಳಿದುಬಿಡುವ ಕಷ್ಟಗಳು– ಯಾವುವು ?

ಆ) ಸದ್ಯದ ಸಾಮಾಜಿಕ–ಆರ್ಥಿಕ ಹಾಗೂ ಬ್ಯೂರೋಕ್ರಟಿಕ್ ವ್ಯವಸ್ಥೆಯಲ್ಲಿ ಯಾವುದೇ ಸರಕಾರವಾದರೂ – ಅದು ಶ್ರೀಮತಿ ಇಂದಿರಾಗಾಂಧಿಯವರ ನಾಯಕತ್ವದ್ದಿರಲಿ ಅಥವಾ ಶ್ರೀ ಚಂದ್ರಶೇಖರ್‌ರವರ ನಾಯಕತ್ವದ್ದೇ ಇರಲಿ – ಕಾನೂನಿನ ಮೂಲಕ ಮಾಡಬಹುದಾದ್ದು ಮತ್ತು ಕೇವಲ

ಶಾಸನದ ಮೂಲಕ ಮಾಡಲಿಕ್ಕೆ ಸಾಧ್ಯವಾಗದೇ ಇರಬಹುದಾದ್ದು ಏನು ?

೪) ಹಾಗಿದ್ದಲ್ಲಿ ಇದನ್ನು ಮೀರಲಿಕ್ಕೆ ಜನರಿಂದ ಯಾವ ರೀತಿಯ ತ್ಯಾಗಗಳು ಮತ್ತು ಸಹಭಾಗಿತ್ವಗಳು ಅಗತ್ಯ ?

"ಅನುಕೂಲ ರಾಜಕಾರಣ"ದ ಹೆಸರಲ್ಲಿ ನಾವು ಜನರನ್ನು ಮೋಸಮಾಡಬಾರದು. ಪ್ರತೀ ಸಾರಿ ಇಂದಿರಾಗಾಂಧಿಯನ್ನು ಅಥವಾ ಜನತಾಪಕ್ಷವನ್ನು ಅಧಿಕಾರಕ್ಕೇರಿಸಿದಾಗಲೂ ನಮ್ಮ ಜನ, ಏನೋ ಪವಾಡ ಸಂಭವಿಸುತ್ತದೆಯೆಂಬ ಭ್ರಮೆಯಲ್ಲಿದ್ದರು. ಆದರೆ ಹಾಗಾಗಲಿಲ್ಲ. ಆದರಿಂದಾಗಿ ಅವರು ವಂಚಿತರಾಗಿದ್ದಾರೆ. ನಾವು ಅವೇ ತಪ್ಪುಗಳನ್ನು ಪುನಃ ಮಾಡುವ ಹಾಗಾಗಬಾರದು. ನಮ್ಮ ಇವತ್ತಿನ ಕಷ್ಟಗಳೇನು ಅನ್ನುವುದರ ಬಗ್ಗೆ ನಮಗೆ ಸ್ಪಷ್ಟವಾದ ಗ್ರಹಿಕೆಯಿರಬೇಕು. ಇದರಲ್ಲಿ ಎಷ್ಟು ಇಂದಿರಾ ಸರಕಾರದ ತಪ್ಪುಗಳಿಂದ ಫಲಿಸಿದ್ದು ಮತ್ತು ಎಷ್ಟು, ಒಂದು ವೇಳೆ ಜನತಾಪಕ್ಷವೇ ಅಧಿಕಾರದಲ್ಲಿದ್ದರೂ ಇದ್ದೇ ಇರುವಂಥವು ? ಈ ಬಗ್ಗೆ ನಾವು ಪ್ರಾಮಾಣಿಕವಾಗಿದ್ದರೆ, ರಾಜಕೀಯ ಪಕ್ಷಗಳನ್ನು ಚಾಲನೆಯಲ್ಲಿಡುತ್ತಾ ಬಂದಿರುವ ಮೆಲೋಡ್ರಾಮಾವನ್ನು, ಜನರಂಜಕ ಚತುರ ಜಿಮ್ಮಿಕ್ಕುಗಳನ್ನು ಬಿಟ್ಟುಕೊಡಬೇಕಾಗಿ ಬರುತ್ತದೆ. ಇದರಿಂದಾಗಿ, ಖಂಡಿತ ಜನರ ಜತೆ ನಮ್ಮ ವಿಶ್ವಾಸಾರ್ಹತೆಯು ಮಟ್ಟ ಅಧಿಕವಾಗಿರುತ್ತದೆ. ಉದಾಹರಣೆಗೆ ಕಾಂಗ್ರೆಸ್ (ಐ) ಯನ್ನೇ ತೆಗೆದುಕೊಳ್ಳಿ. ತಾವು ಅಧಿಕಾರದಲ್ಲಿರುವಲ್ಲಿ ಯಾವುದೇ ಮುಷ್ಕರಗಳಾಗಲೀ, ಚಳವಳಿಗಳಾಗಲೀ ಆವರಿಗೆ ಬೇಡ. ಅಲ್ಲೆಲ್ಲ ದೇಶ ಕಟ್ಟುವ ಪವಿತ್ರ ಕಾರ್ಯದಲ್ಲಿ ಎಲ್ಲ ಜನರೂ ಒಟ್ಟು ಸೇರಬೇಕೆಂಬ ಹಂಬಲ ಅವರಿಗೆ. ಆದರೆ ತಾವು ಅಧಿಕಾರದಲ್ಲಿಲ್ಲದ ಬಂಗಾಳ ಅಥವಾ ಕೇರಳದಂಥ ರಾಜ್ಯಗಳಲ್ಲಿ ಗೊಂದಲ ಬೇಕು ಅವರಿಗೆ. ಇಲ್ಲದಿದ್ದ ಗೊಂದಲವನ್ನೂ ಅವರೇ ಸೃಷ್ಟಿಸುತ್ತಾರೆ. ಇದು ಅಪ್ಪಟ ಸಿನಿಕತನ. ಜೀವನ ದುದ್ದಕ್ಕೂ ಹಸಿವಿನಲ್ಲಿ ಬದುಕುತ್ತಿದ್ದರೂ, ಸ್ವಮರ್ಯಾದೆಯನ್ನೂ, ಆಪ್ತರ ಬಗ್ಗೆ ಪ್ರೀತಿಯನ್ನೂ ಉಳಿಸಿಕೊಂಡಿರುವ ನಮ್ಮ ದೇಶದ ದಟ್ಟ ದರಿದ್ರರಿಗೆ ಮತ್ತು ಆವ ಮಾನಿತ ಮಂದಿಗೆ, ಈ ದೇಶದ ಕಷ್ಟಗಳನ್ನು ಪರಿಹರಿಸುವ ಯಾವ ಸರ್ವಶಕ್ತ ಮಂತ್ರವೂ ಇಲ್ಲವೆಂಬುದನ್ನು ತಿಳಿಯಹೇಳಬೇಕು. ವಸ್ತುನಿಷ್ಠೆಯಿಲ್ಲದೇ, ನಮ್ಮ ಬದುಕಿನ ಕಟುವಾಸ್ತವಗಳನ್ನು ನಿಷ್ಠುರವಾಗಿ ಗುರುತಿಸಿಕೊಳ್ಳದೇ ಯಾವುದೇ ರೀತಿಯ ನಿಜವಾದ ಕನಿಕರವೂ ಸಾಧ್ಯವಿಲ್ಲ. ಇದು ತುಂಬಾ ಕಷ್ಟದ ಕೆಲಸ. ತಾತ್ವಿಕ ತಿಳಿವನ್ನೂ, ನೇರವಾದ ವ್ಯಾವಹಾರಿಕ ಕ್ರಿಯೆಯನ್ನೂ ಏಕಕಾಲಕ್ಕೆ ನಿರೀಕ್ಷಿಸುವ ಕಷ್ಟದ ಕೆಲಸ ನಮ್ಮ ರಾಜಕಾರಣಿಗಳು – ಎಲ್ಲ ಪಕ್ಷಗಳಲ್ಲೂ ಇವರಿದ್ದಾರೆ – ಈ ಅಗತ್ಯವನ್ನು ಮನಗಂಡಿಲ್ಲ. ಓಟಿನ ಪೆಟ್ಟಿಗೆ ಮೇಲೆ ಮಾತ್ರ ಅವರ ಕಣ್ಣು ಆದರೆ ಯುವಕರು ತಮ್ಮ ಆದರ್ಶವಾದವನ್ನು ಗಾಳಿಗೆ ತೂರಿ ಸದ್ಯದ ಅನುಕೂಲ ಯಶಸ್ಸಿಗಾಗಿ ಹಾತೊರೆಯಬಾರದು.

ಇಂದಿರಾಗಾಂಧಿಯ ಜತೆಗೆ ನಮ್ಮ ದೇಶ, ಜನರಂಜಕವಾದ ಭ್ರಮಾ ರಾಜಕೀಯವೆಂದು ನಾನು ಕರೆಯಲಿಚ್ಛಿಸುವ ಯುಗಕ್ಕೆ ಕಾಲಿಟ್ಟಿತು. ಈ ರೀತಿಯ ರಾಜಕೀಯವೇ—ರಷ್ಯಾ ಕೂಡ ಮೂರನೆಯ ಜಗತ್ತಿನಲ್ಲಿ ಪ್ರೋತ್ಸಾಹಿಸುತ್ತಿರುವಂತೆ ಕಾಣುವ ರಾಜಕೀಯವೇ—ನಮ್ಮ ನಾಶಕ್ಕೆ ಕಾರಣವಾಗಿದೆ. ಬಡವರನ್ನು ಭ್ರಮೆಯ ಮತ್ತಿಗೆ ತಳ್ಳುವುದಕ್ಕಿಂತ ಪೆಚ್ಚಿನ ಕ್ರೌರ್ಯ ಬೇರೆ ಇಲ್ಲ. ಮತ್ತೆ ಈ ಆಟದಲ್ಲಿ ಶ್ರೀಮತಿ ಇಂದಿರಾಗಾಂಧಿಗಿಂತ ಹೆಚ್ಚು ಪಳಗಿರುವವರು ಬೇರೆ ಯಾರೂ ಇಲ್ಲದಿರುವುದರಿಂದ, ನಟನೆಯಲ್ಲಿ, ಬರೀ ಜಿಮ್ಮಿಕ್ಕುಗಳಲ್ಲಿ, ನಯವಾದ ಸುಳ್ಳುಗಳಲ್ಲಿ ನೀವು ನಿಮ್ಮ ಸಮಯವನ್ನು ದುಂದು ಮಾಡಬಾರದೆಂದು ನನ್ನ ವಿನಂತಿ.

ನನ್ನ ಮೂರನೆಯ ಪಾಯಿಂಟು, ರಾಜಕೀಯ ಪಕ್ಷದ ಯುವಪಡೆಯು ಜನರ ದೃಷ್ಟಿಯಲ್ಲಿ ನಂಬಿಕೆ ಗಳಿಸುವ ಮತ್ತು ಆಥೆಂಟಿಕ್ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಹಾಯಕವಾಗುವ ವಿಷಯವನ್ನು ಕುರಿತದ್ದು. ಮುಷ್ಕರಗಳ ಒಟ್ಟೊಟ್ಟಿಗೇ ಸೃಜನಶೀಲ ಸ್ವಯಂಸೇವೆಯನ್ನು ನಡೆಸುವ ಮಾರ್ಗಗಳನ್ನು ನಾವು ಕಲಿಯಬೇಕು. ಲೋಹಿಯಾ ಒಮ್ಮೆ ಹೇಳಿರುವಂತೆ ಯಾವುದೇ ನಿಜವಾದ ಕ್ರಾಂತಿಯೂ ಕೇವಲ ಶುದ್ಧ ದ್ವೇಷದಿಂದ, ಕೇವಲ ಶುದ್ಧ ಪ್ರೇಮದಿಂದ ಸಫಲವಾಗಲಾರದು. ಹೃದಯ ಪರಿವರ್ತನೆಯು ಬರೀ ಪ್ರೇಮದ ಮಾತುಗಳನ್ನಾಡುವುದರಿಂದಾಗಲೀ ಅಥವಾ ಬರೀ ದ್ವೇಷದ ಘೋಷಣೆಗಳಿಂದಾಗಲೀ ಸಾಧಿತವಾಗುವುದಿಲ್ಲ. ಗಾಂಧೀಜಿಯವರನ್ನು ಉದಾಹರಿಸುತ್ತ ಲೋಹಿಯಾ ಹೇಳುತ್ತಾರೆ: "ಕರುಣೆ

ಯಿಂದ ಪನಿಯಾಗುವ ಕಣ್ಣು ಸಿಟ್ಟಿನಲ್ಲಿ ಕೆಂಪೂ ಆಗ ಬೇಕು". ಕ್ರಾಂತಿಯು ಪ್ರೇಮದಿಂದ ಮಾತ್ರವಲ್ಲದೇ ಕೋಪದಿಂದಲೂ ತನ್ನ ಜೀವಸತ್ವವನ್ನು ಪಡೆಯುತ್ತದೆ. ಯಾವ ಕ್ರಾಂತಿಗಾಗಲೀ ಇದು ಮೂಲಭೂತ ಅವಶ್ಯಕತೆ. ಕೋಪ ತುಂಬ ಮುಖ್ಯ ಮಾತ್ರವಲ್ಲ–ಅದು ಆಳವೂ, ವ್ಯಕ್ತ-ನಿರಪೇಕ್ಷವೂ ಆಗಿರಬೇಕು. ಮನುಷ್ಯನ ಆತ್ಮ ಗೌರವವನ್ನು ಕಾಪಾಡುವ ಅವನ ಮೂಲಭೂತ ಹಕ್ಕು ಗಳಿಗಾಗಿ ಸ್ವಯಂಸೇವೆ ಮತ್ತು ಚಳವಳಿಗಳ ಮೂಲಕ ಜನರ ದೈನಂದಿನ ಬದುಕಿನಲ್ಲಿ ತೊಡಗಿಕೊಂಡಿದ್ದವರು ಮಾತ್ರ ಪ್ರೇಮದ ಜತೆ ಕೋಪವನ್ನೂ ಒಡಗೂಡಿಸಿ ಕೊಳ್ಳುವುದನ್ನು ಕಲಿಯುತ್ತಾರೆ. ಒಂದು ರಾಜಕೀಯ ಪಕ್ಷವನ್ನು ಎತ್ತಿಕಟ್ಟುವುದಕ್ಕಾಗಿ ಮಾತ್ರ ಉದ್ದೇಶಿತ ವಾದಂಥ, ಅಥವಾ ಅಧಿಕಾರದಿಂದ ತಾತ್ಕಾಲಿಕವಾಗಿ ಹೊರಗಿರುವ ಕೆಲವೇ ವ್ಯಕ್ತಿಗಳ ಸ್ವಾರ್ಥಪರ ಆಶಯ ಗಳ ಈಡೇರಿಕೆಗೆ ಮಾತ್ರ ಸಹಾಯಕವಾಗುವಂಥ, ಬದಲಿ ಮುಷ್ಕರಕ್ಕಾಗಿ ನಡೆಯುವ ಮುಷ್ಕರಗಳು ಯುವ-ಜನರ ಚೇತನದ ಸೆಲೆಯನ್ನೇ ಬತ್ತಿಸುತ್ತವೆ. ಹೆಚ್ಚೂ ಕಡಿಮೆ ಭಾರತದ ಎಲ್ಲಾ ರಾಜಕೀಯ ಗುಂಪುಗಳೂ ತಮ್ಮ ಚಿಂತನೆಯಲ್ಲಾಗಲೀ ಕ್ರಿಯೆಯಲ್ಲಾಗಲೀ ತಮಗೆ ನಿಜವಾಗಿ ಅನ್ನಿಸದಿರುವ, ಅನ್ನಿಸಿದ್ದರೂ ಸಾಕಷ್ಟು ಕಾಲ ತಮ್ಮಿಂದ ಉಳಿಸಿಕೊಂಡು ಬರಲಾಗದ ಕೋಪದ ಭಂಗಿಗಳಲ್ಲಿ ನಿರತವಾಗಿರುತ್ತವೆ. ಹಾಗಾಗಿ, ಹೆಚ್ಚಿನ ಬಾರಿ, ಮುಷ್ಕರಗಳ ನಂತರ ದೀರ್ಘಾವಧಿಯ ನಿರ್ವಿಕಾರ ಮೌನ ಕವಿದಿರುತ್ತದೆ. ಇದು ದೇಶದಲ್ಲಿ ಹತಾಶೆಯ ಮನೋಭಾವಕ್ಕಷ್ಟೇ ಇಂಬುಕೊಡಬಲ್ಲುದು. ಆದುದ ರಿಂದ ಯುವಕರು ಸ್ವಯಂಸೇವೆಯಲ್ಲಿ ತೊಡಗಿಕೊಳ್ಳ ಬಹುದಾದ ಹೊಸ ಮಜಲುಗಳನ್ನು ನಾವು ಶೋಧಿಸ ಬೇಕು. ಚಳವಳಿ ಮತ್ತು ಸ್ವಯಂಸೇವೆಗಳು ಪರ್ಯಾಯ ವಾಗಿ ಬರಬಹುದು, ಜತೆಜತೆಯಾಗಿ ಬರಬಹುದು, ಮತ್ತು ಒಂದಕ್ಕೊಂದು ಪೂರಕವಾಗಿ ಬರಬಹುದು. ಯುವಕರು ಒಂದು ಸೇನೆಯಂತೆ ಕೆಲಸ ಮಾಡಬಲ್ಲ ಹಲವು ಮಜಲುಗಳು ಇಲ್ಲಿವೆ. ಸದ್ಯ ನನ್ನ ಮನಸ್ಸಿಗೆ ಹೊಳೆಯುತ್ತಿರುವ ಅಂಥ ಒಂದು ಮಜಲೆಂದರೆ ನಿರಕ್ಷರತೆಯದು. ಅಕ್ಷರಜ್ಞಾನವೇ ಜನರಿಗೆ ಅಧಿಕಾರ. ರೇಡಿಯೋ ಮತ್ತು ಟೆಲಿವಿಷನ್ನುಗಳಂಥ ಬಿಸಿ ಮಾಧ್ಯಮ ಗಳ ಮೂಲಕ ಸಿನಿಕತನದ ಮತ್ತು ಸರ್ವಾಧಿಕಾರೀ ಮನೋಭಾವದ ಒಂದು ಸರಕಾರ, ನಿರಕ್ಷರಿ ಜನರ ಗುಂಪಿನ ಕಣ್ಣಿಗೆ ಮಣ್ಣೆರಚಬಲ್ಲುದು. ಜನರಿಗೆ ಕೊನೆಯ ಪಕ್ಷ ಓದಲಿಕ್ಕಾದರೂ ಬರುವ ಹಾಗಿದ್ದರೆ ಅವರ ಬೌದ್ಧಿಕ ಯೋಚನಾಕ್ರಮಗಳನ್ನು ಮುಟ್ಟುವ ಕೆಲ ವಾದರೂ ಮಾರ್ಗಗಳು ಪ್ರಭುತ್ವ ಶಕ್ತಿಯಿಂದ ಹೊರಗಿರುವ ನಮಗೆ ಸಿಕ್ಕಂತಾಗುತ್ತದೆ. ಅಕ್ಷರಜ್ಞಾನ ವಷ್ಟೇ ಸಾಕಾಗುವುದಿಲ್ಲ ಎಂಬುದು ನನಗೆ ಗೊತ್ತು; ನಿರಕ್ಷರತೆಯನ್ನು ನಮ್ಮಲ್ಲಿ ಹಲವರು ಇನ್ನೂ ಅಪಾಯ ವೆಂದು ಗುರುತಿಸಿಲ್ಲ–ಯಾಕೆಂದರೆ ನಮ್ಮಲ್ಲಿ ಆರೋಗ್ಯಕರ ವಾದ ಮೌಖಿಕ ಪರಂಪರೆಯೊಂದು ಇದೆಯೆಂದು ನಾವು ನಂಬುವುದರಿಂದ. ನಾವು ಹಾಗೆ ನಂಬುವುದರಲ್ಲಿ ಸತ್ಯವೂ ಇಲ್ಲವೆಂದಲ್ಲ. ಆದರೆ ಈ ಬಿಸಿಮಾಧ್ಯಮಗಳು ಕೂಡಲೇ ಮೌಖಿಕ ಪರಂಪರೆಯನ್ನು ಜಳ್ಳುಗೊಳಿಸಿ ನಾಶಮಾಡು ತ್ತವೆ. ಆದುದರಿಂದ ಜನರು ಓದು ಬರಹವನ್ನು ಕಲಿಯುವಂತಾಗಬೇಕು. ಜನತಾಪಕ್ಷದ ಯುವಪಡೆಯು ಈ ಕೆಲಸವನ್ನು ದೊಡ್ಡ ರೀತಿಯಲ್ಲಿ ವಹಿಸಿಕೊಳ್ಳ ಬಹುದು. ಇದರ ಜತೆಗೇ ಈ ಸಮಸ್ಯೆಗೆ ಸಂಬಂಧಿತ ವಾಗಿರುವ ಅಸ್ಪೃಶ್ಯತೆಯ ವಿರುದ್ಧವೂ ಹೋರಾಟ ನಡೆಯಬೇಕು. ಯಾಕೆಂದರೆ, ನಮ್ಮಲ್ಲಿ ಹೆಚ್ಚಿನವರ ಪ್ರಜ್ಞಾಪೂರ್ವಕ ಮನಸ್ಸಿನಿಂದ ಇದು ಗಾಂಧೀಜಿಯವರ ಚಳವಳಿಯಿಂದಾಗಿ ಹೊಡೆದೋಡಿಸಲ್ಪಟ್ಟಿದ್ದರೂ ನಮ್ಮ ಸುಪ್ತ ಮನಸ್ಸಿನ ಮೂಲೆಗಳಲ್ಲಿ ಅಸ್ಪೃಶ್ಯಭಾವನೆ ಇನ್ನೂ ಹೊಂಚುಹಾಕುತ್ತಿದೆ.

ಜನತಾಪಕ್ಷದ ಯುವ ಪಡೆಯ ಆರೋಗ್ಯಕಾರಿ ಬೆಳವಣಿಗೆಗೆ ಪೂರ್ವ ಶರತ್ತುಗಳಾಗಿ ನಾನು ಈ ತನಕ ಹೇಳಿರುವ ಅಂಶಗಳನ್ನು ಇಲ್ಲಿ ಒಟ್ಟಿನಲ್ಲಿ ಹೇಳುತ್ತೇನೆ. ಅವು :

ಅ) ಕ್ರಿಯಾಶೀಲ ಕೆಲಸಗಾರರಿಗೆ ವೇತನ ಕೊಡುವ ಅಗತ್ಯ ;

ಆ) ಮತದಾರರನ್ನು ಗೆಲ್ಲಲೆಂದೂ ಆಡುವ ಟೀಕೆಯ ನಾಟಕದ ಬದಲಾಗಿ ಭಾರತದ ಸಾಮಾಜಿಕ ಆರ್ಥಿಕ ವಾಸ್ತವದ ವಸ್ತುನಿಷ್ಠ ತಿಳಿವಳಿಕೆಯ ಅಗತ್ಯ; ಮತ್ತು,

ಇ) ಚಳವಳಿ ಪ್ರವೃತ್ತಿಯನ್ನು ಸ್ವಯಂಸೇವೆಯೊಂದಿಗೆ ಬೆಸೆಯುವ ಅಗತ್ಯ.

* * * *

ಎಂಭತ್ತರ ದಶಕಕ್ಕೆ ಕಾಲಿಡುತ್ತಿದ್ದಂತೆ ಜಗತ್ತಿನಾದ್ಯಂತದ ಎಲ್ಲ ಯುವಕರೂ ಎದುರಿಸುತ್ತಿರುವ ಸಂಕ್ರಮಣಾ

ವಸ್ತೆಯ ವಿಚಿತ್ರ ಸ್ವಭಾವವನ್ನು ಕುರಿತು ಸ್ವಲ್ಪ ವಿಶದವಾಗಿ ಈಗ ಚರ್ಚಿಸಬಹುದು. ಒಂದು ಅಥವಾ ಇನ್ನೊಂದು ದೇಶವನ್ನು ನಮ್ಮ ಆದರ್ಶದ ಮಾದರಿಯಾಗಿ ಆಯ್ಕೆ ಮಾಡುವಂಥ ಈ ಶತಕದ ಕೆಲವು ಗುಣ ಸ್ವಭಾವಗಳನ್ನು ಹಿಂದಿನ ಯಾವ ಕಾಲದಲ್ಲೂ ಕಾಣಲಾರೆವು. ಹಿಂದೆ, ಭಾರತ ಮತ್ತು ಚೀನಾದಂಥ ದೇಶಗಳು ಪಾಶ್ಚಾತ್ಯ ದಾರ್ಶನಿಕರಿಗೆ ಮತ್ತು ಬುದ್ಧಿಜೀವಿಗಳಿಗೆ ಸ್ಫೂರ್ತಿಯ ಸೆಲೆಯಾದದ್ದುಂಟು. ಆದರೆ ಅದು ಇಪ್ಪತ್ತನೆಯ ಶತಮಾನದಲ್ಲಾಗಿರುವಂತೆ, ಯಾವುದಾದರೊಂದು ದೇಶವನ್ನು ತನ್ನ ಏಕಮಾತ್ರ ಮಾಡೆಲ್ಲೆಂದು ತಿಳಿಯುವ ರೀತಿಯದಾಗಿರಲಿಲ್ಲ. ಈ ಶತಮಾನದ ಪ್ರಾರಂಭದ ವರ್ಷಗಳಲ್ಲಿ ರಷ್ಯಾ ಅಂಥ ಮಾಡೆಲ್ಲಾಗಿತ್ತು. ಆದರೆ ಸ್ಟಾಲಿನ್ನನ ಕ್ರೂರ ಮತ್ತು ಅಮಾನವೀಯ ರಾಜ್ಯಭಾರದಿಂದಾಗಿ ರಷ್ಯಾದ ಪರಮ ಬಂಟರಾಗಿದ್ದ ಹಲವರಿಗೆ ಭ್ರಮನಿರಸನವಾಯಿತು. ಅನಂತರ ಕ್ಯೂಬಾ ಅಥವಾ ವಿಯೆಟ್ನಾಂ, ಅಥವಾ ಇನ್ನೂ ಹೆಚ್ಚಿನ ಮಟ್ಟಿಗೆ ಮಾವೋನ ಚೈನಾ, ಮಾಡೆಲ್ಲಾಯಿತು. ಆದರೆ ಈ ಯಾವ ದೇಶಗಳೂ ಪಾಶ್ಚಾತ್ಯ ಯೂರೋಪಿನ ಬಂಡವಾಳಶಾಹಿ ವ್ಯವಸ್ಥೆಗೆ ಪರ್ಯಾಯವಾದ ಇನ್ನೊಂದು ನಾಗರಿಕತೆಯನ್ನು ಮತ್ತು ಸಂಸ್ಕೃತಿಯನ್ನು ಕೊಡುವ ಭರವಸೆ ಕಾಣುತ್ತಿಲ್ಲ. ಜಗತ್ತಿನ ಎಲ್ಲ ರಾಷ್ಟ್ರಗಳೂ–ಅದು ಬಂಡವಾಳಶಾಹಿ ವ್ಯವಸ್ಥೆಯೇ ಇರಲಿ, ಕಮ್ಯೂನಿಸ್ಟ್ ವ್ಯವಸ್ಥೆಯೇ ಇರಲಿ–ಒಂದೇ ಗುರಿಯ ಬೆನ್ನು ಬಿದ್ದಿರುವಂತೆ ತೋರುತ್ತದೆ. ಆದೇ "ಆಧುನಿಕ ನಾಗರಿಕತೆ"ಯ ಗುರಿ (ಗಾಂಧೀಜಿ 1908ರಲ್ಲಿ ಬರೆದ ಹಿಂದ್ ಸ್ವರಾಜ್ ನಲ್ಲಿ "ಆಧುನಿಕ ನಾಗರಿಕತೆ"ಎಂಬ ಮಾತನ್ನು ಬಳಸಿದ್ದರು).

ಆದರೆ ಪ್ರಶ್ನೆ ಇದು: ಆಧುನಿಕ ನಾಗರಿಕತೆಗಳನ್ನು ಕಟ್ಟುವ ಉದ್ದೇಶಹೊಂದಿರುವ ಸಾಮ್ರಾಜ್ಯಶಾಹಿ ದೇಶಗಳಿಂದ ಶೋಷಣೆಗೊಳಗಾಗಿರುವ ತೃತೀಯ ಜಗತ್ತಿನ ನಮ್ಮ ದಟ್ಟದರಿದ್ರ ದೇಶಗಳು, ಯಾವತ್ತಾದರೂ ಪಾಶ್ಚಾತ್ಯರಂತೆ ಆಗುವುದು ಸಾಧ್ಯವೇ? ಸಾಧ್ಯವಾದರೂ ಸಾಧುವೆ? ರಷ್ಯಾವು ಯೂರೋಪಿನ ಒಬ್ಬ ಬಡಬಂಧುವಾಗಿತ್ತೆಂಬುದನ್ನು ಮತ್ತು ಚೀನಾವು ಕ್ರಾಂತಿಯ ಮುಂಚೆ ಅಂತರ್‌ರಾಷ್ಟ್ರೀಯವಾಗಿ ಪ್ರಮುಖಸ್ಥಾನ ಹೊಂದಿತ್ತು ಎಂಬುದನ್ನು ನಾವು ಯಾವತ್ತೂ ಮರೆಯಬಾರದು. ಹಾಗಿದ್ದರೂ ಈ ದೇಶಗಳಿಗೆ ಕೂಡಾ ಜನರ ಜೀವನ ಮಟ್ಟ ಮತ್ತು ಅನುಭೋಗಗಳಲ್ಲಿ ಅಮೇರಿಕಾ ಸಂಯುಕ್ತ ಸಂಸ್ಥಾನವನ್ನು ಅನುಸರಿಸುವುದು ಇನ್ನೂ ಅಶಕ್ಯವಾಗಿಯೇ ಉಳಿದಿದೆ. ಅಮೇರಿಕಾದ ಜೀವನ ಮಟ್ಟ ರಷ್ಯಾದಲ್ಲಿಲ್ಲ; ರಷ್ಯಾದ್ದು ಚೀನದಲ್ಲಿಲ್ಲ. ಒಂದು ಮುಂದುವರಿಯುತ್ತಿದ್ದಂತೆಯೇ ಬಲಿಷ್ಠದೇಶ ಇನ್ನಷ್ಟು ಮುಂದೆಹೋಗಿರುತ್ತದೆ. ಹೀಗಿರುವಾಗ ಭಾರತ ಯಾವತ್ತಿಗಾದರೂ ಪಾಶ್ಚಾತ್ಯರನ್ನು ಅನುಕರಿಸುವುದು ಸಾಧ್ಯವೇ? ಹಾಗೂ ಅದು ಅಪೇಕ್ಷಣೀಯವೇ? ಹೇಗಾದರೂ ಮಾಡಿ ಪಾಶ್ಚಾತ್ಯರ ಬೆನ್ನು ಬೀಳುವುದೇ ನಮ್ಮ ಗುರಿಯಾದರೆ, ಈ ಅಗಮ್ಯಗುರಿ ಹುಟ್ಟಿಸುವ ಅಸಹನೆಯ ಕಾರಣದಿಂದಾಗಿ ಎಷ್ಟು ಜನರನ್ನು ಕೊಲ್ಲಬೇಕಾಗಿ ಬರಬಹುದು ಮತ್ತು ಎಷ್ಟೊಂದು ಜನರನ್ನು ಹಿಂಸಿಸಬೇಕಾಗಿಬರಬಹುದು? ಸ್ಟಾಲಿನ್ನಿನ ರಷ್ಯಾ, 'ಸಂಸ್ಕೃತಿ ಕ್ರಾಂತಿ'ಯ ಚೀನಾ, ತುರ್ತುಕಾಲದ ಭಾರತ ನಾವೀಗಾಗಲೇ ಕಂಡಿರುವ ವಾಸ್ತವಗಳು. ನಾವು ಆಟಂಬಾಂಬನ್ನು ಹೊಂದಬೇಕೇ ಅಥವಾ ಗಾಂಧೀಜಿ ಕನಸು ಕಂಡಂತೆ ಪ್ರತಿಕಣ್ಣಿಂದ ಪ್ರತೀ ಹನಿ ಕಣ್ಣೀರನ್ನು ತೊಡೆದ ಸ್ವತಂತ್ರ ಭಾರತವನ್ನು ಹೊಂದುವುದು ನಮ್ಮ ಪ್ರಯತ್ನವಾಗಬೇಕೇ? ಭಾರತದ ಮಿಲಿಯಾಂತರ ಜನರಿಗೆ ಶೀಘ್ರವಾಗಿ ನ್ಯಾಯ ಮತ್ತು ಸಮಾನತೆ ಹಾಗೂ ಆತ್ಮಗೌರವಗಳನ್ನು ದೊರಕಿಸಿಕೊಡುವ ಗುರಿಗಳು, ಪಾಶ್ಚಾತ್ಯ ದೇಶಗಳ ರೀತಿಯಲ್ಲಿ ಭಾರತ ಬಲಿಷ್ಠವಾಗಬೇಕೆಂದು ಆಶಿಸುವ ಗುರಿಗೆ ತದ್ವಿರುದ್ಧವಾದವು ಎಂಬುದನ್ನು ನಾವೇಕೆ ಇನ್ನೂ ಮನಗಂಡಿಲ್ಲ? ಭಾರತದ ಹಾಗೆ ಬಲಿಷ್ಠವಾಗುವುದರಲ್ಲಿ ಯಶಸ್ವಿಯಾದರೂ-ಪ್ರಾಯಶಃ ಚೀನಾದಷ್ಟಿಲ್ಲದಿದ್ದರೂ ಹೆಚ್ಚುಕಡಿಮೆ ಅಷ್ಟು—ಆಗ ಅದು ಎಂಥ ಭಾರತವಾಗಿರುತ್ತದೆ? ಮಿಲಿಯಾಂತರ ಜನರದ್ದೇ ಅಥವಾ ಪಂಚತಾರಾ ಸಂಸ್ಕೃತಿಯ ಲಕ್ಷುರಿಯಲ್ಲಿ ಲೋಲುಪರಾದ ಕೆಲವೇ ಜನ ಎಲೀಡಿಸ್ಟ್‌ರದ್ದೇ? ದೇಶಕಟ್ಟುವ ನಮ್ಮ ಪ್ರಯತ್ನದ ಪ್ರಕ್ರಿಯೆಯಲ್ಲಿ ನಾವು ಕೇಳಿಕೊಳ್ಳಬೇಕಾದ ಪ್ರಶ್ನೆಗಳು ಇವು. ಮಾನವತಾವಾದಿ ಮೌಲ್ಯಗಳ ಅನುಸಾರ ನಾವು ಬದುಕತಕ್ಕದ್ದೆ? ಆಥವಾ ದುರ್ಭೇದ್ಯವೂ ಬಲಿಷ್ಠವೂ ಆದ ರಾಷ್ಟ್ರವನ್ನು ನಾವು ಕಟ್ಟಬೇಕೆ? ಈ ಎರಡನ್ನೂ ನಾವು ಒಟ್ಟಾಗಿ ಆಯ್ಕೆಮಾಡುವಂತಿಲ್ಲ. ಎರಡರಲ್ಲೊಂದನ್ನು ಆಯ್ಕೆಮಾಡಬೇಕಾಗುತ್ತದೆ.

ಪ್ರಬುದ್ಧವಾದ ಎಲ್ಲ ರಾಜಕೀಯ ಪಕ್ಷಗಳಿಗೂ ವಿವೇಕಯುತವಾದ ವ್ಯವಹಾರ ಜ್ಞಾನ ಬೇಕಾಗುತ್ತದೆ. ದೇಶದ ಪಾಲನೆ, ಪೋಷಣೆ, ರಕ್ಷಣೆಗಳಿಗೆ ಸಂಬಂಧಪಟ್ಟ ವಿಷಯ ಇದು. ಆದ್ದರಿಂದ ಆಗತ್ಯಬಿದ್ದಾಗ ದೇಶವನ್ನು ಶತ್ರುಗಳ ಆಕ್ರಮಣದಿಂದ ರಕ್ಷಿಸಬಲ್ಲ ಸಿದ್ಧತೆ ಶಕ್ತಿಗಳು ಅತ್ಯಂತ ಅಗತ್ಯ. ಆದರೆ ಅದನ್ನೇ ರಾಷ್ಟ್ರದ ಏಕೋದ್ದೇಶ ಮಾಡಿಕೊಂಡು, ಜನರು ತಮ್ಮ ಮುಗ್ಧವಾದ ದೈನಂದಿನ ಖಿಷಿ ಸಂತೋಷಗಳಿಂದ, ತಮಗೆ ಸಲ್ಲಬೇಕಾದ ಘನತೆಯಿಂದ ವಂಚಿತರನ್ನಾಗಿ ಮಾಡುವಂಥ ಆಬ್ಜೆಶನ್ ಅದು ಆಗಬಾರದು. ಪಾಶ್ಚಾತ್ಯ ದೇಶಗಳಲ್ಲಿ ಆಕ್ರಮಣ ಶೀಲ ಆಧುನಿಕ ಯಂತ್ರ ನಾಗರಿಕತೆ ಹುಟ್ಟುಹಾಕಿದ ಆಧ್ಯಾತ್ಮಿಕ ಹಾಗೂ ಮಾನವೀಯ ಸಮಸ್ಯೆಗಳೇನೆಂದು ಗೊತ್ತಿರುವ ನಾವು ಖಂಡಿತವಾಗಿಯೂ ಪಾಶ್ಚಾತ್ಯರ ಮಟ್ಟದ ಸಂಪತ್ತಿಗಾಗಿ ಹಾತೊರೆಯಬೇಕಾಗಿಲ್ಲ.

ನಾನು ಎತ್ತಿರುವ ಈ ಅಂಶಗಳನ್ನು ಸ್ಪಷ್ಟಗೊಳಿಸಿಕೊಳ್ಳಲು ನಮ್ಮ ದೇಸೀ ಚಿಂತಕರನ್ನು ಆಳವಾಗಿ ಅಭ್ಯಾಸಮಾಡಬೇಕು. ನೆಪರೂ ಮಾರ್ಗದಲ್ಲಿ ನಡೆದಿರುವ ನಾವು ನಮ್ಮ ದೇಶದ ಶ್ರೇಷ್ಠ ಚಿಂತಕರಾದ ಮಹಾತ್ಮಾ ಗಾಂಧೀಜಿಯವರನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದೇವೆ. ನಾವು ಅಗತ್ಯವಾಗಿ ಗಾಂಧೀಜಿಯವರನ್ನು, ಡಾ. ಲೋಹಿಯಾ, ಆಚಾರ್ಯ ನರೇಂದ್ರದೇವ್, ಮಹಾತ್ಮ ಫೂಲೆ, ನಾ ರಾ ಯ ಣ ಗು ರು, ಡಾ. ಅಂಬೇಡ್ಕರ್, ಮತ್ತು ಜಯಪ್ರಕಾಶನಾರಾಯಣರನ್ನು, ಅಂತೆಯೇ ಬಸವ, ತುಕಾರಾಂ, ಕಬೀರ್, ನಾನಕ್‌ರಂಥ ಅನುಭಾವಿಗಳನ್ನು ಓದಬೇಕು. ನಮ್ಮ ದೇಶಕ್ಕೆ ಒಂದು ಪರ್ಯಾಯ ನಾಗರಿಕತೆಯ ಸ್ವರೂಪವನ್ನು ಒದಗಿಸಬಲ್ಲ ಕ್ರಿಯಾಶೀಲ ಚಿಂತಕರು ಇವರು. ಇಂಥ ಒಂದು ಪರ್ಯಾಯ ವ್ಯವಸ್ಥೆಯನ್ನು ಆಶಿಸುವ ಯಾರೇ ಆದರೂ ಒಂದು ಪರ್ಯಾಯವಾದ ಯಂತ್ರಪದ್ಧತಿಗೆ ಆದ್ಯಸ್ಥಾನ ಕೊಡಬೇಕಾದ್ದು ಅಗತ್ಯ. ಒಂದು ರಾಜಕೀಯ ವ್ಯವಸ್ಥೆಯನ್ನು ಬದಲಾಯಿಸುವುದಷ್ಟೇ ಸಾಕಾಗುವುದಿಲ್ಲವೆಂಬುದನ್ನು ಕಮ್ಯೂನಿಸ್ಟ್ ದೇಶಗಳು ನಮಗೆ ಕಲಿಸಿಕೊಟ್ಟಿವೆ. ಬಂಡವಾಳಶಾಹಿ ಯಂತ್ರ ಪದ್ಧತಿಯನ್ನು ನಾವೂ ಬಳಸಿದ್ದಾದರೆ, ಅದೇ ರೀತಿಯ ಪ್ರಜ್ಞೆಯನ್ನೂ ಕಮ್ಯೂನಿಸ್ಟ್ ರಾಜ್ಯವ್ಯವಸ್ಥೆಯಲ್ಲೂ ನಾವು ಸೃಷ್ಟಿಸಬೇಕಾಗಿಬರುವುದು ಕೇವಲ ಸಹಜ. ಭಾರತದಲ್ಲಿ ಅಂಥ ಯಂತ್ರ ಪದ್ಧತಿಯು ಬಳಕೆಯು, ಈಗಾಗಲೇ ಇರುವ ಅಸಮಾನತೆಗಳನ್ನು ಹೆಚ್ಚಿಸುವುದಷ್ಟೇ ಅಲ್ಲದೇ ಹಿಂದುಳಿದಿರುವ ಜನಾಂಗದವರು ನಮಗೆ ಹೊರೆಯಾಗಿಯೂ, ಅಭಿವೃದ್ಧಿಯ ಪಥದಲ್ಲಿ ಒಡ್ಡಿದ ತೊಡಕುಗಳಾಗಿಯೂ ಕಾಣುತ್ತಾರೆ. ಅದು ಕ್ರೂರ ಸರ್ವಾಧಿಕಾರವನ್ನೂ ನಿರಂಕುಶತೆಯನ್ನೂ ಸೃಷ್ಟಿಸುತ್ತದೆ. ಸಂಜಯಗಾಂಧಿಯ ಕಾರ್ಯವಿಧಾನವನ್ನು ಈ ಸಂದರ್ಭದಲ್ಲಿ ನಾವು ಅರ್ಥಮಾಡಿಕೊಳ್ಳಬೇಕಾಗಿದೆ.

ನಮ್ಮ ದುರಿಗಿರುವ ಕೆಲಸವೇನೆಂಬುದನ್ನು ಡಾ. ಲೋಹಿಯಾರ ಈ ಸಮರ್ಥ ಮಾತುಗಳಲ್ಲಿ ಗಮನಿಸಬಹುದು :

> ಮಾರ್ಕ್ಸಿಸಂ ಮತ್ತು ಕಮ್ಯೂನಿಸಂಗಳು ಬಂಡವಾಳಶಾಹಿ ಉತ್ಪಾದನೆಯ ಸಂಬಂಧಗಳನ್ನು ನಿರ್ನಾಮ ಮಾಡುವ ಬಗ್ಗೆ ಮಾತ್ರ ಆಲೋಚಿಸುತ್ತವೆ. ಆದರೆ ತಾಜಾ 'ಸಮಾಜವಾದವು ಬಂಡವಾಳಶಾಹಿ ಉತ್ಪಾದನಾ ಸಂಬಂಧಗಳ ನಿರ್ನಾಮದ ಜೊತೆಗೇ ಬಂಡವಾಳಶಾಹಿ ಉತ್ಪನ್ನದ ವಿಧಾನಗಳನ್ನೂ ನಿರ್ನಾಮ ಮಾಡಬೇಕಾಗುತ್ತದೆ, ಅಥವಾ ಕೊನೆಯ ಪಕ್ಷ ಅದನ್ನು ಹೊಸ ರೀತಿಯಲ್ಲಿ ಮಾರ್ಪಡಿಸಿಕೊಳ್ಳಬೇಕಾಗುತ್ತದೆ.
>
> ಇಂಥ ಹೊಸ ಸಮಾಜವಾದೀ ವ್ಯವಸ್ಥೆಯಲ್ಲಿ ಕಾರ್ಮಿಕರು, ರೈತರು ಮತ್ತು ಇತರ ಉದ್ಯಮಿಗಳು ಹೆಚ್ಚು ಸಂಪತ್ತನ್ನು ಸೃಷ್ಟಿಸಬಲ್ಲ ಉಪಕರಣಗಳನ್ನು ಹೊಂದಿರುತ್ತಾರೆ; ಆದರೆ ನಿರಂತರವಾಗಿ ಜೀವನ ಮಟ್ಟವನ್ನು ಹೆಚ್ಚಿಸಿಕೊಳ್ಳುತ್ತಲೇ ಹೋಗುತ್ತಿರಬೇಕೆಂಬ ವ್ಯಕ್ತಿಗತ ಆಮಿಷಕ್ಕಾಗಲೀ, ಅಥವಾ ಅಂಥ ಲೋಲುಪಜೀವನ ವಾಸ್ತವಿಕವಾಗಿಯೂ ಸಾಧ್ಯವಾಗುವಂತೆ ಮಾಡಬಲ್ಲ ವ್ಯವಸ್ಥೆಯ ನಿರ್ಮಾಣಕ್ಕಾಗಲೀ ಅವರು ಬಲಿಯಾಗುವುದಿಲ್ಲ.
>
> ಅಂದರೆ ಒಬ್ಬ ಕಮ್ಯೂನಿಸ್ಟ್ ಇದರಲ್ಲಿ ಒಂದನ್ನು ಮಾತ್ರ ನಿರ್ವಹಿಸುತ್ತಾನೆ : ಆತ ಬಂಡವಾಳಶಾಹಿ ವರ್ಗವನ್ನು ನಾಶಮಾಡುತ್ತಾನೆ. ಅಲ್ಲಿಗೆ ಅವನ ಕೆಲಸ ಮುಗಿಯಿತು. ಬದಲು, ಒಬ್ಬ ಸಮಾಜವಾದಿಯು ಬಂಡವಾಳಶಾಹಿ ವರ್ಗವನ್ನು ನಿರ್ಮೂಲನಗೊಳಿಸುವುದರ ಜತೆಗೇ ಬಂಡವಾಳಶಾಹಿ ವ್ಯವಸ್ಥೆಯು ಪ್ರಪಂಚಕ್ಕೆ ಕೊಟ್ಟಿರುವ ಉತ್ಪಾದನಾ ವಿಧಾನಗಳನ್ನು ಕೂಡಾ ನಿರ್ಮೂಲನಗೊಳಿಸಬೇಕಾಗುತ್ತದೆ. ಇದು ಇಮ್ಮುಖವಾದ ಕಾರ್ಯ...
>
> —*Marx, Gandhi and Socialism*
>
> (ಪುಟ 110)

* * * *

ನಮ್ಮ ದೇಶದ ಯುವ ರಾಜಕೀಯ ಕಾರ್ಯಕರ್ತರು ಸ್ವಲ್ಪ ಆತ್ಮವಿಮರ್ಶೆಯನ್ನು ಮಾಡಿಕೊಳ್ಳಬೇಕಾಗಿದೆ. ಲೋಕ ನಾಯಕ ಜಯಪ್ರಕಾಶ ನಾರಾಯಣರ ನೇತೃತ್ವದಲ್ಲಿ ನಡೆದ ವಿದ್ಯಾರ್ಥಿ ಚಳುವಳಿಯೊಂದರಲ್ಲಿ ಭಾಗವಹಿಸಿದ ಗುಜರಾತಿನ ಕಾದಂಬರಿಕಾರರೂ ಅಧ್ಯಾಪಕರೂ ಆಗಿರುವ ವರೊಬ್ಬರು, ಆ ಚಳವಳಿ ಹೇಗೆ ಕೊನೆಯಲ್ಲಿ ಧಾರಾಳ ಮೌಲ್ಯಮಾಪನ ಮತ್ತು ಗ್ರೇಸ್ ಅಂಕಗಳ ಬೇಡಿಕೆಯ ದುಃಸ್ಥಿತಿಗೆ ಇಳಿಯಿತೆಂದು ಬಹುದುಃಖದಿಂದ ಹೇಳಿದರು. ಹಾಗೆಯೇ ಲೋಕನಾಯಕ ಜಯಪ್ರಕಾಶ ನಾರಾಯಣರ ನೇತೃತ್ವದಲ್ಲಿ ರಾಜಕೀಯದಲ್ಲಿನ ಮೋಸಗಳ ವಿರುದ್ಧ ದಂಗೆಯೆದ್ದ ಬಿಹಾರದ ಯುವಜನ ಹಿಂದುಳಿದವರಿಗೆ ಇದ್ದ ಮಿಸಲಾತಿಯ ವಿರುದ್ಧವೂ ಮುಷ್ಕರವನ್ನು ಹೂಡಿತು. ಉತ್ತಮ ಕುಟುಂಬಗಳಿಂದ ಬರುವ ಭಾರತದ ಆದೃಷ್ಟವಂತ ಯುವಕರು ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಓದಿ ಅರ್ಹತೆ ಅಥವಾ ಡೊನೇಶನ್ನುಗಳ ಮೂಲಕ ಮೆಡಿಕಲ್ ಅಥವಾ ಇಂಜಿನಿಯರಿಂಗ್ ಸೇರುತ್ತಾರೆ. ಆವರ ಏಕೈಕ ಕನಸು ಇಂಡಿಯಾ ಬಿಟ್ಟು ಪಾಶ್ಚಾತ್ಯದೇಶಗಳಿಗೆ ಹೋಗುವುದಾಗಿರುತ್ತದೆ. ಆದೇ ವಿದ್ಯಾರ್ಥಿಗಳು ಹಿಂದುಳಿದ ವರ್ಗಗಳಿಗಿರುವ ಮಿಸಲಾತಿಯ ವಿರುದ್ಧ ದಕ್ಷತೆ ಹಾಗೂ ಉನ್ನತ ಮಟ್ಟಗಳ ಹೆಸರಿನಲ್ಲಿ ಗಲಾಟೆ ಮಾಡುತ್ತಾರೆ. ಮಿಸಲಾತಿ ವಿರೋಧಿಗಳ ಈ ಆಷಾಢ ಭೂತಿತನ ದಂಗುಬಡಿಸುವಂಥದ್ದು. ಸರಕಾರ ಆವರ ಯಾವುದಾದರೂ ಬೇಡಿಕೆಗಳನ್ನು ಈಡೇರಿಸಿದ್ದೇ ಆದರೆ, ಆಗ ಆವರು ಹಿಂದುಳಿದ ಪ್ರದೇಶಗಳಲ್ಲಿ ಸೇವೆ ಮಾಡುವುದನ್ನು ಕಡ್ಡಾಯ ಮಾಡಬೇಕು. ಭಾರತದಂಥ ಬಡದೇಶ ಕಷ್ಟಪಟ್ಟು ಕೊಟ್ಟ ದುಬಾರಿ ಐ.ಐ.ಟಿ. ಮತ್ತು ಮೆಡಿಕಲ್ ವಿದ್ಯಾಭ್ಯಾಸಗಳನ್ನು ಪಡೆದ ಮೇಲೆ ತಮ್ಮ ಸ್ವಾರ್ಥದ ಹಾಗೂ ಚಿಲ್ಲರೆ ಆಸಕ್ತಿಗಳ ಹುಚ್ಚಿನಲ್ಲಿ ದೇಶ ಬಿಟ್ಟು ಪಾಶ್ಚಾತ್ಯ ದೇಶಗಳಿಗೆ ಓಡಿಹೋಗಲು ಆವರಿಗೆ ಆವಕಾಶ ಮಾಡಿಕೊಡಬಾರದು. ನಮ್ಮ ದೇಶದ ಯುವ ಜನರಿಗೆ ಮನವರಿಕೆಯಾಗಬೇಕಾದದ್ದು ಇದು: ಹಿಂದುಳಿದ ವರ್ಗ ಮತ್ತು ಬುಡಕಟ್ಟುಗಳವರಿಗೆ ಸಮಾಜದಲ್ಲಿ ಮುಂದುವರಿಯಲು ಮಿಸಲಾತಿಯು ಎಷ್ಟು ಆವಶ್ಯಕವೋ ಹಾಗೆಯೇ ಅದಕ್ಕಿಂತ ಹೆಚ್ಚು ನಮ್ಮ ಹಿತದೃಷ್ಟಿಯಿಂದಲೂ ಮಿಸಲಾತಿಯು ಅಗತ್ಯ. ನಮ್ಮ ದೇಶ ಯಾಕೆ ಹಿಂದುಳಿದಿದೆಯೆಂದರೆ ನಮ್ಮ ದೇಶದ ಬಹುಸಂಖ್ಯಾತ ಮಂದಿ ಹಿಂದುಳಿದವರಾದ್ದರಿಂದ. ಆದುದರಿಂದ ನಮ್ಮ ದೇಶ ಪ್ರಪಂಚದ ಇತರ ದೇಶಗಳ ಸಮುದಾಯದಲ್ಲಿ ಬಂದು ಶೂದ್ರದೇಶವಾಗಿಬಿಟ್ಟಿದೆ. ಮಿಸಲಾತಿಯ ಬಗ್ಗೆ ಏನಾದರೂ ಟೀಕೆಗಳಿದ್ದರೆ ಅದು, ಸದ್ಯ ಇರುವ ಮಿಸಲಾತಿಯು ಏನೇನೂ ಸಾಲದು, ಸದ್ಯದ ಮಿಸಲಾತಿಯು ಹರಿಜನರಲ್ಲಿ ಒಂದು ಸ್ವಹಿತಾಸಕ್ತ ಗುಂಪನ್ನು ಸೃಷ್ಟಿಸಬಹುದು, ಎಂಬುದಷ್ಟೇ. ಹೀಗಿದ್ದರೂ, ಸದ್ಯದ ಮಿಸಲಾತಿಗಿಂತ ಹೆಚ್ಚು ಕ್ರಾಂತಿಕಾರಕವಾದ ಮತ್ತು ಉತ್ತಮವಾದ ಪರ್ಯಾಯವೊಂದನ್ನು ನಾವು ಕಂಡುಕೊಳ್ಳುವ ತನಕ, ಮಿಸಲಾತಿಯು ಮುಂದುವರಿಯಬೇಕು. ಯಾಕೆಂದರೆ ಆ ಮೂಲಕ ಜಾತಿಯ ಕಟ್ಟುಗಳು ಕೊನೆಯ ಪಕ್ಷ ಸ್ವಲ್ಪವಾದರೂ ಸಡಿಲಗೊಳ್ಳುತ್ತವೆ; ವಿಭಿನ್ನ ಜಾತಿಗಳು ಆಫೀಸುಗಳಲ್ಲಿ, ಕಾರ್ಖಾನೆಗಳಲ್ಲಿ, ವಿದ್ಯಾಸಂಸ್ಥೆಗಳಲ್ಲಿ ಒಡನಾಡಬಲ್ಲ ಸಾಧ್ಯತೆಗಳು ಸೃಷ್ಟಿಯಾಗುತ್ತವೆ.

ಭಾರತದಲ್ಲಿ ಬಹುತೇಕ ಬಡಜನರ ಬಾಲ್ಯ ಆವರ ಹತ್ತು ಆಥವಾ ಹನ್ನೆರಡನೆಯ ವಯಸ್ಸಿಗೇ ಮುಗಿದುಹೋಗುತ್ತದೆ. ಒಂದು ಬಡಕುಟುಂಬದ ಹುಡುಗಿಯೊಬ್ಬಳು ತನ್ನ ಹತ್ತನೇ ವಯಸ್ಸಿನಲ್ಲೇ ಸೇವಕಿಯಾಗಿ ಕೆಲಸ ಮಾಡಲಾರಂಭಿಸುತ್ತಾಳೆ; ಮತ್ತು ಆ ಮೂಲಕ ಆವಳು ತನಗೆ ಮಾತ್ರವಲ್ಲದೇ ತನ್ನ ಕುಟುಂಬಕ್ಕೂ ಆಹಾರ ಸಂಪಾದಿಸುತ್ತಾಳೆ. ಹನ್ನೆರಡರ ವಯಸ್ಸಿನ ಹುಡುಗ ನೊಬ್ಬ ದನಕುರಿಗಳನ್ನು ಮೇಯಿಸಲು ತೆಗೆದುಕೊಂಡು ಹೋಗುತ್ತಾನೆ; ಆತಿ ಬೇಗನೆ ಆತ ನಾಯಕತ್ವದ ಹಾಗೂ ಹೊಣೆಗಾರಿಕೆಯ ಗುಣಗಳನ್ನು ಬೆಳೆಸಿಕೊಳ್ಳುತ್ತಾನೆ. ಆಟೋ ಶಾಪುಗಳಲ್ಲಿ ನಾನು ಕಂಡಿರುವ ಹಾಗೆ, ಪದಿನೈದು ಹದಿನಾರರ ವಯಸ್ಸಿನ ಹುಡುಗರು, ಆವರು ಅವಿದ್ಯಾವಂತರಾಗಿದ್ದಾಗಲೂ, ತೀಕ್ಷ್ಣ ಬುದ್ಧಿಯಿಂದ ಬಂದು ಸಂಕೀರ್ಣ ಯಂತ್ರದ ಭಾಗಗಳನ್ನು ಜೋಡಿಸಬಲ್ಲವರಾಗಿರುತ್ತಾರೆ. ಆದರೆ ಅದೇ ಆತ, ಆ ಯಂತ್ರದ ಬಗ್ಗೆ ವ್ಯಾಖ್ಯಾನ ಕೊಡಲಾರದವನಾಗಿರುತ್ತಾನೆ. ಆದರೂ, ಆತ ಬುದ್ಧಿವಂತನಲ್ಲವೇ? ಬುದ್ಧಿವಂತ್ತೆಯ ಬಗ್ಗೆ ನಮಗಿರುವ ದೃಷ್ಟಿಕೋನವು ಬದಲಾಗಬೇಕಾದ ಆವಶ್ಯಕತೆಯಿದೆ. ನಮ್ಮಲ್ಲಿ ಹಲವರಿಗೆ ಬುದ್ಧಿವಂತ್ತೆಯೆಂದರೆ– ಒಳ್ಳೆಯ ಇಂಗ್ಲಿಷನ್ನು ಸರಿಯಾದ ಉಚ್ಚಾರಗಳ ಮೂಲಕ ಮಾತಾಡುವ ಶಕ್ತಿ, ಆಥವಾ ಬಹಳ ನಯವಾಗಿ ತರಬೇತಾಗಿ ಗಿಳಿಪಾಠಹೊಡೆದು ಎಲ್ಲ

ಪರೀಕ್ಷೆಗಳನ್ನು ಪಾಸುಮಾಡಬಲ್ಲ ಮನಸ್ಸು — ಇವು. ಬುದ್ಧಿ ಮತ್ತೆಯನ್ನು ಬೇರೆ ರೀತಿಯಲ್ಲಿ ಗ್ರಹಿಸುವುದು ನಮಗೆ ಸಾಧ್ಯವಾದರೆ, ಹಿಂದುಳಿದವರೆಂದು ನಾವು ತಿಳಿಯುವ ಬಹುಸಂಖ್ಯಾತ ಮಂದಿಗೆ ಗ್ರಹಣಶಕ್ತಿ ಸ್ವಯಂ ಸಹಜವಾಗಿದ್ದು, ಅವರು ಅಸಾಧಾರಣ ವಿವೇಕಿಗಳೂ, ಮತ್ತು ಧಾರಾಳ ದೃಷ್ಟಿಯ ಹೃದಯವಂತರೂ ಆಗಿರುತ್ತಾರೆ ಎಂಬುದು ನಮ್ಮ ಅರಿವಿಗೆ ಬರುತ್ತದೆ. ಒಂದು ಪ್ರತ್ಯೇಕವಾದ ಎಲೀಟಿಸ್ಟ್ ವರ್ಗಕ್ಕೇರಬೇಕಾದ ಅಗತ್ಯ ವಿಲ್ಲದೇ ಪರ್ಯಾಯ ಯಂತ್ರ ಪದ್ಧತಿಯೊಂದನ್ನು ಯಶಸ್ವಿಗೊಳಿಸಬಲ್ಲ ಜನರು ಇವರೇ ಆಗಿರುತ್ತಾರೆ. ಆಗ, "ರಾಶ್ಯಾತ್ಪನ್ನವಲ್ಲ, ಬದಲು ಸಮೂಹದಿಂದ ಉತ್ಪಾದನೆ" ಎಂಬ ಗಾಂಧೀಜಿಯವರ ಹೇಳಿಕೆಯೂ ಒಂದು ವಾಸ್ತವವಾಗುತ್ತದೆ. ಈ ದೇಶದಲ್ಲಿ ಯಾವ ಚಳವಳಿಯು, ವಿಭಿನ್ನ ಜಾತಿಗಳಲ್ಲಿ ಹಂಚಿಹೋಗಿರುವ ಯುವಕರನ್ನು ಒಟ್ಟಿಗೆ ತರಬೇಕು ಮತ್ತು ಆ ಮೂಲಕ, ದ್ವಿಜರ ಬುದ್ಧಿ ಮತ್ತೆಯನ್ನೂ ಶೂದ್ರರ ಚೈತನ್ಯವನ್ನೂ ಜೊತೆಗೂಡಿಸಿ ನಿಂತನೀರಿನಂತಿರುವ ಈ ಸಮಾಜವನ್ನು ಪುನಃ ಸೃಜನಶೀಲಗೊಳಿಸಬೇಕು. ಅಂತರ ಜಾತೀಯ ವಿವಾಹದ ದಂಪತಿಗಳಿಗೆ ಕೆಲಸಗಳನ್ನು ಮಾಸಲಿಡುವುದರ ಮೂಲಕ ನಾವು ಇದನ್ನು ಉತ್ತೇಜಿಸಬೇಕು. ಚೈತನ್ಯ ದಿಂದ ಕುದಿಯುತ್ತಿರುವ ಆದರ್ಶವಾದಿ ದಲಿತ ಹುಡುಗರು ನಮ್ಮ ಇಡೀ ಸಮಾಜದ ಸಾವಯವ ಅಂಗಗಳಾಗುವ ಸಮಯವನ್ನು ನಾವು ಸಂತೋಷದಿಂದ ನಿರೀಕ್ಷಿಸಬೇಕು. ಆದು ಸಾಧ್ಯವಾಗುವುದು ಮದುವೆಗಳ ಮೂಲಕ, ಸಹ ಕಾರೀ ಸೇವೆಗಳ ಮೂಲಕ, ಜೊತೆಯಲ್ಲಿ ಊಟಮಾಡುವ ಮೂಲಕ, ಆಫೀಸುಗಳಲ್ಲಿ ಕಾರ್ಖಾನೆಗಳಲ್ಲಿ ಜತೆಗೂಡಿ ಕೆಲಸಮಾಡುವುದರ ಮೂಲಕ.

ಸಾಮಾಜಿಕ ಬದಲಾವಣೆಗಾಗಿ ಯುವಜನರನ್ನು ಸಂಘಟಿ ಸುವುದರ ಮೂಲಭೂತ ಅರ್ಥ ಇದು : ತುಳಿತಕ್ಕೊಳ ಗಾದ ಮತ್ತು ಅವಮಾನಕ್ಕೊಳಗಾದ ಭಾರತದ ಜನರಲ್ಲಿ ಚೈತನ್ಯವನ್ನು ತುಂಬುವುದು ಹಾಗೂ ಅವರು ಇಡೀ ದೇಶದೊಡನೆ ಸಾವಯವ ಸಂಬಂಧವುಳ್ಳ ಅಂಗಗಳೆಂದು ಪರಿಗಣಿಸುವುದು. ಧಾರ್ಮಿಕ ವ್ಯವಸ್ಥೆಯೊಂದರ ಮುಖ್ಯಸ್ಥರಾದ ಉಡುಪಿಯ ಶ್ರೀ ಪೇಜಾವರ ಸ್ವಾಮಿ ಯವರು ತಾವು ಮಾಸಲಾತಿಯ ಪರ ಇದ್ದೇವೆಂದೂ ಮತ್ತು ಅಗತ್ಯ ಬಿದ್ದರೆ ಅದಕ್ಕಾಗಿ ಹೋರಾಡಲೂ ತಾವು ತಯಾರೆಂದೂ ಇತ್ತೀಚೆಗಷ್ಟೇ ಕೊಟ್ಟ ಹೇಳಿಕೆ ಯನ್ನು ನೋಡಿ ನನಗೆ ತುಂಬ ಹರ್ಷವಾಯಿತು. ಮಡು ಗಟ್ಟಿರುವ ನಮ್ಮ ಸಂಪ್ರದಾಯಶೀಲ ವ್ಯವಸ್ಥೆಯಿಂದ ಶ್ರೀಪೇಜಾವರ ಸ್ವಾಮಿಯವರಂಥ ಇನ್ನಷ್ಟು ಜನ ಸಂತರು ಹೊರಬಂದು ನಮ್ಮ ದೇಶದ ಜನರಲ್ಲಿ ಪುನಃ ಚೈತನ್ಯವನ್ನು ತುಂಬುವಂತಾಗಬೇಕು. ಭಾರತೀಯ ಸಂಸ್ಕೃತಿಯ ಉತ್ಕೃಷ್ಟ ಪರಂಪರೆಯು ಸದ್ಯದ ವಾಸ್ತವ ದಲ್ಲಿ ಸಾಬೀತಾಗಲು ನಾವು ಅಸ್ಪೃಶ್ಯತೆಯ ಅವಮಾನ ಕರ ಪದ್ಧತಿಯಿಂದ ಮುಕ್ತರಾಗಬೇಕಿದೆ. ಮತೀಯ ಭಾವನೆಯಿಂದಲೇ ಮುಕ್ತರಾಗುವುದರ ಮೂಲಕ ಇಡೀ ದೇಶ ಅಸ್ಪೃಶ್ಯತೆಯ ಶಾಪದಿಂದ ಹೊರಬರುವುದು ಸದ್ಯಕ್ಕಂತೂ ಸಾಧ್ಯವೆಂದು ನನಗೆ ಅನ್ನಿಸುತ್ತಿಲ್ಲ. ಮತ ಧರ್ಮಗಳ ಅನುಯಾಯಿಗಳಾಗಿರುವವರೂ, ತಮ್ಮ ಧರ್ಮ ಗಳ ತಿರುಳಿನಿಂದಲೇ ಉತ್ತೇಜಿತರಾಗಿ ತಮ್ಮಂತಲೇ ಇರುವ ಕೆಲವರನ್ನು ಅಸ್ಪೃಶ್ಯರೆಂದು ಕಾಣುವ ಹೇಸಿಗೆ ಹುಟ್ಟಿಸುವ ಆಚರಣೆಗಳಿಂದ ಈಗಿಂದೀಗಲೇ ಹೊರ ಬರಬೇಕು. ವಿಚಾರವಾದಿಗಳಾಗಬಲ್ಲಷ್ಟು ಮುಂದು ವರಿದ ಅಲ್ಪಸಂಖ್ಯಾತರಿಗಿಂತ ಜನಮನಕ್ಕೆ ಹತ್ತಿರವಿರುವ ಸಂತರು ಹೆಚ್ಚು ಯಶಸ್ವಿಗಳಾಗಿ ಜನಮನವನ್ನು ಬದ ಲಾಯಿಸಬಲ್ಲರೆಂಬ ಆಶ್ವಾಸನೆಯಿಂದ ನಾನು ಈ ದಿಕ್ಕಲ್ಲಿ ಹೀಗೆ ಮಾತಾಡುತ್ತಿದ್ದೇನೆ. ಭಾರತೀಪುರವೆಂಬ ನನ್ನ ಕಾದಂಬರಿಯಲ್ಲಿ ವಿಚಾರವಾದದ ಇತಿಮಿತಿಗಳನ್ನು ಕಾಲ್ಪನಿಕವಾಗಿ ಶೋಧಿಸಲು ಪ್ರಯತ್ನಿಸಿದ ನನಗೆ, ಈಚೆಗೆ ಈ ಸತ್ಯ ಇನ್ನಷ್ಟು ಮನದಟ್ಟಾಗಿದೆ. ಆದ್ದ ರಿಂದಲೇ ಮತಧರ್ಮಗಳು ಅಳವಾಗಿ ಬೇರುಬಿಟ್ಟ ಈ ನಮ್ಮ ಭಾರತದಲ್ಲಿ ಆವುಗಳನ್ನು ಬಳಸಿಕೊಂಡೇ ನಮ್ಮನ್ನು ಹೊಲಸಿನಿಂದ ಮೇಲೆತ್ತಬಲ್ಲ ಸಾಧು ಸಂತರನ್ನು ನಿರ್ಲಕ್ಷಿ ಸುವುದು ತಪ್ಪೆಂದು ನನಗೆ ಈಚೆಗೆ ಅನ್ನಿಸುತ್ತಿದೆ. ಪ್ರತಿ ಯೊಬ್ಬನೂ ಸಾರ್ವಜನಿಕವಾಗಿ ಆಡಿ, ಖಾಸಗಿಯಾಗಿ ಮರೆಯುವ, ಈ ಮೇಲೆ ಹೇಳಿದ ಅಭಿಪ್ರಾಯಗಳನ್ನು ನಿಜಗೊಳಿಸಲು ಒಂದು ಸ್ಪಷ್ಟ ಹೆಜ್ಜೆಯನ್ನೂ ಸೂಚಿಸು ತ್ತೇನೆ. ನಮ್ಮದೇಶದ ಯುವಜನರನ್ನು ಪ್ರತ್ಯೇಕಿಸಿ, ಅಸಮಾನತೆಯನ್ನು ಇನ್ನಷ್ಟು ಉತ್ಕರ್ಷಕ್ಕೆ ತಳ್ಳುವ ಭಾರತದ ಒಂದು ಪ್ರಮುಖ ಸಂಸ್ಥೆಯೆಂದರೆ ನಮ್ಮ ಶಾಲಾ ವ್ಯವಸ್ಥೆ. ಎಲ್ಲ ಎಲೀಟಿಸ್ಟ್ ಖಾಸಗಿ ಶಾಲೆ ಗಳನ್ನು ನಿರ್ಮೂಲನಗೊಳಿಸುವಂತೆ ಹಾಗೂ ಎಲ್ಲ ಹುಡುಗರೂ ಒಂದೇ ರೀತಿಯ ಶಾಲೆಗಳಿಗೆ ಹೋಗು

ವುದು ಸಾಧ್ಯವಾಗುವಂತೆ ನಾವು ಚಳವಳಿ ನಡೆಸಬೇಕು. ನಾವು ಪ್ರಜಾಪ್ರಭುತ್ವವಾದೀ ಹಾಗೂ ಸಮಾನಾವಕಾಶವಾದೀ ಆದರ್ಶಗಳನ್ನು ಹೊಂದಿರುವವರಾಗಿದ್ದಾಗ ಇದು ಒಂದು ಅನಿವಾರ್ಯ ಅಗತ್ಯವಾಗುತ್ತದೆ; ಶಾಲೆಯು ಆಯ್ಕೆಯ ಪ್ರಶ್ನೆಯಾಗಿರುವವರೆಗೆ ಪ್ರತಿ ತಂದೆಯೂ ತನ್ನ ಮಕ್ಕಳು ಒಂದು ಪ್ರತ್ಯೇಕ ಶಾಲೆಗೆ ಹೋಗುವಂತಾಗಬೇಕೆಂದು ಕಾತರಿಸುವುದು ಸಹಜ. ಅದನ್ನು ವೈಯಕ್ತಿಕ ಮಟ್ಟದಲ್ಲಿ ಮಾತ್ರ ತಪ್ಪಿಸುವಂತಿಲ್ಲ— ನಾವೆಲ್ಲರೂ ನಮ್ಮ ಸೋಲಿನಿಂದ ಕಂಡುಕೊಂಡಿರುವ ಸತ್ಯ ಇದು.

ಹರಿಜನರ ನಂತರ ತುಂಬ ತುಳಿತಕ್ಕೊಳಗಾದವರೆಂದರೆ ಭಾರತದ ಸ್ತ್ರೀಯರು. ಆದರೆ ಈ ತುಳಿತದ ಪ್ರಜ್ಞೆ, ನಾವದನ್ನು ಗುರುತಿಸಲಾಗದಷ್ಟು ಮಟ್ಟಿಗೆ ನಮ್ಮಲ್ಲಿ ಅಂತರ್ಗತವಾಗಿಬಿಟ್ಟಿದೆ. ಡಾ. ಲೋಹಿಯಾರವರು ಸ್ತ್ರೀಯರ ಸ್ಥಿತಿಯ ಬಗ್ಗೆ ಹೃದಯಸ್ಪರ್ಶಿಯಾದ ಈ ಮಾತುಗಳನ್ನಾಡುತ್ತಾರೆ.

> ಭಾರತದ ಬಹುಸಂಖ್ಯಾತ ಸ್ತ್ರೀಯರ ಪ್ರಮುಖ ಸಮಸ್ಯೆಯೆಂದರೆ, ನಲ್ಲಿ ನೀರು ಮತ್ತು ಪಾಯಿಖಾನೆಗಳ ಕೊರತೆ. ಪ್ರತಿದಿನ ಬೆಳಿಗ್ಗೆ ಮತ್ತು ಸಾಯಂಕಾಲ ದೂರದ ಕೊಳ್ಳ ಅಥವಾ ಬಾವಿಗಳಿಂದ ಹೆಚ್ಚಿನ ಸಾರಿ ಕೊಳಕಾದ ಹಾಗೂ ಕೆಸರು ತುಂಬಿದ ನೀರನ್ನು ಮನೆಗೆ ಹೊತ್ತು ಸಾಗಿಸುವುದು ಭಾರತೀಯ ಸ್ತ್ರೀಯ ಹಣೆಬರಹ. ತನ್ನ ಮರ್ಯಾದೆಯನ್ನುಳಿಸಿಕೊಳ್ಳಲು ಆಕೆ, ಸೂರ್ಯೋದಯಕ್ಕೆ ಮೊದಲು ಅಥವಾ ಸೂರ್ಯಾಸ್ತದ ನಂತರ ಬಯಲುಗಳಲ್ಲಿ ಮಲವಿಸರ್ಜನೆ ಮಾಡಬೇಕಾಗುತ್ತದೆ.
>
> —*The Caste System*
> (ಪುಟ 59)

ಇದು ಭಾರತದ ಬಡಸ್ತ್ರೀಯರ ಕಥೆಯಾದರೆ, ಮಧ್ಯಮ ವರ್ಗದ ಮಹಿಳೆಯರ ಸ್ಥಿತಿ ಇದಕ್ಕಿಂತ ಉತ್ತಮವೇನೂ ಅಲ್ಲ. ಅವಳ ಗಂಡನಿಗೆ ಆಕೆ ಬುದ್ಧಿವಂತೆಯೂ, ಚೂಟಿಯೂ, ಚಂದದವಳೂ ಆಗಿರಬೇಕೆಂದಿರುತ್ತೆ. ಜೊತೆಗೇ ಅವನಿಗೆ, ಅವಳು ಸಂಪೂರ್ಣವಾಗಿ ತನ್ನವಳು ಮಾತ್ರವೇ ಆಗಬೇಕೆಂದೂ ಇರುತ್ತದೆ. ಡಾ. ಲೋಹಿಯಾ ಗುರುತಿಸುವಂತೆ ಇವೆರಡೂ ಪರಸ್ಪರ ಹೊಂದಾಣಿಕೆಯಾಗಲಾರದ ಆಶಯಗಳು ಮತ್ತು ಅದರಿಂದಾಗಿ ದುಃಖಕರವಾದ ಘರ್ಷಣೆಗಳೂ ಉದಿಸುತ್ತವೆ. ಮತ್ತೆ ವರದಕ್ಷಿಣೆ ಕೂಡಾ ಹೆಂಗಸನ್ನು ಇನ್ನಷ್ಟು ಅವಮಾನಕ್ಕೆ ಸಿಕ್ಕಿಸಿ ಆಕೆಯನ್ನು ಒಂದು ವಸ್ತುವಾಗಿ ಪರಿಗಣಿಸುವಂತೆ ಮಾಡಿದೆ. ಈ ಕಾರಣದಿಂದಾಗಿಯೇ ಹೆಂಗಸರ ಕೊಲೆಯಾಗುವುದನ್ನು, ಆತ್ಮಹತ್ಯೆಗಳಾಗುವುದನ್ನು ನಾವು ದಿನನಿತ್ಯ ಪತ್ರಿಕೆಗಳಲ್ಲಿ ಓದುತ್ತೇವೆ. ಹಾಗಾಗಿ, ಯುವ ಜನತಾದ ಕ್ರಿಯಾಶೀಲಕಾರ್ಯಕರ್ತರು ತಾವು ವರದಕ್ಷಿಣೆಯನ್ನು ಮುಟ್ಟುವುದಿಲ್ಲವೆಂಬ ಗಂಭೀರ ಪ್ರತಿಜ್ಞೆ ಮಾಡಬೇಕೆಂದು ನಾನು ಸೂಚಿಸುತ್ತೇನೆ. ಇದು ಸ್ತ್ರೀ ಸ್ವಾತಂತ್ರ್ಯದ ದಿಕ್ಕಿನಲ್ಲಿ ಮತ್ತು ಭ್ರಷ್ಟಾಚಾರದ ವಿರುದ್ಧ ಹೊಡೆದಾಡುವ ದಿಕ್ಕಿನಲ್ಲಿ ಒಂದು ಪ್ರಮುಖ ಹೆಜ್ಜೆಯಾಗುತ್ತದೆ. ಇಲ್ಲವಾದರೆ, ಯಾವ ತಂದೆ ತಾನೇ ಭ್ರಷ್ಟಾಚಾರಿಯಾಗದೇ ತನ್ನ ಮಗಳನ್ನು ಮದುವೆ ಮಾಡಿಕೊಡಬಲ್ಲ ? ಇಂಥ ಸಾಮಾಜಿಕ ಅನ್ಯಾಯಗಳು ಅವಕ್ಕೆ ಕೊಂಡಿಗಳಾಗಿರುವ ಇನ್ನಷ್ಟು ದುರಾಚಾರಗಳನ್ನು ಚಾಲ್ತಿಗೆ ತರುತ್ತವೆ. ಕೊನೆಯ ಪಕ್ಷ ನಾವು ನಮ್ಮ ವೈಯಕ್ತಿಕ ಜೀವನದಲ್ಲಾದರೂ ಇಂಥದನ್ನು ತೊಡೆದುಹಾಕಬೇಕು. ಇಡೀ ಸಾಮಾಜಿಕ ವ್ಯವಸ್ಥೆ ಬದಲಾಗದ ಹೊರತು ತಾನು ಬರೇ ಅಸಹಾಯಕನೆಂದು ಹೇಳಿಕೊಳ್ಳುವ ಯುವಕನನ್ನು ಯಾರೂ ನಂಬಲಾರರು. ಅಂದರೆ, ನಮ್ಮೆಲ್ಲ ಮಿತಿಗಳಲ್ಲೂ ಆಚರಿಸಬಹುದಾದಂಥವನ್ನು ಕೂಡ ಆಚರಿಸದೇ ಇರುವುದು ಸಿನಿಕತನವಾಗುತ್ತದೆ.

ಈ ದೇಶದಲ್ಲಿ ನಾವು ಈಗಾಗಲೇ ಜಡತೆಯ ಸ್ಥಿತಿಯನ್ನು ಪ್ರವೇಶಿಸಿದ್ದೇವೆ. ನಮ್ಮ ಈ ಜಡತೆಗೆ, ನಮ್ಮ ಬಡ ಜನತೆ ಈಗಾಗಲೇ ಈ ಅಗಾಧವಾದ ದಾರಿದ್ರ್ಯಕ್ಕೆ ಸಾಕಷ್ಟು ಒಗ್ಗಿಕೊಂಡಿರುವುದು ಮಾತ್ರವಲ್ಲದೇ ಇನ್ನೂ ಹಲವಾರು ಕಾರಣಗಳಿವೆ. ಅವುಗಳಲ್ಲಿ ಮುಖ್ಯವೆಂದು ನನಗನ್ನಿಸುವ ಒಂದು ಕಾರಣವೆಂದರೆ ನಮ್ಮ ರಾಜಕಾರಣಿಗಳ ಎಗ್ಗಿಲ್ಲದ ನಡವಳಿಕೆ. ಜನತಾ ಪಕ್ಷದ ಸೋಲನ್ನೇ ನೋಡಿ. ನೈತಿಕ ಅವನತಿಯ ಮತ್ತು ಅನುಕೂಲಸಿಂಧು ರಾಜಕೀಯದ ದಶಕದಲ್ಲಿ, ನಿಸ್ವಾರ್ಥಿಗಳಾಗಿ ಮೌಲ್ಯಗಳಿಗೆ ನಮ್ಮನ್ನು ನಾವು ಸಮರ್ಪಿಸಿಕೊಳ್ಳುವುದು

ಸಾಧ್ಯವೆಂಬುದನ್ನು, ತನ್ನ ನೈತಿಕ ಪ್ರಜ್ಞೆಗೆ ಕೊಟ್ಟ ಕರೆಗೆ ನಮ್ಮ ಅವಿದ್ಯಾವಂತ ಜನಸಮೂಹ ಸೂಕ್ತ ಪ್ರತಿಕ್ರಿಯೆ ತೋರಿಸುತ್ತದೆಂಬುದನ್ನು, ಲೋಕನಾಯಕ ಜಯ ಪ್ರಕಾಶ ನಾರಾಯಣರು ಸಾಧಿಸಿ ತೋರಿಸಿದರು. ಒಬ್ಬ ಬಡಕಾಯದ, ತುಂಬ ಅನಾರೋಗ್ಯದಲ್ಲಿದ್ದ ಹೊರಳಲು ಕಷ್ಟಪಡುತ್ತಿದ್ದ, ಮರಣ ಶಯ್ಯೆಯಲ್ಲಿರುವಾಗ ಡಯಾಲಿಸಿಸ್ ಯಂತ್ರಕ್ಕೆ ಅಂಟಿಕೊಂಡಿದ್ದ ಮನುಷ್ಯನೊಬ್ಬ ಭಾರತದ ಜನತೆಯ ನಿಸ್ಪೃಹ ನೈತಿಕ ಪ್ರಜ್ಞೆಗೆ ಪ್ರೇರಕ ರಾದದ್ದು, ಅಂಥ ಸ್ವಾರ್ಥದ ಮತ್ತು ಅಪ್ರಾಮಾಣಿಕತೆಯ ದಶಕದಲ್ಲಿ ಸಂಭವಿಸಿದ ಪರಾರ್ಥಪರತೆಯ ದೊಡ್ಡ ಗೆಲುವು. ಆದರೂ ಅಧಿಕಾರಕ್ಕೆ ಬರಲು ಆ ಹಲವು ಮುದಿ ರಾಜಕಾರಣಿಗಳಿಗಳು, ತಾವು ಕ್ರಿಮಿನಲ್ ಕೇಸು ಹಾಕಿದ್ದ ಸಂಜಯಗಾಂಧಿಯ ಮರಣಾಂತರವೇ ಅವಮಾನಕರವಾದ ಗುಪ್ತಕಾರ್ಯಗಳಲ್ಲಿ ತೊಡಗಿದ್ದು ಹೇಗೆ? ತುರ್ತುಪರಿಸ್ಥಿತಿ ಕಾಲದಲ್ಲಿ ತೋರಿದ ಶೌರ್ಯಕ್ಕಾಗಿ ನಾನು ಇನ್ನೂ ಅಪಾರವಾಗಿ ಗೌರವಿಸುವ ಜಾರ್ಜ್ ಫರ್ನಾಂಡೀಸರಂಥ ವ್ಯಕ್ತಿ, ಪಾರ್ಲಿಮೆಂಟಿನಲ್ಲಿ ಜನತಾ ಪಕ್ಷವನ್ನು ಸಮರ್ಥಿಸಿ, ಆ ಮಾತುಗಳೆಲ್ಲ ಇನ್ನೂ ನಮ್ಮ ಕಿವಿಗಳಲ್ಲಿ ಅನುರಣಿಸುತ್ತಿದ್ದಾಗಲೇ ಹೇಗೆ ರಾಜೀನಾಮೆ ಕೊಟ್ಟರು ?– ಇವೆಲ್ಲ ಇಡೀ ದೇಶವನ್ನೇ ದಿಗ್ಭ್ರಾಂತ ಗೊಳಿಸಿವೆ. ಆದುದರಿಂದ ಸಹಜವಾಗಿಯೇ ಹೆಚ್ಚಿನ ಜನ ಒಂದೋ ಸಿನಿಕರೋ, ಇಲ್ಲ ನಿರುತ್ಸಾಹಿಗಳೋ ಆಗಿದ್ದಾರೆ. ಇಂಥವರನ್ನು ಕಂಡಾಗ ಜನಸಾಮಾನ್ಯರು ಏನು ಹೇಳುತ್ತಾರೆಂಬುದು ನಮಗೆಲ್ಲ ಗೊತ್ತು : "ಅವರೆಲ್ಲ ಒಂದೇ." ಈ 'ಅವರೆಲ್ಲ ಒಂದೇ' ಎನ್ನುವ ಮಾತು ಇಡೀ ದೇಶದ ನಿರುತ್ಸಾಹವನ್ನು ಒಗ್ಗೂಡಿಸಿ ಹೇಳುತ್ತದೆ.

ಇಂಥ ಮಾನಸಿಕ ಸ್ಥಿತಿಯಲ್ಲಿದ್ದಾಗ ಕೆಲವರು ಈ ಸಾಮಾಜಿಕ ಕೆಡುಕುಗಳಿಗೆ ಖಾಸಗಿ ಪರಿಹಾರಗಳನ್ನು ಕಂಡುಕೊಳ್ಳುವುದು ಸ್ವಾಭಾವಿಕ. ಅವರು ಅನುಭಾವಿಗಳಾದ ಧಾರ್ಮಿಕರು. ಇನ್ನುಳಿದವರು, ಅವರಷ್ಟೇ ಪ್ರಾಮಾಣಿಕರಾಗಿದ್ದು ಯುವಕರಾಗಿರುವಂಥವರು, ಹತಾಶರಾಗಿ ಉಗ್ರಗಾಮಿ ರಾಜಕೀಯಕ್ಕೆ ಧುಮುಕುತ್ತಾರೆ. ಆದುದರಿಂದ ನಮ್ಮಲ್ಲಿನ ಕೆಲವು ಅತ್ಯುತ್ತಮ ಯುವಕರು ನಕ್ಸಲಿಸಂನಿಂದ ಆಕರ್ಷಿತರಾಗುತ್ತಾರೆಂಬುದು ನನ್ನ ಅನಿಸಿಕೆ. ಅವರು, ನಮ್ಮ ಪಾರ್ಲಿಮೆಂಟರಿ ಪ್ರಜಾಪ್ರಭುತ್ವವು ಮೂಲಭೂತವಾದ ಸಾಮಾಜಿಕ ಬದಲಾವಣೆಗಳ ಬಗ್ಗೆ ನಮಗಿರುವ ಶ್ರದ್ಧೆಯನ್ನು ನಿಧಾನವಾಗಿ ತಿಂದುಹಾಕುತ್ತದೆಯೆಂದೂ, ಹಾಗೂ ಅದರಲ್ಲಿ ಭಾಗಿಗಳಾದವರು ಯಶಸ್ಸಿನ ಮೆಟ್ಟಿಲಲ್ಲಿ ಎಷ್ಟೇ ಮೇಲೇರಿದ್ದರೂ ಕೊನೆಯಲ್ಲಿ ಭ್ರಷ್ಟರೂ, ನಿರ್ಜೀವರೂ ಆಗುತ್ತಾರೆ ಎಂದೂ ಅಂದುಕೊಂಡಿರುತ್ತಾರೆ. ಚುನಾವಣೆಗಳಂ ಎಷ್ಟು ದುಬಾರಿಯಾಗಿವೆ ನೋಡಿ. ಕಳ್ಳಸಾಗಾಣಿಕೆದಾರರ ಮತ್ತು ಅಕ್ರಮ ದಾಸ್ತಾನುಗಾರರ ಹಣಸಹಾಯವಿಲ್ಲದೆ ಯಾರಾದರೂ ಚುನಾವಣೆಯಲ್ಲಿ ಕಾದುವುದು ಸಾಧ್ಯವೇ? ನಕ್ಸಲೀಯರ ಮೂರ್ಖತನದ ಮತ್ತು ಅಪ್ರಬುದ್ಧ ಸಾಹಸಿಗತನದ ಈ ಪ್ರವೃತ್ತಿ ತಪ್ಪಾದದ್ದು. ಆದರೆ ಉಳಿದ ಯುವ ರಾಜಕಾರಣಿಗಳಾ ಪರ್ಯಾಯವಾಗಿ ಏನನ್ನು ಕೊಡಬಲ್ಲರು ? ಯಾಕೆಂದರೆ ಅವರು ಯಾವನೋ ಒಬ್ಬ ಅದಕ್ಷ ರಾಜಕಾರಣಿಯ ಕೃಪಾಕಟಾಕ್ಷದಿಂದ.ಹರುಕುಮುರುಕಾಗಿ ಸಂಘಟಿತರಾಗಿ ಆತನ ಬಾಲ ಬಡುಕರಾಗಿರುತ್ತಾರೆ. ಯುವ ಜನತಾದ ಮುಂದಿರುವ ಪ್ರಶ್ನೆ ಇದು : ಚುನಾವಣೆಯ ಸಮಯದಲ್ಲಿ ಕಾರ್ಯಶೀಲವಾಗುವ ಇತರ ರಾಜಕೀಯ ಪಕ್ಷಗಳ ಯುವಕರಿಗಿಂತ ಭಿನ್ನರಾಗಲು ನಿಮ್ಮಲ್ಲಿರುವ ಇತರ ಹಾದಿಗಳ್ಯಾವುವು ?

ಯುವಕರಿಗೆ ಹುದ್ದೆಗಳನ್ನು ತಿರಸ್ಕರಿಸಿ **ಅಧಿಕಾರ**ಕ್ಕಾಗಿ — ಜನರ ಅಧಿಕಾರಕ್ಕಾಗಿ—ಹುಡುಕುವ ಕಾತರ ಮತ್ತಿ ಆದರ್ಶಗಳಿರಬೇಕು. ಆ ಮೂಲಕ ಅವರು ನಿರ್ಜೀವವೂ, ನಿಂತನೀರಿನದೂ ಆದ ಈ ಭಾರತೀಯ ಸಮಾಜವನ್ನು ಸೃಜನಶೀಲ ಸಮೂಹವನ್ನಾಗಿಸಬೇಕು. ನಮ್ಮ ಚೈತನ್ಯಪೂರ್ಣ ರಾಷ್ಟ್ರದ ಜೊತೆಜೊತೆಗೇ ನಾಚಿಕೆಯ ಗುಣವನ್ನೂ ಯುವಕರು ಉಳಿಸಿಕೊಂಡಾಗ ಅದು ಸಾಧ್ಯ. ನಾಚಿಕೆಯ ಸ್ವಭಾವ ಯಾಕೆ ಅಗತ್ಯವೆಂದರೆ, ಅವಮಾನಕರವಾದ ಚಟುವಟಿಕೆಗಳಿಂದ ದೂರವಿರಲು ಮತ್ತು ರಾಜಕಾರಣಿಗಳ ಬಾಯಿಬಡಕತನಕ್ಕೆ ನಾವೂ ಬೀಳದಿರಲು ಇರುವ ಏಕೈಕ ಉತ್ತಮ ಮಾರ್ಗವೆಂದರೆ ಅದು. ನಮ್ಮ ಒಳ ಬದುಕು ಸಾಹಿತ್ಯ, ಸಂಗೀತ, ನಾಟಕ ಮತ್ತಿತರ ಕಲೆಗಳಿಂದ ಶ್ರೀಮಂತವಾದದ್ದಾಗಿರಬೇಕು. ರಾಜಕೀಯದ ಕ್ರಿಯೆಗಳನ್ನು ಕಲೆ ಮತ್ತು ವಿಜ್ಞಾನದ ಚಿಂತನ ಶೀಲತೆಗಳೊಂದಿಗೆ ಬೆಸೆಯುವುದು ನಮಗೆ ಶಕ್ಯವಿರಬೇಕು. ನಾವು ಏಕಾಂತವನ್ನು ಪ್ರೀತಿಸು

ವಂಥವರಾಗಿರಬೇಕು ; ಯಾಕೆಂದರೆ ಆಗ ಮಾತ್ರ ನಮ್ಮ ಒಳಗಿನ ಬದುಕು ಪುನಃ ಚೈತನ್ಯಶೀಲವಾಗುತ್ತದೆ. ಇದು ಯಾಕೆ ಮುಖ್ಯವೆಂದರೆ, ರಾಜಕಾರಣಕ್ಕಿಳಿದವರು ಯಾವಾಗಲೂ ಸಾರ್ವಜನಿಕರಿಗೆ ಮುಖ ತೋರಿಸುವವರಾಗಿಬಿಡುವುದರಿಂದ ಸದಾಕಾಲ ಮುಖದ ಮೇಲೆ ಮುಗುಳ್ನಗೆಯನ್ನಂಟಿಸಿಕೊಂಡು ನಡೆದಾಡುವವರಾಗುತ್ತಾರೆ. ಇಂಥ ಆಷಾಡಭೂತಿಗಳನ್ನು ಯಾರೂ ನಂಬುವುದಿಲ್ಲ. ಈ ದೇಶಕ್ಕೆ ಪ್ರಜ್ಞಾವಂತರೂ, ಧೈರ್ಯಶಾಲಿಗಳೂ, ಹೃದಯವಂತರೂ ಆದ ನಾಚಿಕೆಯನ್ನು ಕಳೆದುಕೊಳ್ಳದಂಥ ಯುವಜನರ ಸೇವೆಯ ಅಗತ್ಯ ವಿದೆ. ಯಾಕೆಂದರೆ ಅಂಥವರಿಗೆ ರಾಜಕೀಯವು, ತಮ್ಮ ವೈಯಕ್ತಿಕ ಬದುಕಿನ ಹಿತಾಸಕ್ತಿಗಳನ್ನು ಸಮೂಹದ ಉತ್ಕರ್ಷಕ್ಕಾಗಿ ಧಾರೆಯೆರೆಯುವ ಮಾರ್ಗವಾಗಿರುತ್ತದೆ. ರಾಜಕೀಯವು ಪುನಃ, ಗಾಂಧೀಜಿ ಮತ್ತು ಲೋಹಿಯಾರಿಗಿದ್ದಂತೆ, ನಮ್ಮ ಆಳವಾದ ನಂಬಿಕೆಗಳನ್ನು ಪಣಕ್ಕಿಡುವ ಕಣವಾಗಬೇಕು. ನಮಗೆ ಇನ್ನೂ ರಾಜಕೀಯವೇ ನಮ್ಮ ಜೀವನದ ಎಲ್ಲ ಮೌಲಿಕ ಕಾಳಜಿಗಳ ಕೇಂದ್ರವಾಗುವುದು—'ಕಂಬನಿ ತುಳುಕುವಾಗಲೂ ಸಿಟ್ಟಿನಿಂದ ಕೆಂಪಾಗುವ ಕಣ್ಣಿದ್ದಾಗ'—ಸಾಧ್ಯವಿದೆ.

[1981ರ ಆರಂಭದಲ್ಲಿ ಬೆಂಗಳೂರಲ್ಲಿ ಅಖಿಲ ಭಾರತ ಯುವ ಜನತಾ ಮೇಳವನ್ನುದ್ದೇಶಿಸಿ ಮಾಡಿದ ಕೀನೋಟ್ ಭಾಷಣ, ಕನ್ನಡಕ್ಕೆ ಭಾಷಾಂತರ : ಪಟ್ಟಾಭಿರಾಮ ಸೋಮಯಾಜಿ]

ಕೋ. ಮು. ಕಾರಂತ

ವ್ಯಕ್ತಿತ್ವ ವಿಕಸನದಲ್ಲಿ ಒಂದು ಪ್ರಯೋಗ

ಬಹು ಪೂರ್ವದಲ್ಲಿ ಒಂದು ವಿಶ್ವವಿದ್ಯಾಲಯ, ಅಥವಾ ಜ್ಞಾನಾರ್ಜನೆ ಮಾಡುವ ಎಂಥ ಶಾಲೆಯೇ ಇರಲಿ ಬಂತೆಂದರೆ, ಒಂದು ಸಂಸ್ಕೃತಿಯೇ ಬಂದಂತೆ. ಆದರೆ, ಕಾಲ ಹೋದಂತೆ, ಸಾಮೂಹಿಕ ಶಿಕ್ಷಣ ಬಂದಂತೆ, ಶಾಲೆ ಕಾಲೇಜುಗಳು ಇದ್ದಬಿದ್ದ ಸಂಸ್ಕೃತಿಯನ್ನು ಸಂಹಾರಮಾಡುವ, ಗೂಂಡಾಗಿರಿಯ ಕೇಂದ್ರವಾಗಿ ಸಮಾಜ ಜೀವನವನ್ನು ಅಲ್ಲೋಲ ಕಲ್ಲೋಲ ಮಾಡುವ ಪರಿಶ್ರಮವನ್ನು ಕಾಣುತ್ತಿದ್ದೇವೆ. ಬಸ್ಸಿನ ದರದಿಂದ ಹಿಡಿದು, ಪರೀಕ್ಷೆಗೆ ಬಹಿಷ್ಕಾರ ಹಾಕುವವರೆಗಿನ ಎಲ್ಲ ಹೊಣೆಯನ್ನೂ ವಿದ್ಯಾರ್ಥಿಗಳು ಹೊತ್ತಂತೆ ಕಾಣುತ್ತದೆ. ಇದಕ್ಕೆ ಕಾರಣ ಏನಿರಬಹುದು ಎಂದು ಹುಡುಕಿದವರಿಗೇನು ಕಡಿಮೆ ಇಲ್ಲ. ಆದರ್ಶಗಳು ಇಲ್ಲದೇ ಇರುವುದು, ನಾಯಕತ್ವ ಉಧ್ವಸ್ತವಾಗಿರುವುದು, ರಾಜಕೀಯ ಮತ್ತು ಸಾಮಾಜಿಕ ಜೀವನ ಕಲುಷಿತವಾಗಿರುವುದು, ಶಿಕ್ಷಣ ಪದ್ಧತಿ ನಪುಂಸಕವಾಗಿ ಹೋಗಿರುವುದು, ನೈತಿಕತೆಯನ್ನು ಕಳೆದುಕೊಂಡ ಹಿರಿಯರು, ಪಾಶ್ಚಾತ್ಯ ಜನಜೀವನ ಪ್ರಭಾವ, ಸಿಲ್ಲಿಯಾದ ಸಿನಿಮಾಗಳು, ನಿರುದ್ಯೋಗ–ಹೀಗೆ ನೂರಾರು ಕಾರಣಗಳು. ಇಲ್ಲಿ ಎಲ್ಲಿಯೂ ಈ ಕೋಲಾಹಲದಲ್ಲಿ ವಿದ್ಯಾರ್ಥಿಯ ಜವಾಬ್ದಾರಿ ಕಾಣಬರುವುದಿಲ್ಲ. ತಮಾಷೆಯೆಂದರೆ, ವಿದ್ಯಾರ್ಥಿಗಳು ಪತ್ರಿಕೆಗಳಲ್ಲಿ ಮತ್ತು ವೇದಿಕೆಗಳಿಂದ ಬರುವ ಹರುಕು ಮುರುಕು ವಿಶ್ಲೇಷಣೆಗಳನ್ನು ಉರು ಹಾಕಿ, ಚರ್ಚಾ ಕೂಟಗಳಲ್ಲಿ ಮಾತನಾಡುತ್ತಾರೆ, ಪ್ರಬಂಧ ಬರೆಯುತ್ತಾರೆ. ಸಾಲದ್ದಕ್ಕೆ ರಾಜಕಾರಣಿಗಳು, ತಜ್ಞರು ಕಾಲೇಜುಗಳ ಸಮಾರಂಭದಲ್ಲಿ ವಿದ್ಯಾರ್ಥಿಗಳದ್ದೇನು ತಪ್ಪಿಲ್ಲ, ತಪ್ಪೆಲ್ಲ ಹಿರಿಯರದ್ದೆ ಎಂದು "ಘಂಟಾಘೋಷ"ವಾಗಿ ಸಾರುತ್ತಾರೆ.

ಒಂದು ಜನಾಂಗದ ಬೇಜವಾಬ್ದಾರಿತನಕ್ಕೆ ಇದಕ್ಕಿಂತ ಹೆಚ್ಚಿನ ಪುಸಲಾಯಿಸುವಿಕೆ ಬೇಕೆ? ಹೀಗೆ ಬೇಜವಾಬ್ದಾರಿಯಲ್ಲಿ ಬೆಳೆದ, ತಮ್ಮ ಸಂಕಷ್ಟಗಳಿಗೆಲ್ಲ ಬೇರೆಯವರೇ ಕಾರಣವೆಂದು ನಂಬಿ ಬದುಕಿಕೊಂಡು ಬಂದ ಜನಾಂಗವೇ ಇನ್ನು 20 ವರ್ಷಗಳಲ್ಲಿ ನಾಯಕತ್ವದ ಸ್ಥಾನಗಳಿಗೆ ಏರುತ್ತಾರೆ. ಇಂಥ ಪೇಲವವಾದ ಜನರು ಹೇಗೆ ಮ್ಯಾನೇಜ್ ಮಾಡಿಯಾರು ಎಂದು ಎಣಿಸಿದರೆ ನಡುಕ ಹುಟ್ಟುತ್ತದೆ. 1959ರಲ್ಲಿ ಒಂದು ವರ್ಷಕಾಲ ನಾನು ದೂರದ ಹಳ್ಳಿಯೊಂದರಲ್ಲಿ ಸಿಂಗಲ್ ಟೀಚರ್ ಸ್ಕೂಲ್ ನಲ್ಲಿ ಮಾಸ್ತರನಾಗಿದ್ದೆ. ನಂತರ 1965ರಲ್ಲಿ ಮಣಿಪಾಲದ ಕಾಲೇಜಿನಲ್ಲಿ ಮಾಸ್ತರನಾಗಿ ಸೇರಿದೆ. 65ರಿಂದ ಇವತ್ತಿನವರೆಗೂ ಹುಡುಗರೊಡನೆ ಸಂಪರ್ಕ ಇಟ್ಟುಕೊಂಡಿದ್ದೇನೆ. ಮಾಸ್ತರನಾಗಿ, ಸಾಮಾಜಿಕನಾಗಿ, ಮತ್ತು ಪತ್ರಿಕೋದ್ಯೋಗಿಯಾಗಿ ಹುಡುಗರೊಡನೆ ಬೆರೆಯುತ್ತಿದ್ದೆ. ಆದಕ್ಕೆ ಸರಿಯಾಗಿ ನಾನು 25ರ ತರುಣನೂ ಆಗಿದ್ದರಿಂದ, ಮಾತುಕತೆ, ಚರ್ಚೆ ಸುಲಭವಾಗಿತ್ತು. ಹುಡುಗರು ನಿರಾಳವಾಗಿ ನನ್ನ ಬಳಿ ಮುಕ್ತ ಮನಸ್ಸಿನಿಂದ ಅನೇಕ ಸಮಸ್ಯೆಗಳನ್ನು ಚರ್ಚಿಸುತ್ತಿದ್ದರು. ನಾನು ಅವರಿಂದ ಕಲಿತದ್ದು ಇಷ್ಟು:

ನಮ್ಮ ಹುಡುಗರಲ್ಲಿ ಪ್ರತಿಭೆ ಇದೆ. ಜ್ಞಾನ ಇದೆ. ನಮಗಿಂತಲೂ ಹೆಚ್ಚು ಕಲಿತುಕೊಂಡಿದ್ದಾರೆ. ಮಾತ್ರವಲ್ಲ ಪ್ರಾಮಾಣಿಕತೆ ಇದೆ. ನಮ್ಮ ಹಾಗೆ ಸುಳ್ಳಿನೊಡನೆ ಸಂಧಾನ ಮಾಡುವ ಅವಕಾಶ ಕಡಿಮೆಯಾದುದರಿಂದ ಯಾವುದೇ ಸಮಸ್ಯೆಯ ಕುರಿತು ಬಹಳ ಧೈರ್ಯದಿಂದ ಮಾತನಾಡಬಲ್ಲರು. ಪ್ರತ್ಯೇಕವ್ಯಕ್ತಿಯಾದಾಗ ಪ್ರತಿಭಾ ಸಂಪನ್ನರೂ, ಸಭ್ಯರೂ ಆಗಿ ಕಾಣುವ ಇವರು ಇದ್ದಕ್ಕಿದ್ದಹಾಗೆ ಏಕೆ ದಾರಿತಪ್ಪಿ ಬಿಡುತ್ತಾರೆ? ಅವರ ಮನಸ್ಸನ್ನು ಆಳವಾಗಿ ಅಭ್ಯಸಿಸುತ್ತಾ, ಅವರನ್ನು ಸಣ್ಣ ಸಣ್ಣ ಗುಂಪುಗಳಾಗಿ, ಕ್ಲಬ್‌ಗಳ ರೂಪದಲ್ಲಿ organise ಮಾಡುತ್ತಾ, ವ್ಯಕ್ತಿ ವಿಕಸನದ ಮಾರ್ಗಕ್ಕೆ ಅವರನ್ನು ಹಚ್ಚತೊಡಗಿದೆ. ಆದರೂ, ನಾನೇನನ್ನೂ ಸಾಧಿಸಿದಂತಾಗಲಿಲ್ಲವೆನ್ನುವ

ಭಾವ ನನ್ನನ್ನು ಕಾಡುತ್ತಿತ್ತು. ಕಾರಣ ಇಷ್ಟೆ. ತಪ್ಪಿ ಕೊಂಡ ಕೊಂಡಿ ನನಗಿನ್ನೂ ಸಿಕ್ಕಿರಲಿಲ್ಲ.

ಬದಲಾವಣೆಯ ಮಾತು ಆಡುವುದು ಸುಲಭ. ಪತ್ರಿಕೋದ್ಯೋಗಿಯಾಗಿ ನಾನು ಕಂಡಂಥ ಮಂತ್ರಿಗಳು, ರಾಜಕಾರಣಿಗಳು, ತಜ್ಞರು ಉಪಕುಲಪತಿಗಳು–ಹೀಗೆ ಅನೇಕರು ಬದಲಾವಣೆಯ ಕುರಿತು ಮಾತನಾಡಿದ್ದರು. "ಶಿಕ್ಷಣ ಪದ್ಧತಿ ಸುಧಾರಿಸದೆ, ಯಾವ ಬದಲಾವಣೆಯೂ ಆಗಲಾರದು", "ರಾಜಕಾರಣಿಗಳು ಬದಲಾಗದೆ ಏನೂ ಪ್ರಯೋಜನವಿಲ್ಲ". ಕೊನೆಗೆ–"ಭಾರತೀಯನ ಮೂಲ ಚಾರಿತ್ರ್ಯ ಬೆಳೆಯದೆ ಯಾವ ಬದಲಾವಣೆಯೂ ಪ್ರಯೋಜನವಿಲ್ಲ"– ಪತ್ರಿಕಾಕರ್ತನಾಗಿ ಪ್ರಶ್ನೆ ಕೇಳುವ ಅಹಂಕಾರದಲ್ಲಿ, ನಾನೂ ಕೂಡ ಬದಲಾವಣೆ ನನ್ನಿಂದ ಹೊರಗಿನದ್ದು ಎಂಬಂತೆ ನಡೆದುಕೊಳ್ಳುತ್ತಿದ್ದೆ ಎಂಬುದು ಅರಿವಾಗಿ, ಎಲ್ಲರಂತೆ ನಾನೂ ಹುಸಿಯಾಗುತ್ತಿದ್ದೇನೆ ಎಂಬ ಪ್ರಜ್ಞೆ ನನ್ನನ್ನು ಒಮ್ಮಿಂದೊಮ್ಮೆಗೆ ಆಲ್ಲಾಡಿಸಿತು.

ಬದಲಾವಣೆ ಹೊರಗಿನಿಂದ ಬರುತ್ತದೆ ಎಂದು ನಂಬುವ ವರೆಲ್ಲರೂ ಸುಳ್ಳು ಮಸಾಯನನ್ನು ಕಾದಂತೆ. ಬದಲಾವಣೆ ನಮ್ಮ ನಮ್ಮ ಮನದಾಳದಲ್ಲಿ ಆಗಬೇಕು. ತಾತ್ವಿಕವಾಗಿ (philosophically) ಒಬ್ಬನ ಮನೋದೃಷ್ಟಿ ಬದಲಾವಣೆಯಾದರಷ್ಟೇ (ಹೃದಯ ಪರಿವರ್ತನೆ ಅಂದರೆ ಇದೆ) ಯಾವ ಬಾಹ್ಯ ಬದಲಾವಣೆಯೂ ಸಾಧ್ಯ.

ಇದು ತಿಳಿಯಾಗುತ್ತಿದ್ದಂತೆ, ಅಮೆರಿಕಾ ದೇಶದ ಡಾ॥ ಆಲ್ಬರ್ಟ್ ಎಲ್ಲಿಸ್ (Dr. Albert Ellis) ಎಂಬ ಮನೋವಿಜ್ಞಾನಿಯ ಪುಸ್ತಕ ನನ್ನ ಕಣ್ಣಿಗೆ ಬಿತ್ತು. "Guide to Rational Living", "Reason and Emotion in Psychotherapy" ಎಂಬ ಗ್ರಂಥಗಳು ನನ್ನ ಚಿಂತನೆಗೆ ಪುಷ್ಟಿಕೊಟ್ಟುವು. ಬಹುಶಃ Oriental Mysticismನ ಮೂಲದಿಂದ ಅವನ ವಿಚಾರಧಾರೆ ಬಂದದಕ್ಕೋ ಏನೊ, ನನಗಂತೂ ಅವನ ವಿಚಾರಗಳು, ಪ್ರಯೋಗಗಳು, ಸಂಶೋಧನೆಗಳು ಹೆಚ್ಚು ಸ್ವೀಕಾರಾರ್ಹವಾದುವು.

ಮೊದಲು ಪ್ರಯೋಗವನ್ನು ನನ್ನ ಬದುಕಿನಲ್ಲೇ ಮಾಡಿ ಕೊಂಡೆ. ಸಿದ್ಧಿ ಪಡೆದೆ ಎನ್ನುವುದಕ್ಕಿಂತಲೂ, ಹೆಚ್ಚು ತೃಪ್ತಿಕರವಾದ, ಮಾನಸಿಕ ಗೊಂದಲದಿಂದ ದೂರಾದ ಬದುಕನ್ನು ಬಾಳಲು ನನಗೆ ಹೆಚ್ಚಿನ ಶಕ್ತಿ ಲಭಿಸಿತು ಎಂದು ಹೇಳಬಲ್ಲೆ. ಮಾತ್ರವಲ್ಲ, ಬದುಕಿನ ಅನೇಕ ಘಟ್ಟಗಳಲ್ಲಿ, ಸನ್ನಿವೇಶಗಳಲ್ಲಿ ಮಾನಸಿಕ ಸಿಕ್ಕುಗಳಿಗೆ ಸಿಕ್ಕದೆಯೇ ಹೆಚ್ಚು ಸಹ್ಯವಾದ ಮನೋಸ್ಥಿತಿಯನ್ನು ಬೆಳೆಸಿಕೊಂಡೆ ಎಂದು ಹೇಳಬಲ್ಲೆ.

ಬದಲಾವಣೆ ಮನದಾಳದಿಂದ ಬರತಕ್ಕದ್ದು–ಹಾಗೆ ಬರದಿರಲು, ನಮ್ಮ ಶಿಕ್ಷಣದಲ್ಲಿ ಭಾವಸಿದ್ಧತೆಗೆ (emotional training) ಅವಕಾಶವಿಲ್ಲದಿರುವುದು ಒಂದು ಕಾರಣ ಎಂಬುದು ನನಗೆ ತಿಳಿಯಿತು. ಎಲ್ಲಿಸನು ಹೀಗೆ ಹೇಳುತ್ತಾನೆ : "ಮನುಷ್ಯ ತನ್ನ ಮನೋದೃಷ್ಟಿಯ ಮೇಲಿಂದ, ಬದುಕನ್ನು ನರಕವಾಗಿಯೂ, ನಾಕವಾಗಿಯೂ ಮಾಡಬಲ್ಲನು." ನಾವು ಒಂದು ಘಟನೆಯನ್ನು ಹೇಗೆ ನೋಡುತ್ತೇವೆ ಎಂಬುದರ ಮೇಲಿಂದ ನಮ್ಮ ಮಾನಸಿಕ ತಲ್ಲಣ ಇರುತ್ತದೆ. ಅಂದರೆ, 'ಅ' ಎಂಬಲ್ಲಿ ಒಂದು ಘಟನೆ ನಡೆಯುತ್ತದೆ. "ಪ್ರ" ಎಂಬಲ್ಲಿ ಒಂದು ಮಾನಸಿಕ ಪ್ರತಿಕ್ರಿಯೆ ಹೊರಡುತ್ತದೆ. ಸಾಮಾನ್ಯವಾಗಿ 'ಅ'ವೇ, 'ಪ್ರ'ವನ್ನು ಹುಟ್ಟಿಸಿತು ಎಂದು ನಾವು ನಂಬುತ್ತೇವೆ. ನಿಜವಾಗಿಯಾದರೆ ಇದು ಸರಿಯಲ್ಲ. ಏಕೆಂದರೆ, "ಅ" ಇಂಥದೇ ಪ್ರತಿಕ್ರಿಯೆ ಹೊರಡಿಸುವುದಾದರೆ, "ಅ"ದಲ್ಲಾದ ಘಟನೆಯಿಂದ ಆದನ್ನು ಕಂಡ ಎಲ್ಲರಲ್ಲೂ ಏಕಪ್ರಕಾರವಾದ ಪ್ರತಿಕ್ರಿಯೆ ಹುಟ್ಟಬೇಕಿತ್ತು. ಆದರೆ, ಇದು ಹಾಗಾಗಲಾರದು. ಎಂಬುದು ಅನುಭವ ಸಿದ್ಧ, ಪ್ರಯೋಗಸಿದ್ಧ.

ಅಂದರೆ, 'ಅ' ಮತ್ತು 'ಪ್ರ' ನಡುವೆ ಏನೊ ನಡೆಯುತ್ತದೆ. ಆದನ್ನು ಎಲ್ಲಿಸ್ 'ನಂ' ಎಂದು ಕರೆಯುತ್ತಾನೆ. 'ನಂ' ಎಂದರೆ ನಮ್ಮ ನಮ್ಮ ನಂಬಿಕೆಗಳು. 'ಅ'ದಲ್ಲಾದ ಘಟನೆಯನ್ನು ನಮ್ಮ ನಂಬಿಕೆಗಳ ಮೂಲಕ ನೋಡುತ್ತಾ ಭಾಷೆಯಲ್ಲಿ ಆದನ್ನು interpret ಮಾಡುತ್ತೇವೆ. ನಾವು ಮಾಡಿಕೊಳ್ಳುವ ಈ ಸ್ವಗತವಾದ ವ್ಯಾಖ್ಯೆ – ಆದಕ್ಕೆ ತಕ್ಕುದಾದ ಭಾವನೆಗಳನ್ನು ನಮ್ಮ ಮನಸ್ಸಿನಲ್ಲಿ ಹುಟ್ಟಿಸುತ್ತದೆ. ನಮ್ಮ 'ನಂ'ಗಳು ವಿವೇಚನಾಯುತವಾಗಿದ್ದರೆ, ಮಾನಸಿಕ ತಲ್ಲಣ ಇರುವುದಿಲ್ಲ. ದುಃಖ ಅಥವಾ ಕೋಪ ಬರಬಹುದು ಸಹಜವಾಗಿ. ಆದರೆ, ಈ 'ನಂ'ಗಳು ಗೊಂದಲಮಯವಾಗಿದ್ದರೆ, ತರ್ಕಕ್ಕೆ ಮಿಾರಿದ್ದರೆ,

ತೀರ್ಮಾನಕರವಾಗಿದ್ದರೆ, ಅಸಹಜವಾದ, ಅನಾರೋಗ್ಯ ಕರವಾದ ಮಾನಸಿಕ ತಲ್ಲಣ ಉಂಟಾಗುತ್ತದೆ. ಕೋಪ ರೋಷವಾಗುತ್ತದೆ; ದುಃಖ ಸಂಕಟವಾಗಿ ಮನಸ್ಸನ್ನು ಕಾಡುತ್ತದೆ. ತಲ್ಲಣಗೊಳಿಸದ ಸ್ಥಿತಿಗೆ ಬರಬೇಕಾದರೆ ಈ ಅತಾರ್ಕಿಕವಾದ ಭಾವನೆಗಳನ್ನು ತರ್ಕಕ್ಕೆ ಹಚ್ಚಬೇಕು, dispute ಮಾಡಬೇಕು ಎನ್ನುತ್ತಾನೆ ಎಲ್ಲಿಸ್.

ಉದಾ: 'ಅ'ದಲ್ಲಿ ಒಬ್ಬ ತನ್ನ ಪ್ರೇಮಿಯನ್ನು ಕಳ ಕೊಳ್ಳುತ್ತಾನೆ. ಅಂದರೆ ಅವಳು ಇವನನ್ನು ಪ್ರೀತಿಸು ತ್ತಿದ್ದಳು. ಆದರೆ ಇನ್ನೊಬ್ಬನ ಜತೆ ಮದುವೆಯಾದಳು. 'ಪ್ರ'ದಲ್ಲಿ ಭಗ್ನಪ್ರೇಮಿಯು ಮಂಕನಾಗಿದ್ದಾನೆ. ಕ್ರಿಯಾ ಹೀನನಾಗಿದ್ದಾನೆ. ಆತ್ಮಹತ್ಯೆಯ ವಿಚಾರಗಳನ್ನು ಜಗಿ ಯುತ್ತಾನೆ. ಸಾಮಾನ್ಯವಾಗಿ, ಇವನನ್ನು ನೋಡಿದವರು ಹೇಳುತ್ತಾರೆ: ಸರಿಯಿದ್ದ ಅವಳು ಬೇರೆಯವನನ್ನು ಮದುವೆಯಾದದ್ದೇ ಒಂದು ಹೇತು. ನಂತರ ಹೀಗಾಗಿ ದ್ದಾನೆ. ಅಂದರೆ, ಕೇವಲ ಬಾಹ್ಯ ಕಾರಣಗಳಿಂದ, ಈತ ಪ್ರೇತವಾಗಿದ್ದಾನೆ ಎಂದು. ಇದು ಸತ್ಯವಲ್ಲ. ಅವನ "ನಂ" ಏನು ಎಂದು ನೋಡುವ. ಅವನ 'ನಂ' (ನಂಬಿಕೆ)ಯ ಸ್ವಗತದಲ್ಲಿ ಇವನು, 'ನನಗೆ ದುಃಖವಾಗಿದೆ. ಅವಳು ಹೀಗೆ ಮಾಡದಿರುತ್ತಿದ್ದರೆ ಒಳ್ಳೆಯದಿತ್ತು. ಇದರಿಂದ ನನಗೆ ತುಂಬ ನಿರಾಶೆಯಾಗಿದೆ' ಎಂದೂ ಹೇಳಿ ಕೊಂಡಿದ್ದರೆ, 'ಪ್ರ'ದಲ್ಲಿ ಅವನೂ ನಿರಾಶೆಯಿಂದ ದುಃಖಿತ ನಾಗುತ್ತಿದ್ದನು. ಆದರೆ ಕ್ರಿಯಾಹೀನನಾಗಿರುತ್ತಿರಲಿಲ್ಲ. ಆದರೆ ಕ್ರಿಯಾಹೀನನಾದ ಇವನು, "ಸಂ"ನಲ್ಲಿ ಹೀಗೆ ಹೇಳಿಕೊಳ್ಳುತ್ತಿದ್ದಾನೆ. "ಹೀಗಾಗಲೇಬಾರ ದಿತ್ತು! ಎಂಥ ಭಯಂಕರ! ಅವಳು ಹೀಗೆ ನಂಬಿಸಿ ದ್ರೋಹ ಮಾಡುವುದೆಂದರೇನು? ಖಂಡಿತವಾಗಿಯೂ ಅವಳು ಹೀಗೆ ಮಾಡಬಾರದಿತ್ತು. ನನಗೆ ಬಾಳು ಅಸಹ್ಯ ವಾಗಿದೆ. ಅವಳಿಲ್ಲದೆ ಬದುಕಲಾವುದೇ ಸಾಧ್ಯವಿಲ್ಲ. ನನಗೆ ಮಾತ್ರ ಇವೆಲ್ಲವೂ ಆಗಬೇಕೆ?" ಪ್ರತಿಯೊಂದು ವಾಕ್ಯವೂ ಇಲ್ಲಿ ತರ್ಕಕ್ಕೆ ಮಿಗಿದ್ದು. ಪ್ರವಾದಿಯಂತೆ ಅವನು ಮಾತನಾಡುತ್ತಿದ್ದಾನೆ. ಹೀಗೆ ಹೇಳಿಕೊಳ್ಳುತ್ತ, ಅಸಹ್ಯವಾದ, ಭಯಾನಕವಾದ ಪ್ರಪಂಚವನ್ನು ತಾನೇ ಸೃಷ್ಟಿಸಿಕೊಂಡು, ತನ್ನ ಕ್ರಿಯಾಹೀನತೆಗೆ ಬಾಹ್ಯ ಕಾರಣ ಗಳನ್ನು ಹುಡುಕುತ್ತಾ ಹೋಗುತ್ತಾನೆ.

ನಮ್ಮ ಹುಡುಗ ಹುಡುಗಿಯರಲ್ಲಿ ಇಂಥದೇ ಪ್ರವೃತ್ತಿ ಯನ್ನು ನಾನು ಕಂಡುಕೊಂಡೆ. ತಮಗರಿವಿಲ್ಲದೆಯೇ ಅವರು ಭಯಾನಕವಾದ ಪ್ರಪಂಚವನ್ನು ಅತಾರ್ಕಿಕ ವಾದ, ಸುಳ್ಳಿನ ಕಂತೆಗಳ ಮೂಲಕ, ತೀರ್ಮಾನಕರ ವಾದ ಹೇಳಿಕೆಗಳ ಮೂಲಕ ಸೃಷ್ಟಿಸಿಕೊಂಡಿದ್ದಾರೆ. ತಮ್ಮ ಸುಖ ತಮ್ಮ ಕೈಯಲ್ಲಿದೆ ಎಂಬುದನ್ನು ಮರೆತು, ತಮ್ಮ ದುಃಖಕ್ಕೆ ಪ್ರಪಂಚ ಕಾರಣ ಎನ್ನುತ್ತಾ, ಇದ್ದ ವ್ಯವಸ್ಥೆಯಲ್ಲಿ ತಮಗೆ ಬೇಕಾದ ಸಹ್ಯವಾದ ಬಾಳನ್ನು ಸೃಷ್ಟಿಸಿಕೊಳ್ಳಲು, ಈ ಬೇಜವಾಬ್ದಾರಿತನದಿಂದ ಅವರು ಅಸಮರ್ಥರಾದಂತೆ ಕಂಡರು.

ತಮಗೆ ತಾವೇ ಜವಾಬ್ದಾರಿ ಎಂಬುದನ್ನು ಅವರು ಕಂಡು ಕೊಂಡರೆ, ತಮ್ಮ ಸುಖಿಹಾನಿ, ಶಿಕ್ಷಣ ವ್ಯವಸ್ಥೆ, ರಾಜ ಕೀಯ ಸಾಮಾಜಿಕ ಆರ್ಥಿಕ ಪರಿಸ್ಥಿತಿ, ಹಿರಿಯರು–ಹೀಗೆ ಎಲ್ಲವೂ ಬದಲಾಗುವುದನ್ನು ಕಾಯುತ್ತಾ ಕುಳಿತುಕೊಳ್ಳು ವುದಕ್ಕಿಂತ, ಇದ್ದ ವಾಸ್ತವಿಕತೆಯ ಚೌಕಟ್ಟಿನಲ್ಲಿ ಸಾಧ ನೆಗೆ ತೊಡಗುವುದು ಒಳ್ಳೆಯದು ಎಂಬುದು ಅವರಿಗೆ ಮನವರಿಕೆಯಾಗುವುದು ಅಗತ್ಯವಿದೆ ಎಂದೆನಿಸಿತು.

ಹೀಗೆ, ನಮ್ಮ ಹುಡುಗರ ಮನೋದೃಷ್ಟಿ ಬದಲಾಗಬೇಕೆ ನ್ನುವ ಸ್ಥೂಲ ಉದ್ದೇಶದಿಂದ, ನಮ್ಮ ಶಿಕ್ಷಣತಜ್ಞರ ಕಣ್ಣು ತೆರೆಸಬೇಕೆನ್ನುವ ಸೂಕ್ಷ್ಮ ಉದ್ದೇಶದಿಂದ, ನಮ್ಮ ಕ್ಯಾಂಪಸ್‌ಗಳಲ್ಲಿ ನಮ್ಮ ಒಂದೈದು ವರ್ಷಗಳಲ್ಲಾದರೂ ಬದುಕಿನ ಗುಣ ಬದಲಾವಣೆ ಆಗಬಹುದು ಎಂಬ ಹಂಬಲ ದಿಂದ, ಹಾಗೆ ಇಂಥ ಪ್ರಯತ್ನಗಳು ಎಲ್ಲೆಲ್ಲೂ ನಡೆಯು ವಂತೆ ಇದೊಂದು ಸ್ಫೂರ್ತಿಯಾಗಲಿ ಎಂಬ ಇರಾದೆ ಯಿಂದ, ಕಾರ್ಯಕ್ರಮವೊಂದರ ರೂಪರೇಷೆ ಹಾಕಿದೆ.

ರವಿವಾರ ಬೆಳಿಗ್ಗೆ 9–30ಕ್ಕೆ ಆರಂಭವಾಗುವ ಈ ಕಾರ್ಯ ಕ್ರಮ ಸಂಜೆ 5–30ಕ್ಕೆ ಮುಗಿಯುತ್ತದೆ. ಇದು ಸ್ವಯಂ ಸ್ಫೂರ್ತಿಯ ಕಾರ್ಯಕ್ರಮವಾದುದರಿಂದ, ರಜಾ ದಿನಗಳಲ್ಲಲ್ಲದೆ ಇದನ್ನು ನಡೆಸಲು ಸಾಧ್ಯ. ಕಾಲೇಜಿನ 20–22 ವಯಸ್ಸಿನ (ಪಿಯುಸಿ ನಂತರದ, ಡಿಗ್ರಿ ಕೊನೆಯ ವರ್ಷದ ಒಳಗಿನ) 40 ಹುಡುಗ ಹುಡುಗಿಯರು ಇದರಲ್ಲಿ ಭಾಗವಹಿಸುತ್ತಾರೆ. ಭಾಗವಹಿಸುವ ವಿದ್ಯಾರ್ಥಿಗಳು ಪ್ರತಿಭಾವಂತರಿರಬೇಕೆಂದಿಲ್ಲ.

ಸುಮಾರು 7 ರಿಂದ 8 ಘಂಟೆಗಳ ಕಾಲ ಸತತ ಈ ಕಾರ್ಯಕ್ರಮ ನಡೆಯುತ್ತದೆ.

ಕಾರ್ಯಕ್ರಮಕ್ಕೆ ಫೀಸ್ ಇಲ್ಲ. ಅದಕ್ಕೆ ಸಂಬಂಧಿಸಿದ ಕೋರ್ಸ್ ಮೆಟೀರಿಯಲ್ ಕೂಡಾ ಪುಕ್ಕಟೆ.

8 ಘಂಟೆಗಳಲ್ಲಿ ಮೊದಲ ಎರಡು ಗಂಟೆ, ವಿದ್ಯಾರ್ಥಿಗಳ ಪೂರ್ವಗ್ರಹ ಪೀಡಿತ ಭಾವನೆಗಳನ್ನು, ಅವರು ತಮ್ಮ ಪ್ಪಕ್ಕೆ ಹೇಳಿಕೊಳ್ಳುವ ಸುಳ್ಳುಗಳನ್ನು, ಸೂಕ್ಷ್ಮ ಆತ್ಮ ದ್ರೋಹಗಳನ್ನು, ತೀರ್ಮಾನಕರ ಹೇಳಿಕೆಗಳನ್ನು ನೇರ ಧಾಳಿಮಾಡಲಾಗುತ್ತದೆ. ಇದನ್ನು ಪ್ರದರ್ಶಿಸಿಯೂ ತೋರಿಸಲಾಗುತ್ತದೆ. ಅವರ ಸುಪ್ತ –ಮನಸ್ಸಿನಲ್ಲಿ ಕೇಳಬೇಕೆನ್ನುವ, ಕೇಳಿದರೆ ಏನಾಗುತ್ತದೊ ಎನ್ನುವ ಪ್ರಶ್ನೆಗಳನ್ನೆಲ್ಲ ಶಿಕ್ಷಕನೇ ಕೇಳಿಕೊಂಡು ಉತ್ತರಿಸಿ, ಅವರನ್ನು "ಅಯ್ಯೊಬ್ಬ ಸ್ಥಿತಿ"ಗೆ ತರುತ್ತಾನೆ. ಮನಸ್ಸೇ ಹೇಗೆ ಎಲ್ಲದಕ್ಕೂ ಮೂಲಕಾರಣ ಎನ್ನುತ್ತಾ, ಅದನ್ನು ಬಂಧನದಿಂದ ಮುಕ್ತಗೊಳಿಸಿ, ಹೇಗೆ ಸೃಜನಶೀಲವಾಗಿಸ ಬಹುದು ಎಂಬುದನ್ನು ಶಿಕ್ಷಕ ಮನವರಿಕೆ ಮಾಡಿಕೊಡುತ್ತಾನೆ. ಮಾನಸಿಕ ಗೊಂದಲಗಳನ್ನು ಗುರುತಿಸಿ ಹೇಗೆ dispute ಮಾಡಬೇಕೂ ಎಂದೂ ಹೇಳಿಕೊಡುತ್ತಾನೆ. ಇಡಿಯ ವರ್ಗ ಚಿಕಿತ್ಸಕ (Therapeutic) ವಾಗಿರುತ್ತದೆ.

ಶಿಕ್ಷಕ ಮಾತಾಡುತ್ತಿರುವಾಗಲೇ ಮೊದಲಲ್ಲಿ ಇಬ್ಬರು ಸಹಶಿಕ್ಷಕರು ಸಭೆಯಿಂದ ಧುತ್ತೆಂದು ಬರುತ್ತಾರೆ. ಒಬ್ಬನದು ದ್ವೇಷ ಸಾಧನೆಗೆ ಹೊರಟ ಮನಸ್ಸು–ಅವನ ಸ್ವಗತ. ಹಾಗೆ ಇನ್ನೊಬ್ಬನದು ಕೀಳರಿಮೆಯಲ್ಲಿ ಅದ್ದಿದ ಮನಸ್ಸು–ಆತ್ಮಹತ್ಯೆಗೆ ಹೊರಟದ್ದು–ಅವನ ಸ್ವಗತ. ಹೀಗೆ ಎರಡು ಮನಸ್ಸುಗಳು ಒರಲಿ ಹೋಗುತ್ತವೆ. ನಂತರ ವಿದ್ಯಾರ್ಥಿಗಳು ಒಬ್ಬೊರೊಬ್ಬರೆ, ಈ ಮನಸ್ಸುಗಳ ಕುರಿತು ಪ್ರತಿಕ್ರಿಯೆ ನೀಡಬೇಕು. ಈ ಪ್ರತಿಕ್ರಿಯೆಯಿಂದ ಶಿಕ್ಷಕ ತನ್ನ ವಾದವನ್ನು ರೂಪಿಸುತ್ತಾ ಹೋಗುತ್ತಾನೆ. ಆದರೆ, ಅವನ ನಿರೂಪಣೆಯನ್ನು ವಾದವನ್ನು ಪ್ರಶ್ನಿಸಿ, ಇನ್ನೊಬ್ಬ ಸಹಶಿಕ್ಷಕ ಬೊಬ್ಬಿರಿದು ಬರುತ್ತಾನೆ– ಶಿಕ್ಷಕ ಹೇಳಿದೆಲ್ಲವು ಸುಳ್ಳು, ನಂಬಬೇಡಿ ಎನ್ನುತ್ತಾನೆ. ಶಿಕ್ಷಕನ ವಾದವನ್ನು ಪ್ರಶ್ನಿಸುತ್ತಾ ತನ್ನ ಕತೆಯನ್ನು ನಿರೂಪಿಸುತ್ತಾನೆ. ಜಗತ್ತೇ ತನ್ನ ಸ್ಥಿತಿಗೆ ಕಾರಣ ಎನ್ನುತ್ತಾ ಸಭೆಯಿಂದ ಫೇಡ್ (fade) ಆಗಿ ಹೋಗುತ್ತಾನೆ. ಶಿಕ್ಷಕ ಮತ್ತೆ ತನ್ನ ವಾದ ಸರಣಿ ಕಟ್ಟುತ್ತಾನೆ —ಸಹಶಿಕ್ಷಕನ ತೀರ್ಮಾನಕರ ಭಾಷೆ, ಅವನು ಬಹಳ ಕಷ್ಟದಿಂದ ಬೆಳಿಸಿಕೊಂಡು ಬಂದ ಸುಳ್ಳುಗಳನ್ನು, ಬೇಜವಾಬ್ದಾರಿತನವನ್ನು ಪ್ರಶ್ನಿಸುತ್ತಾ, ಧಾಳಿ ಮಾಡುತ್ತ.

ಹಾಗೆಯೇ ಮುಂದುವರಿಯುತ್ತಾ ಆತ್ಮ ವಿಶ್ಲೇಷಣೆಯ ವಿಧಾನವನ್ನು ಹೇಳಿಕೊಡುತ್ತಾನೆ. ತನ್ನ ದೌರ್ಬಲ್ಯಗಳನ್ನು, ಸಾಮರ್ಥ್ಯಗಳನ್ನು ಗುರುತಿಸುವುದು ಹೇಗೆ ಎಂದು ವಿವರಿಸುತ್ತಾ, ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುವ ಯೋಜನೆಗಳನ್ನು ಹೇಳಿಕೊಡುತ್ತಾನೆ. ಗುರಿ ಸಾಧನೆ ಮಹತ್ವವನ್ನು ವಿವರಿಸುತ್ತಾನೆ – ಅದರ ತಂತ್ರಗಳನ್ನು ಒಂದೊಂದೇ ಹೇಳಿಕೊಡುತ್ತಾನೆ.

ಮನುಷ್ಯ ಬೆಳೆಯುತ್ತಾ ಹೇಗೆ ನಾಯಕತ್ವ ಸ್ಥಾನಾಪನ್ನನಾಗುತ್ತಾನೆ, ಹಾಗೆ ಆದಾಗ ಅವನಿಗಿರಬೇಕಾದ ಜ್ಞಾನ, ಕೌಶಲ್ಯ ಹಾಗೂ ಇನ್ನಿತರ ಸಿದ್ಧತೆಗಳು ಏನು ಅನ್ನುವುದನ್ನು ಇದರ ನಂತರದ ವರ್ಗದಲ್ಲಿ ಹೇಳಿಕೊಡಲಾಗುತ್ತದೆ. ಇಲ್ಲಿಯೂ, ನಾಯಕತ್ವ ಶೈಲಿಯನ್ನು, ಸಪ ಶಿಕ್ಷಕರು ನಾಟಕ ಮಾಡಿ ತೋರಿಸುತ್ತಾರೆ, ವಿದ್ಯಾರ್ಥಿಗಳು ಅದರ ವಿವಿಧ ಮುಖಗಳನ್ನು, ಆಯಾಮಗಳನ್ನು ಚರ್ಚಿಸುತ್ತಾರೆ. ನಾಯಕತ್ವ ಎಂದರೆ ರಾಜಕೀಯ ನಾಯಕತ್ವ ಮಾತ್ರ ಎಂಥಲ್ಲ. ಮ್ಯಾನೇಜ್ (manage) ಎನ್ನುವ ದೃಷ್ಟಿಯಲ್ಲಿ ಅದು ಬದುಕಿನ ವಿವಿಧ ಸನ್ನಿವೇಶಗಳಲ್ಲಿ ಕೆಲಸ ಮಾಡುತ್ತದೆ ಎಂಬುದನ್ನು ಅವರಿಗೆ ಮನವರಿಕೆ ಮಾಡಲಾಗುತ್ತದೆ. ಪ್ರಜಾಸತ್ತಾತ್ಮಕ ನಾಯಕತ್ವ ಏಕೆ ಒಳ್ಳೆಯದೂ, ಅದನ್ನು ಜೆನ್ನಾಗಿ ಅರಿತೂ ಕೆಲಸ ಮಾಡಿದರೆ, ಅದರ ವಿರುದ್ಧ ಇರುವ 'ವಿಳಂಬ'ದ ಅಪಾಯದ ಎಷ್ಟು ಹುಸಿ ಎಂಬುದನ್ನು ತೋರಿಸಲಾಗುತ್ತದೆ.

ನಾಯಕತ್ವದಲ್ಲಿ, ಏಕೆ ಮಾನವ ಬದುಕಿನಲ್ಲಿ ಸಂವಹನ (communication) ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ಇನ್ನೊಂದು ವರ್ಗದಲ್ಲಿ ವಿವರಿಸಲಾಗುತ್ತದೆ. ಆಟ, ಎಕ್ಸರ್‌ಸೈಜ್‌ಗಳ ಮೂಲಕವೇ ಇದನ್ನು ತಿಳಿಹೇಳಲಾಗುತ್ತದೆ. ಸಂವಹನ ವಿಕೃತವಾದಾಗ ಎಂಥೆಂಥ ಅನಾಹುತಗಳು ನಡೆಯಬಹುದು, ಇದರ ಪರಿಜ್ಞಾನ, ಕೌಶಲ್ಯ ಹೇಗೆ ಮಾನವ ವ್ಯಕ್ತಿತ್ವವನ್ನು ಹೆಚ್ಚು ಕ್ರಿಯಾಶೀಲಗೊಳಿಸುತ್ತದೆ ಎಂಬುದನ್ನು ತೋರಿಸಲಾಗುತ್ತದೆ.

ಈ ಎಲ್ಲ ಕಲ್ಪನೆಗಳನ್ನೊಳಗೊಂಡ 'ಪ್ರಸಂಗ' (case study) ವನ್ನು ಶಿಕ್ಷಕರು ಆಡಿ ತೋರಿಸುತ್ತಾರೆ. ನಂತರ ಈ 'ಪ್ರಸಂಗ'ವನ್ನು ವಿದ್ಯಾರ್ಥಿಗಳು ಗುಂಪು ಗುಂಪಾಗಿ ಚರ್ಚಿಸುತ್ತಾರೆ. ತಮ್ಮ ಅನ್ನಿಸಿಕೆಗಳನ್ನು, ಮಹಾಸಭೆಯಲ್ಲಿ ಮಂಡಿಸುತ್ತಾರೆ.

ಎಲ್ಲ ಮುಗಿದ ನಂತರ, ಪ್ರಧಾನ ಶಿಕ್ಷಕನು ಬೆಳಗಿನಿಂದ ಸಂಜೆಯವರೆಗೆ ನಡೆದದ್ದನ್ನು ತಾನೇ ವಿದ್ಯಾರ್ಥಿಯಾಗಿ ಸಾರಂಶರೂಪದಲ್ಲಿ ಬಣ್ಣಿಸುತ್ತಾನೆ.

ಆತ್ಮ ವರ್ಚಸ್ಸನ್ನು ಹೊಗಳಂತ್ತ ಆತ್ಮಾವಲಂಬನವನ್ನು ಒಂದು ವರ್ಚ್ಯು (virtue) ಆಗಿ ಪರಿಗಣಿಸುವ ಸಮೂಹ ಗೀತವನ್ನು ಕೊನೆಯಲ್ಲಿ ಹಾಡಲಾಗುತ್ತದೆ. ಬೆಳಿಗ್ಗೆ ಹೊಸಬರಾಗಿ ಹೋದವರು ಸಂಜೆ ಮಿತ್ರರಾಗಿ ಹೊರಗೆ ಬರುತ್ತಾರೆ. ಈ ಅನುಭವ ಎಲ್ಲೆಲ್ಲೂ.

ಒಂದು ಸತ್ರ ಮುಗಿದಂತೆ ಪ್ರತಿಯೊಬ್ಬನಿಗೂ ವೈಯಕ್ತಿಕವಾಗಿ ಪ್ರಶ್ನೆಮಾಲಿಕೆಯನ್ನು ಪೋಸ್ಟ್‌ಮೂಲಕ ಕಳಿಸಲಾಗುತ್ತದೆ. ಅದರಲ್ಲೇ ಉತ್ತರ ಬರೆದು ಅವರು ಮರು ಪೋಸ್ಟ್ ಮಾಡಬೇಕು. ಹೀಗೆ ಪ್ರಥಮವರ್ಷದಲ್ಲಿ ಬಂದ ಉತ್ತರಗಳನ್ನು ವಿಶ್ಲೇಷಿಸಿ ಪುಸ್ತಕ ರೂಪದಲ್ಲಿ (ಮಿಮಿಯೋಗ್ರಾಫ್) ತಂದಿದ್ದೇನೆ.

ಈ ವರ್ಷ ದಕ್ಷಿಣ ಕನ್ನಡದ ಕಾಲೇಜುಗಳಲ್ಲದೆ, ಬೆಂಗಳೂರಿನ ಕಾಲೇಜುಗಳನ್ನೂ ಈ ಕಾರ್ಯಕ್ರಮ ಹರವಿಕೊಂಡಿದೆ. ನಿರೂಪಣೆಯನ್ನು ಅಲ್ಲಿಯ ವಾತಾವರಣಕ್ಕೆ ಹೊಂದಿಕೊಂಡು ಬದಲಾಯಿಸಬೇಕಾಯಿತು. ಹಾಗೆಯೇ 'ಪ್ರಸಂಗ' (case study)ನ್ನೂ ಕೂಡಾ. ಒಂದು ಕಡೆ ಕೇವಲ ವಿದ್ಯಾರ್ಥಿನಿಯರನ್ನಷ್ಟೆ ಎದುರಿಸಬೇಕಾಯಿತು. ಹೀಗಾಗಿ ನಮ್ಮ ಅ ಪ್ರೋ ಚ್ (approach)ನ್ನು ಬದಲಿಸಬೇಕಾಯಿತು.

ಈ ಕಾರ್ಯಕ್ರಮ ಉಪಯುಕ್ತವೆಂದು ಶೇಕಡಾ ನೂರಕ್ಕೆ ನೂರು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಒಪ್ಪಿಕೊಂಡಿದ್ದಾರೆ. ಈ ಕಾರ್ಯಕ್ರಮ ತಮಗೆ ಆತ್ಮಸ್ಥೈರ್ಯವನ್ನೂ ಬದುಕಿಗೆ ಒಂದು ಉದ್ದೇಶವನ್ನೂ, ಕಲ್ಪಿಸಿಕೊಟ್ಟಿದೆ ಎಂದು ಬೇರೆ ಬೇರೆ ಹೇಳಿದ್ದಾರೆ. ಎಲ್ಲರೂ, ನಿರ್ದೇಶನ ನೀಡುವ ಶಿಕ್ಷಣವನ್ನು ಬಯಸುತ್ತಾರೆ. ಆದರೆ ಎಲ್ಲಿಯೂ ಅವರಿಗೆ ನಿರ್ದೇಶನ ದೊರೆಯುತ್ತಿಲ್ಲ ಎಂಬುದು ಅವರ ಉತ್ತರಗಳಿಂದ ಸ್ಪಷ್ಟವಾಗಿ ತಿಳಿಯುತ್ತದೆ. ಅವರ ಪ್ರಯೋರಿಟಿ (priority-ಆದ್ಯತೆಗಳು) ಗಳೇ ಬೇರೆ. ಕ್ಯಾಂಪಸ್‌ಗಳಲ್ಲಿ ನಡೆವ ಹಿಂಸೆ, ದೊಂಬಿ ಅವರ ಮನಸ್ಸನ್ನು ಕಾಡುವ ಪ್ರಮುಖ ಸಮಸ್ಯೆ. ಅದಕ್ಕೆ ನಿರ್ದೇಶನವಿಲ್ಲದ ಬೇಜವಾಬ್ದಾರಿ ವಿದ್ಯಾರ್ಥಿಗಳೇ ಹೊಣೆ ಎಂದು ಅವರು ಭಾವಿಸಿದ್ದಾರೆ. ಪ್ರತಿಭಟನೆಯನ್ನು ಪಾಠಗಳು ಮುಗಿದ ನಂತರ ಮೌನ ವೆಂರವಣಿಗೆಯ ಮೂಲಕ ಪ್ರದರ್ಶಿಸಬೇಕೆನ್ನುತ್ತಾರವರು. ಎಲ್ಲರಿಗೂ ತಮ್ಮ ತಮ್ಮ ಉದ್ಯೋಗದಲ್ಲಿದ್ದು ಸಮಾಜ ಸೇವೆ ಮಾಡುವ ಆಸೆ ಇದೆ.

ಹೆಚ್ಚಿನವರು ವಿವೇಕಾನಂದ ತಮ್ಮ ಆದರ್ಶವ್ಯಕ್ತಿಯೆಂದು ಒಪ್ಪಿಕೊಂಡಿದ್ದಾರೆ. ನಂತರ ಮಹಾತ್ಮಗಾಂಧಿ,ಸುಭಾಷ್, ಜವಾಹರಲಾಲ ನೆಹರೂ. ಜೀವಂತ ನಾಯಕರಲ್ಲಿ ಯಾರೂ ಆದರ್ಶವ್ಯಕ್ತಿಯೆಂದು ಅವರು ಒಪ್ಪಿಕೊಳ್ಳಲಾರರು. ಇದರರ್ಥ ಏನೆಂಬುದನ್ನು ನೀವೇ ತೀರ್ಮಾನಿಸಿ.

ಎರಡನೆಯ ವರ್ಷದ ಉತ್ತರಗಳನ್ನು ಈಗ ಕ್ರೋಡೀಕರಿಸುತ್ತಿದ್ದೇನಷ್ಟೆ. ಈ ಎರಡು ವರ್ಷಗಳ ಪೂರ್ಣ ಅನುಭವಗಳನ್ನು ಒಟ್ಟಿಗೆ ಪುಸ್ತಕರೂಪದಲ್ಲಿ ತರುವ ಹಂಬಲ ಇದೆ. ಆದರೆ, ನನ್ನ ನಿಜವಾದ ಗುರಿ-ಗ್ರಾಮಿಣ ಯುವಕರನ್ನು ಮುಟ್ಟುವುದರಲ್ಲಿದೆ. ಈ ಯುವಕರು ಅಲ್ಲೇ ಇರುವವರಾದ್ದರಿಂದ ಮತ್ತು ನಾಯಕತ್ವದ ಸ್ಥಾನಗಳಿಗೆ ಬರಲು ಈಗ ಅವರಿಗೆ ಹೆಚ್ಚು ಅವಕಾಶಗಳಿರುವುದರಿಂದ, ನನ್ನ ಕಾರ್ಯಕ್ರಮ ಅವರಿಗೆ ಹೆಚ್ಚು ಉಪಯೋಗವಾಗಬಹುದು. ಮಾತ್ರವಲ್ಲ ಅವರ ಬೆಳವಣಿಗೆಯನ್ನು ನಿರ್ದಿಷ್ಟಕಾಲದಲ್ಲಿ ಅಳೆಯುವುದೇ ನನಗೆ ಸಾಧ್ಯವಾಗುತ್ತದೆ. ಆದರೆ ನನ್ನ ಕಾರ್ಯಕ್ರಮದ ನಿರೂಪಣಾ ಶೈಲಿ, ತಂತ್ರಗಳನ್ನು ಪೂರ್ಣ ಬದಲಾಯಿಸಬೇಕಾದೀತು.

ಇನ್ನು ನನ್ನ ಸಹಶಿಕ್ಷಕರ ವಿಚಾರ. ಅವರು ತರಬೇಕಾದ ಶಿಕ್ಷಕರಲ್ಲ. ನನ್ನಹಾಗೆ ಬ್ಯಾಂಕೋ, ಎಲ್‌ಐಸಿಯಲ್ಲೋ ಕೆಲಸಕ್ಕಿರುವವರು. ಆದರೆ ಮೊತ್ತಮೊದಲು ಕಾರ್ಯಕ್ರಮ ನಿರೂಪಣೆ ಮುಗಿದಾಗ ಒಂದು ಕಾರ್ಯಾಗಾರದಲ್ಲಿ ಬೇಕಾದಷ್ಟು ಚಿಂತನೆ ನಡೆಸಲಾಯಿತು. ತರುಣರನ್ನು ಮುಟ್ಟುವ ಒತ್ತಾಸೆ ಅವರಲ್ಲಿದ್ದುದು ನನಗೆ ಸುಲಭವಾಯಿತು.

ಇದು ಆಂದೋಲನದ ಸ್ವರೂಪ ತಾಳಬೇಕಾದರೆ, ನಮ್ಮಂಥವರು ಅಲ್ಲಲ್ಲಿ ಶಿಕ್ಷಕರ ತಂಡವನ್ನು ನಿರ್ಮಿಸಬೇಕು. ಕಾಲೇಜುಗಳಲ್ಲಿ, ಸ್ಕೂಲುಗಳಲ್ಲಿ ಈ ಕೆಲಸ ಮಾಡಬೇಕು.

ಇದಕ್ಕೆ ಅಂಥ ಪಾಂಡಿತ್ಯ ಏನೂ ಬೇಕಿಲ್ಲ. ನಮ್ಮಲ್ಲಿ ಜ್ಞಾನವನ್ನು specialise ಮಾಡಿ ಕೋಟೆಗಳನ್ನು ಕಟ್ಟಿ ಕೊಂಡಿದ್ದೇವೆ. ಜ್ಞಾನವನ್ನು ದಾಸರಂತೆ, ಹಾಡಿ ಕುಣಿದು ಎಲ್ಲರೊಡನೆ ಹಂಚಿಕೊಂಡು ಉಣ್ಣಬಹುದು.

ಭವಿಷ್ಯದ ಬಗ್ಗೆ ನಾನು ಹೆಚ್ಚು ತಲೆಬಿಸಿ ಮಾಡಿಕೊಳುವುದಿಲ್ಲ. ಯಾರಾದರೂ ಎಲ್ಲಾದರೂ ಬದಲಾವಣೆಯ ಗಾಲಿಗೆ ಕೈ ಹಚ್ಚಬೇಕು. ಕಾಯುತ್ತಾ ಕೂಡದೆ ನಾನೇ ಅದನ್ನು ಮಾಡಲು ಹೊರಟೆ. ಅಷ್ಟೇ ತೃಪ್ತಿ !

(ಇಂಗ್ಲಿಷ್‌ನಲ್ಲಿ ನನ್ನ ಕಾರ್ಯಕ್ರಮವನ್ನು OLD for the young ಎಂದು ಕರೆದಿದ್ದೇನೆ. O ಅಂದರೆ Operation, L ಎಂದರೆ Leadership D ಎಂದರೆ Development. ಕನ್ನಡದಲ್ಲಿ ನಾ.ವಿ.ಕಾ. ನಾಯಕತ್ವ ವಿಕಸನ ಕಾರ್ಯಾಚರಣೆ. ನನ್ನೆಲ್ಲ ವರ್ಗಗಳೂ ಕನ್ನಡದಲ್ಲೇ ನಡೆಯುತ್ತವೆ).

ಸುಮತೀಂದ್ರ ನಾಡಿಗ

ಬೇಂದ್ರೆಯವರ "ನೃತ್ಯಯಜ್ಞ"

"ಸಾಹಿತ್ಯ–ಕಾವ್ಯ ಬರಿ ವಿಲಾಸವಲ್ಲ. ಅದು ಕಲ್ಯಾಣ ಕರೆಯುವ ಮಯೂರ ನೃತ್ಯ–ಯಜ್ಞರೂಪ" ಎಂದು ಸಂದರ್ಭ ಸೂಚಿಯಲ್ಲಿ ಬೇಂದ್ರೆಯವರು ಈ ಕವಿತೆಯ ಬಗ್ಗೆ ಹೇಳಿದ್ದಾರೆ. ಇದರಿಂದ ಕವಿತೆಯ ಆಶಯ ಕಲ್ಯಾಣವನ್ನು ಕರೆಯುವುದೆಂದೂ, ಕಲ್ಯಾಣವನ್ನು ಕರೆಯುವುದನ್ನು ಬೇಂದ್ರೆಯವರು ನವಿಲಿನ ನೃತ್ಯದ ಮೂಲಕ ಕಾವ್ಯಾನುಭವ ಮಾಡಿಸಲು ಹೊರಟಿದ್ದಾರೆಂದೂ ತಿಳಿಯುತ್ತದೆ. ಯಜ್ಞದ ಉದ್ದೇಶವೂ ಕಲ್ಯಾಣವನ್ನು ಕರೆಯುವುದಾದ್ದರಿಂದ ನೃತ್ಯವೇ ಒಂದು ಯಜ್ಞವೆನ್ನುವ ಸಮೀಕರಣವನ್ನೂ ರೂಪಕಗೊಳಿಸುವ ಹವಣಿಕೆಯನ್ನು ಈ ಕವಿತೆಯಲ್ಲಿ ಕಾಣುತ್ತೇವೆ.

ನವಿಲಿನ ಕೇಕೆಯಿಂದ ಕವಿತೆ ಆರಂಭವಾಗುತ್ತದೆ. (ಗಿರಿ ಶಿಖರದಿ ಶಿವೆಯನೆತ್ತಿ ಶಿಖಿಯು ಕೇಕೆ ಕರೆವುದು). ಈ ಈ ಸಾಲಿನ ನಂತರ ಯಾರದೋ ಮಾತೆನ್ನುವ ಹಾಗೆ ಉದ್ಧರಣ ಚಿಹ್ನೆಗಳ ನಡುವೆ

ಮೋಡಬಂತು ಮಿಂಚಿತಂತು ಗುಡುಗು ಮಳೆಯು ಬರುವುದು.

ಎನ್ನುವ ಸಾಲಿದೆ. ಮೊದಲ ಸಾಲಿನ ಕೊನೆಯಲ್ಲಿ ವಿವರಣ ವಿರಾಮ ಚಿಹ್ನೆ (:) ಇರುವುದರಿಂದ ಎರಡನೆಯ ಸಾಲು ಶಿಖಿಯ ಕೇಕೆಯ ವಿವರಣೆಯಾಗುತ್ತದೆ. ಆದರೆ ಶಿಖಿ ಏನನ್ನು ಕರೆಯುತ್ತಿದೆ ? 'ಮಳೆಯು ಬರುವುದು' ಎಂದರೆ ಮಳೆಯನ್ನು 'ಬಾ' ಎಂದ ಹಾಗಾಗುವುದಿಲ್ಲ. ಆದ್ದರಿಂದ ಇಲ್ಲಿಯ ವಿರಾಮ ಚಿಹ್ನೆಯನ್ನು ಕಡೆಗಣಿಸಿ ಓದುವುದೇ ಸರಿಯಾಗಬಹುದು.

ಆ ಮೇಲಿನ ಸಾಲುಗಳು ಹೀಗಿವೆ :

ಜಗವೆಲ್ಲವು ಮೊರೆಯಿಡುತಿರೆ ಕರುಣೆಯುತ್ತಿದೆ ಕೇಕೀ
ಸಖಿ ಸಂಮುಖ ತಲ್ಲೀನತೆಯೊಲಿ ಏಕಾಕಿ

ಈ ಸಾಲುಗಳನ್ನು ಮೊದಲ ಎರಡು ಸಾಲುಗಳಿಗೆ ಸೇರಿಸಿಕೊಂಡು ಓದಿದಾಗ ಬೆಟ್ಟದ ಮೇಲೆ ತಲೆಯೆತ್ತಿ ಕೇಕೆ ಹಾಕುವ ಗಂಡುನವಿಲು, ಹೆಣ್ಣು ನವಿಲಿನ ಎದುರಿನಲ್ಲಿ ತಲ್ಲೀನತೆಯಿಂದ ನರ್ತಿಸುತ್ತಿರುವ ಚಿತ್ರ ರೂಪಗೊಳ್ಳುತ್ತದೆ. ಇದಾದ ನಂತರ ಎರಡು ಸಾಲುಗಳಲ್ಲಿ ನವಿಲನ್ನು ಕುರಿತ ಸಂಬೋಧನೆ ಇದೆ :

ಹೇಶಿಖಿಂಡಿ ಹೇ ತ್ರಿದಂಡಿ ನಿನ್ನೊಡ ಚಾಮುಂಡೀ.
ತಾಂಡವಕ್ಕೆ ಹಾಸ್ಯಲಾಸ್ಯ ಬೆರಸುವ ರಣಚಂಡೀ.

ಚಾಮುಂಡೀ ಎನ್ನುವ ಪದವಾದನಂತರ ಪೂರ್ಣವಿರಾಮ ಅನಿವಾರ್ಯಕ. ಏಕೆಂದರೆ ಅದರ ಮುಂದಿನ ಸಾಲು ಚಾಮುಂಡಿ ಎಂದು ವರ್ಣಿತವಾಗಿರುವ ಹೆಣ್ಣು ನವಿಲಿನ ವಿಶೇಷಣವೇ ಆಗಿದೆ. ಈ ಭಾಗದಲ್ಲಿ ಗಂಡು ನವಿಲನ್ನು ಶಿಖಿಂಡಿ ಎಂದೂ ಕರೆಯುವುದರಲ್ಲಿ ನವಿಲು ಎನ್ನುವ ಸಾಮಾನ್ಯ ಅರ್ಥದ ಜೊತೆಗೆ ನಾದ ವಿಶೇಷವಿದೆಯೇ ಹೊರತು ಧ್ವನಿ ವಿಶೇಷವೇನೂ ಕಾಣುವುದಿಲ್ಲ. ಆದರೆ ಈ ಶಿಖಿಂಡಿಯನ್ನು ತ್ರಿದಂಡಿ ಎಂದು ಕರೆಯುವುದಕ್ಕೆ ಆಂತರಿಕ ಪ್ರಾಸದ ಒತ್ತಾಯವಿರುವ ಹಾಗೆ ಅರ್ಥದ ಒತ್ತಾಯವೂ ಇದೆ. ತ್ರಿದಂಡಿ ಎಂದರೆ ಶರೀರ ಮತ್ತು ವಾಕ್ಕಿನ ಮೇಲೆ ನಿಯಂತ್ರಣವಿರುವವನು ಎಂದರ್ಥವಿರುವುದರಿಂದ ನರ್ತಿಸುವ ಈ ನವಿಲು, ಕೇಕೆಹಾಕುತ್ತಿರುವ ಈ ನವಿಲು ತ್ರಿದಂಡಿಯೂ ಹೌದೆನ್ನುವುದನ್ನು ಪ್ರಾಸಂಗಿಕವಾಗಿ ಹೇಳಿದಂತಾಗಿದೆ. ಇದಾದಮೇಲೆ ಐದು ಮಾತುಗಳನ್ನು ಯಾರು ಯಾರೋ ಹೇಳಿದ ಹಾಗೆ ಉದ್ಧರಣ ಚಿಹ್ನೆಗಳಲ್ಲಿ ಆ ಮಾತುಗಳನ್ನು ಇಡಲಾಗಿದೆ. ಇವುಗಳನ್ನು ವ್ಯಾಖ್ಯಾನದ ಅನುಕೂಲಕ್ಕಾಗಿ ಒಂದರಿಂದ ಐದರವರೆಗೆ ಸಂಖ್ಯೆಗಳ ಮೂಲಕ ನಾನು ಗುರುತಿಸಿದ್ದೇನೆ :

1) ದಿಕ್ಕು ದಿಕ್ಕಿ ಕತ್ತಲಿಸಿತು ಪ್ರಳಯವೆ ಇದು ಬಂತೇ
ಮುಳುಗಿಸುವುದೊ ತೇಲಿಸುವುದೊ ಕಾಲವೆ
ಎಂಬಂತೆ.

ಇಲ್ಲಿಯವರೆಗೆ ನಾವು ಗುರುತಿಸಬಹುದಾದ ಪಾತ್ರಗಳು ಮೂರು : ಗಂಡುನವಿಲು, ಹೆಣ್ಣುನವಿಲು ಮತ್ತು ಮಯೂರ ನೃತ್ಯವನ್ನು ನೋಡುವವನೊಬ್ಬ. ಈ ಮೂರರಲ್ಲಿ ಯಾರು ಈ ಕತ್ತಲೆಯ ಬಗ್ಗೆ ಮಾತಾಡು ತ್ತಿರಬಹುದೆಂದರೆ ಪ್ರೇಕ್ಷಕ ಮಾತ್ರ.

2) ಥಕ ಥೈ ಥೈ ಧಿಕಿ ತಟತೋಂ ಇದೇ ಕಾಲ
ಮಳೆಯದೊ
ಹಳ್ಳಕೊಳ್ಳಗಿರಿದರಿಯಲಿ ಹರಿಯುತ್ತಿಪ
ಹೊಳೆಯದೊ ?
ಬರಲಿಪ ಬೆಳಿಪಯಿರಿನಲ್ಲಿ ಕುತುಕದಿಂದ ಕುಣಿವುದೊ
ಋತುರಾಜನ ಋತುಜಾತದ ಜೀವನದಲಿ
ಋಣವಿದೊ !
ಓ ಕುಮಾರ, ಬೇಗಬಾರ, ತುಂಬಿ ತಾರ,
ಬೆಳೆಯನು.
ಕಾರ್ತಿಕದಲಿ ಭೂಮಿಂ ಕಾಂಬ ಶಾರದೀಯ
ಕಳೆಯನುಂ
ಆಹಾ ಸಖಿ, ಆಹಾ ಸಖಿ, ಸಾವಿರ ಶಿಖಿ
ಹೊತ್ತಿವೆ.

ಈ ಸಾಲುಗಳಲ್ಲಿ ನೃತ್ಯದ ವರ್ಣನೆಯಿದೆ. ಆ ನೃತ್ಯ ದಲ್ಲಿ ಬರಲಿರುವ ಪೈರನ್ನೂ ಋತುಜಾತದ ಜೀವನದಲಿ ಋತುರಾಜನ ಋಣವನ್ನೂ ಕಾಣುತ್ತಿರುವವನು ಪ್ರೇಕ್ಷಕನೆ ಎನ್ನಿಸುವುದರಿಂದ 1) ಮತ್ತು 2) ನ್ನು ಅವಗ್ರಹ ಚಿಹ್ನೆ ಗಳಿಂದ ಪ್ರತ್ಯೇಕಿಸಿರುವುದು ಸಕಾರಣವಾಗಿ ಕಾಣುವು ದಿಲ್ಲ. ನವಿಲಿನ ನೃತ್ಯವನ್ನು ನೋಡುತ್ತಿರುವವನು ನವಿಲನ್ನು ವಾಹನವನ್ನಾಗಿ ಮಾಡಿಕೊಂಡ ಕುಮಾರ (ಕಾರ್ತಿಕಸ್ವಾಮಿ)ನನ್ನು ಕರೆಯುವುದರಲ್ಲಿ ಮತ್ತು ಕಾರ್ತಿಕ ಮಾಸವನ್ನೂ, ಶರತ್ಕಾಲವನ್ನೂ, ತುಂಬಿದ ಬೆಳೆಯನ್ನೂ, ಇವೆಲ್ಲವೂ ಸೂಚಿಸುವ ಕಲ್ಯಾಣವನ್ನೂ ಕರೆಯುವುದರಲ್ಲಿ ಭಾವಸಾಹಚರ್ಯವಿದೆ. ಶಾರದೀಯ ಎನ್ನುವಲ್ಲಿ ಸರಸ್ವತಿಯ ಎನ್ನುವ ಧ್ವನಿಯೂ ಇದೆ. ಆದರೆ 'ಸಾವಿರ ಶಿಖಿ ಹೊತ್ತಿವೆ' ಎನ್ನುವ ಮಾತಿಗೆ ಆಲಂಬನವೇ ಇಲ್ಲವಾಗಿದೆ. ಇಲ್ಲಿರುವುದು ಕೇವಲ ಎರಡು ನವಿಲು ಗಳಾದ್ದರಿಂದ ಸಾವಿರ ಶಿಖಿಗಳ ಪ್ರಸ್ತಾಪ ಅನಿಯಂತ್ರಿತ ವಾಗಿ ನುಸುಳಿಬಿಟ್ಟಿದೆ.

ಮೂರನೆಯ ಮಾತು ಹೀಗಿದೆ :

3) ಕಣಿಯೊ ಕುಣಿ ಸಹಸ್ರಮುಖೀ ಆಸೆ ತಲೆಯನೆತ್ತಿವೆ
ಅನ್ನ ಅನ್ನ ಬುಸುಗುಡುತಿದೆ ಮಾನವನಾಗರವು
ತೆರೆತೆರೆಯಲಿ ತೆರೆಯಿತು ನವದುಃಖದ ಸಾಗರವು
ತಾರಕ ಸಂಹಾರಕನಾಗುತ ಆಗೊ ಕಂದರ್ಪ
ದರ್ಪದಿಂದ ಹೆಡೆ ಸೆಡೆಯುತ ತಾಂಡವಿಸಿತು ಸರ್ಪ.

ಈ ಮಾತಿನ ಆರಂಭದಲ್ಲಿ ಉದ್ಧರಣ ಚಿಹ್ನೆ ಇದೆಯೇ ಹೊರತು ಕೊನೆಯಲ್ಲಿ ಇಲ್ಲ. ಆದ್ದರಿಂದ ವಿರಾಮ ಚಿಹ್ನೆ ಗಳ ಬಳಕೆಗೆ ಈ ಪದ್ಯದಲ್ಲಿ ಸಾಕಷ್ಟು ಗಮನಕೊಟ್ಟಿಲ್ಲ ದಿರುವುದು ಸ್ಪಷ್ಟವಾಗಿದೆ. ಆದರೆ ಈ ಮಾತನ್ನೂ ಪ್ರೇಕ್ಷಕನೆ ಹೇಳುತ್ತಿರಬೇಕು ಎಂದು ಓದಿಕೊಂಡರೆ ನವಿಲಿನ ನೃತ್ಯದ ಸಂದರ್ಭದಲ್ಲಿ ಬೆಳೆಯ ದೇವತೆಯಾದ ಕಾರ್ತಿಕೇ ಯನ ನೆನಪಾದ ಪ್ರೇಕ್ಷಕ, ಹಸಿವಿನಿಂದ ರೊಚ್ಚಿಗೆದ್ದ ಮಾನವನನ್ನು ಸರ್ಪವನ್ನಾಗಿ ಚಿತ್ರಿಸಿಕೊಳ್ಳುತ್ತಾನೆ. ಹಸಿವಿನಿಂದ ನರಳುತ್ತಿರುವ ಮಾನವನ ದುಃಖದ ಸಾಗರ ವನ್ನೇ ಕಾಣುತ್ತಾನೆ. ತಾರಕನನ್ನು ಸಂಪರಿಸಿದ ಸ್ಕಂದನ ಬರುವಿಕೆಯಿಂದ ಸಡಗರಗೊಳ್ಳುತ್ತಾನೆ. ಆದರೆ ಸ್ಕಂದ ನನ್ನು ಕಂದರ್ಪ ಎಂದು ಹೆಸರಿಸುವುದರಲ್ಲಿ ಸರ್ಪ ಶಬ್ದ ದಿಂದ ಪ್ರಾಸಸ್ಥಾನದಲ್ಲಿ ಸೂಚಿತವಾಗುವ ಶಬ್ದವೊಂದರ ಬಳಕೆಯಿದೆಯೇ ಹೊರತು ಅದಕ್ಕೆ ಇನ್ನಾವ ಸಮರ್ಥ ನೆಯೂ ಇಲ್ಲ. ತಾರಕಸಂಹಾರಕನನ್ನು ನೋಡಿ ಹಸಿವಿನ ಸರ್ಪ ದರ್ಪದಿಂದ ಹೆಡೆಯನ್ನು ಸೆಡೆಸಿ ಕುಣಿಯಿತು ಎಂದು ಹೇಳುವಾಗ ಸ್ಕಂದನಿಗೂ ಸರ್ಪಕ್ಕೂ ತೋರಿಸುವ ವೈಷಮ್ಯಕ್ಕೆ ಯಾವ ತಳಪದಿಯೂ ಇಲ್ಲ. ಸ್ಕಂದನ ವಾಹನವಾದ ನವಿಲೇ ಸರ್ಪವನ್ನು ಸಂಹರಿಸಲು ಶಕ್ತವಾ ಗಿರುವಾಗ ಸ್ಕಂದನ ಆಗಮನ ಅನಾವಶ್ಯಕವಾಗುತ್ತದೆ. ಬಿಡಿಬಿಡಿಯಾದ ಸಾಲುಗಳು ಪ್ರಾಸವೈವಿಧ್ಯ ಮತ್ತು ನಾದವೈವಿಧ್ಯದಿಂದ ಆಕರ್ಷಕವಾಗಿ ಕಂಡರೂ ಅವುಗಳಿಗೆ ಸಾವಯವ ಸಂಬಂಧ ಕಾಣಿಸುವುದಿಲ್ಲ. ಮುಂದಿನ ಭಾಗ ಹೀಗಿದೆ :

4) ಶಕ್ತಿ ಕಂದ ಶಿವನಂದನ ಶಿಖಿಸ್ಕಂದನ ಕರವೆ
ವಾಹನವಾಗಲು ಅರ್ಪಿಸಿ ಅವನಲಿ ಮೈದೆರೆವೆ
ಅಗ್ನಿದೇಹಿ ಆತ್ಮಸ್ನೇಹಿ ಬಾರೊ ಬಾ ಷಣ್ಮುಖಾ
ಚತುರಂಗದ ಚಾತುರ್ಯದ ಜ್ಞಾನಕರ್ಮ

ಶಿವಿಗಂಡನೆ ಮೈಗೊಂಡನೆ ಕೆಂಗೆಂಡನೆ ತೋರೈ
ದೇವತೆಗಳ ಸೇನಾಪತಿ ಭೂರಂಗಕೆ ಬಾರೈ.

ಈ ಮಾತುಗಳನ್ನು ಗಂಡುನವಿಲು ಹೇಳುತ್ತಿರಬಹುದು. ಅಥವಾ ನವಿಲಿನಲ್ಲಿ ತಾದಾತ್ಮ್ಯಗೊಂಡ ಪ್ರೇಕ್ಷಕನೇ ಈ ಮಾತನ್ನು ಹೇಳುತ್ತಿರಬಹುದು. ಶಿವಿಸ್ಕಂದ, ಶಿವಿಗಂಡ ಎಂದು ಷಣ್ಮುಖನನ್ನು ಸ್ತುತಿಸುತ್ತಿರುವುದರಿಂದ ಪ್ರೇಕ್ಷಕನೇ ಈ ಮಾತುಗಳನ್ನು ಹೇಳುವುದು ಹೆಚ್ಚು ಸೂಕ್ತವಾಗುತ್ತದೆ. ನವಿಲಿನ ನೃತ್ಯದಲ್ಲಿ ಪರವಶನಾದ ಪ್ರೇಕ್ಷಕ ಷಣ್ಮುಖನಲ್ಲಿ ತಾದಾತ್ಮ್ಯ ಪಡೆಯುವ ಹವಣಿಕೆ ಇಲ್ಲಿದೆ. ಇಲ್ಲಿಯವರೆಗೂ ನವಿಲಿನ ನೃತ್ಯದಲ್ಲಿ ಬೆಳೆತುಂಬಿ ಬರುವ ಸೂಚನೆಯನ್ನು ಕಂಡು, ಮಾನವನ ಹಸಿವಿನ ಸರ್ಪವನ್ನು ದಮನಮಾಡುವ ಸಾಧ್ಯತೆಯನ್ನು ಕಂಡ ಪ್ರೇಕ್ಷಕ, ಸ್ಕಂದನ ದರ್ಶನದಲ್ಲಿ ಮೈಮರೆತು, ಆನಂತರ ತಾನಿರುವ ಭೂಮಿಗೆ ಸ್ಕಂದನನ್ನು ಆಹ್ವಾನಿಸಿದ್ದನ್ನು ನಾವು ನೋಡುತ್ತೇವೆ. ಇಲ್ಲಿಂದ ಮುಂದೆ ಪ್ರೇಕ್ಷಕನ ಗಮನ ಭೂಮಿಯ ಸೂಚನೆಯಿಂದ ನವಿಲಿನ ಕಡೆಗೆ ತಿರುಗುತ್ತದೆ.

5) ಶಿವೀ ಶಿವಿ ಸಹಸ್ರನವೀ ವರ್ಷಾವೀಣೆಯನೆ
ಬಾಜಿಸಿ ಪರ್ಜನ್ಯವ ಕರೆ ಅಂತರ್ಜ್ಞಾನಿಯೆನೆ

ಈ ಮಾತುಗಳೂ ಉದ್ಧರಣ ಚಿಹ್ನೆಯಲ್ಲಿವೆ. ಶಿವೀ ಶಿವಿ ಎನ್ನುವಲ್ಲಿನ ನಾದದಿಂದ ಸಹಸ್ರನವೀ ಎನ್ನುವ ಶಬ್ದ ಜೋಡಣೆಗೆ ಒತ್ತಾಯ ಬರುತ್ತದೆ. ಆದರೆ ಸಹಸ್ರ ಉಗುರುಗಳಿರುವಂತೆ ನವಿಲನ್ನು ಚಿತ್ರಿಸಿಕೊಳ್ಳುವುದಕ್ಕೆ ನವಿಲಿನ ಅಂಗರಚನೆಯಲ್ಲಾಗಲೀ, ಪುರಾಣ ಕಲ್ಪನೆಯಲ್ಲಾಗಲೀ, ಯಾವ ಸಮರ್ಥನೆಯೂ ಇಲ್ಲ. ಇಂಥ ಕಡೆಗಳಲ್ಲಿ ಬೇಂದ್ರೆಯವರು ನಾದ ನದಿಯಲ್ಲಿ ಕೊಚ್ಚಿ ಹೋಗುತ್ತ, ಅರ್ಥದ ದೋಣಿಯಿಂದ ದೂರವಾಗಿ ಬಿಡುತ್ತಾರೆ. ನವಿಲು ವರ್ಷಾವೀಣೆಯನ್ನು ಬಾರಿಸಿ ಮಳೆಯನ್ನು ಕರೆಯುವ ಕಲ್ಪನೆ ಸುಂದರವಾಗಿದೆ. ಆದರೆ ಅದನ್ನು ಸಹಸ್ರನವೀ ಎನ್ನುವ ಪ್ರಯೋಗ ವಿರೂಪಗೊಳಿಸುತ್ತದೆ. ಇಲ್ಲಿಂದ ಮುಂದಿನ ಸಾಲುಗಳು ಈ ಸಾಲುಗಳ (5) ಮುಂದುವರಿಸೋಣವೇ ಆಗುವುದರಿಂದ ಅಂತರ್ಜ್ಞಾನಿಯೆನೆ ಎಂದಾದಕೂಡಲೆ ಬರುವ ಉದ್ಧರಣ ಚಿಹ್ನೆಗೆ ಯಾವ ಬೆಲೆಯೂ ಇಲ್ಲವಾಗುತ್ತದೆ. ಮುಂದಿನ ಸಾಲುಗಳು ಹೀಗಿವೆ :

ಕಣಕಣದಲಿ ಕಣ್ ಕುಣಿಯಲಿ ಪರಮೇಷ್ಠಿಯ ಕಂಡು
ಸಾಮಷ್ಟಿಕ ಕ್ಷೇತ್ರದಲ್ಲಿ ವ್ಯಕ್ತಿಯ ಸುಖವುಂಡು
ಐಕ್ಯಸಮದ ಠಾಯಿಯಲ್ಲಿ ಬಹುವಧು ಉದ್ದೀಪ್ತ
ಆ ತುರಾಯಿ ಕುಣಿಸಿ ಕುಣಿ ಓ ಪ್ರಾಜ್ಞಾ ಸುಪ್ತಾ

ಈ ಮಾತುಗಳನ್ನು ಪ್ರೇಕ್ಷಕನೇ ಹೇಳುತ್ತಿದ್ದಾನೆ. ಮಳೆ ಬಂದಾಗ ಬ್ರಹ್ಮನೇ ಬಂದ ಹಾಗಾಗುತ್ತದೆ. ಪ್ರತಿಯೊಂದು ಸುಖಾನುಭವವೂ ವೈಯಕ್ತಿಯ ಅನುಭವವೇ. ಆದರೆ ಪ್ರತಿಯೊಂದೂ ಸಂ ಖಾ ನು ಭ ವ ವೂ ಸಾಮಷ್ಟಿಕ ಕ್ಷೇತ್ರದಲ್ಲಿ ಆದದ್ದಾದರೆ ಅದಕ್ಕೆ ಹೆಚ್ಚಿನ ಬೆಲೆಯಿದೆ ಎನ್ನುವ ವಿಚಾರ ಲೋಕಕಲ್ಯಾಣವನ್ನು ಬಯಸುವ ಈ ಕವಿತೆಯ ಹೃದಯಸ್ಥಾನವಾಗುತ್ತದೆ. ಮುಂದಿನ ಸಾಲಿನಲ್ಲಿ ವ್ಯಕ್ತಿಯ ಸುಖ ಐಕ್ಯ ಮತ್ತು ಸಮಾನತೆಯ ಸ್ಥಾಯೀಭಾವದಲ್ಲಿ ಕಾಣಿಸಿಕೊಳ್ಳಬೇಕು ಎಂದು ಹೇಳುವುದು ಸಾಮಷ್ಟಿಕ ಕ್ಷೇತ್ರದ ವ್ಯವಸ್ಥೆಯನ್ನು ಚಿತ್ರಿಸುತ್ತದೆ. ಆದರೆ ಈ ಸ್ಥಾಯೀಭಾವದಲ್ಲಿ "ಬಹುವಧು ಉದ್ದೀಪ್ತ" ಎನ್ನುವ ಮಾತು ಸಂಚಾರಿ ಭಾವಗಳನ್ನು ಸೂಚಿಸುತ್ತಿದ್ದರೂ ಈಗಾಗಲೇ ಈ ಕವಿತೆಯಲ್ಲಿ ಚಿತ್ರಿತವಾಗಿರುವ ಒಂದು ಗಂಡು ಒಂದು ಹೆಣ್ಣಿನ ಜೋಡಿಯ ಚಿತ್ರಣವನ್ನು ನಿರಾಕರಿಸುತ್ತದೆ. ಅನೇಕ ವಧುಗಳಿಂದ ಉದ್ದೀಪ್ತವಾದ ಒಂದು ಗಂಡಿನ ಚಿತ್ರ ಮುಂದೆ ಬರುವ ಪ್ರಕೃತಿ ಪುರುಷರ ಜೋಡಿಗೂ ಹೊಂದಿಕೆಯಾಗುವುದಿಲ್ಲವಾದ್ದರಿಂದ ಬಹುವಧು ಉದ್ದೀಪ್ತ ಎನ್ನುವ ಪದಪುಂಜ ಉಚಿತವಾಗಿಲ್ಲ. ಇಲ್ಲಿರುವ ಗಂಡುನವಿಲನ್ನು 'ಪ್ರಜ್ಞಾ ಸುಪ್ತಾ' ಎಂದು ಕರೆದಿರುವುದರಲ್ಲಿ ಸುಪ್ತಪ್ರಜ್ಞೆಯ ನರ್ತನವೇ ಕಾವ್ಯ ಎನ್ನುವ ಸೂಚನೆಯಿದೆ. ಸುಪ್ತ ಪ್ರಜ್ಞೆಯ ನರ್ತನವೇ ಅಕ್ಷರದ ಬ್ರಹ್ಮಕೃತ್ಯ ಎಂದು ಮುಂದಿನ ಸಾಲುಗಳಲ್ಲಿ ಹೇಳಲಾಗಿದೆ :

ಅಕ್ಷರದೀ ಬ್ರಹ್ಮಕೃತ್ಯ ನಿತ್ಯದ ಈ ನೃತ್ಯ
ಚಿತ್ತದಲ್ಲಿ ಚಿತ್ರಿಸುತಿರೆ ಮರ್ತ್ಯವಹುದಮರ್ತ್ಯ.

ಅಕ್ಷರದ ಎನ್ನುವಲ್ಲಿ ನಾಶವಿಲ್ಲದ್ದು ಎನ್ನುವ ಅರ್ಥದ ಮಗ್ಗಲು 'ನಿತ್ಯದ ಈ ನೃತ್ಯ' ಎನ್ನುವಲ್ಲಿ ಕಾವ್ಯದ ಚಿರಂತನತೆಯ ಆಯಾಮವನ್ನು ದೃಢಪಡಿಸುತ್ತದೆ. ಇಲ್ಲಿ 'ಶಾರದೀಯ' ಎಂದು ಕಾಣಿಸಿದ ವಿಶೇಷಣದ ಅರ್ಥ ವಿಸ್ತಾರಗೊಳ್ಳುತ್ತದೆ.

ಸಾಂಖ್ಯಸೂತ್ರದ ಪ್ರಕಾರ ಪುರುಷ ಜಡನೆಂದೂ ಪ್ರಕೃತಿ ಚೇತನವೆಂದೂ ಇದ್ದರೆ, ಈ ಪ್ರೇಕ್ಷಕನ ಕಣ್ಣಿದುರಿನಲ್ಲಿ ಗಂಡುನವಿಲು ಕುಣಿಯುತ್ತಿರುವುದೂ ಹೆಣ್ಣು ತಟಸ್ಥವಾ

ಗಿರುವುದೂ ಕಂಡು ಅವನಿಗೆ ವಿಸ್ಮಯವಾಗುತ್ತದೆ. ಗಂಡುನವಿಲಿನ ಜೊತೆಗೆ ತಾದಾತ್ಮ್ಯವನ್ನು ಪಡೆದಿದ್ದ ಈ ಪ್ರೇಕ್ಷಕ ಆದರ ನಾಟ್ಯವನ್ನೇ ಪೌರುಷವೆಂದು ಕರೆಯುತ್ತಾನೆ. ಇದನ್ನೇ ಸೌರಸವೆಂದೂ ಚೌರಸವೆಂದೂ ವರ್ಣಿಸುವಾಗ ಪೌರುಷಕ್ಕೆ ಪ್ರಾಸವಾಗಿ ಬಂದ ಈ ಮಾತುಗಳಿಗೆ ಅರ್ಥವೂ ಇರುವುದೆನ್ನುವ ಭಾಸದಲ್ಲಿ ಕವಿ ಮೈಮರೆತ ಹಾಗಿದೆ. ಸೌರಸ ಎನ್ನುವುದನ್ನು ಸುರಸದ ಭಾವನಾಮವೆಂದು ಪ್ರಯಾಸದಿಂದ ಒಪ್ಪಿಕೊಂಡರೂ. ಈ ನಾಟ್ಯವನ್ನು ಚೌರಸವೆಂದಾಗ ಆಭಾಸವುಂಟಾಗಿದೆ. ಚಾರಸ ಎಂದರೆ ನಾಲ್ಕೂ ಮೂಲೆ ಚೌಕಾಕೃತಿ ಎನ್ನುವ ಅರ್ಥ ಯಾವ ರೀತಿಯಲ್ಲೂ ಈ ಸಂದರ್ಭದಲ್ಲಿ ಹೊಂದಿಕೊಳ್ಳುವುದಿಲ್ಲ.

ಪುರುಷನಿದಿರಂ ಪ್ರಕೃತಿ ಕುಣಿವುದೆಂದು ಸಾಂಖ್ಯಸೂತ್ರ
ಪ್ರಕೃತಿ ಸಾಕ್ಷಿ ಪುರುಷನಾಟ್ಯ ನವೋನವ ವಿಚಿತ್ರ.
ಇದೆ ಪೌರುಷ, ಇದೆ ಸೌರಸ, ಇದೆ ಚೌರಸವೆಂದು
ನೆತ್ತಿಹೊತ್ತ ಆತ್ಮಶಿಖಿಯ ಪರಿಣಾಮ ಕಂಡು
ಬೇಸಿಗೆ ಸೆಖೆ ಶಿಖೆಗಂಡಿತು ಶತದಳಮುಖಿ ಉರಿಯೇ
ಹುಬ್ಬಿನ ಮಬ್ಬಿನ ಬಸಿರ್ ಬಂಗಾರದ ಬಾಯ್ದೆರೆಯೇ
ಗೌರೀಶಂಕರ ತಲೆಯೆತ್ತಿದೆ ಕೇತುವೆ ಎಂದೊ
ಧಿಮಕಿಡುತಿದೆ ಆ ಕುಮಾರಿ ಆ ಸೇತುವೆಯಿಂದೊ ?

ಈ ನೃತ್ಯದ ಪ್ರೇಕ್ಷಕ ಮಯೂರ ನರ್ತನವನ್ನು ನೆತ್ತಿಹೊತ್ತ ಆತ್ಮಶಿಖಿಯ ಪರಿಣಾಮವೆಂದುಕೊಳ್ಳುತ್ತಾನೆ. ನೆತ್ತಿ ಹೊತ್ತ ಆತ್ಮಶಿಖಿ ಎಂದಾಗ ಕುಂಡಲಿನಿಶಕ್ತಿ ಸಹಸ್ರಾರವನ್ನು ತಲುಪಿದ ಸೂಚನೆಯಿದೆ ಎಂದುಕೊಳ್ಳಬಹುದು. ಇದರ ಮುಂದಿನ ಸಾಲಿನಲ್ಲಿ ಬೇಸಿಗೆ ಸೆಖೆ ಶಿಖೆಗಂಡಿತು ಶತದಳ ಮುಖಿ. ಉರಿಯೆ ಎನ್ನುವಾಗ ಭೂಮಧ್ಯದ ಶತದಳ ಚಕ್ರದ ಪ್ರಕಾಶದಲ್ಲಿ ಬೇಸಗೆ ಸೆಖೆ ಅಂತ್ಯವಾಯಿತು ಎನ್ನುವ ಅರ್ಥದ ಸಾಧ್ಯತೆಯನ್ನು ಮೊಕಾಶಿಯವರು ಸೂಚಿಸಿದ್ದಾರೆ. ಹುಬ್ಬಿನ ಮಬ್ಬಿನ ಬಸಿರ್ ಬಂಗಾರದ ಬಾಯ್ದೆರೆಯೇ ಎನ್ನುವುದರಲ್ಲಿ ಕುಂಡಲಿನಿಶಕ್ತಿ ಸಹಸ್ರಾರವನ್ನು ಪ್ರವೇಶಿಸುವ ಕ್ರಿಯೆಯನ್ನು ವರ್ಣಿಸುತ್ತಿದೆ ಎಂದುಕೊಳ್ಳಬಹುದು. ಮುಂದೆ ಗೌರೀಶಂಕರ ತಲೆಯೆತ್ತಿ ಈ ಕುಂಡಲಿನ ಶಕ್ತಿಯ ಪ್ರಕಾಶವನ್ನು (ಕೇತುವೆ) ನೋಡುತ್ತದೆ. ಕೇತುವೆ ಎನ್ನುವ ಶಬ್ದ ಸೇತುವೆಯ ಒತ್ಯಾಯದಿಂದ ಮೂಡಿಬಂದಿದ್ದರೂ ಇಲ್ಲಿ ಚಾರಸವೆನ್ನುವಲ್ಲಿ ಕಂಡಂತಹ ಆಭಾಸ ಕಾಣಿಸುವುದಿಲ್ಲ.

ಗೌರೀಶಂಕರ ತಲೆಯೆತ್ತಿದೆ ಕೇತುವೆ ಎಂದೋ
ಧಿಮಕಿಡುತಿದೆ ಆ ಕುಮಾರಿ ಆ ಸೇತುವೆಯಿಂದೋ ?

ಎನ್ನುವ ಸಾಲುಗಳಿಗೆ ಅನ್ವಯಾರ್ಥ ಹೇಳುವುದು ಸ್ವಲ್ಪ ಕಷ್ಟವೆ. ಬಹುಶಃ ಹೀಗೆ ಹೇಳಬಹುದು : ಈ ಪ್ರಕಾಶ ಕನ್ಯಾಕುಮಾರಿಯಿಂದ ಹೊರಟು ಕುಣಿದು ಬರುತ್ತಿದೆಯೇ ಎಂದು ಗೌರೀಶಂಕರ ಪರ್ವತ ಆಶ್ಚರ್ಯದಿಂದ ತಲೆಯೆತ್ತಿ ನೋಡುತ್ತಿದೆ. ಕೊನೆಯ ಎರಡು ಸಾಲುಗಳಲ್ಲಿ ಈ ಕವನದ ನಾಯಕನಿಗೆ ತನಗೇನಾಗುತ್ತಿದೆ ಎನ್ನುವ ದಿಗ್ಭ್ರಮೆ ಇದೆ :

ಹಾ ಭಯವೊ ಓ ನಿದ್ದೆಯೊ ಮಿಥುನದ ಒಲವೋ
ರೌದ್ರದ ಮೊರೆ ಹೇಸಿಗೆ ಹೊರೆ ಮಾನವ ದಳವೋ.

ಈ ಕವಿತೆಯ ಆಶಯ ಲೋಕಕಲ್ಯಾಣವನ್ನು ಕರೆಯುವುದಾದರೆ ಕೊನೆಯ ಈ ಎರಡು ಸಾಲುಗಳಲ್ಲಿ ಔಚಿತ್ಯವಿಲ್ಲ. ಈ ಕವಿತೆ.ಕಾವ್ಯ ಹೇಗೆ ಹುಟ್ಟುತ್ತದೆ ಎನ್ನುವುದನ್ನು ಹೇಳುತ್ತಿದ್ದರೆ, ಆಹಾರ ನಿದ್ರಾ ಭಯ ಮೈಥುನದ ಯಾವುದೋ ಒಂದು ಒತ್ತಡದಲ್ಲಿ ಆಥವಾ ರೌದ್ರದ ಆರ್ತನಾದವಾದ ಮತ್ತು ಹೇಸಿಗೆಯ ಹೊರೆಯಾದ ಮಾನವಸೈನ್ಯವನ್ನು ಕಂಡಾಗ, ತನಗೆ ಹುಟ್ಟಿದ ಭಾವನೆಯಲ್ಲಿ ಕಾವ್ಯದ ಮೂಲಸೆಲೆಯಿದೆ ಎಂದು ಹೇಳುತ್ತಿದ್ದರೆ ಆದಕ್ಕೂ ಲೋಕ ಕಲ್ಯಾಣದ ಆಶಯಕ್ಕೂ ಸಂಬಂಧ ವಿಲ್ಲವಾಗಿದೆ. ಹೇಸಿಗೆಯಹೊರೆ, ರೌದ್ರದಮೊರೆಗೆ ಪಾದ ಪೂರಣಕ್ಕಾಗಿ, ನಾದ ಪೂರಣಕ್ಕಾಗಿ ಬಂದಿದೆ.

ಒಟ್ಟಿನಲ್ಲಿ ಈ ಕವಿತೆಯ ಕೇಂದ್ರ ಯಾವುದೆನ್ನುವುದು ಸ್ಪಷ್ಟವಾಗುವುದಿಲ್ಲ. ಇದರ ಹಿಂದಿನ ಪ್ರಜ್ಞೆ "ಪ್ರಜ್ಞಾ ಸುಪ್ತಾ" ಆಗಿರುವುದರಿಂದಲೇ ಹೀಗಾಗಿರಬಹುದು. ಆದ್ದರಿಂದಲೇ ಶಂಕರ ಮೊಕಾಶಿ–ಪುಣೇಕರರು "ಈ ಕವನದ ಪೂರ್ಣ ಅರ್ಥವಿನ್ಯಾಸವಾಗಲಿ ಆನ್ಯೋಕ್ತಿಯಾಗಲಿ ಪ್ರಸ್ತುತ ಲೇಖಕನಿಗೆ ತಿಳಿದಿಲ್ಲ" ಎಂದು ಪ್ರಾಮಾಣಿಕವಾಗಿ ಹೇಳಿದ್ದಾರೆ (ಶ್ರೀ ಬೇಂದ್ರೆಯವರ ಕಾವ್ಯಮೀಮಾಂಸೆ, ಸಮಾಜ ಪುಸ್ತಕಾಲಯ, ಧಾರವಾಡ, ಪುಟ 53)ಆಮೇಲೆ ಕವಿತೆಯ ವ್ಯಾಖ್ಯಾನವನ್ನು ಕೊಟ್ಟಿದ್ದಾರೆ. ಆ ಮಾತು ಬೇರೆ. ಈ ಕವಿತೆಯ ಅರ್ಥ ಬಹಳ ಸ್ಪಷ್ಟ.

ವಾಗಿರುವ ಹಾಗೆ ಕೀರ್ತಿನಾಥ ಕರ್ತಕೋಟಿಯವರು ಇದರ ವಿಶ್ಲೇಷಣೆಯನ್ನು ಕೊಟ್ಟಿದ್ದಾರೆ. (ಭೃಂಗದ ಬೆನ್ನೇರಿ, ಮನ್ವಂತರ ಪ್ರಕಾಶನ, ಧಾರವಾಡ, ಪುಟ 30-34). ಇತ್ತೀಚೆಗೆ 'ಶೂದ್ರ'ದಲ್ಲಿ ಇನ್ನೊಂದು ವಿಶ್ಲೇಷಣೆಯೂ ಬಂದಿದೆ. ಆದರಲ್ಲಿ ಕೂಡ ಯಾವ ಸಂಶಯವೂ ಅದರ ಲೇಖಕರನ್ನು ಕಾಡಿದಂತಿಲ್ಲ. ಮೊಟ್ಟ ಮೊದಲು ಈ ಕವನದ ಬಗ್ಗೆ ಕುತೂಹಲವನ್ನು ವ್ಯಕ್ತ ಪಡಿಸಿದ ಮೊಕಾಶಿಯವರು ಮತ್ತು ಇತರ ವಿಮರ್ಶಕರು ಈ ಕವನದ ತಾತ್ಪರ್ಯಕ್ಕೆ ಮಹತ್ವಕೊಟ್ಟರೇ ಹೊರತು ಇದರ ರಚನೆಯ ಕಡೆಗೆ ಕಣ್ಣುಹಾಯಿಸಲಿಲ್ಲ.

* * *

ರಚನೆಯ ದೃಷ್ಟಿಯಿಂದ ನೋಡಿದಾಗ ಇದೊಂದು ಅಸಫಲ ಕವನವೆನ್ನಿಸುತ್ತದೆ. ಬೇಂದ್ರೆಯವರ ನಾದ ಲೋಲುಪತೆಯೇ ಅಥವಾ ನಾದವನ್ನೇ ನಾದುವ ಪ್ರವೃತ್ತಿಯೇ ಈ ಅಸಫಲತೆಗೆ ಕಾರಣವಾಗಿರಬೇಕು. ಕಾವ್ಯ ಸೃಷ್ಟಿಯ ಸಂದರ್ಭದಲ್ಲಿ ಅಸ್ಪಷ್ಟವಾದ ಭಾವನೆಗಳು ಅಸ್ಪಷ್ಟಕಲ್ಪನೆಗಳು, ಅನವಶ್ಯಕ ವಿವರಗಳು, ಆಭಾಸಗಳು ತಲೆಹಾಕುವುದು ಎಲ್ಲ ಕವಿಗಳಲ್ಲೂ ಕಂಡು ಬರುತ್ತದೆ. ಆದರೆ ಅನೇಕ ಶ್ರೇಷ್ಠ ಕವಿಗಳು ಪದವಿಟ್ಟಳುಪದೊಂದ ಗ್ಗಳಿಕೆಯಿಲ್ಲದೆ ಅಸ್ಪಷ್ಟವಾದದ್ದನ್ನು ಸ್ಪಷ್ಟಗೊಳಿಸಿ, ಅನವಶ್ಯಕವಾದದ್ದನ್ನು ಕಿತ್ತುಹಾಕಿ, ಕಾವ್ಯ ಸೃಷ್ಟಿಸಂದರ್ಭದಲ್ಲಿ ಕವನದಲ್ಲೇ ಸಿದ್ಧವಾಗುತ್ತಿರುವ ಅಭಿವ್ಯಕ್ತಿಯ ಸೌಂದರ್ಯವನ್ನು ಪರಿಪೂರ್ಣಗೊಳಿಸುವ ಹಾಗೆ ಕವಿತೆಗಳನ್ನು ತಿದ್ದಿ ಬರೆದದ್ದುಂಟು. ಆದರೆ ಬೇಂದ್ರೆಯವರು ಹಾಗೆ ಮಾಡದೆ ಕವಿತೆ ಹೇಗೆ ಮೂಡಿ ಬಂತೋ ಹಾಗೆಯೇ ಇಟ್ಟಿರುವರೊ ಎಂದು ಅನುಮಾನವಾಗುತ್ತದೆ. ಅವರಿಗೆ ಕವಿತೆ ಒಂದು ರೀತಿಯ ಸ್ವಯಂ ಚಾಲಿತ ಬರವಣಿಗೆಯಾಗಿರಬಹುದು ಎನ್ನುವ ಅನುಮಾನಕ್ಕೆ ಕಾವ್ಯಮೀಮಾಂಸೆಗೆ ಸಂಬಂಧಿಸಿದ ಅವರ ಇತರ ಕವಿತೆಗಳಲ್ಲೂ ಪುರಾವೆಗಳು ಸಿಗುತ್ತವೆ.

* * *

"ನೃತ್ಯಯಜ್ಞ"ದ ರಚನೆಯಲ್ಲಿ ಕವಿತೆಯ ಬೆಳವಣಿಗೆಯ ದಿಕ್ಕು ಸ್ಪಷ್ಟವಾಗಿದೆ. ಆದರೆ ಇದರಲ್ಲಿನ ವಿರಾಮಚಿಹ್ನೆಗಳ ಬಳಕೆ ಮಾತ್ರ ಈ ದೃಷ್ಟಿಕೋನವನ್ನು ಕೆಡಿಸುತ್ತದೆ. ವಿರಾಮ ಚಿಹ್ನೆಗಳನ್ನು ಕಡೆಗಣಿಸಿ ಕವಿತೆಯಲ್ಲಿರುವ ಸಹಜ ವಿರಾಮಸ್ಥಾನಗಳನ್ನು, ಅಂದರೆ ಅರ್ಥಯತಿಯನ್ನು ಗಮನಿಸಿದರೆ ಈ ಕವಿತೆ ಅಷ್ಟೊಂದು ಕ್ಲಿಷ್ಟವಾಗಿ ಕಾಣಿಸುವುದಿಲ್ಲ.

ಇಡೀ ಕವಿತೆ ಮಯೂರನರ್ತನದ ಸಂದರ್ಭದಲ್ಲಿ ಈ ಕವನದ ನಾಯಕನ ಮೇಲಾಗುವ ಪರಿಣಾಮವನ್ನು ಚಿತ್ರಿಸುತ್ತದೆ. ಅವನೇ ಈ ಕವಿತೆಯಲ್ಲಿ ಮೊದಲಿನಿಂದ ಕೊನೆಯವರೆಗೂ ಮಾತಾಡುವವನು. ನಾವು ನೋಡುವುದು ಕೂಡ ಅವನ ಕಣ್ಣಿಂದಲೇ. ಮೊದಲು ಒಬ್ಬ ಸಹೃದಯ, ಆಮೇಲೆ ಕ್ರಮವಾಗಿ, ಎದುರಿಗಿರುವ ಗಂಡು ನವಿಲು, ಅದನ್ನು ವಾಹನವಾಗಿ ಮಾಡಿಕೊಂಡ ಷಣ್ಮುಖ, ಹೆಣ್ಣು ನವಿಲು, ಮತ್ತೆ ಗಂಡು ನವ್ಲಿಲು- ಹೀಗೆ ಒಂದೊಂದು ಪಾತ್ರವನ್ನೂ ಸಂಬೋಧಿಸುವ ಕ್ರಿಯೆಯಲ್ಲಿ ಈ ಕವಿತೆ

ಶಿಖೀ ಶಿಖಿ ಸಹಸ್ರನಖೀ ವರ್ಷಾವೀಣೆಯನೆ
ಬಾಜಿಸಿ ಪರ್ಜನ್ಯವ ಕರೆ ಅಂತರ್ಜ್ಞಾನಿಯನೆ

ಎನ್ನುವವರೆಗೂ ಒಂದು ಪ್ರಮುಖ ಘಟ್ಟವನ್ನು ಮುಟ್ಟುತ್ತದೆ. ಅಲ್ಲಿಂದ ಮುಂದೆ ಈ ಕವನದ ನಾಯಕ ಇಪ್ಪರಲ್ಲೇ ನವಿಲಿನ ಜೊತೆಗೆ ತಾದಾತ್ಮ್ಯವನ್ನು ಪಡೆದ ಆತ್ಮಶಿಖಿಯನ್ನು ಸಂಬೋಧಿಸುತ್ತಾನೆ. ಕೊನೆಯ ಎರಡು ಸಾಲುಗಳಲ್ಲಿ ಕವಿ ಮತ್ತು ನಾಯಕ ಒಂದಾಗಿ ಇಲ್ಲಿಯವರೆಗೂ ಕವಿತೆಯ ದೃಷ್ಟಿಕೋನವನ್ನು ಮರೆತು, ಕವಿತೆ ಸೃಷ್ಟಿಸಿದ ಅನುಭವದ ಅರ್ಥವಂತಿಕೆಯನ್ನೂ ಮರೆತು, ಈ ಕವಿತೆ ಹುಟ್ಟುವುದಕ್ಕೆ ಮೂಲ ಪ್ರೇರಣೆ ಯಾವುದೆನ್ನುವುದರ ಕಡೆಗೆ ಈ ಕವಿತೆಯನ್ನು ತಿರುಗಿಸಿಬಿಡುತ್ತಾರೆ.

* * *

ಈ ಕವಿತೆ ಕ್ಷೋಭೆಗೊಂಡ ಮನಸ್ಥಿತಿಯಿಂದ ಹುಟ್ಟಿ ಆ ಮನಸ್ಥಿತಿಯನ್ನು ದಾಟಿ, ತಳಮಳದಿಂದ ಬಿಡುಗಡೆ ಪಡೆದು, ಮನಸ್ಸನ್ನು ಒಂದು ಸ್ಥಿಮಿತಕ್ಕೆ ತರುವುದಕ್ಕಾಗಿ ಸ್ವಪ್ನಾವಸ್ಥೆಯಿಂದ ಸುಷುಪ್ತಿಗೆ, ಸುಷುಪ್ತಿಯಿಂದ ಹೊಸತೊಂದು ಎಚ್ಚರಕ್ಕೆ ಜಿಗಿದು ಕ್ರಮಬದ್ಧತೆಯನ್ನು ನಿರೀಕ್ಷಿಸುವ, ಮನಸ್ಸಿನ ಸಮತೋಲವನ್ನು ಕಾಯ್ದುಕೊಳ್ಳುವ ಪ್ರಯತ್ನವಾಗಿದೆ. ನವಿಲಿನ ನರ್ತನದ ಸನ್ನಿವೇಶದಿಂದ ಪ್ರಲಯದವರೆಗೂ, ಮಾನವನನ್ನೇ ನಾಶ ಮಾಡುವ ಅವನ ಹಸಿವೆಯ ರೌದ್ರತಾಂಡವದವರೆಗೂ, ಸೃಷ್ಟಿಮೂಲವನ್ನು ಮುಟ್ಟಿ, ಅದರ ರಹಸ್ಯವನ್ನು ಅನುಭವಿಸುವ ಅನುಭಾವದವರೆಗೂ ಸ್ಪರ್ಶಿಸುವ ಈ ಕವಿತೆಯ

ಆಶಯ ಮಹತ್ವದ್ದಾಗಿದೆ. ಮೂರು ಮಾತ್ರೆಯ ಲಯ ಇಲ್ಲಿ ಆರುಮಾತ್ರೆಯ ಲಯವಾಗಿ, ಒಂದು ರೀತಿಯ ಸಂಮೋಹನವನ್ನು ಬೀರುತ್ತದೆ. ಕವಿಯ ದೃಷ್ಟಿಯಿಂದ ಪರಿಪೂರ್ಣ ಎನ್ನಿಸುವ ಇಲ್ಲಿಯ ಸಾಲುಗಳು ಅವುಗಳ ನಾದವಿಶೇಷದಿಂದ ಹೃದಯಸ್ಥವಾಗುತ್ತವೆ. ಹೀಗೆ ಮಾಂತ್ರಿಕತೆಯಿರುವುದರಿಂದಲೇ, ಈ ಕವಿತೆ ವಿಶ್ಲೇಷಣೆಗೆ ಕೊಡಲೇ ಅವಕಾಶವನ್ನು ಕೊಡುವುದಿಲ್ಲ ಏಕೆಂದರೆ

ಜಗವೆಲ್ಲವು ಮೊರೆಯಿಡುತಿರೆ ಕಣಿಯುತ್ತಿದೆ ಕೇಕೀ.

* * *

ಈ ಕೇಕೆಯ ಜೊತೆ ತಾದಾತ್ಮ್ಯವನ್ನು ಪಡೆದು ಪ್ರಕೃತಿ ಸಾಕ್ಷಿ ಪುರುಷ್ಯನಾಟ್ಯವಾಡುತ್ತ ಕಾವ್ಯವನ್ನು ಸೃಷ್ಟಿಸುತ್ತಿರುವ ಕವಿ, ಒಂದು ರೀತಿಯಲ್ಲಿ, ಜಗತ್ತೆಲ್ಲ ಮೊರೆಯಿಡುತ್ತಿರುವಾಗ ಕೇಕೆಯ ಹಾಗೆ ಕಣಿಯುವುದರಲ್ಲಿ, ಸಖಿ ಸಂಮುಖ ತಲ್ಲೀನತೆಯಲ್ಲಿ ಏಕಾಕಿಯಾಗಿದ್ದರೂ, ಈ ಜಗತ್ತನ್ನೂ ಮರೆಯಲಾರ :

ಅನ್ನ ಅನ್ನ ಬಸಂಗುಡುತಿದೆ ಮಾನವನಾಗರವು
ತೆರೆತೆರೆಯಲಿ ತೆರೆಯಿತಾ ನವ ದುಃಖದ ಸಾಗರವು

ಕವಿತೆ ಈ ವಿರೋಧಾಭಾಸವನ್ನು ತೆಗೆದುಹಾಕುವ ಪ್ರಯತ್ನದಲ್ಲಿ ಸಫಲವಾಗಿಲ್ಲ. ಈ ವಿರೋಧಾಭಾಸವೂ ಈ ಕವನದ ನಾಯಕನಿಗೆ ಸ್ಪಷ್ಟವಾಗಿಲ್ಲ.

* * * *

"ನೃತ್ಯಯಜ್ಞ" ಕವನದಲ್ಲಿ 10ಮುಖ್ಯವಾದ ಅಂಶಗಳಿವೆ. 1. ಗಿರಿಯೊಂದರ ಶಿಖರದಲ್ಲಿ ಒಂದು ಗಂಡು ನವಿಲು ಹೆಣ್ಣು ನವಿಲಿನ ಎದುರಿಗೆ ಸಖಿಸಂಮುಖ ತಲ್ಲೀನತೆಯಿಂದ ನರ್ತಿಸುತ್ತಿದೆ. 2. ಮೋಡ ಕವಿದು ಮಿಂಚುಗುಡುಗಿನಿಂದ ಪ್ರಳಯಕಾಲದ ಹಾಗೆ ಭಯದ ವಾತಾವರಣವಿದೆ. 3. ಮಯೂರ ನರ್ತನದ ಸಂದರ್ಭ ಮುಂಬರುವ ಪಯಿರಿನ ಸಮೃದ್ಧಿಯ ಬಗ್ಗೆ ಆಸೆಯನ್ನು ಹುಟ್ಟಿಸುತ್ತದೆ. 4. ಈ ಸಂದರ್ಭದಲ್ಲಿ ನವಿಲನ್ನು ವಾಹನವಾಗಿಟ್ಟುಕೊಂಡಿರುವ, ಫಲವಂತಿಕೆಯ ದೇವತೆಯಾದ ಕಾರ್ತಿಕೇಯನನ್ನು ಈ ಕವನದ ನಾಯಕ ಆಹ್ವಾನಿಸುತ್ತಾನೆ. 5. ಫಲವಂತಿಕೆಯ ದೇವತೆ ಮಾನವನ ಹಸಿವೆಯ ಸರ್ಪವನ್ನು ನಾಶಮಾಡುವ ಭರವಸೆಯನ್ನು ಇಲ್ಲಿಯ ನಾಯಕ ವ್ಯಕ್ತಪಡಿಸುತ್ತಾನೆ. 6. ಫಲವಂತಿಕೆಯ ದೇವತೆಯ ಸ್ತುತಿಯಲ್ಲಿ ಅವನನ್ನು ಜ್ಞಾನಕರ್ಮಸಮಸಖನೆಂದೂ ಕೀರ್ತಿಸಲಾಗಿದೆ. 7. ನವಿಲು ತನ್ನ ಉಗುರುಗಳಿಂದ ವರ್ಷಾವೀಣೆಯನ್ನು ಬಾರಿಸಿ ಮಳೆಯನ್ನು ಕರೆಯುವ ಒಂದು ಸುಂದರವಾದ ಕಲ್ಪನೆಯಿದೆ. 8. ಮಳೆಯಿಂದ ಬರುವ ಸಮೃದ್ಧಿಯಲ್ಲಿ ಸಾಮಷ್ಟಿಕ ಕ್ಷೇತ್ರದಲ್ಲಿ ವ್ಯಕ್ತಿಯ ಸುಖದ ಸಾಧ್ಯತೆಯಿದೆ. 9. ನವಿಲಿನ ನರ್ತನವನ್ನೂ ಕಾವ್ಯಕ್ರಿಯೆಯನ್ನೂ, ನವಿಲನ್ನೂ ಆತ್ಮಶಿಖಿಯನ್ನೂ ಸಮೀಕರಿಸಲಾಗಿದೆ. 10. ಕ್ರಿಯಾಶೀಲವಾದ ಈ ನರ್ತನ ಅಥವಾ ಕಾವ್ಯಸೃಷ್ಟಿ ಶ್ರೇಷ್ಠವಾದ ಆಧ್ಯಾತ್ಮಿಕ ಅನುಭವಕ್ಕೂ ಕರೆದೊಯ್ಯುವ ಸಾಧ್ಯತೆಯುಳ್ಳದ್ದು. ಮರ್ತ್ಯವನ್ನು ಅಮರ್ತ್ಯವನ್ನಾಗಿಸುವ ಸಾಮರ್ಥ್ಯವುಳ್ಳದ್ದು. ಈ ನರ್ತನ ಯಜ್ಞಸ್ವರೂಪದ್ದಾಗಿದ್ದು ಲೋಕಕಲ್ಯಾಣವನ್ನು ಸಾಧಿಸುತ್ತದೆ.

ಈ ಹತ್ತು ಅಂಶಗಳ ಹಿಂದೆ ಪ್ರಳಯಕಾಲದ ಭಯ, ಪ್ರಜ್ಞೆ ಸುಪ್ತವಾಗಿರುವುದರಿಂದ ನಿದ್ದೆಯ ಅನುಭವ, ನವಿಲಿನ ನರ್ತನದಿಂದ ಸೂಚಿತವಾಗುವ ಮಿಥುನದ ಒಲವು, ಮಾನವನಾಗರವು ಬುಸುಗುಡುವ ರೌದ್ರಭಾವ, ಸಂಚಾರಿಗಳಾಗಿವೆ. ಆದರೆ ಮೇಲೆ ಹೇಳಿದ ಹತ್ತು ಅಂಶಗಳಲ್ಲಿ ಸೂಚಿತವಾಗುವ ಕ್ರಿಯಾಶೀಲತೆಯಂ ಪರಾಕಾಷ್ಠೆಯನ್ನು ಮಾನವ ಕಲ್ಯಾಣದ ಮೂಲಕ ಮುಟ್ಟುವ ಆಶಯವನ್ನು ಕೊನೆಯ ಸಾಲುಗಳು ಸಂಚಾರಿ ಭಾವಗಳ ಮೇಲೆಯೇ ಒತ್ತುಕೊಟ್ಟು ಉದ್ದೇಶಭಂಗಕ್ಕೆ ಕಾರಣವಾಗುತ್ತವೆ :

ಹಾ ಭಯವೋ ಓ ನಿದ್ದೆಯೊ ಮಿಥುನದ ಒಲವೋ
ರೌದ್ರದ ಮೊರೆ ಹೇಸಿಗೆ ಹೊರೆ ಮಾನವ ದಳವೋ.

ಈ ಸಾಲುಗಳಿಂದ ಉದ್ದೇಶಭಂಗವಷ್ಟೇ ಆಗದೆ ಕವನದ ವಸ್ತುವಿನ ಬಗ್ಗೆ ಕವಿಗೇ ಸ್ಪಷ್ಟವಾದ ಕಲ್ಪನೆಯಿರಲಿಲ್ಲವೆಂದೂ, ಕಾವ್ಯರಚನೆಯ ಬಗ್ಗೆ ಈ ಕವಿ ಸಾಕಷ್ಟು ಗಮನಕೊಡಲಿಲ್ಲವೆಂದೂ ಗೊತ್ತಾಗುತ್ತದೆ.

ಆದರೂ ಈ ಕವಿತೆ ಗಮನಾರ್ಹವಾಗಿದೆ. ನವಿಲಿನ ನೃತ್ಯವೆಂದೊಡನೆ ಶಿಖಿ, ಶಿವೆ, ಕೇಕೀ, ಶಿಖಂಡಿ, ತುರಾಯಿ, ಆತ್ಮಶಿಖಿ, ಸಖಿ ಈ ಪದಗಳೆಲ್ಲ ದಂಡಾಗಿ ಬರುತ್ತವೆ. ಶಿಖಿಯಿಂದ ಸೂಚಿತವಾಗುವ ಕುಮಾರ, ಕಾರ್ತಿಕ, ಶರತ್ಕಾಲ, ತಾರಕಸಂಹಾರ, ಶಕ್ತಿಕಂದ, ಶಿವನಂದನ, ಸ್ಕಂದ, ದೇವತೆಗಳ ಸೇನಾಪತಿ ಷಣ್ಮುಖ

ಹೀಗೆ ಸ್ಕಂದನಿಗೆ ಸಂಬಂಧಿಸಿದ ಪದಗಳೆಲ್ಲ ದಿಢೀರಾಗಿ ಕಾದು ನಿಲ್ಲುತ್ತವೆ. ಕೇಕೆಯಿಂದ ಕೇಕೀ, ಸಖಿ, ಏಕಾಕಿ ಮೊದಲಾದ ನಾದಸಹಚರಿಗಳು, ಭಾವಸಹಚರಿಗಳ್ಕ ಪ್ರತ್ಯಕ್ಷವಾಗುತ್ತವೆ. ಮೋಡದ ಕಾರಣದಿಂದ ಕಾಣಿಸಿದ ಕತ್ತಲೆ ಪ್ರಲಯವನ್ನೂ, ನೃತ್ಯ ತಾಂಡವವನ್ನೂ, ಮಳೆ ಬೆಳೆಯನ್ನೂ, ಬೆಳೆ ಹಸಿವನ್ನೂ, ನವಿಲು ನಾಗರವನ್ನೂ, ನವಿವೀಣೆಯನೂ, ಶಾರದೀಯ ಅಕ್ಷರದ ಬ್ರಹ್ಮಕೃತ್ಯವನ್ನೂ ಗಂಡು ಹೆಣ್ಣಿ ಸಾಂಖ್ಯವನ್ನೂ ಮಿಂಚಿನವೇಗದಲ್ಲಿ ಸೂಚಿಸುತ್ತವೆ. ಹೀಗೆ ಪದಗಳ ನಾದಸಾಮರ್ಥ್ಯವನ್ನೂ, ಸೂಚನಾ ಸಾಮರ್ಥ್ಯವನ್ನೂ, ಉದ್ದೀಪನಾ ಸಾಮರ್ಥ್ಯವನ್ನೂ, ಅವುಗಳ ಅರ್ಥವಲಯಗಳನ್ನೂ, ಹಿಂದಿನ ಕಾವ್ಯದಲ್ಲಿ ಅವುಗಳ ಉಪಯೋಗದಿಂದ ಶ್ರೀಮಂತವಾದ ಭಾವಕೋಶವನ್ನು ಸೂರೆಮಾಡುವ ಶಕ್ತಿಯನ್ನೂ ಟಿ. ಎಸ್. ಎಲಿಯಟ್ ಶ್ರಾವಣಪ್ರತಿಭೆ ಎಂದು ಕರೆಯುತ್ತಾನೆ. ಬೇಂದ್ರೆಯವರಿಗೆ ಇಂಥ ಪ್ರತಿಭೆಯಿದ್ದುದರಿಂದಲೇ ಅವರು ಭಾಷೆಯ ಸಾಧ್ಯತೆಗಳನ್ನು ಕಲಿಸಿಕೊಡುವ ಕವಿಗಳ ಕವಿಯಾಗಿದ್ದಾರೆ. ಆದರೆ ಬೇಂದ್ರೆಯವರು ಈ ಎಲ್ಲ ಸಾಧ್ಯತೆಗಳನ್ನೂ ಸಿದ್ಧಿಸಿಕೊಂಡಿದ್ದರೂ, ಅವುಗಳನ್ನೆಲ್ಲ ಕಾವ್ಯಶಿಲ್ಪದ ಸಾವಯವತೆಗೆ ಭಂಗಬಾರದಂತೆ ವ್ಯವಸ್ಥಿತಗೊಳಿಸುವ ರಚನಾಕೌಶಲವನ್ನು ಸಾಧಿಸಿಕೊಳ್ಳಲಿಲ್ಲ. ಆದ್ದರಿಂದ ಅವರ ಅನೇಕ ಕವಿತೆಗಳು ಅಲ್ಲಿ ಇಲ್ಲಿ ಊನವಾಗಿವೆ. ಬೇಂದ್ರೆಯವರ ಸಾಮರ್ಥ್ಯಕ್ಕೂ, ಅವರ ಕಾವ್ಯದ ದೌರ್ಬಲ್ಯಕ್ಕೂ "ನೃತ್ಯಯಜ್ಞ" ಒಂದು ಉತ್ತಮ ಉದಾಹರಣೆಯಾಗಿದೆ.

ಎಸ್. ಎನ್. ಮೂರ್ತಿ

'ಸಂಸ್ಕಾರ': ಕೆಲವು ಟಿಪ್ಪಣಿಗಳು

ಫ್ರಾಯ್ಡ್‌ನ ವಾದ ಸ್ಥೂಲವಾಗಿ ಇಷ್ಟು: ಲೈಂಗಿಕ ಉದ್ದೇಶಗಳು ಸುಪ್ತಾವಸ್ಥೆಯಲ್ಲಾಗಲಿ ಅಥವಾ ಬೇರಾವುದೇ ಅವಸ್ಥೆಯಲ್ಲಾಗಲೀ ಮನುಷ್ಯನ ನಡವಳಿಕೆಯನ್ನು ನಿರ್ಣಯಿಸುತ್ತವೆ. ಚರಿತ್ರೆಯೂ ಕೂಡ ಈ ನಡವಳಿಕೆಯ ಪರಿಣಾಮವಾಗಿ ಹುಟ್ಟುತ್ತದೆ. ಈ ಲೈಂಗಿಕ ಹಿಡಿತದ ಪ್ರಭಾವದಿಂದ ಯಾರೂ ತಪ್ಪಿಸಿಕೊಳ್ಳುವಂತಿಲ್ಲ. ಇದನ್ನು ಹತ್ತಿಕ್ಕಿ ಜೀವನ ಮಾಡುವ ಯಾವುದೇ ಯತ್ನಕ್ಕೆ ಸೋಲು ಖಂಡಿತ. ನಮ್ಮ ಇಡೀ ವ್ಯಕ್ತಿತ್ವವೇ ಲೈಂಗಿಕ ತಳಹದಿಯ ಮೇಲೆ ನಿಂತಿದೆ. ನಮ್ಮ ಎಚ್ಚರದ ಗಳಿಗೆಗಳು, ಅರೆ ಎಚ್ಚರದ ತೊಳಲಾಟ, ನಮ್ಮ ಕನಸುಗಳು ಲೈಂಗಿಕತೆಯಿಂದ ಪ್ರಭಾವಿತವಾಗಿರುತ್ತವೆ.

ಲೈಂಗಿಕತೆಯನ್ನು ತಿರಸ್ಕರಿಸಿ ಧಾರ್ಮಿಕ ಜೀವನವನ್ನು ಮಾಡುವ ಪ್ರಾಣೇಶಾಚಾರ್ಯ ಯಾವುದೋ ಒಂದು ಘಳಿಗೆಯಲ್ಲಿ ಲೈಂಗಿಕತೆಗೆ ಬಂದಿಯಾಗುತ್ತಾನೆ. ಜ್ಞಾನ, ಧರ್ಮಕ್ಕೆ ಬಾಳನ್ನು ಮುಡುಪಾಗಿಟ್ಟು, ಎಲ್ಲರಿಗೂ ಗುರು ಸಮಾನವಾಗಿದ್ದ ಈತನಿಗೆ ಫ್ರಾಯ್ಡನ ವಾದವನ್ನು ಸುಳ್ಳು ಮಾಡುವುದು ಕಷ್ಟವಾಯಿತು. ಅವನ "ಸೋಲು" ಅಥವಾ ಅವನ ವ್ಯಕ್ತಿತ್ವದಲ್ಲಿ ಸುಪ್ತಾವಸ್ಥೆಯಲ್ಲಿರುವ ಲೈಂಗಿಕ ಪ್ರಜ್ಞೆಯ ಸ್ವಾಭಾವಿಕ ಅಭಿವ್ಯಕ್ತಿ ಫ್ರಾಯ್ಡನ ಗೆಲುವು ಚಂದ್ರಿಯ ಸ್ಪರ್ಶ ಸಂಗವಾದ ಮೇಲೆ ಅವನಿಗೆ ನಾಚಿಕೆ ಹೇಸಿಗೆಗಳಾಗುವುದು ಅವನ ಧಾರ್ಮಿಕ ಪ್ರವೃತ್ತಿಯಿಂದಲ್ಲ. ಅದು ಅವನ ದುರಂತ ಕಾಮ. ಯಾವುದೇ ಕಾರಣಕ್ಕೆ ಲೈಂಗಿಕತೆಯನ್ನು ಹತ್ತಿಕ್ಕುವವರು ಈ ರೀತಿಯ ದುರಂತ ಕಾಮಿಗಳಾಗುತ್ತಾರೆ. ಇಂತಹ ಘಟನೆಗಳು ಫ್ರಾಯ್ಡನ ವಾದವನ್ನು ಸುಳ್ಳು ಮಾಡುವುದಿಲ್ಲ. ಬದಲಾಗಿ ಆ ವಾದದ ವಾಸ್ತವಿಕತೆಯನ್ನು ನಿರೂಪಿಸುತ್ತವೆ. ವೈಚಾರಿಕವಾಗಿ ಧಾರ್ಮಿಕ ಜೀವನವನ್ನು ಒಪ್ಪಿ, ಲೈಂಗಿಕ ಘಳಿಗೆಗಳಿಗೆ ಸೋಲುವ ಪ್ರಾಣೇಶಾಚಾರ್ಯಯಂಥವರಿಗೆ ಮಾತ್ರ ಈ ಅನುಭವ ಸೀಮಿತವಲ್ಲ. ಪ್ರೇಮವಿಲ್ಲದ ಕಾಮ ಅಥವಾ ತಾನೇ ತಾನಾಗಿ ಯಾವಾಗಲೂ ಗೆದ್ದು ಬರುವ ಕಾಮ (ಪ್ರಾಣೇಶಾಚಾರ್ಯರಿಗೆ ಆದಹಾಗೆ) ದುರಂತಕಾಮವಾಗಿ ಪರಿಣಮಿಸುತ್ತದೆ. ಜಾರ್ಜ್ ಆರ್‌ವೆಲ್‌ನ "ಬರ್ಮಾಸ್ ಡೇಸ್" ಕಾದಂಬರಿಯಲ್ಲಿ ಲೈಂಗಿಕತೆಯನ್ನು ತಿರಸ್ಕರಿಸದೇ ಅದು ಜೀವನದಲ್ಲಿ ಅಗತ್ಯವಾದದ್ದು ಎಂದು ಕೊಂಡಿದ್ದ ಒಬ್ಬ ಇಂಗ್ಲಿಷ್‌ಮನ್‌ಗೂ ಕೂಡಾ ಈ ದುರಂತ ಕಾಮದ ಅನುಭವವಾಗುತ್ತದೆ. ಇಂಗ್ಲೀಷ್ ಹೆಣ್ಣನ್ನು ಪ್ರೇಮಿಸಿ ಮದುವೆಯಾಗಲು ಯತ್ನಿಸಿ, ಸೋತು ಮನೆಗೆ ಹಿಂತಿರುಗಿ ತನ್ನ ಪರಿಚಯದವಳಾದ ಬರ್ಮಾ ಹೆಂಗಸೊಬ್ಬಳ ಜೊತೆಯಲ್ಲಿ ಮಲಗಿ, ಅವಳನ್ನು ಕಾಮಿಸಿ, ಕೆಲವೇ ಗಂಟೆಗಳ ನಂತರ ಬಿಕ್ಕಿ ಬಿಕ್ಕಿ ಅಳುತ್ತಾನೆ. ತನಗೊಲ್ಲದ ಬರ್ಮಾ ಹೆಣ್ಣಿನೊಂದಿಗೆ ಮಲಗಿದ ಅವನಿಗೆ ಅವನ ಬಗ್ಗೆಯೇ ಹೇಸಿಗೆಯಾಗುತ್ತದೆ. ಪ್ರಾಣೇಶಾಚಾರ್ಯರ ನಾಚಿಕೆ ಹೇಸಿಗೆಗಳೂ ಕೂಡಾ ಈ ಬಗೆಯವು. ಅವರ ಧಾರ್ಮಿಕ ಜೀವನದ ಹಿನ್ನೆಲೆಯಲ್ಲಿ ಅವರ ನಾಚಿಕೆ ಕೋಪ ಹೇಸಿಗೆಗಳಿಗೆ ಅವರ ಧಾರ್ಮಿಕ ಪ್ರಜ್ಞೆಯೇ ಕಾರಣ ಎಂದು ಹೇಳುವುದು ಒಪ್ಪಬಹುದಾದದ್ದು ಎಂದೆನಿಸಿದರೂ ಕೂಡಾ ಅದು ಲೈಂಗಿಕ ಜೀವನ, ಸಮಸ್ಯೆಗಳ ಸರಳೀಕರಣವಾಗುತ್ತದೆ. ಬ್ರಹ್ಮಚರ್ಯವನ್ನು ಒಪ್ಪಿ, ಸ್ವೀಕರಿಸಿ ಸಹಜ ಪ್ರೇಮ ಜೀವನವನ್ನು ತಿರಸ್ಕರಿಸಿ ಫ್ರಾಯ್ಡ್ ಘಳಿಗೆಯಲ್ಲಿ ಕಾಮಿಗಳಾದವರೆಲ್ಲರೂ ಪ್ರಾಣೇಶಾಚಾರ್ಯರಂಥ ವಿಲಕ್ಷಣ ಜ್ಞಾನಿಗಳು.

ಕಾರ್ಲ್ ಮಾರ್ಕ್ಸ್‌ನ ಒಂದು ವಾದದ ತಾತ್ಪರ್ಯ ಇಷ್ಟು: ಮನುಷ್ಯನ ನಡವಳಿಕೆ, ಜೀವನವನ್ನು ಆರ್ಥಿಕ ಉದ್ದೇಶಗಳು ನಿಯಂತ್ರಿಸಿ ಮಾರ್ಪಾಡು ಮಾಡುತ್ತವೆ ಎಂದು. ಮನುಷ್ಯನ ಜೀವನದ ಸ್ವರೂಪ, ರೀತಿ-ನೀತಿ, ನಡವಳಿಕೆಗಳ ತಳಹದಿ, ಅವನ ಆರ್ಥಿಕ ಉದ್ದೇಶಗಳು. ಇತಿಹಾಸ

ದಲ್ಲಿ ಈ ವಾದಕ್ಕೆ ಮಾರ್ಕ್ಸ್ ದೃಷ್ಟಾಂತಗಳನ್ನು ಹುಡುಕಿದ್ದಾನೆ. ಈ ದೃಷ್ಟಾಂತಗಳಿಂದ ಮನುಷ್ಯನ ಭವಿಷ್ಯ ಜೀವನದಲ್ಲೂ ಆರ್ಥಿಕ ಉದ್ದೇಶಗಳೇ ನಿರ್ಣಾಯಕ ಪಾತ್ರ ವಹಿಸುತ್ತವೆ ಎಂದು ವಾದಿಸುತ್ತಾನೆ. ಮನುಷ್ಯ ತನ್ನ ಜೀವನದಲ್ಲಿ ಹತ್ತಾರು ಪದ್ಧತಿಗಳು ಮತ್ತು ಇನ್‌ಸ್ಟಿಟ್ಯೂಷನ್‌ಗಳಿಗೆ ಬಂದಿಯಾಗಿ ಬೆಳೆಯುತ್ತಾನೆ. ಧರ್ಮ, ಪರಂಪರೆ, ಸಂಪ್ರದಾಯ, ಸಾಮಾಜಿಕ ಪದ್ಧತಿಗಳು ಮನುಷ್ಯನ ಜೀವನವನ್ನು ನಿಯಂತ್ರಿಸಿ, ಅವನು ಒಂದು ವ್ಯವಸ್ಥಿತ ರೀತಿಯಲ್ಲಿ ಬಾಳುವೆ ಮಾಡುವ ಹಾಗೆ ಮಾಡುತ್ತವೆ. ಆದರೆ ಈ ಸಂಬಂಧಗಳನ್ನು ಆರ್ಥಿಕ ಉದ್ದೇಶಗಳು ಕ್ಷಣ ಮಾತ್ರದಲ್ಲಿ ನಿರ್ನಾಮ ಮಾಡುತ್ತವೆ ಎಂಬುದನ್ನು ಅಗ್ರಹಾರದ ಬ್ರಾಹ್ಮಣರು ನಾರಾಣಪ್ಪ ಸತ್ತ ಮೇಲೆ ತೋರಿಸುತ್ತಾರೆ. ಸಾವಿರಾರು ವರ್ಷಗಳಿಂದ ಬಂದಿರುವ ಧಾರ್ಮಿಕ ಪ್ರಜ್ಞೆ ಚಂದ್ರಿಯ ಒಡವೆಗಳ ಮುಂದೆ ಸತ್ವಹೀನವಾಗುತ್ತವೆ. ಎಲ್ಲ ಧರ್ಮಗಳೂ ಸುಳ್ಳು ಎಂದು ಹೇಳುವ ಬರ್ಟ್ರಂಡ್ ರಸೆಲ್ಲರ ವಾದದ ಸಾರ್ಥಕ ನಿರೂಪಣೆ ಇಲ್ಲಿ ಸಿಗುತ್ತದೆ. ಸಾಮಾನ್ಯ ಜನರ ಜೀವನದ ಮೇಲಿರುವ ಧಾರ್ಮಿಕ ಪ್ರಭಾವವನ್ನು ಇಷ್ಟು ಸುಲಭವಾಗಿ ಕಳಚುವ ಚಂದ್ರಿಯ ಒಡವೆಗಳು ಶೃಂಗೇರಿಯ ಗುರುಗಳಿಗೂ ಬೇಕಾಗುತ್ತವೆ. ಮಾರ್ಕ್ಸ್ ವಾದದ ಆಂಶಿಕ ಸತ್ಯವನ್ನು ಈ ಘಟನೆ ನಿರೂಪಿಸುತ್ತದೆ.

ಚಂದ್ರಿಯ ಒಡವೆಗಳು ಯಾರಿಗೆ ಸಲ್ಲಬೇಕು ಅಥವಾ ಯಾರಿಗೆ ಬೇಕು ಎಂಬುದನ್ನು ಸಂಬಂಧಪಟ್ಟ ಎಲ್ಲರೂ ಅವರವರ ಮನಸ್ಸಿನಲ್ಲಿ ಯಾವಾಗಲೋ ನಿರ್ಧರಿಸಿದ್ದರೂ, ಅವರೆಲ್ಲರೂ ಶೃಂಗೇರಿಗೆ ಅನವಶ್ಯಕ ಯಾತ್ರೆ ಮಾಡುತ್ತಾರೆ. ಅನವಶ್ಯ ಕಷ್ಟ ಕಾರ್ಪಣ್ಯಗಳನ್ನು ಅನುಭವಿಸುತ್ತಾರೆ. ಸಾಮೂಹಿಕವಾಗಿ ಎಲ್ಲರಿಗೂ ಧಾರ್ಮಿಕ ಸಂದೇಶ; ವೈಯಕ್ತಿಕವಾಗಿ ಎಲ್ಲರಿಗೂ ಒಡವೆ ಬೇಕು. ಬೇಕು ಎನ್ನುವ ಧೈರ್ಯವನ್ನು ಧರ್ಮ ಬಹುಪಾಲು ನಾಶಮಾಡಿದೆ ಅಷ್ಟೇ. ಅಂದರೆ, ಸಾಮೂಹಿಕ ನಡವಳಿಕೆಯನ್ನು ಧರ್ಮ ಪ್ರಭಾವಶಾಲಿಯಾಗಿ ಹತೋಟಿಯಲ್ಲಿ ಇಟ್ಟುಕೊಂಡಿದೆ. ಆದರೆ ವೈಯಕ್ತಿಕವಾಗಿ ಈ ಸಂಬಂಧ ತೀರಾ ತೆಳುವಾಗಿದೆ. ರಸೆಲ್ಲರ ವಾದ ಪರಿಪೂರ್ಣವಾಗಿ ಸತ್ಯ ಎನ್ನುವಷ್ಟರ ಮಟ್ಟಿಗೆ 'ಸಂಸ್ಕಾರ' ಧರ್ಮವನ್ನು ಅಲ್ಲಗಳೆಯುತ್ತದೆ. ಮೂಲ ಭೂತವಾಗಿ ಸಂಸ್ಕಾರದ ವಸ್ತು 'ಆಟ್ಯಾಕ್ ಆನ್ ರಿಲೀಜಿಯಸ್' ಎನ್ನಬಹುದು.

ಫ್ರಾಯ್ಡ್, ಕಾರ್ಲ್ ಮಾರ್ಕ್ಸ್, ರಸೆಲ್, ಈ ಮೂವರ ವೈಚಾರಿಕ ವಾದವನ್ನು, ಯಾರೊಬ್ಬರ ವಾದವನ್ನು ಸಂಪೂರ್ಣವಾಗಿ ಒಪ್ಪದೇ, (ಒಪ್ಪಿದ್ದರೆ ರಸೆಲ್‌ರ ವಾದವನ್ನು ಪೂರ್ಣವಾಗಿ ಒಪ್ಪಿದ್ದಾರೆಯೇ ?) ಯಾರೊಬ್ಬರ ವಾದವನ್ನೂ ಪೂರ್ಣವಾಗಿ ತಿರಸ್ಕರಿಸದೇ, ಪಾಲು ಪಾಲು ಪಾಲು ಸತ್ಯ ಈ ಮೂವರ ವಾದಗಳಲ್ಲೂ ಇದೆ ಎಂದು ಮನವರಿಕೆ ಮಾಡಿಕೊಂಡ ಒಬ್ಬ ವಿಚಾರ ಶೀಲ ಸಾಹಿತಿ ಹಿಂದೂ ಸಮಾಜದಲ್ಲಿ ಈ ವಾದಗಳ ವಾಸ್ತವಿಕತೆಯನ್ನು ನಿರೂಪಿಸಿದ್ದಾರೆ, 'ಸಂಸ್ಕಾರ' ದಲ್ಲಿ.

'ಸಂಸ್ಕಾರ' ಬ್ರಾಹ್ಮಣರನ್ನು ಅವಹೇಳನ ಮಾಡುವ ಕಥೆ ಎನ್ನುವ ವಾದ ಅರ್ಥಹೀನ, ಮೂರ್ಖವಾದ. ಸಂಸ್ಕಾರ ಬ್ರಾಹ್ಮಣರ ಕಥೆ ಎನ್ನುವುದು, ಸಂಸ್ಕಾರ ಕಾದಂಬರಿಯ ಮೂಲಭೂತ ವಸ್ತುವಿನ ದೃಷ್ಟಿಯಿಂದ ಗಮನಿಸಿದಾಗ ಆಕಸ್ಮಿಕ. ಅದು ಬ್ರಾಹ್ಮಣರ ಕಥೆಯೇ ಅಲ್ಲ. ಹಿಂದೂ ಸಮಾಜದ ಜೀವಂತ ಚಿತ್ರಣವೂ ಅಲ್ಲ. ಅದು ಜಗತ್ತಿನ ಎಲ್ಲಾ ಧರ್ಮಗಳೂ ಮನುಷ್ಯನ ಜೀವನದ ಮೇಲೆ ಮಾಡಿರುವ ಹಾನಿಯನ್ನು, ಅವನ ಜೀವನದ ಘನತೆ ಸೌಂದರ್ಯಗಳನ್ನು ಹೇಗೆ ಹಾಳುಮಾಡಿವೆ ಎಂಬುದನ್ನು ನಿರೂಪಿಸಿದೆ. ನಾನು ನಂಬುವ ಧರ್ಮಕ್ಕೂ ಅಥವಾ ನಾನು ಇಂತಹ ಧರ್ಮವನ್ನು ನಂಬಿದ್ದೇನೆ ಎನ್ನುವ ತಿಳುವಳಿಕೆಗೂ, ನನಗೂ ಇರುವ ಸಂಬಂಧ ನಾನು ವೈಯಕ್ತಿಕವಾಗಿಯೇ ನಂಬುವ ಮೌಲ್ಯವಲ್ಲ; ಅದು ನನ್ನಿಂದ ಏನೆಲ್ಲಾ ನಿರೀಕ್ಷಿಸುವ ಸಮಾಜಕ್ಕೆ ಒಪ್ಪಿಗೆಯಾಗುವ ರೀತಿಯಲ್ಲಿ ನಡೆದುಕೊಳ್ಳಬೇಕು ಎಂಬ ನನ್ನ ಎಚ್ಚರದ ಗಳಿಗೆಗಳ ನಿರ್ಧಾರ–(ನನ್ನ ಕನಸಿನ ವಸ್ತ್ರಗಳೇ ಬೇರೆ-ಬಯಕೆಗಳೇ ಬೇರೆ) ಈ ಸತ್ಯವನ್ನು ಸಂಸ್ಕಾರ ಮಾರ್ಮಿಕವಾಗಿ ನಿರೂಪಿಸುತ್ತದೆ.

ನನಗೆ ಗೊತ್ತಿರುವ ಹಾಗೆ ಇಷ್ಟು ಮಹತ್ವಪೂರ್ಣ ವಿಚಾರ ವಾದಗಳನ್ನು ಅಳವಡಿಸಿ ನಮ್ಮೆಲ್ಲರ ಆಷಾಢಭೂತಿತನ, ನಿಸ್ಸಹಾಯಕತೆ, ಸಾಮೂಹಿಕ ಮೂರ್ಖತನಗಳನ್ನು, ನಮ್ಮ ಸಮಾಜ ನಮ್ಮ ಧರ್ಮಗಳ ಹಿನ್ನೆಲೆಯಲ್ಲಿ ಒಂದು ದುರಂತ ಕಥೆಯನ್ನಾಗಿ ಹೆಣೆದಿರುವುದರಲ್ಲಿ ಸಂಸ್ಕಾರವೇ ಮೊಟ್ಟಮೊದಲನೇ ಯಶಸ್ವೀ ಪ್ರಯತ್ನ.

ಬಸವರಾಜ ಕಲ್ಗುಡಿ

ಎಸ್. ದಿವಾಕರ್ ಅವರ "ಇತಿಹಾಸ"

ದಿವಾಕರರ ಒಂಬತ್ತು ಕತೆಗಳು ಈ ಸಂಕಲನದಲ್ಲಿವೆ. ಎರಡು ಭಾಗಗಳಲ್ಲಿ ಕತೆಗಾರರು ಇಲ್ಲಿನ ಕತೆಗಳನ್ನು ಹಂಚಿದ್ದಾರೆ. ಈ ವಿಭಜನೆಗೆ ಮುಖ್ಯವಾಗಿ ಕಥೆಯನ್ನು ಹೇಳುವ ತಂತ್ರವೇ ಕಾರಣವಾಗಿರುವುದನ್ನು ಗುರುತಿಸ ಬಹುದು. ದೇಸಾಯಿಯವರು ಮುನ್ನುಡಿಯಲ್ಲಿ ಗುರು ತಿಸಿರುವಂತೆ–ಮೊದಲ ಭಾಗದಲ್ಲಿ 'ನಿತ್ಯ ಜೀವನಕ್ಕೆ ಸಮೀಪವೆನಿಸುವ ಪಾತಳಿಯ ಮೇಲಿನ ಕತೆಗಳಿದ್ದರೆ ಎರಡನೆಯ ಭಾಗದಲ್ಲಿ ಕಾಲ್ಪನಿಕ ಕತೆಗಳಿವೆ'. ಎರಡನೇ ಭಾಗದ ಕತೆಗಳಲ್ಲಿ ಬಹುಪಾಲು ಕತೆಗಳು Fantasy ಎಂದು ಕರೆಯಬಹುದಾದ ತಂತ್ರವನ್ನು ಒಳಗೊಂಡಿವೆ.

ದಿವಾಕರರ ಈ ಎರಡೂ ರೀತಿಯ ಕತೆಗಳಲ್ಲೂ ಮಾನವ ಪ್ರೇಮವನ್ನು ಗ್ರಹಿಸಲಾಗದ ನರಕ ಸದೃಶ ವಾತಾವರಣ ಚಿತ್ರಿತವಾಗಿದೆ. ಹೀಗಾಗಿ ಛಿದ್ರಗೊಂಡ ವ್ಯಕ್ತಿ ಇಲ್ಲಿ ಮುಖ್ಯ ಕೇಂದ್ರವಾಗಿದ್ದಾನೆ. 'ಕ್ರೌರ್ಯ' ಕತೆಯ ಅಲ ಮೇಲಾ, 'ಅನಾಥರು' ಕತೆಯ ವೃದ್ಧರು, 'ನೆಲೆ' ಕತೆಯ ಜಮಾ, 'ಒಂದು ಘಟನೆ' ಕತೆಯ ಸೂಳೆ,— ಹೀಗೆ ಬಹುಪಾಲು ಎಲ್ಲ ಕತೆಗಳಲ್ಲಿಯೂ ವ್ಯಕ್ತಿ ಕೇಂದ್ರೀ ಕೃತಗೊಂಡ ವಾತಾವರಣದ ಬೆಳವಣಿಗೆಗಳಿವೆ.

ಕತೆಗಳಲ್ಲಿನ ಈ ಮುಖ್ಯ ಎಳೆಯೊಂದನ್ನು ಹಿಡಿದ ನಂತರ ಅದರ ಹಿನ್ನೆಲೆಯಲ್ಲೇ ಚರ್ಚೆಯೊಂದನ್ನು ಪ್ರಾರಂಭಿ ಸೋಣ. ಇಲ್ಲಿನ ಈ ಕಥೆಗಳಲ್ಲೆಲ್ಲ ವ್ಯಕ್ತಿಯು ಅನಿವಾರ್ಯ ವಾಗಿ ಪರಿಸರದ ಅಧೀನನಾಗಿದ್ದಾನೆ. ಈ ಪರಿಸರ ಎಷ್ಟು ಮುಖಹೀನ, ನಿರ್ದಯವಾಗಿದೆಯೆಂದರೆ, ಪ್ರಾಮಾಣಿಕ, ಸಜ್ಜನ, ನಿಷ್ಕಪಟ ವ್ಯಕ್ತಿಗಳೂ ಇಲ್ಲಿ ನಿರ್ದಾಕ್ಷಿಣ್ಯವಾಗಿ ತಲೆ ಒಡೆಯಲ್ಪಡುತ್ತಾರೆ. ಅಲಮೇಲುವಿಗೆ ಆವಳ ಅತ್ಯಂತ ದಾರುಣಾವಸ್ಥೆಯಲ್ಲಿ ಹತ್ತಿರವಾಗುವ ಪಳನಿ ಚಾಮಿ, 'ಮೃತ್ಯುಂಜಯ' ಕತೆಯಲ್ಲಿಯ ಮೃತ್ಯುಂಜಯ –ಈ ವ್ಯಕ್ತಿಗಳು ತಮ್ಮ ಹೃದಯವಂತಿಕೆಯಿಂದಲೇ ಬಲಿ ಯಾದಂಥ ವ್ಯಂಗ್ಯವು ಕತೆಯಲ್ಲಿ ಮೂಡುತ್ತದೆ.

ಸೂಕ್ಷ್ಮವಾದ ಇಂಥ ಅಧೀನತೆಯ ಸ್ವರೂಪಗಳು ಇಲ್ಲಿಯ ಕತೆಗಳನ್ನು ನವ್ಯ ಕತೆಗಳ ಪ್ರಧಾನವಾದ ಧ್ವನಿ ಯಿಂದ ಬೇರೆಯಾಗಿಸುತ್ತವೆ. ನವ್ಯ ಕತೆಗಳಲ್ಲಿ ವ್ಯಕ್ತಿ ಮತ್ತು ಪರಿಸರಕ್ಕಿರುವ ಸಂಬಂಧವು ಪರಸ್ಪರ ವಿರೋಧ ವನ್ನು ಒಳಗೊಂಡಿರುವಂಥದ್ದಾಗಿದೆ. ಒಂದರ್ಥದಲ್ಲಿ ಈ ಕತೆಗಳು ಸಾಂಪ್ರದಾಯಕ ಸಂಸ್ಕೃತಿಯೊಂದರ ಮೌಲ್ಯ ಗಳನ್ನು ಒಪ್ಪದ, ಆದರೆ ಪಾಶ್ಚಾತ್ಯ ಪ್ರಭಾವದಿಂದ ರೂಪುಗೊಳ್ಳುತ್ತಿದ್ದ ಜೀವನ ವಿಧಾನವನ್ನು ವಿಮರ್ಶನ ದೃಷ್ಟಿಯಿಂದ ನೋಡುವ ಆತಂಕಭರಿತ ವ್ಯಕ್ತಿಯೊಬ್ಬ ನನ್ನು ಕೇಂದ್ರವನ್ನಾಗಿ ಮಾಡಿಕೊಂಡವು. ನವ್ಯ ಮಾರ್ಗದ ಪ್ರಮುಖ ಸಾಹಿತಿಗಳೆಲ್ಲರಲ್ಲಿ ಇದು ಪ್ರಧಾನವಾದ ಧೋರಣೆಯೇ ಆಗಿರುವುದನ್ನು ಗ್ರಹಿಸಬಹುದು. ಇನ್ನೊಂದು ರೀತಿಯಲ್ಲಿ ವಿವರಿಸಂವುದಾದರೆ, ಭಾರತದ ಬದುಕಿನಲ್ಲಿ ಚಿಗುರೊಡೆಯಲು ಪ್ರಾರಂಭವಾಗಿದ್ದ ಬದು ಕಿನ ಸಂಕ್ರಮಣ ಅವಸ್ಥೆಯ ಗತಿತರ್ಕವನ್ನು ಇವು ಗ್ರಹಿಸಿ ದವು ಎಂದೇ ಹೇಳಬೇಕು. ಯಾವುದೇ ಪ್ರಮುಖ ನವ್ಯ ಕತೆಗಾರರನ್ನು ನೋಡಿದರೂ ಈ ಅಂಶವು ಸ್ಪಷ್ಟಗೊಳ್ಳು ತ್ತದೆ. ಆದ್ದರಿಂದಲೇ ಒಂದು ಚಾರಿತ್ರಿಕ ಸನ್ನಿವೇಶದಲ್ಲಿ ಒಡಮೂಡುವ ಇಲ್ಲಿನ ಕತೆಗಳ ವ್ಯಕ್ತಿಯು ತನ್ನ ಅಸ್ತಿತ್ವ ಕ್ಕಾಗಿ, ಐಡೆಂಟಿಟಿಗಾಗಿ ತಹತಹಿಸುವವನು.

ದಿವಾಕರರ ಕತೆಗಳಲ್ಲಿ ವ್ಯಕ್ತಿಯು ತನ್ನ ಪರಿಸರಕ್ಕೆ ಅಧೀನವಾಗಿ ಬಿಟ್ಟಿದ್ದಾನೆ. ಮಾನವ ಸಂಬಂಧಗಳು, ಪ್ರೇಮದ ವಾತಾವರಣವು; ಸಾಧ್ಯವಾಗದೇ ಇರುವ ವಾತಾವರಣವು ಈ ಕತೆಗಳ ಮುಖ್ಯ ಭಿತ್ತಿಯಾಗಿವೆ. ಈ ಅರ್ಥದಲ್ಲಿಯೇ ನವ್ಯ ಕತೆಗಳ ಮುಖ್ಯ ಧೋರಣೆಗಳಿ ಗಿಂತ ಇವುಗಳು ಬೇರೊಂದು ನೆಲೆಯನ್ನು ಹೊಂದಿರು ವುದನ್ನು ಗಮನಿಸಬಹುದಾಗಿದೆ. ದಿವಾಕರರ ಕತೆಗಳು ನವ್ಯಕತೆಗಳ ಕೆಲವು ಸೂತ್ರಗಳಿಂದ ಭಿನ್ನವಾಗಿರುವುದು ಸ್ವಾಗತಾರ್ಹವೇ.

ಈ ವಿಭಿನ್ನತೆಯೇ ಇವರ ಕತೆಗಳ ವಿಶಿಷ್ಟ ಅಂಶವಾಗಿರುವಂತೆ, ಅನೇಕ ಮಿತಿಗಳು ರೂಪುಗೊಳ್ಳಲಿಕ್ಕೂ ಕಾರಣವಾಗಿದೆ ಎನ್ನಬಹುದು. ಮನುಷ್ಯ ಸಂಬಂಧಗಳಲ್ಲಿ ಮಾನವೀಯ ಅಂಶಗಳನ್ನು ಹುಡುಕುವ ಇವರ ಪ್ರಯತ್ನವು, ಅದರ ನೆಗೆಟಿವ್ ಅಂಶಗಳನ್ನು ಕಾಣುತ್ತದೆ. ಆದರೆ ಈ ನೆಗೆಟಿವ್ ಸ್ವರೂಪಗಳು ಕಥೆಗಳ ಒಡಲಲ್ಲಿ ಪ್ರಕಟಗೊಳ್ಳುವ ಬಗೆ ಹೇಗೆ? ಈ ಅಮಾನವೀಯ ಕೌರ್ಯ ಮನುಷ್ಯನಲ್ಲಿ ಪ್ರಕಟಗೊಳ್ಳುವ ನೆಲೆಗಳು ಕೇವಲ ಆಕಸ್ಮಿಕವಲ್ಲ. ಆಳದಲ್ಲಿ ಇವುಗಳನ್ನು ಪ್ರೇರಿಸುವ –ಸಾಮಾಜಿಕವೆನ್ನಿ, ರಾಜಕೀಯವೆನ್ನಿ, ಆರ್ಥಿಕವೆನ್ನಿ– ಹೀಗೆ ಪಲವು ಪ್ರೇರಕ ಶಕ್ತಿಗಳು ಇರದಿರಲು ಸಾಧ್ಯವಿಲ್ಲ. ಜೀವನದ ಈ ನಿಷ್ಠುರ ಗತಿಯ ಸ್ವರೂಪವನ್ನು ಇಲ್ಲಿಯ ಕತೆಗಳಲ್ಲಿ ಹಿಡಿದಿಡಲು ಸಾಧ್ಯವಾಗಿಲ್ಲ. ಚರಿತ್ರೆಯ ಗತಿಯಲ್ಲಿ ಇಂಥ ಸ್ವರೂಪವನ್ನು ಹಿಡಿದಿಡುವಲ್ಲಿಯೇ ಅತ್ಯಂತ ಶಕ್ತಸಾಧ್ಯವಾದ ಕಲೆಯೊಂದು ಹುಟ್ಟಲು ಸಾಧ್ಯ.

ವಿಷಾದದ ಎಳೆಗಳು, ಅನುಕಂಪದ ನೆಲೆಗಳು–ಮುಂತಾದ ಭಾವನೆಗಳು ಈ ಕತೆಗಳಲ್ಲಿ ಮುಖ್ಯವಾದ ಧಾಟಿಯಾಗಿವೆ. ಹೀಗಾಗಿ ಓದುಗನನ್ನು ಈ ನೆಲೆಗಳಿಗೆ ಕೊಂಡೊಯ್ಯುವತ್ತ ಕಥೆಯ ಹಂದರವು ದುಡಿಯುತ್ತದೆ. 'ಕ್ರೌರ್ಯ,' 'ಮೃತ್ಯುಂಜಯ', 'ಅನಾಥರು.' 'ಒಂದು ಘಟನೆ'– ಮುಂತಾದ ಕಥೆಗಳನ್ನು ಗಮನಿಸಬಹುದು. ನನ್ನ ಮಾತುಗಳನ್ನು ಇನ್ನೂ ವಿವರಿಸುವುದಕ್ಕಾಗಿ 'ಕ್ರೌರ್ಯ' ಕತೆಯನ್ನೇ ಇಲ್ಲಿ ವಿವರವಾಗಿ ನೋಡಬಹುದು. ಅಲಮೇಲು, ಅವಳ ತಂದೆ ತಾಯಿ, ಹಾಗೂ ಸ್ಲಮ್ಮಿನ ಪಳನಿಚಾಮಿ ಈ ಮೂವರಲ್ಲಿ ಕಥೆಯು ಸುತ್ತುತ್ತದೆ.

ಅಲಮೇಲು ಕುಂಟಿಯಾದ ಕಾರಣ ಕಥೆಯ ಒಟ್ಟು ಆಶಯವನ್ನು ನಿರ್ಧರಿಸುತ್ತದೆ. ಈ ಕಾರಣಕ್ಕಾಗಿ ತಂದೆ ತಾಯಿಯರಿಂದ ತಿರಸ್ಕರಿಸಲ್ಪಟ್ಟ ಅಲಮೇಲುವಿನ ಪಾತ್ರ ಓದುಗನ ಅನುಕಂಪೆಯನ್ನು ಗಳಿಸಲು ಪ್ರಾರಂಭಿಸುತ್ತದೆ. ಕತೆಯ ಅಂತ್ಯದಲ್ಲಿಯೂ ಪಳನಿಚಾಮಿಯ ಘಟನೆ, ಕೇವಲ ಪ್ರೇಮ, ತಿರಸ್ಕಾರಗಳ ವೈರುಧ್ಯವನ್ನು ತೋರಿಸಲಿಕ್ಕಾಗಿ ತಂದದ್ದೆಂದು ಅನ್ನಿಸುತ್ತದೆ.

ಮೇಲೆ ಉದಾಹರಿಸಿದ ಇನ್ನು ಮೂರು ಕಥೆಗಳೂ ಸಹ ಸತ್ವಯುತವಾದ ಆಶಯಗಳನ್ನು ಹೊಂದಿದ್ದೂ ರಚನೆಯಲ್ಲಿ ಅದನ್ನು ಸಾಧಿಸಲಾಗದೇ ಹೋಗಿವೆ. 'ಅನಾಥರು' ಕೇವಲ ವಿವರಗಳ ಸರಮಾಲೆಯಾಗಿದೆ. 'ಮೃತ್ಯುಂಜಯ' ಕಥೆಯ ಕಥಾವಸ್ತು ವ್ಯಕ್ತಿಯು ಬದುಕು ಹಾಗೂ ಸಮಾಜದ ಸ್ವರೂಪವನ್ನು ಕುರಿತ ಹಾಗೆ ನೋಡಬಹುದಾದ ಅನೇಕ ನೆಲೆಗಳನ್ನು ಒಳಗೊಂಡಿದೆಯಾದರೂ ಕತೆಗಾರರ ದೃಷ್ಟಿಯೊಂದು ಕೇಂದ್ರೀಕೃತಗೊಳ್ಳಿವುದು, ರಾಧೆ ಹಾಗೂ ಮೃತ್ಯುಂಜಯರ ಬಗ್ಗೆ ಓದುಗರ ಅನುಕಂಪೆ ಹಾಗೂ ಮರುಕಗಳು ನೆಲೆಗೊಳಿಸುವುದರ ಕಡೆಗೆ. ಇದರಾಚೆಗೆ ಕತೆಗಾರರು ಓದುಗನನ್ನು ಎಳೆದೊಯ್ಯುವುದಿಲ್ಲ. ರಾಧೆ, ಮೃತ್ಯುಂಜಯರ ದುರಂತವು ಕೇವಲ ಪಾಶವಿಕ ಪ್ರವೃತ್ತಿಯ ಕಾರಣದಿಂದಲೇ ಉಂಟಾದದ್ದೇ? ಕಥೆ ಇಷ್ಟೇ ಎನ್ನುವುದಾದರೆ ಅಷ್ಟರ ಮಟ್ಟಿಗೆ ಕಥೆಯ ಆಶಯಕ್ಕೆ ಅದು ದೊಡ್ಡ ಮಿತಿಯೆಂದು ಹೇಳಬಹುದು. ಕೇವಲ ಪಾಶವಿಕ ಪ್ರವೃತ್ತಿಯ ಘಟನೆಗಳು ಎಂಥ ಅರ್ಥಹೀನ ಸಂಗತಿಗೂ ಎಡೆಮಾಡಬಹುದು. ಸಾಮಾನ್ಯ ಪತ್ತೇದಾರಿ ಕತೆಯೂ ಇಂಥ ಘಟನೆಯೊಂದನ್ನು ಬಹಳ ಶಿಸ್ತಿನಿಂದ ಹೇಳಬಲ್ಲುದು.

'ಇತಿಹಾಸ' ಎನ್ನುವ ಕಥೆ ಈ ಸಂಕಲನದ ಉತ್ತಮ ಕತೆ ಎಂದು ಹೇಳಬಹುದು. ದುಷ್ಟ ವ್ಯವಸ್ಥೆಯೊಂದರ ಮುಂದುವರಿದ ರೂಪವಾಗಿ ಕಾಣಬರುವ ಗುರಪ್ಪ ಇತಿಹಾಸ ಹಾಗೂ ವರ್ತಮಾನವನ್ನು ಜೋಡಿಸುವ ಶಕ್ತಿಯಾಗಿಯೇ ಕಾಣುತ್ತಾನೆ. ಸದಾನಂದನಿಗೆ ಒದಗುವ ಅನುಭವಗಳೆಲ್ಲ ಈ ಶಕ್ತಿಯೊಂದರ ದರ್ಶನ ಮಾಡಿಸುತ್ತವೆ. ಕತೆಯ ಪ್ರತಿ ವಿವರ ಹಾಗೂ ಘಟನೆಗಳು ಕಥಾ ಚೌಕಟ್ಟಿಗೆ ಪೂರಕವಾಗಿದ್ದು ಸಮರ್ಥವಾದ ಬಂಧವನ್ನು ರೂಪಿಸುತ್ತವೆ.

'Fantasy'ಯ ತಂತ್ರವನ್ನು ಒಳಗೊಂಡ ಕತೆಗಳಲ್ಲಿ, ಕತೆಗಳು ಓದುಗನ ವಿಸ್ಮಯಲೋಕವನ್ನು ಬಡಿದೆಬ್ಬಿಸಿ, ನಂತರ ಕುತೂಹಲ, ಯೋಚನೆಗಳಿಗೆ ಅವಕಾಶಮಾಡಿಕೊಡುವುದರ ಬದಲು, ಅತ್ಯಂತ ಜಾಣತನದ ಜೋಡಣೆಯಾಗಿಯೇ ಕಾಣುತ್ತವೆ. 'ಕಾಲನೇಮಿ', 'ಪ್ರಾಣದೇವರು' ಮುಂತಾದ ಕತೆಗಳಲ್ಲಿ ಕೇವಲ ಶುಷ್ಕ ರೂಪಕದ ನೆಲೆಯೇ ಪ್ರಧಾನವಾದ ಪಾತ್ರ ವಹಿಸುವುದರಿಂದ ಕಥೆಗಳ ಯಶಸ್ಸಿಗೆ ಅಷ್ಟರಮಟ್ಟಿಗೆ ಕುಂದುಂಟಾಗಿದೆಯೆಂದೇ ಹೇಳಬೇಕು. 'ಹಾರುವ' ಹಾಗೂ 'ಹೃದಯಗಳ

ಸಾಮಾಜಿಕ ಸ್ಥಾನಗಳು' ಮೇಲಿನ 'ಕಾಲನೇಮಿ'-'ಪ್ರಾಣ ದೇವರು' ಈ ಎರಡೂ ಕತೆಗಳನ್ನು ಅತ್ಯಂತ ಸರಳವಾದ, ತರ್ಕವಿನ್ಯಾಸವೊಂದರಿಂದ ವಿವರಿಸುವ ಹಾಗೆ ಮಾಡಿ ಬಿಡುತ್ತವೆ ಎನ್ನಿವುದು ಇವುಗಳ ಮಂಡಿಸ್ಯ ಕೊರತೆ ಯಾಗಿದೆ.

ಒಟ್ಟಾರೆ-'ನವ್ಯಪರಂಪರೆಯ ಬಹುಶಃ ಕೊನೆಯ ಘಟ್ಟಕ್ಕೆ ಸೇರಿದ ಕತೆಗಳು' ಎಂದು ಮುನ್ನುಡಿಯಲ್ಲಿ ಪೇಳುವ ಶಾಂತಿನಾಥ ದೇಸಾಯಿಯವರ ಮಾತುಗಳನ್ನು ಒಪ್ಪಲು ಸ್ವಲ್ಪ ಕಷ್ಟವಾಗುತ್ತದೆ ಎನ್ನುವುದು ಮೇಲಿನ ನನ್ನ ವಿವರಣೆಯಿಂದ ಸ್ಪಷ್ಟಗೊಳ್ಳುತ್ತದೆ ಎಂದುಕೊಳ್ಳುತ್ತೇನೆ. ಆದರೆ ನವ್ಯ ಪರಂಪರೆಯ ಹಾದಿಯಿಂದ ಅತ್ಯಂತ ಸಫಲವಾಗಿ ಭಿನ್ನರಾದ ತೇಜಸ್ವಿ, ದೇವನೂರು, ಚಿತ್ತಾಲ ಮುಂತಾದವರ ಕತೆಗಳಂತೆ ಇವು ಯಾಕೆ ಸಫಲವಾಗುವುದರಲ್ಲಿ ಹೆಚ್ಚು ಯಶಸ್ಸುಗಳಿಸುವುದಿಲ್ಲ ಎನ್ನುವ ಯೋಚನೆಯನ್ನು ಮೇಲಿನ ವಿಮರ್ಶೆಯಲ್ಲಿ ವಿವರಿಸಲು ಪ್ರಯತ್ನಿಸಿದ್ದೇನೆ. 'ಇತಿಹಾಸ' ಕಥೆಯು ಸಮಸ್ಯೆಯ ಬಿಗಿ, ಹಾಗೂ ಅದನ್ನು ಕಟ್ಟಿಕೊಡುವ ಸಮರ್ಥ ವಿನ್ಯಾಸದಿಂದ ಸಂಕಲನದಲ್ಲೇ ಭಿನ್ನವೆನಿಸುವ, ಉತ್ತಮವೆನಿಸುವ ಕತೆಯಾಗಿದೆ.

ಕೆ. ನರಸಿಂಹಮೂರ್ತಿ

ವೀಚಿ ಅವರ "ಸಂಕರತಳಿ"

ತಮ್ಮ ಮೂರನೇ ಕವನಸಂಕಲನದಲ್ಲಿ 'ಪರಿವೆ' ಯಂಥ ಪೂರ್ಣಯಶಸ್ವಿಯಾದ ಒಂದೆರಡು ಕವನಗಳಲ್ಲಿಯೂ ಉಳಿದ ಕವನಗಳಲ್ಲಿ ಹೆಚ್ಚಿನವುಗಳ ಉದ್ದಕ್ಕೂ ಅಲ್ಲಲ್ಲಿ ಮಿಂಚಿ ಕಣ್ಸೆಳೆವ ಸಾಲುಗಳಲ್ಲಿಯೂ ಶ್ರೀ ವೀಚಿ ತಮ್ಮ ಭವಿಷ್ಯದ ಬಗ್ಗೆ ಭರವಸೆ ಹುಟ್ಟಿಸುತ್ತಾರೆ. ಅವರ ಪ್ರೇಮಕವನಗಳಲ್ಲಿ 'ಪ್ರಣಯಭೂಮಿ' ಎಂಬ ಸುನೀತ ಆಕರ್ಷಕವಾಗಿದೆ.

'ಸುಖದ ಮುಖಕೆ ಸಂತೋಷ ಲಿಪಿಗಳಂತಿರುವ
ಕಣ್ಣ ತೆರೆದು
ಹಂಚ್ಚಿದ್ದ ಜಲಧಿ ದಡಹುಡುಕಿದಂತೆ ಪಿಸುಗುಡುವ
ತುಟಿಯ ಕರೆದು...
ಗದ್ದೆಕಬ್ಬನಲಿ ಸುಳಿದ ಅವಳ ಆ ಹುಚ್ಚಿನಲ್ಲಿ ಹಬ್ಬ ;
ತೃಪ್ತಿ ವೃತ್ತವಾಗಿದ್ದ ಚಂದ್ರ ಕ್ಷಿತಿಜದಲಿ ನಗುವ ಬಿಂಬ'

'ಜಿಜ್ಞಾಸೆ', 'ಘನತೆ', 'ಯಾವ ಗಳಿಗೆಗೂ ಏನೊ' ಮುಂತಾದ ಕವನಗಳಲ್ಲಿ ವೀಚಿ ಸಾಮಾಜಿಕ ಸಮಸ್ಯೆಗಳ ಕಡೆ ಗಮನ ಹರಿಸಿ 'ನಿಜನಾಯಕನ ಬರವಿಗಾಗಿ', 'ಉಳಿದಾವು ಕನಸು' ಮುಂತಾದ ಕವನಗಳಲ್ಲಿ ಅವುಗಳ ಪರಿಹಾರದ ಕಡೆ ಚಿಂತಿಸುತ್ತಾರೆ :

'ಮೂರು ಹೊತ್ತೂ ಮೂಗಿಗೆ ಕವಡೆ ಕಟ್ಟಿಕೊಂಡು
ಗೆಯ್ದು ಕಂಬ ಸುತ್ತಿದರು
ನೀಸದು ಹೊಟ್ಟೆ'

'ವೀರಮಂಡಿಯ ಮುದುಕ...
ಒಳ ಹೊರಗಿನ ಪಟ್ಟಿ ಪಾಲಿಯ ವಿರುದ್ಧ
ಹೋರಾಡಬೇಕೆಂದು ಕರೆಕೊಟ್ಟು
ನಾನು ಹುಟ್ಟುವ ಮೊದಲೆ
ನಾಡುದ್ದ ನಾಡಗಲ ನಡೆದನಂತೆ'

'ಮರಳ ಮನೆ ಭಾವನೆಗೆ ಬೆಳ್ಳಿ ತಗಡಿನ ಹೊದಿಕೆ'

ಆದರೆ ಇವು ಯಾವುವೂ ಒಟ್ಟಾರೆ ಪರಿಣಾಮಕಾರಿಯಾಗಿ ಸ್ವಸಂಪೂರ್ಣವಾದ ಕಾವ್ಯವಾದ ನಿಲ್ಲುವುದಿಲ್ಲ. ಅವರ 'ಅಂತರಾತ್ಮನಿಗೆ' ಮುಂತಾದ ಅಧ್ಯಾತ್ಮಿಕ ಕವನಗಳೂ ತುಂಬಾ ತೆಳುವಾದುವು ಎನಿಸುತ್ತದೆ. 'ಬಿದಿರ ಕೊಳಲಾಗಿಸುವ' ಕೌಶಲ್ಯ 'ಕಟ್ಟು ಹರಿದ ಪಂಜ ಒಟ್ಟುಗೂಡಿಸಿ ಪುಂಜವಾಗಿಸುವ ಜಾಣ್ಮೆ' ಇನ್ನಷ್ಟು ಬೆಳೆಯಬೇಕೆನ್ನಿಸುತ್ತದೆ. ಹಲವು ಕವನಗಳಲ್ಲಿ ಅಲ್ಲಲ್ಲಿ ಗಮನ ಸೆಳೆಯುವ ಗಟ್ಟಿಸಾಲುಗಳು ಅವರು ಬೇಗ ಬೇಗ ಇಂಥ ಕೌಶಲ್ಯವನ್ನು ಸಾಧಿಸುತ್ತಿದ್ದಾರೆ ಎನ್ನುವುದಕ್ಕೆ ಪುರಾವೆ ಒದಗಿಸುತ್ತವೆ :

'ನೀಲಿ ಗುಮ್ಮಟದ ನಾಲಗೆಯಾದ ಸಿಡಿಲಿಗಾರಯ್ಯ
ಎದುರು ?'

'ಮೀನುಗಾರಳ ಹಿಂದೆ ಬಿದ್ದ ಸಂತಮನಸು
ಮುಪ್ಪ ಹೊಸತಿಲಿನಲ್ಲು ಹಗಲುಗನಸು
ಯಾಕೆ ಯಾಕೀ ಯಯಾತಿಯ ಸೆಳೆತ....'

'ಪ್ರೀತಿಗೊಂದೇ ಮುಖವು, ದ್ವೇಷಕ್ಕೆ ಹಲವಾರು'

'ನನಸಾಗಿಯೂ ಸಡುವ ಕನಸು'

'ಸತ್ತು ಉಳಿದವರ ನಲ್ಲೆ, ಇದ್ದು ಸತ್ತರನೊಲ್ಲೆ'

'ನಿವ್ವಳ ನಿಜಾಕಾರ ಖಚಿತಗೊಳ್ಳುವ ಹಗಲು'

'ಸಪ್ತಸಾಗರದ ನಡುಗೋಟೆ ನೆಲ ಮನೆಯಲ್ಲಿ
ತಂದ ಪಣ್ಣೊಳಗೆ ತಕ್ಷಕನಾಗಿ ತಲೆಯೆತ್ತಿ'

ಈ ಸಂಕಲನದಲ್ಲಿ ಯಶಸ್ವಿ ಎನಿಸುವ ಕವನಗಳು 'ಪರಿವೆ' ಮತ್ತು 'ಸುಯಲ್ಲು'. 'ಪರಿವೆ'ಯಲ್ಲಿ ಮಾನಸಿಕ ಸೂಕ್ಷ್ಮಗಳನ್ನು ಅಭಿವ್ಯಕ್ತಿಸಿರುವ ಕಲೆ ಮೆಚ್ಚುವಂಥದು.

'ಸಹಕರಿಸಿದಷ್ಟು ಕಹಿ ಸಹ್ಯವಾಗುವ ಶಂಕೆ
ನಿರಾಕರಣೆ ಎನ್ನುವೀ ನಂಜು ತುಂಬಿದ ಬಯಕೆ'

'ಕ್ರಿಯೆಯ ಕೊಲ್ಲುವ ನೋವು' ಈ ಕವನದಲ್ಲಿ ಮಾರ್ಮಿಕವಾಗಿ ಮಾಡಿದೆ. ಈ ಕವನದ ಪಾಠ :

'ಆಕಾಶ ಶ್ರೀತಿ ಸಲುವಂತೆ ಇರುವೆಲ್ಲಕ್ಕೂ
ಸಲ್ಲಬೇಡವೆ ನಮ್ಮ ದಿಲ್ಲಿ ಇರುವೆಲ್ಲಕ್ಕು?'

'ಬೆಟ್ಟಗುಡ್ಡಕ್ಕಿರಲಿ ತುಹಿನಗಿರಿ ಪರಿವೆ' ಎಂದು ಹೇಳುತ್ತ ಶ್ರೀ ವೀಚಿ ಇಂತಹ ಪರಿಜ್ಞಾನ ಇಲ್ಲದಿದ್ದರೆ ಆಗುವ ದುರಂತವನ್ನೂ ಸೂಚಿಸುತ್ತಾರೆ :

'ದಶರಥನ ಬೇಡಿದಳು ಕಿರಿಯ ಹೆಂಡತಿ ಮುನಿದು
ವರ ಪಡೆದ ಹೊತ್ತಿನಲೆ ರಾಣಿ ವಿಧವೆ.'

ಈ ಕವನದ ಒಟ್ಟು ಶಿಲ್ಪ ಮತ್ತು ಭಾಷೆಯು ಸಂಯುವು ಮತ್ತು ಭಾವ, ಚಿಂತನೆ ಮತ್ತು ಅಭಿವ್ಯಕ್ತಿ ಒಮ್ಮೊಗೇ ಸಾಧಿತವಾಗಿರುವ ರೀತಿ ಈ ಕವನದ ಯಶಸ್ಸಿಗೆ ಕಾರಣವಾಗಿದೆ.

'ಸುಯ್ಲು'ವಿನ ಪ್ರಾರಂಭ ಸುಂದರವಾದ ಒಂದು ಚಿತ್ರ :

'ಕನ್ಯಾಕುಮಾರಿ ನಿಜನಡು ಹಿಡಿಯಲು
ಅಲೆ ಅಲೆ ಮೇಲೆ ಜಲಕ್ರೀಡೆ
ಸಾಗರ ಸಪಸ್ರಬಾಹು.
ಪೈಸಲಿಗೆ
ಅಪ್ಪಮಿಯ ಚಂದ್ರ ಗೋಡಂಬಿ ಮುರುಕು'

ಅದರ ಮುಕ್ತಾಯ 'ಗುಪ್ತ ಜಗದ' 'ಘನಸಿರಿ'ಯಂ ಅರಸುವಿಕೆಯ ಸುಯ್ಲಿನ ಸೂಚನೆ :

'ಕಡಲಲ್ಲಿ ಕಳೆದುಂಗುರವ
ದಡದಲ್ಲಿ ಹುಡುಕಿದರು
ಮುಲುಗುಟ್ಟಿ ಪೈಮೆರೆದ ಮಿಂಚು ನಿಲುವ
ಮಳೆ ಸುರಿಸಿ ಹೋದಂಥ ಮುಗಿಲ ಒಲವ,
ಹುಡುಕಿದರು
ಕಣ್ಮರೆಯ ಘನಸಿರಿಯ ಗುಪ್ತ ಜಗವ.'

'ಪರಿವೆ'ಯಂತೆ ಪೂರ್ಣ ಯಶಸ್ವಿಯಾಗದಿದ್ದರೂ 'ಸುಯ್ಲು' ಈ ಸಂಕಲನದ ಉಳಿದ ಕವನಗಳಲ್ಲಿ ಹೆಚ್ಚು ಆಕರ್ಷಕ.

ಇನ್ನೂ ಸಾಧನೆಯ ಹಂತದಲ್ಲಿರುವ ಶ್ರೀ ವೀಚಿಯವರ ಮುಂದಿನ ಕಾವ್ಯ 'ಪರಿವೆ'ಯಲ್ಲಿ ಅವರು ಕಾಣಿಸಿರುವ ಗಟ್ಟಿಗುಣಗಳನ್ನು ಹೆಚ್ಚು ಬೆಳೆಸಿಕೊಳ್ಳುವುದೆಂದು ನಿರೀಕ್ಷಿಸಬಹುದು.

ಡಾ|| ಅಶೋಕ ರಾ. ಕೇಳಕರ

ಪ್ರಾಚೀನ ಭಾರತೀಯ ನಾಟ್ಯ ಮೀಮಾಂಸೆ

(ಅನುವಾದ : ಡಾ|| ಶಾಂತಿನಾಥ ದೇಸಾಯಿ)

[ಸೂಚನೆಗಳು : (೧) ಈ ಲೇಖನದಲ್ಲಿ ಪ್ರಾಚೀನ ಭಾರತೀಯ ವಿಚಾರಗಳನ್ನು < > ಹೀಗೆ ಕೋನಗಳಿದ್ದ ಕಂಸಗಳಲ್ಲಿಟ್ಟು ಬೇರೆಯಾಗಿ ತೋರಿಸಲಾಗಿದೆ. ಹೀಗೆ ಮಾಡುವಾಗ ಮೂಲ ಸಂಸ್ಕೃತದಲ್ಲಿದ್ದಂಥ ಪದಗಳನ್ನು ಶಕ್ಯವಿದ್ದಷ್ಟು ಉಪಯೋಗಿಸುವ ಧೋರಣೆ ಇಟ್ಟುಕೊಂಡದ್ದಾಗಿದೆ. (೨) ಟಿಪ್ಪಣಿಗಳಲ್ಲಿ ಎರಡು ಪ್ರಕಾರಗಳಿವೆ : (ಅ) ದುಂಡು ಕಂಸಗಳಲ್ಲಿ ಅಂಕಿ ಬರೆದು ಕೋನಗಳಿದ್ದ ಕಂಸಗಳಲ್ಲಿಯ ವಿಚಾರಗಳಿಗೆ ಆಧಾರಕೊಡುವ ಸಂಸ್ಕೃತ ಸಂದರ್ಭ ತೋರಿಸಿದ್ದಾಗಿದೆ. (ಬ) ಚೌಕು ಕಂಸಗಳಲ್ಲಿ ಅಂಕಿ ಬರೆದು ಉಳಿದ ಟಿಪ್ಪಣಿಗಳನ್ನು ಕೊಡಲಾಗಿದೆ. (೩) ಸ್ಪಷ್ಟೀಕರಣಕೋಸ್ಕರ ಸ್ವಂತ ಪದಗಳನ್ನು ಬಳಸಿದ್ದಲ್ಲಿ ಅವುಗಳನ್ನು ಸಿಂಗಲ್ ಅವತರಣಚಿಹ್ನೆಗಳಲ್ಲಿ ಇಡಲಾಗಿದೆ]

ನಾಟ್ಯ ಪ್ರಕ್ರಿಯೆಯ ಸ್ವರೂಪ

< ನಾಟ್ಯಪ್ರಕ್ರಿಯೆಯೆಂದರೆ ಒಂದು ಹೊಡಕಿನ ಪ್ರಕ್ರಿಯೆ. ಕಾಲಕ್ರಮದ ಪ್ರಕಾರ ಈ ಪ್ರಕ್ರಿಯೆಗೆ ಮೂರು ಘಟ್ಟಗಳಿವೆ–ಕವಿಕರ್ಮ, ಪ್ರಯೋಗಾಲಂಕಾರ ಮತ್ತು ಆಸ್ವಾದನೆ. ಈ ಮೂರೂ ಪ್ರಕ್ರಿಯೆಗಳು ಒಂದರ ನಂತರ ಇನ್ನೊಂದಾಗಿ ನಡೆಯುತ್ತವೆ ಎಂದು ನಾವು ಸೌಲಭ್ಯದ ದೃಷ್ಟಿಯಿಂದ ತಿಳಿದುಕೊಳ್ಳೋಣ. ಇವುಗಳಲ್ಲಿಯ ಪ್ರತಿಯೊಂದು (ಉಪ) ಪ್ರಕ್ರಿಯೆಯನ್ನು ತೆಗೆದು ಕೊಂಡರೆ ಅವುಗಳಲ್ಲಿ 'ಪ್ರಕ್ರಿಯಾಕ್ಷಮ'ವಾದ ಒಂದು ವಿಷಯವಿದ್ದುದು ಕಂಡುಬರುವದು ; ಎರಡನೆಯದಾಗಿ, ಈ ವಿಷಯಕ್ಕೆ ಅಭಿಮುಖವಾಗಿ 'ಕರ್ಮಪ್ರವಣ'ನಾದ ಕರ್ತೃವಿದ್ದುದು ಕಂಡುಬರುವದು ; ಮೂರನೆಯದಾಗಿ, ಇವೆರಡರಲ್ಲಿಯೂ ಶಕ್ತಿಸಂಚಾರವಾಗಿ ಉದ್ಭವಿಸಿದ ಕರ್ಮ ನಮಗೆ ಪ್ರತ್ಯಕ್ಷವಾಗಿ ಕಾಣುವದು ; ಮತ್ತು ನಾಲ್ಕನೆಯದಾಗಿ, ಈ ಶಕ್ತಿಯ ವಾರಸವನ್ನು ಪಡೆದಂಥ ಕರ್ಮದ ಫಲಿತ ನಮಗೆ ಕಾಣಿಸುತ್ತದೆ. ಆದ್ದರಿಂದ ಈ ಫಲಿತ ಪೆಂದರೇನೇ ಮುಂದಿನ ಪ್ರಕ್ರಿಯೆಯ 'ಪ್ರಕ್ರಿಯಾಕ್ಷಮ' ವಾದ ವಿಷಯವಾಗುತ್ತದೆ. > (ಇಂದಿನ ಭಾಷೆಯಲ್ಲಿ, ಪ್ರಕ್ರಿಯೆಯ ಈ ನಾಲ್ಕು ಅಂಗಗಳಿಗೆ ಅನುಕ್ರಮವಾಗಿ ಇನ್‌ಪುಟ್, ಪ್ರೊಸೆಸರ್/ಏಜಂಟ್, ಪ್ರೋಸೆಸ್/ಆಕ್ಟಿವ್ಟಿಟಿ, ಮತ್ತು ಔಟ್‌ಪುಟ್ ಎನ್ನಲು ಅಡ್ಡಿಯಿಲ್ಲ.)

ಸ್ವಲ್ಪದರಲ್ಲಿಯೇ ಮಂಡಿಸಿ ನೋಡಬೇಕೆಂದರೆ ಈ ಕೆಳಗಿನ ಆಕೃತಿ ನೋಡಿರಿ :



(ಆಕೃತಿ ೧)

< ಈ ಎಲ್ಲ ಅಂಗಗಳಲ್ಲಿ ವ್ಯಾಪಿಸಿನಿಂತ ಶಕ್ತಿ > ಯನ್ನು ಬೇರೆಯಾಗಿ ತೋರಿಸುವ ಕಾರಣವಿಲ್ಲ. ಅದು < ವಿಷಯದಲ್ಲಿ ಸಂಚರಿಸುತ್ತದೆ, ಕರ್ತೃವಿನಲ್ಲಿ ವಾಸಮಾಡಿರುತ್ತದೆ, ಫಲಿತದಲ್ಲಿಯೂ ಕೆಲಸ ಮಾಡುತ್ತದೆ. (1) (ಮತ್ತು ಯಥಾಕಾಲ ಈ ಫಲಿತವು ಮುಂದಿನ ಪ್ರಕ್ರಿಯೆಯ ವಿಷಯವಾದಾಗ ಅದರಲ್ಲಿಯೂ ಸಂಚರಿಸುತ್ತದೆ.) ಪ್ರಕ್ರಿಯಾ/ಕರ್ಮವೆಂದರೆ ಶಕ್ತಿವ್ಯಾಪಾರ. ಇದಕ್ಕೆ ಹೊರತಾಗಿ ಬೇರೆ ಅರ್ಥವಿಲ್ಲ. > (ಶಕ್ತಿಯ ಅಖಿಂಡ ಸಂಚಾರದ ಸಂದರ್ಭದಲ್ಲಿ ಇದೊಂದು ಚಿಕ್ಕ ಎಪಿಸೋಡ್ ಮಾತ್ರ. ಆದ್ದರಿಂದ ಇದಕ್ಕೆ ಆ ಶಕ್ತಿಯ 'ಸೀಮಿತ' 'ಗತಿಶೀಲತೆ' ಅಂದರೆ ಅದರ ವ್ಯಾಪಾರವೆಂದು ಕರೆಯಬೇಕೇ, ಒಂದು

ಗತಿಮಾನತೆಗೆ ಪ್ರಕ್ರಿಯೆಯೆನ್ನಬೇಕೇ ಅಥವಾ ವ್ಯಾಪಾರ ವೆನ್ನಬೇಕೆ ಎಂಬುದು ನಾವು ನೋಡುವ ದೃಷ್ಟಿಯ ವಿಷಯ.)

(೧) < ನಾಟ್ಯ ಪ್ರಕ್ರಿಯೆಯಲ್ಲಿ ಆರಂಭದ ಉಪಪ್ರಕ್ರಿಯೆ ಯಾವುದು ? ಅದು ಕವಿಕರ್ಮ (ಅಂದರೇನೇ ಕಾವ್ಯ ಕ್ರಿಯೆ, ಕಾವ್ಯಕರಣ, ಕಾವ್ಯನಿರ್ಮಿತ, ಕಾವ್ಯಾಲಂಕಾರ). ಕವಿಕರ್ಮದ ಅಂಗಗಳು ನಾಲ್ಕು : (೧.೧.) < ಕವಿ ಕರ್ಮದ ವಿಷಯ ಯಾವುದು ? ವಿಷಯವೆಂದರೆ ಲೋಕವೃತ್ತ (ಅಂದರೇನೇ ಲೋಕಯಾತ್ರೆ). ವಿಷಯ 'ಪ್ರಕ್ರಿಯಾಕ್ಷಮ' ಹೇಗೆ ? ಅದು ಸುಖದುಃಖಗಳಿಂದ ಕೂಡಿದ್ದೂ, ನಾನಾ ಭಾವನೆಗಳಿಂದ ಸಂಪನ್ನವಾದದ್ದೂ, ನಾನಾ ಅವಸ್ಥಾಂತರಗಳಿಂದ ಕೂಡಿದ್ದೂ, ಲೋಕ ಸ್ವಭಾವವನ್ನು ತಿಳಿಸುವಂಥಾದ್ದೂ ಇದ್ದು, ಅಂತೆಯೇ ಅನುಕರಣೀಯವಾದದ್ದೂ ಆಗಿರುತ್ತದೆ. > (2) (ಲೋಕವೃತ್ತಕ್ಕೆ ನಾವಿಂದು ಮಾನವೀ ಜೀವನವೆಂದು ಕರೆಯುತ್ತೇವೆ.)

(೧.೨) < ಇನ್ನು ವಿಷಯೀ–ಕರ್ತಾ ಅಂದರೆ ಯಾರು ? ಕರ್ತಾ ಅಂದರೆ ನಾಟ್ಯಕವಿ (ಅಂದರೇನೇ ನಾಟ್ಯಕಾರ). ಆತ ವಿಷಯಾಭಿಮುಖ ಹಾಗೂ ಕರ್ಮಪ್ರವಣನಿರುತ್ತಾನೆ. ಅಂದರೇನು ? ಆತ ವಿಶಿಷ್ಟವಾದ ಕಾರಯಿತ್ರಿ ಪ್ರತಿಭೆಯುಳ್ಳಂಥ, ಭಾಷೆಯ ಮೇಲೆ ಪ್ರಭುತ್ವವಿದ್ದಂಥ ನಾನಾ ಪ್ರಯೋಜನಗಳಿಂದ ಉದ್ಯುಕ್ತನಾದಂಥ ಮನುಷ್ಯ ಎಂದರ್ಥ. >

< ಇಲ್ಲಿ ಪ್ರತಿಭೆ (ಅಂದರೆ ಶಕ್ತಿ) ಇದೇ ಕವಿಕರ್ಮಕ್ಕೆ ಕಾರಣ (ಅಂದರೆ ಅದರ ಹೇತು). ಕವಿಕರ್ಮದ ಫಲಿತದ ಪೂರ್ವಕಲ್ಪನೆಯನ್ನು ಕವಿಯ ಪ್ರತಿಭೆ ಚಿಂತಿಸುತ್ತದೆ ಹಾಗೂ ಒಂದು ಅಪೂರ್ವವಾದ ವಸ್ತುವನ್ನು ಅದು ನಿರ್ಮಿಸುತ್ತದೆ. ಯಾಕೆಂದರೆ ಆ ಪ್ರತಿಭೆ ನವ ನವೋನ್ಮೇಷಶಾಲಿನಿಯಾಗಿರುತ್ತದೆ. ಅದರ ವ್ಯಾಪಾರ ಯಾವದೇ ಆತಂಕವಿಲ್ಲದೆ ನಡೆಯಬೇಕೆಂದರೆ ಕವಿ ಸ್ವತಂತ್ರನಾಗಿರಬೇಕಾಗುತ್ತದೆ. ವ್ಯಾಕರಣ, ಪ್ರತ್ಯಕ್ಷ ಪ್ರಮಾಣ, ಅನುಮಾನಪ್ರಮಾಣ, ಇತಿಹಾಸ ಪ್ರಮಾಣ ಇವುಗಳ ಬಂಧನ ಅವನಿಗಿರಬಾರದು ; ಔಚಿತ್ಯ ವಿವೇಕ ವಷ್ಟೇ ಅವನಿಗೆ ಬಂಧನ ಸಾಕು ಈ ಔಚಿತ್ಯ ವಿವೇಕವನ್ನು ಪೋಷಿಸಲು ಕವಿಯ ಪ್ರತಿಭೆಯ ಮೇಲೆ ಸಂಸ್ಕಾರವಿಬೇಕಾದದ್ದು ಅವಶ್ಯ. ಸಂಸ್ಕಾರ ಎರಡು ರೀತಿಯಲ್ಲಿ ಆಗಬೇಕು–ಲೋಕವೃತ್ತ ಹಾಗೂ ಶಾಸ್ತ್ರ ಇವುಗಳ ಅವಲೋಕನದಿಂದ ಬರುವ ತಿಳುವಳಿಕೆ ಅಂದರೆ ವ್ಯುತ್ಪತ್ತಿ (ಅಂದರೆ ನೈಪುಣ್ಯ) ಮತ್ತು ಕಾವ್ಯ ಓದುವ ಮತ್ತು ಬರೆಯುವ ಅಭ್ಯಾಸ. > (3) (ಔಚಿತ್ಯ ವಿವೇಕ ವೆಂದರೆ ಸೌಂದರ್ಯವಿಘ್ನ, ರಸವಿಘ್ನಗಳಿಂದ ತಪ್ಪಿಸಿ ಕೊಳ್ಳುವ ತಿಳುವಳಿಕೆ. ಅದು ಹುಟ್ಟಿನಿಂದಲೇ (ಅಂದರೆ ಸಂಸ್ಕಾರವಾಗುವ ಮುಂಚಿನಿಂದಲೇ)ಇರುವದು ಶಕ್ಯವಿದೆ.

< ಭಾಷಾಪ್ರಭುತ್ವವು ಕವಿಕರ್ಮದ ಸಾಧನವಾಗಿದೆ. > (4)

< ಕವಿಗೆ ಕವಿಕರ್ಮದಿಂದ ಕೂಡಲೆ ಸಿಗುವ ಫಲ ವೆಂದರೆ ತನಗೆ ಪ್ರಿಯವಾದ ಕೆಲಸ ಮಾಡಿದ ಆನಂದ ಎಂದರೆ ಪ್ರೀತಿ ಹಾಗೂ ಕಾಲಾಂತರದಿಂದ ಸಿಗುವ ಫಲ ವೆಂದರೆ ಕೀರ್ತಿ (ಜೊತೆಗೆ ಯಶಸ್ಸು, ಸಂಪತ್ತಿ ಇತ್ಯಾದಿ). ಪ್ರೀತಿ ಮತ್ತು ಕೀರ್ತಿ ಇವು ಕವಿಕರ್ಮದ ಪ್ರಯೋಜನಗಳು. > (5)

(೧.೩) < ಇನ್ನು ಫಲಿತ ವೆಂದರೇನು ? ನಾಟ್ಯ ಕ್ಯಾವದ ಬಂಧವೆಂದರೇ ಅದರ ಪಾಠ್ಯ. > (ಪಾಠ್ಯವೆಂದು ನಾಟಕದ ಪುಸ್ತಕ. ಸ್ಕ್ರಿಪ್ಟ್.)

(೧.೪) < ಇನ್ನು ಈ ಪ್ರಕ್ರಿಯೆಯ ಅಂದರೆ ಕವಿಕರ್ಮದ ಸ್ವರೂಪವೇನು ? ಕವಿಕರ್ಮದ ಅಂಗಗಳು ಎರಡು: ಒಂದು, ಕಾವ್ಯರಚನೆಯ ಪ್ರಯತ್ನದ ಸಲುವಾಗಿ ಮಾಡ ಬೇಕಾದ ಮಾನಸಕ್ರಿಯೆ. ಎರಡು, ಅಭ್ಯಾಸಯುಕ್ತ ಭಾಷೆಯಲ್ಲಿ ಇಳಿಸಲು ಮಾಡಬೇಕಾದ ಪ್ರಯತ್ನ ಅಂದರೆ ಅಲಂಕರಣಕಲ್ಪ (ಅಂದರೆ ಅಲಂಕರಣ ವಿಧಿ). ಉಳಿದವರ ಪ್ರಯೋಗನೋಡಿ ವಿಧಿಯ ಪ್ರಕಾರ ಕಾವ್ಯ ಬರೆಯುವವ ಕೇವಲ ಅನ್ಯಸಾರಸ್ವತನಾಗುತ್ತಾನೆ ; ಮಾನಸಕ್ರಿಯೆಯಲ್ಲಿ ಉದ್ಯುಕ್ತನಾದವನೇ ಸಿದ್ಧ ಸಾರಸ್ವತನಾಗುತ್ತಾನೆ. > (6)

ಸ್ವಲ್ಪದರಲ್ಲಿಯೇ ಹೇಳಬೇಕೆಂದರೆ, ಲೋಕವೃತ್ತ ಹಾಗೂ ಪ್ರಯೋಜನಗಳಿಂದ ಉದ್ಯುಕ್ತವಾದ, ಸಂಸ್ಕಾರಗಳಿಂದ ಯುಕ್ತವಾದ ಕವಿ ಪ್ರತಿಭೆಯು ಕವಿಕರ್ಮದಲ್ಲಿ ಅಭಿವ್ಯಕ್ತ ಗೊಂಡಾಗ ಕಾವ್ಯದ ಅಥವಾ ನಾಟಕದ ಪಾಠ್ಯವು ರೂಪು ಗೊಳ್ಳುತ್ತದೆ.

(೨) < ನಾಟ್ಯ ಪ್ರಕ್ರಿಯೆಯಲ್ಲಿ ಸಂಭವಿಸುವ ಆ ನಾಟಕದ ಉಪಪ್ರಕ್ರಿಯೆ ಯಾವುದು ? ಅದೆಂದರೆ ಪ್ರಯೋಗಾಲಂಕಾರ. ಪ್ರಯೋಗಾಲಂಕಾರದ ಪ್ರಕ್ರಿಯೆಯಲ್ಲಿ ನಾಲ್ಕು ಅಂಗಗಳಿವೆ : >

(೨.೧) < ಇವುಗಳಲ್ಲಿ ವಿಷಯ ಯಾವುದು ? ವಿಷಯ ವೆಂದರೆ ನಾಟ್ಯದ ಪಾಠ್ಯ. ವಿಷಯ ಪ್ರಕ್ರಿಯಾಕ್ಷಮ ವಾಗಿದೆಯೆಂದರೇನು ? ಅದಕ್ಕೆ ದೃಶ್ಯಶ್ರವ್ಯ ರೂಪ ಕೊಡಲು ಅನುಕೂಲವಾಗಿರುವದೆಂದು ಅದು ಅಭಿನೇಯ (ಆಂದರೆ ಅರ್ಥಕ್ರಿಯಾಪೇಕ್ಷ) ವಾಗಿರುತ್ತದೆ. ಕಾವ್ಯ ಅಭಿನೇಯವಾಗಲು ಹೇಗೆ ಶಕ್ಯವಾಗುವುದು ? ಅದರ ಶರೀರದಲ್ಲಿದ್ದ ಗುಣಗಳು, ಲಕ್ಷಣಗಳು (ಅಂದರೆ ವಿಭೂಷಣಗಳು) ಹಾಗೂ ಅಲಂಕಾರಗಳು–ಇವುಗಳ ಮೂಲಕವೇ. > (ಪೊದವೊದಲು ಕಾವ್ಯದ ಚೈತನ್ಯ ತತ್ವವೆಂದರೇ ಗುಣಗಳಿಂದೂ ಶರೀರವೆಂದರೇ ಲಕ್ಷಣ ಗಳೆಂದೂ, ಹಾಗೂ ಶರೀರದ ಬಾಹ್ಯಾಂಗವೆಂದರೇನೆ ಅಲಂಕಾರಗಳೆಂದೂ ಕಲ್ಪಿಸಿದ್ದರು. ಮುಂದೆ ಈ ರೀತಿಯ ಪಾಲು ಟಿಕಾಯಿಸಲಿಲ್ಲ (7) : ಲಕ್ಷಣಗಳು ವಿಭೂಷಣಗಳು ಮತ್ತು ಅಲಂಕಾರಗಳು ಇವುಗಳ ಒಂದೇ ವರ್ಗವನ್ನು ಕಲ್ಪಿಸಿ ಅದಕ್ಕೆ ಅಲಂಕಾರ ಎಂಬ ಹೆಸರೂ ಸ್ಥಿರವಾಗಿ ರೂಢವಾಯಿತು.)

(೨.೨) < ಇನ್ನು ವಿಷಯೀ–ಕರ್ತಾ ಯಾರು ? ಉತ್ತರ: ಅಭಿನಯ ಮಾಡುವ ನಟವೃಂದ (ಅಂದರೆ ನಾಟ್ಯಯೋಕ್ತರ, ಪ್ರಯೋಕ್ತರ ಮಂಡಳಿ). > (ಇಲ್ಲಿ ಅಭಿನಯ ವೆಂದರೆ ಬರೇ ಆಕ್ಟಿಂಗ್ ಅಲ್ಲ, ಆದರೆ ಪಾಠ್ಯವನ್ನು ಪ್ರೇಕ್ಷಕರ ತನಕ ಒಯ್ದು ಮುಟ್ಟಿಸುವದಕ್ಕೋಸ್ಕರ ಏನೇನು ಮಾಡಬೇಕಾಗುವುದೋ ಅದೆಲ್ಲ – ಸಮಗ್ರ ರಂಗಾಭಿನಯವೆಂದರೆ ಸ್ಟೇಜಿಂಗ್. ನಟನೆಂದರೆ ಬರೇ ಆ್ಯಕ್ಟರ್ ಜನ ಅಲ್ಲ, ಆದರೆ < ಸೂತ್ರಧಾರ > (ಸ್ಟೇಜ ಮ್ಯಾನೇಜರ್) ಹಾಗೂ < ನಾಟ್ಯಾಚಾರ್ಯ > (ನಟರ ಶಿಕ್ಷಕ, ತಾಲೀಮುಮಾಸ್ತರ, ಡಾಯರೆಕ್ಟರ್) ಇವರ ನ್ನೊಳಗೊಂಡ ನಾಟಕಕ್ಕೆ ಸಂಬಂಧಿಸಿದ ಎಲ್ಲ ಆಟ ಗಾರರು. < ಈ ನಟವೃಂದವು ವಿಷಯಾಭಿಮುಖ ಅಥವಾ ಕರ್ಮಪ್ರವಣವಾಗಿರುತ್ತದೆ ಎಂದರೇನು? ಅದು ಕುಶಲ (ಎಳೆಎಳೆಯನ್ನೂ ಸೂಕ್ಷ್ಮವಾಗಿ ಬಲ್ಲಂಥ), ವಿದಗ್ಧ (ಪರೀಕ್ಷಿಸಿ ನೋಡುವಂಥ), ಜಿತಶ್ರಮ (ಕಷ್ಟಕ್ಕೆ ಬೇಸರಪಡದಂಥ, ಜಿಗಟುತನದಿಂದ ಕೆಲಸಮಾಡುವಂಥ), ಪ್ರಗಲ್ಭ (ಮೈಯಲ್ಲಿ ಧೈರ್ಯ, ಸ್ಥೈರ್ಯ ಇದ್ದಂಥ) ಜನರ ಗುಂಪು ಎಂದರ್ಥ. >

(೨.೩) < ಇನ್ನು ಫಲಿತ ವೆಂದರೇನು ? ಉತ್ತರ : ಶ್ರವ್ಯವೂ ದೃಶ್ಯವೂ ಆದಂಥ ನಾಟ್ಯವಸ್ತು. ಅದರ ಸ್ವರೂಪವೇನು ? ಕಾವ್ಯಾರ್ಥವು ವಿಭಾವ, ಅನುಭಾವ, ಸಂಚಾರಿಭಾವ (ಅಂದರೆ ವ್ಯಭಿಚಾರೀಭಾವ) ಇವುಗಳ ರೂಪದಲ್ಲಿ ಅಭಿವ್ಯಕ್ತಗೊಂಡು (ಅಂದರೆ ಸಮರ್ಪಿತ ವಾಗಿ, ಅದರ 'ಪ್ರೊಜೆಕ್ಷನ್ನಾ'ಗಿ) ಅದರಿಂದ ಸಿದ್ಧವಾದ ಪ್ರತಿಭಾಸ (ಅಂದರೆ ನಿರ್ಭಾಸ, ಪ್ರತ್ಯಯ). ಕಾವ್ಯಾರ್ಥ ಅಂದರೆ ಯಾವುದು ? ಪಾಠ್ಯ ಅಥವಾ ಕಾವ್ಯಬಂಧದಲ್ಲಿ ದ್ದಂಥ ಎಲ್ಲ ಅಂಶಗಳು, ಅವುಗಳ ಸ್ವರೂಪಧರ್ಮ, ಅವುಗಳ ವ್ಯಾಪಾರ ಇತ್ಯಾದಿ. > (8) [9]

< ಕಾವ್ಯಾರ್ಥದಲ್ಲಿಯ ವ್ಯವಹಾರದ ಕೇಂದ್ರಗಳೆಂದರೆ ಕಾರಣಗಳು (ಅಂದರೆ ಹೇತು) ಅಂದರೆ ಮನುಷ್ಯರು ಇತ್ಯಾದಿ–ಇವರು ನಾಟ್ಯವಸ್ತುವಿನಲ್ಲಿ ವಿಭಾವದ ರೂಪ ದಲ್ಲಿ ಬರುತ್ತಾರೆ. ವಿಭಾವಗಳ ಮೂಲಕ ಕಾವ್ಯಾರ್ಥ ದಲ್ಲಿಯ ಮಾನವೀ ವ್ಯಾಪಾರಕ್ಕೆ ಅಂದರೆ ಕಾರಣಗಳ ಕಾರ್ಯಕ್ಕೆ ಆಲಂಬನ (ಆಧಾರ)ವಾದರೂ ಸಿಗುತ್ತದೆ ಅಥವಾ ಉದ್ದೀಪನ (ಉತ್ತೇಜನ)ವಾದರೂ ಸಿಗುತ್ತದೆ. (10). ಕಾವ್ಯಾರ್ಥದಲ್ಲಿಯ ಕಾರಣಗಳು ಪ್ರತ್ಯಕ್ಷವಾಗಿ ನಾಟ್ಯವಸ್ತುವಿನಲ್ಲಿ ಅನುಭಾವಗಳ ರೂಪದಲ್ಲಿ ಕಾಣಿಸಿ ಕೊಳ್ಳುತ್ತವೆ. ಕಾವ್ಯಾರ್ಥದಲ್ಲಿಯ ಮನುಷ್ಯರ ಸ್ಥಾನ ದಲ್ಲಿ ಸಾತ್ವಿಕ ಪಾತಳಿಯ ಮೇಲೆ ನಿಷ್ಪನ್ನವಾಗುವ ಶರೀರ ವ್ಯಾಪಾರಗಳು (ಬೆವರು ಬರುವದು, ನಡುಗು ವುದು ಇತ್ಯಾದಿ) ಇವೆಲ್ಲ ಅನುಭಾವ ರೂಪದಲ್ಲಿಯೇ ಬರುತ್ತವೆ. > (ಉದಾಹರಣೆಗೆ, ನಾಟಕದಲ್ಲಿಯ ತರುಣ ತರುಣಿಯರ ಆಲಂಬನ ವಿಭಾವ, ನಾಟಕದಲ್ಲಿಯ ವಸಂತಋತು, ಏಕಾಂತ ಮುಂತಾದವು ಉದ್ದೀಪನ ವಿಭಾವ, ಮತ್ತು ನಾಟಕದಲ್ಲಿಯ ತರುಣನಿಗೆ ನಾಟಕ ದಲ್ಲಿಯ ತರುಣಿಯ ಬಗ್ಗೆ ಅನಿಸುವ ನಾಟಕದಲ್ಲಿಯ ಅಭಿ ಲಾಷೆ ಹಾಗೂ ಅವಳಿಗೆ ಅನಿಸುವ ನಾಟಕದಲ್ಲಿಯ ಲಜ್ಜೆ, ಅವಳ ಮೈಮೇಲೆ ನಾಟಕದಲ್ಲಿ ಸಾತ್ವಿಕ ಪಾತಳಿಯ ಮೇಲೆ ಬರುವಂತ ರೋಮಾಂಚ ಇವು ಅನುಭಾವ.)

< ಅನುಭಾವ ಮತ್ತು ವಿಭಾವಗಳ ಒಟ್ಟಂದಿನ ಪರಿ ಣಾಮದ ಮೂಲಕ ಕಾವ್ಯಾರ್ಥದಲ್ಲಿಯ ಕಾರಣಗಳಿಗೆ

ಸಂಬಂಧವಿಲ್ಲದಂತೆ ತೋರುವ ಉಳಿದ ಕಾರ್ಯಗಳು ನಾಟ್ಯವಸ್ತುವಿನಲ್ಲಿ ಭಾವರೂಪದಲ್ಲಿ ಬರುತ್ತವೆ. ಅವುಗಳಲ್ಲಿ ತುಲನಾತ್ಮಕವಾಗಿ ಅಪ್ರಧಾನ 'ಸೀಮಿತ' ಅಥವಾ ಅಪ್ರಧಾನವೆಂದು ಅನಿಸುವಂಥ ಭಾವಗಳೇ ಸಂಚಾರಿ ಭಾವಗಳು > (ಉದಾಹರಣೆಗೆ, ನಾಟಕದಲ್ಲಿಯ ತರುಣನಿಗೆ ಬರುವಂಥ ನಾಟಕದಲ್ಲಿಯ ನಿದ್ರೆ ಅಥವಾ ನೆನಪು ಅಥವಾ ಸಂಶಯ, ನಾಟಕದಲ್ಲಿಯ ತರುಣಿಗೆ ಬಿದ್ದ ನಾಟಕದಲ್ಲಿಯ ಸ್ವಪ್ನ ಅಥವಾ ಪ್ರಶ್ನೆ.) < ಸಂಚಾರಿ ಭಾವಗಳಿಗೆ ವ್ಯಭಿಚಾರೀ ಭಾವಗಳೆಂದೂ ಹೇಳುತ್ತಾರೆ. ಯಾಕೆಂದರೆ ವಿಭಾವ ಅನುಭಾವಗಳಂಥೇ ಅವು ಕೂಡ ಸ್ಥಾಯೀಭಾವದತ್ತಲೇ ಒಯ್ಯುತ್ತವೆ. ಸ್ಥಾಯೀಭಾವವೆಂದರೆ ಸಂಚಾರಿಭಾವಗಳ ತುಲನೆಯ ದೃಷ್ಟಿಯಿಂದ ಪ್ರಧಾನವಾಗಿದ್ದಂಥ ಹಾಗೂ 'ದೀರ್ಘ ಕಾಲದ ವರೆಗಿರುವ' ಭಾವ.

< ವಿಭಾವ, ಅನುಭಾವ, ಸಂಚಾರೀಭಾವ, ಹಾಗೂ ಸ್ಥಾಯೀಭಾವ ಇವೆಲ್ಲವುಗಳಿಗೆ ನಾಟ್ಯಭಾವ ಅನ್ನುತ್ತಾರೆ. ನಾಟ್ಯಭಾವಗಳನ್ನು ಒಂದೆಡೆ ಅಭಿವ್ಯಕ್ತಗೊಳಿಸಿದಾಗ ಒಂದು ದೃಶ್ಯಶ್ರವ್ಯವಾದಂಥ ಭಾವರೂಪವು ಒಂದು ಏಕಘನವಾದಂಥ ನಾಟ್ಯವಸ್ತುವಾಗಿ ಸ್ಥಿರವಾಗುತ್ತದೆ; ಮತ್ತು ಭಾವಗಳ ಸಮುದಾಯ ಉಂಟಾಗುತ್ತದೆ. > (11) (ಏಕಘನವೆಂದರೆ ಯುನಿಫೈಡ್ ಹಾಗೂ ಕಾಂಪ್ಯಾಕ್ಟ್.)

(೨.೪) < ಇನ್ನು ಈ ಪ್ರಕ್ರಿಯೆಯು ಅಂದರೆ ಪ್ರಯೋಗಾಲಂಕಾರದ ಸ್ವರೂಪವೇನು ? >

(೨.೪.೧) < ಪ್ರಯೋಗಾಲಂಕಾರದಲ್ಲಿ ಮೂರು ಅಂಗಗಳ ಸಾಮಂಜಸ್ಯವಾಗಬೇಕಾದದ್ದು ಅವಶ್ಯ—ಕಾವ್ಯಾಲಂಕಾರ (ಅಂದರೆ ಪ್ರಬಂಧಾಲಂಕಾರ, ಪ್ರಬಂಧಗುಣ), ನಾಟ್ಯಾಲಂಕಾರ ಮತ್ತು ವರ್ಣಾಲಂಕಾರ ಕಾವ್ಯಾಲಂಕಾರವೆಂದರೆ ಕಾವ್ಯದಲ್ಲಿಯ ಅಂದರೆ ಅದರ ಅಂಗದಲ್ಲಿದ್ದ ಗುಣಗಳು ಎದ್ದು ಕಾಣುವಂತೆ ಮಾಡುವ ರೀತಿ. ನಾಟ್ಯಾಲಂಕಾರವೆಂದರೆ ರಂಗಭೂಮಿಯ ಮೇಲೆ ಯೋಗ್ಯವಾದ ರೀತಿಯಲ್ಲಿ ನಾಟ್ಯಾಭಿನಯವನ್ನು ಪ್ರಸ್ಥಾಪಿಸುವದು, ಹಾಗೂ ವರ್ಣಾಲಂಕಾರವೆಂದರೆ ಸ್ವರಸಂಗೀತದ (ಗಾಯನ, ವಾದನ—ಇವುಗಳಲ್ಲಿಯ ವರ್ಣಗಳು ಅಂದರೆ ಬೋಲಗಳು) ಯೋಗ್ಯವಾದ ಜೋಡು ಅಥವಾ ಸಂಗತಿ ಸಿಗುವದು ಎಂದರ್ಥ. >

< ಇನ್ನು ನಾಟ್ಯಾಲಂಕಾರಕ್ಕೆ ಮೂರು ಉಪಾಂಗಗಳಿರುತ್ತವೆ—ನೇಪಥ್ಯಾಲಂಕಾರ, ಸಜ್ಜಾಲಂಕಾರ, ಹಾಗೂ ಪಾಠ್ಯಾಲಂಕಾರ. ನೇಪಥ್ಯಾಲಂಕಾರವೆಂದರೆ ಆಹಾರ್ಯವಾದಂಥ ಅಭಿನಯವನ್ನು ಸಾದರಪಡಿಸುವದು. ಆಹಾರ್ಯ ಅಭಿನಯವೆಂದರೆ ಇಲ್ಲದ್ದು ಇದೆಯೆಂದು ತಿಳಿಯ ಹಚ್ಚುವ ಎಲ್ಲ—ವೇಷ (ಕಾಸ್ಟ್ಯೂಮ್ಸ್), ಭೂಷೆ (ಮೇಕಪ್, ಜುವೆಲರಿ), ಪುಸ್ತ (ಪ್ರಾಪರ್ಟಿ-ಇದು ಎಷ್ಟೋ ಸಲ ಮಣ್ಣಿನಿಂದ ಮಾಡಿದ್ದು) ನೇಪಥ್ಯ (ಸೆಟಿಂಗ್, ಡೆಕೋರ್), 'ಧ್ವನಿಪ್ರತಿಭಾಸ' (ಸಾವ್ಂಡ್ ಇಫೆಕ್ಟ್ಸ್). ಸತ್ವಾಲಂಕಾರವೆಂದರೆ ಆಂಗಿಕ (ಅಂದರೆ ಕಾಯಿಕ) ಅಭಿನಯ ಮೂಡಿ ಸಾತ್ವಿಕ ಪಾತಳಿಗೆ ಮುಟ್ಟಿಸುವದು. (12) ಆಂಗಿಕ (ಅಂದರೇ ಕಾಯಿಕ) ಅಭಿನಯವೆಂದರೆ ನಟನು ತನ್ನ ಅವಯವಗಳನ್ನು ವಿಶಿಷ್ಟರೀತಿಯಲ್ಲಿ ಇಡುವದು ಅಥವಾ ರಚಿಸಿಡುವದು (ಅಂಗವಿನ್ಯಾಸ, ಪೋಸ್ಚರ್, ಬೆಯರಿಂಗ್) ಹಾಗೂ ಅಲೆದಾಡಿಸುವದು (ಅಂಗಹಾರ, ಚೇಷ್ಟಾಕೃತ, ಜೆಸ್ಚರ್) ಹಾಗೂ ಮುಖದ ರೂಪ ಬದಲಾಯಿಸುವದು (ಮುಖರಾಗ, ಫೇಶಿಯಲ್ ಚೇಂಜಸ್). ಆಂಗಿಕ ಅಭಿನಯವು ಸಾತ್ವಿಕ ಪಾತಳಿಯನ್ನು ಮುಟ್ಟಿದ್ದರ ಸ್ಪಷ್ಟ ಗುರುತೆಂದರೆ ನಟನಲ್ಲಿ ಸತ್ವಜಭಾವ (ಅಂದರೆ ಸಾತ್ವಿಕಭಾವ) ಪ್ರಕಟವಾಗುವದು (ಉದಾಹರಣೆಗೆ, ಬೆವರುವದು, ನಡುಗುವದು, ಕಣ್ಣೀರು ಹರಿಯುವದು ಇಂಥ ನಿಜವಾದ ಶರೀರವ್ಯಾಪಾರ ಸಮನಿಸುವದು). ಪಾಠ್ಯಾಲಂಕಾರವೆಂದರೆ ವಾಚಿಕ ಅಭಿನಯವನ್ನು ನಿರ್ಮಿಸುವದು. ವಾಚಿಕ ಅಭಿನಯ ವೆಂದರೆ ವರ್ಣ ಹಾಗೂ ಅಕ್ಷರ (ಸಿಲಬಲ್ಸ್) ಯೋಗ್ಯವಾದಂಥ ಉಚ್ಚಾರ. ಅವುಗಳನ್ನು ಜೋಡಿಸುವದು ಮುರಿಯುವದು (ಸಂಹಿತೆ ಹಾಗೂ ವಿಚ್ಛೇದ) (ವಚೋವಿನ್ಯಾಸ, ವಾಕ್ಸರಣಿ, ಡಿಕ್ಷನ್) ಹಾಗೂ ಧ್ವನಿಯ ಧಾಟಿ, ಶಕ್ತಿ, ತೂಕ (ಕಾಕು, ಇಂಟೊನೇಶನ್). > (13)

ಸ್ವಲ್ಪದರಲ್ಲಿಯೇ ಮಂಡಿಸಬೇಕೆಂದರೆ ಕೆಳಗಿನ ಆಕೃತಿ ನೋಡಿರಿ.



(ಆಕೃತಿ–3)

ಸ್ವಲ್ಪದರಲ್ಲಿಯೇ ಹೇಳಬೇಕೆಂದರೆ, ನಾಟ್ಯದ ಪಾಠ್ಯ ಹಾಗೂ ನಟವೃಂದದ ಅಭಿನಯ ಇವುಗಳ ಒಂದುಗೂಡು ವಿಕೆಯಿಂದ ಪಾಠ್ಯದ ಕಾವ್ಯಾರ್ಥಭಾವ ಹೊರಹೊಮ್ಮಿ ಆ ಭಾವನೆಗಳ ಅನುಕೀರ್ತನೆಯುಂಟಾಗುತ್ತದೆ, ಸ್ಥಾಯಿ ಭಾವ ಜಾಗೃತವಾಗುತ್ತದೆ ಹಾಗೂ ಏಕಘನವಾದಂಥ ನಾಟ್ಯವಸ್ತು ಸಿದ್ಧವಾಗಿ ಪ್ರಯೋಗಾಲಂಕಾರದ ಸೃಷ್ಟಿಯಾಗುತ್ತದೆ.

(೨.೪.೨) < ಪ್ರಯೋಗಾಲಂಕಾರದ ಸೃಷ್ಟಿ ಎರಡು ಹಂತದಲ್ಲಿ ಆಗುತ್ತದೆ : ಭಾವಾನುಕೀರ್ತನೆ ಹಾಗೂ ಭಾವಸಮುದಾಯ. ಭಾವಾನುಕೀರ್ತನೆಯೆಂದರೆ ನಾಟ್ಯ ಭಾವಗಳ ಉದಯ ಹಾಗೂ ಅಭಿವ್ಯಕ್ತಿ. ಭಾವ ಸಮುದಾಯವೆಂದರೆ ವಿಭಾವ ಹಾಗೂ ಅನುಭಾವಗಳ ಸಂಯೋಗದಿಂದ ಸಂಚಾರಿಭಾವವು ಜಾಗೃತಗೊಳ್ಳುವಿಕೆ, ಈ ಮೂರೂ ಪ್ರಕಾರದ ನಾಟ್ಯಭಾವಗಳ ಸಂಯೋಗ ದಿಂದ ಸ್ಥಾಯಿಭಾವ ಜಾಗ್ರತಗೊಳ್ಳುವಿಕೆ ಹಾಗೂ ಸ್ಥಾಯೀಭಾವದ ಜಾಗೃತಿಯು ಮೂಲಕ ಭಾವಾನು ಕೀರ್ತನೆಯು ಕ್ರಿಯೆಗೆ ಹೆಚ್ಚಿನ ಗತಿ ದೊರಕುವಿಕೆ. ಭಾವಸಮುದಾಯದ ಮೂಲಕ ಏಕಘನವಾದಂಥ ನಾಟ್ಯ ವಸ್ತು ಸಿದ್ಧವಾಗುತ್ತದೆ. > (ಸ್ಥಾಯೀಭಾವವೆಂದರೆ ನಾಟ್ಯವಸ್ತುವನ್ನು ವ್ಯಾಪಿಸಿ ನಿಲ್ಲುವಂಥ, ಅದಕ್ಕೆ ಏಕ ಘನತ್ವ ಕೊಡುವಂಥ, ತಲೆನೆಯಿಂದ ಸ್ಥಿರವೆನ್ನಬಹು ದಾದ ನಾಟಕದ ಓವ್ಹರ್ ಆರ್ಚಿಂಗ್ ಮೂಡ್, ಅಟ್-ಮೊಸ್ಫಿಯರ್, ಟೋಟಲ್ ಇಫೆಕ್ಟ್.)

< ನಾಟ್ಯಭಾವಗಳಲ್ಲಿಯ ವಿಭಾವ ಮತ್ತು ಅನುಭಾವ ಎಂಬವುಗಳನ್ನು ಸ್ವತಂತ್ರ ರೀತಿಯಲ್ಲಿ ಆಸ್ವಾದಿಸಲು ಬರುವದಿಲ್ಲ; ಅವುಗಳ ಮೂಲಕ ಸಂಚಾರಿಭಾವ ಹಾಗೂ ಸ್ಥಾಯೀಭಾವಗಳು ಜಾಗೃತವಾಗಬೇಕಾಗುವದು. ತದ್ವಿರುದ್ಧವಾಗಿ, ಸಂಚಾರಿಭಾವ ಹಾಗೂ ಸ್ಥಾಯೀಭಾವ ಗಳು ಸ್ವತಂತ್ರ ರೀತಿಯಲ್ಲಿ ವ್ಯಕ್ತವಾಗುವದಿಲ್ಲ. ಎರಡ ನೆಯದಾಗಿ, ಸ್ವಶಬ್ದದಿಂದ ಉದಯವಾಗುವ ಸಂಚಾರಿ ಹಾಗೂ ಸ್ಥಾಯೀಭಾವಗಳು ಅಷ್ಟೊಂದು ಪ್ರಭಾವಿ ಯಾಗಿರುವದಿಲ್ಲ. ಅವು ಅಪ್ರತ್ಯಕ್ಷವಾಗಿಯೇ ಪ್ರಕಟ ಗೊಳ್ಳಬೇಕಾಗುತ್ತದೆ. > ಉದಾಹರಣೆಗೆ, ಒಬ್ಬ ತರುಣಿ ಒಬ್ಬ ತರುಣನಲ್ಲಿ ಅನುರಕ್ತಳಾದಳು ಎಂದು ಹೇಳುವದ ರಲ್ಲಿ ಅರ್ಥವಿಲ್ಲ. ಹಾಗೆ ಆ ಪಾತ್ರಗಳನ್ನು ಉದ್ದೀಪನ, ದೃಶ್ಯ ಪರಿಣಾಮ, ಭಾಷಣ, ಪ್ರಸಂಗ ಇತ್ಯಾದಿಗಳ ಮೂಲಕ ಸೃಷ್ಟಿಸಿ ನಿಲ್ಲಿಸಬೇಕಾಗುತ್ತದೆ.) (14) [15]

(೨.೪ ೩.) < ಪ್ರಯೋಗಾಲಂಕಾರವನ್ನು ಸಾಧಿಸಿದ ನಂತರ ನಾಟ್ಯವಸ್ತುವಿನಲ್ಲಿ ಎರಡು ಗುಣಗಳು ಮೂಡಿ ಬರುತ್ತವೆ–ಒಂದು, ಪ್ರತಿಭಾಸ (ಅಂದರೇನೇ ನಿರ್ಭಾಸ, ಪ್ರತೀತಿ)(16) ಹಾಗೂ ಎರಡು, ಅವಭಾಸ (ಅಂದರೇನೇ ಕಾಂತಿ,. ಆಭಾ, ಉಜ್ವಲತೆ, ಶೋಭೆ). (17) ಮೊದ ಲನೆಯದರಿಂದ ಲೋಕವೃತ್ತಿಯು ಅಪ್ರತ್ಯಕ್ಷವಾದ ಪರಿ ಚಯವುಂಟಾಗುವದು, ಅದಕ್ಕೆ 'ಪುನಃಪ್ರತ್ಯಯ' ದೊರ ಕುವದು. ಎರಡನೆಯದರಿಂದ ನಾಟ್ಯವಸ್ತು ಹೊಳೆಯುತ್ತದೆ, ಬೆಳಗುತ್ತದೆ, 'ಆಕರ್ಷಕ'ವಾಗುತ್ತದೆ. [18] ಹೀಗಾಗಲಿಕ್ಕೆ ಪಾಠ್ಯದಲ್ಲಿಯ ಕಾವ್ಯಗುಣವೂ ಅಭಿನಯ ದಲ್ಲಿಯ ನಾಟ್ಯಗುಣವೂ ಲೋಕಧರ್ಮಿಯಾಗಿದ್ದಂತೆ ನಾಟ್ಯಧರ್ಮಿಯೂ ಆಗಿರಬೇಕಾಗುತ್ತದೆ. ಅವು ಲೋಕ ಧರ್ಮಿಯಾಗಿದ್ದರಿಂದ ಪರಿಚಿತ ಲೋಕವೃತ್ತಿಯ ಅಧಿ ಕೃತವಾದ ಗುರುತು ಪರಿಚಿತವಾದ ಪದ್ಧತಿಯಿಂದ ಆಗಿ ಬಿಡುತ್ತದೆ. ಅದೇ ರೀತಿ ಅವು ನಾಟ್ಯಧರ್ಮಿಯಾಗಿ ದ್ದರಿಂದ ಪರಿಚಿತವಾದದ್ದನ್ನು ಬಿಟ್ಟು ಕೃತಿಮತೆಯನ್ನೂ ಚಮತ್ಕೃತಿಯನ್ನೂ ಆಶ್ರಯಿಸಿ ಶೋಭಾದಾಯಕವಾಗು ತ್ತವೆ. > (19) (ಇಂದಿನ ಭಾಷೆಯಲ್ಲಿ, ಲೋಕಧರ್ಮಿ ಯೆಂದರೆ ನ್ಯಾಚರಲಿಸ್ಟಿಕ್, ಲೋಕಲ್ ಕಲರ್ (ಪ್ರವೃತ್ತಿ) ತೋರಿಸುವಂಥವುಗಳು, ಟ್ರಡೀಶನಲ್ ; ನಾಟ್ಯಧರ್ಮಿಯೆಂದರೆ ಸ್ಟೈಲೈಜ್ಡ್, ಇನೋವೆ್ಹ ಟಿವ್ಸ್, ಡಿಕೊರೆಟಿವ್ಸ್.) < ಮುಂಖ್ಯವೆಂದರೆ ಲೋಕ ಧರ್ಮಿತ್ವವೂ ನಾಟ್ಯಧರ್ಮಿತ್ವವೂ ಕೂಡಿಯೇ ಏಕ ಕಾಲಕ್ಕೆ ಇರಬೇಕಾಗುತ್ತದೆ. > (20) [21]

(೨-೪-೪) < ಲೋಕಧರ್ಮಿತ್ವವೂ ನಾಟ್ಯಧರ್ಮಿತ್ವವೂ ಕೂಡಿಯೇ ಇರುವದು ಅವಶ್ಯವಾಗಿದ್ದರೂ ಅವೆರಡರ

ಪರಸ್ಪರ ಒಲಾಬಲಗಳು ಬೇರೆಬೇರೆಯಾಗಿಯೇ ನಮಗೆ ಮುಟ್ಟಬಹುದು. ಅದೇ ರೀತಿ, ಕೊನೆಗೆ ಅವಭಾಸ ವೆಂಬ ಒಂದೇ ಗುಣ ಆಪೇಕ್ಷಿತವಾಗಿದ್ದರೂ ಅದು ಸ್ತ್ರೀ-ಅಂಗದ ಮೂಲಕ ಅಥವಾ ಪುರುಷ–ಅಂಗದ ಮೂಲಕ ಮುಟ್ಟಬಹುದು; ಆದ್ದರಿಂದಲೇ ನಾಟ್ಯಾಭಿನಯದ ವಿವಿಧ ವೃತ್ತಿಗಳು ಸಂಭವಿಸುತ್ತವೆ. >

ಇಂದು ನಾವು ಯಾವುದಕ್ಕೆ ಸ್ಟಾಯಿಲ್ ಅಥವಾ ಶೈಲಿ ಎಂದು ಕರೆಯುತ್ತೇವೆಯೋ ಅದನ್ನು ನಾವು ನಾಟ್ಯ ಪ್ರಕ್ರಿಯೆಯ ಎರಡನೆಯ ಹಂತದಲ್ಲಿ ಸಂಧಿಸುತ್ತೇವೆ. (ಶೈಲಿ ಎಂದರೆ ಶೀಲ ಅಥವಾ ಸ್ವಭಾವವನ್ನು ಪ್ರಕಟ ಮಾಡುವ ರೀತಿ.) ಪ್ರಾಚೀನ ಭಾರತೀಯ ಕಲಾಮೀ ಮಾಂಸೆಯಲ್ಲಿ ಸ್ಟಾಯಿಲ್ ಎಂಬ ಪದಕ್ಕೆ ನಾಲ್ಕು ಸಂಜ್ಞೆ ಗಳು ದೊರಕುತ್ತವೆ–ನಾಟ್ಯಾಭಿನಯದ ವೃತ್ತಿ, ಸಾಹಿತ್ಯ ಭಾಷೆಯ ರೀತಿ, ಗಾಯನದ ವಾಣಿ, 'ದೃಶ್ಯಕಲೆ'ಯ ರೇಖೆ. (ಅನಂತರದ ಕಾಲದಲ್ಲಿ ನರ್ತನದ ಹಾಗೂ ಗಾಯನದ ಘರಾಣೆಗಳು, ವಾದನದ ಬಾಜ, ಚಿತ್ರಕಲೆಯ ಕಲಮುಗಳು (ಉದಾ. ಜಯಪುರೀ ಕಲಮು) ಕೈಬರಹದ ರೀತಿ-ಹೀಗೆ ಹಲವಾರು ಶಬ್ದ ಪ್ರಯೋಗಗಳೂ ನಮಗೆ ಸಿಗುತ್ತವೆ.) ನೃತ್ಯದಲ್ಲಿ ಪುರುಷಭಾವ ಹಾಗೂ ಸ್ತ್ರೀಭಾವದ ಅಂತರವನ್ನು ತಾಂಡವ ಹಾಗೂ ಲಾಸ್ಯ ಎಂಬ ಪದಗಳ ಮೂಲಕ ತೋರಿಸಲಾಗಿದೆ. ಅಭಿನಯದ ರೀತಿಗಳಲ್ಲಿ ಆರಭಟೀ, ಸಾತ್ವತೀ ಎಂಬುವು ಪುರುಷ ಭಾವ ಪ್ರಧಾನವಾಗಿದ್ದು ಕೌಶಿಕೀ ಎಂಬುದು ಸ್ತ್ರೀಭಾವ ಪ್ರಧಾನವಾಗಿದ್ದುದು ಕಂಡುಬರುತ್ತದೆ. ಲೋಕಧರ್ಮಿತ್ವ ಪ್ರಾಧಾನ್ಯ ಹಾಗೂ ನಾಟ್ಯಧರ್ಮಿತ್ವಪ್ರಾಧಾನ್ಯ, ಪುರುಷಭಾವ ಪ್ರಾಧಾನ್ಯ ಹಾಗೂ ಸ್ತ್ರೀಭಾವ ಪ್ರಾಧಾನ್ಯ–ಈ ಎರಡು ಜೋಡಿಗಳ ನಡುವೆ ಹಾಗೂ ವೃತ್ತಿ, ರೀತಿ, ವಾಣಿ ಇತ್ಯಾದಿಗಳ ನಡುವೆ ಏನಾದರೂ ಸಂಬಂಧ, ಅನುಬಂಧ ಜೋಡಿಸು ವದು ಸಾಧ್ಯವಿದೆಯೇ ಎಂಬುದನ್ನು ನಾವು ನೋಡ ಬೇಕಾಗಿದೆ. ನಾಟ್ಯದ ಅಭಿನಯದ ವೃತ್ತಿ ಹಾಗೂ ಸಾಹಿತ್ಯದ ಭಾಷೆಯ ರೀತಿ (ಅಂದರೆ ಮಾರ್ಗ, ವರ್ತ್ಮ) ಇವುಗಳಿಷ್ಟು ಹಾಗೂ ಇವುಗಳೆಂದರೆ ಯಾವುವು ಎಂಬು ದರ ಬಗ್ಗೆ ಒಂದೇ ಅಭಿಪ್ರಾಯವಿದ್ದಂತಿಲ್ಲ.

(3) < ನಾಟ್ಯಪ್ರಕ್ರಿಯೆಯಲ್ಲಿಯ ಕೊನೆಯ ಉಪಪ್ರ ಕ್ರಿಯೆ ಯಾವುದು ? ಉತ್ತರ : ಆಸ್ವಾದನೆ (ಅಂದರೆ ಭೋಗ). ಆಸ್ವಾದನೆಯ ಅಂಗಗಳು ನಾಲ್ಕು. >

(೩.೧) < ಅವುಗಳಲ್ಲಿ ವಿಷಯ ಯಾವುದು ? ಉತ್ತರ : ನಾಟ್ಯವಸ್ತು – ವಿಷಯವು ಪ್ರಕ್ರಿಯಾತ್ಮಕವೂ ಹೇಗಾಗು ತ್ತದೆ? ಅದು ಪ್ರತಿಭಾಸ ಹಾಗೂ ಅವಭಾಸಗಳಿಂದ ಯುಕ್ತವಾದದ್ದು ಅಂತೇ ಆಸ್ವಾದ್ಯ (ಅಂದರ ಹೃದ್ಯ, ಆಸ್ವಾದ ಯೋಗ್ಯ. ಭಾವಕವಾದದ್ದು. >

(೩.೨) < ಮುಂದೆ ವಿಷಯೀ-ಕರ್ತಾ ಯಾರು ? ಉತ್ತರ: ಪ್ರೇಕ್ಷಕ (ನಿಜವೆಂದರೆ, ಇಂಥ ಪ್ರೇಕ್ಷಕರ ಸಮಾಜ) ಅತ ವಿಷಯಾಭಿಮುಖನೆಂದರೇನು ? ಉತ್ತರ : ಅತ ಭಾವಿಕ (ಸೆನ್ಸಿಟಿವ್), ವೀತವ್ಯಗ್ರ (ಅಂದರೆ ಸುಮನಸ್ಕ) (ಏಕಾಗ್ರಚಿತ್ತ, ಲೌಕಿಕ ಅವಧಾನದಿಂದ ಮುಕ್ತನಾದಂಥ ಅವಸ್ಥೆ ಯಲ್ಲಿ ಇದ್ದಂಥ), ವಿದಗ್ಧ (ಪರೀಕ್ಷಿಸಿ ನೋಡು ವಂಥ), ವಿಬುದ್ಧ (ತಿಳುವಳಿಕೆಯುಳ್ಳಂಥ), ಹಾಗೂ ಸಹೃದಯನಾದಂಥವ. > (ಸಹೃದಯವೆಂದರೆ ಸಮಾನ ಹೃದಯ; ಸಮಾಜದಲ್ಲಿಯ ಪ್ರೇಕ್ಷಕರು ಸಮಾನಹೃದಯ ರಾಗಿರದಿದ್ದರೆ ಪ್ರಯೋಗಕ್ಕೆ ಕಳೆ ಬರುವದಿಲ್ಲ. < ಸಹೃದಯರಾಗಿರುವದರ ಒಂದು ಅಂಶವೆಂದರೆ ಸವಾಸನೆಯಾಗಿರುವದು ಅಂದರೆ ಸಮಾನ ವಾಸನೆ ಹೊಂದಿರುವದು. > (22)

(೩.೩) < ಹಾಗೂ ಫಲಿತವೆಂದರೇನು ? ಕಾವ್ಯಾನಂದ (ಆನಂದವೆಂದರೆ ನಿರ್ವೃತ್ತಿ, ಪ್ರೀತಿ, ಚಮತ್ಕಾರ). ಈ ಫಲಿತದ ಹೊರತಾಗಿ ಅದಕ್ಕೆ ಅನುಷಂಗಿಕವಾದದ್ದೂ 'ದೀರ್ಘಕಾಲದವರೆಗೆ ಉಳಿಯುವಂಥಾದ್ದೂ' ಆದಂಥ ಫಲಿತ ಯಾವುದು ? ಲೋಕಸ್ಥಿತಿಯ ದೃಷ್ಟಿಯಲ್ಲಿಯೂ ನಾಟ್ಯದ ದೃಷ್ಟಿಯಲ್ಲಿಯೂ ಯುಕ್ತಾಯುಕ್ತವಾದ ವಿವೇಕವೆಂದರೆ ವ್ಯುತ್ಪತ್ತಿ. > (ಇಂದು ಇದಕ್ಕೆ ನಾವೇನು ಹೇಳುತ್ತೇವೆಂದರೆ–ಪ್ರೇಕ್ಷಕ ಸಂಸ್ಕಾರಸಂಪನ್ನನಾಗುತ್ತಾ ನೆಂದೂ, ಜೀವನದ ಬಗ್ಗೆ ಹಾಗೂ ಕಲೆಯ ಬಗ್ಗೆ ಆತನ ತಿಳುವಳಿಕೆ ಬೆಳೆಯುತ್ತದೆಯೆಂದೂ ಹೇಳುತ್ತೇನೆ.) (23) [24]

(೩.೪) < ಹಾಗೂ ಈ ಪ್ರಕ್ರಿಯೆಯ ಅಂದರೆ ಆಸ್ವಾದ ನೆಯ ಸ್ವರೂಪವೇನು ? ಪ್ರೇಕ್ಷಕರಾದವರು ಸ್ಥಾಯೀ ಭಾವಗಳ ಆಸ್ವಾದ ತೆಗೆದುಕೊಳ್ಳುತ್ತಾರೆ. (25) ಆಸ್ವಾದನೆಗೆ ಎರಡು ಪಂತಗಳಿವೆ.

ಒಂದು ಸಮಾರಾಧನೆ, ಮತ್ತೊಂದು ಸತ್ತ್ವೋದ್ರೇಕ. >

< ಸಮಾರಾಧನೆಯೆಂದರೆ ಪ್ರೇಕ್ಷಕರ ಸಮಾಜವು ಸಾಮುದಾಯಿಕ ರೀತಿಯಲ್ಲಿ ನಾಟ್ಯಪ್ರಯೋಗದಲ್ಲಿ ಮಗ್ನವಾಗುವದು (ರಂಜನೆ) ಹಾಗೂ ನಾಟ್ಯವಸ್ತುವನ್ನು ರಾಜಸ–ಪಾತಳಿಮೇಲೆ ಅನುಭವಿಸುವದು. ರಾಜಸ–ಪಾತಳಿಯ ಮೇಲೆ ಏನಾಗುತ್ತದೆಂದರೆ ತಾಮಸ-ಪಾತಳಿಯ ಮೇಲಿನ ಉದಾಸೀನತೆ (ಇನರ್ಟನೆಸ್) ಹೋಗಿ ಕ್ಷಣದಲ್ಲಿ ಸ್ವೀಕೃತ ಗತಭಾವ (ಸಾಮೀಪ್ಯ), ಕ್ಷಣದಲ್ಲಿ ಪರಗತಭಾವ (ಅಂದರೆ ತಾಟಸ್ಥ್ಯ) (ಪರಕೀಯ ಭಾವ), ಕ್ಷಣದಲ್ಲಿ ಸುಖ, ಕ್ಷಣದಲ್ಲಿ ದುಃಖ —ಈ ಬಗೆಯ ಸ್ಥಿತಿಯುಂಟಾಗುತ್ತದೆ. > (26)

< ಸತ್ತ್ವೋದ್ರೇಕವೆಂದರೆ ಈ ಡೋಲಾಯಮಾನವಾದ ಅವಸ್ಥೆಯನ್ನು ದಾಟಿಹೋಗಿ ಪ್ರೇಕ್ಷಕನಾದಂಥವನು ಸಾತ್ವಿಕ-ಪಾತಳಿಯಮೇಲೆ ತದಾತ್ಮ (ಅಂದರೆ ತಲ್ಲೀನ) ನಾಗಿ 'ಅಂತರ್ಮುಖಿ'ನಾಗುತ್ತಾನೆ ಹಾಗೂ ಅವನಿಗೆ ರಮಣೀಯತ್ವ (ಅಂದರೆ ಸೌಂದರ್ಯ, ಚಾರುತ್ವ, ಲಾವಣ್ಯ, ಅಲಂಕೃತಿ) ಇವುಗಳ ಪ್ರತೀತಿ ಆನಂದರೂಪದಲ್ಲಾಗುತ್ತದೆ ಹಾಗೂ ಅತ ವಿಶ್ರಾಂತನಾಗುತ್ತಾನೆ. ಹೀಗೆ ವಿಶ್ರಾಂತನಾಗಲು ಪ್ರೇಕ್ಷಕನು ಸಾಮುದಾಯಿಕ ರಂಜನೆಯಿಂದ ಸ್ವಂತ ಮನಸ್ಸಿನಲ್ಲಿ ಮನನಮಾಡುವದರತ್ತ ಅಂದರೆ ಚರ್ವಣಾಯೆಂಬ ಅವಸ್ಥೆಯತ್ತ ಬರಬೇಕಾಗುವದು. ಬಹುಸಂಖ್ಯ ಪ್ರೇಕ್ಷಕರು ಚರ್ವಣಾವಸ್ಥೆಯನ್ನು ಮುಟ್ಟುವದೇ ಇಲ್ಲ. > (27) [28]

< ಆಸ್ವಾದನೆ ನಡೆದಾಗ ಪ್ರೇಕ್ಷಕನಲ್ಲಿ ಸತ್ತ್ವಜಭಾವವು ಉತ್ಪನ್ನವಾಗಬಹುದಾಗಿದೆ. >

ಸ್ವಲ್ಪದರಲ್ಲಿಯೇ ಹೇಳಬೇಕೆಂದರೆ ನಾಟ್ಯವಸ್ತು ಹಾಗೂ ಪ್ರೇಕ್ಷಕನ ಅಂತಃಕರಣ ಇವೆರಡೂ ಒಂದೆಡೆ ಕೂಡಿಬಂದು ಆಸ್ವಾದನ ಪ್ರಕ್ರಿಯೆಯು ಕೊನೆಗೆ ಕಾವ್ಯಾನಂದದಲ್ಲಿ ಅಥವಾ ವ್ಯುತ್ಪತ್ತಿಯಲ್ಲಿ ಪರಿಣತಗೊಳ್ಳುವದು. ನಾಟ್ಯ ಕ್ರಿಯೆಯ ಮೂರೂ ಹಂತಗಳ ವರ್ಣನೆ ಇಲ್ಲಿ ಮುಗಿಯುತ್ತದೆ. ಸಮಗ್ರ ಪ್ರಕ್ರಿಯೆಯನ್ನು ಸ್ವಲ್ಪದರಲ್ಲಿಯೇ ಮಂಡಿಸಿ ನೋಡಬೇಕಾದರೆ ಕೆಳಗಿನ ಆಕೃತಿಯನ್ನು ನೋಡಿರಿ :



(ಆಕೃತಿ 3)

ನಾಟ್ಯಪ್ರಕ್ರಿಯೆಯ ಮೂರು ಹಂತಗಳ ವರ್ಣನೆ ಇಲ್ಲಿಯ ತನಕ ಬಂದಿದೆಯಾದರೂ ಸಮಗ್ರ ಪ್ರಕ್ರಿಯೆಯ ವರ್ಣನೆಗೆ ಪೂರ್ಣತೆಯನ್ನು ಕೊಡುವ ದೃಷ್ಟಿಯಿಂದ ಇನ್ನೂ ಕೆಲವು ಸ್ಪಷ್ಟೀಕರಣಗಳನ್ನು ಕೊಡುವದು ಅವಶ್ಯವಾಗಿದೆ. ಸೂಕ್ಷ್ಮ ಬುದ್ಧಿಯ ವಾಚಕರ ಮನಸ್ಸಿನಲ್ಲಿ ಒಂದು ಸಂಶಯ ಬರುವದು ಖಂಡಿತ – ಅದೆಂದರೆ : ಮೂರು ಉಪಪ್ರಕ್ರಿಯೆಗಳ ಹಾಗೂ ಅವುಗಳ ಅಂಗಗಳ ಈ ರೀತಿಯ ವರ್ಣನೆ ಹಳೆಯ ಗ್ರಂಥಗಳಲ್ಲಿ ಸಿಗುವದಿಲ್ಲವಲ್ಲ, ಅದು ಹೇಗೆ ಅಂತ. ಈ ಸಂಶಯದ ನಿರಸನವನ್ನು ಮೂರು ರೀತಿಯಲ್ಲಿ ಮಾಡಬಹುದು. ಒಂದು, ಇಂಥ ಹೇಳಿಕೆ ಸ್ಪಷ್ಟವಾಗಿ ಕಾಣಿಸುವದಿಲ್ಲವಾದರೂ ಈ ರೀತಿಯ ಹೇಳಿಕೆಯನ್ನು ಗೃಹಿತ ಹಿಡಿದ ಮೇಲೆ ಬೇರೆ ಬೇರೆ ವಿಧಾನಗಳ ವ್ಯವಸ್ಥೆಯ ಬಗ್ಗೆ ಸುಲಭವಾಗಿ ತಿಳುವಳಿಕೆ ಉಂಟಾಗುವದು ; ಅಷ್ಟೇ ಅಲ್ಲದೆ, ಹಾಗೆ ಗೃಹಿತ ಹಿಡಿಯದಿದ್ದರೆ ಈ ವ್ಯವಸ್ಥೆಯನ್ನು ತಿಳಿದುಕೊಳ್ಳುವದು ಕಠಿಣವಾಗುತ್ತದೆ. ಭರತನ ನಾಟ್ಯಶಾಸ್ತ್ರವು, ಸೂತ್ರವಾಙ್ಮಯದ ದೃಷ್ಟಿಯಿಂದ, ಅಷ್ಟೊಂದೂ ಚೊಕ್ಕಾಗಿಲ್ಲ. ಆ ನಾಟಕದ ಕಾಲದಲ್ಲಿ ಸೂತ್ರಬದ್ಧತೆಯನ್ನು ತರುವ ಪ್ರಯತ್ನ ಸಾಕಷ್ಟಾದರೂ ಕೂಡ, ಆ ಸೂತ್ರಬದ್ಧತೆಯನ್ನು ಭರತನ ಚೌಕಟ್ಟಿನಲ್ಲಿಯೇ ಅದರ ಹೊರಗೆ ಹೋಗದೆ ಸಾಧಿಸಬೇಕಾಗಿದ್ದರಿಂದ ಆ ಪ್ರಯತ್ನಗಳಿಗೆ ಬಂಧನಗಳುಂಟಾದವು. ಎರಡನೆಯದಾಗಿ, ಯಾವ ವೈಚಾರಿಕ ಉಪಕರಣಗಳ ಆಧಾರದ ಮೇಲೆ ಕವಿಕರ್ಮ, ಪ್ರಯೋಗಾಲಂಕಾರ, ಆಸ್ವಾದನೆ ಎಂಬ ಮೂರು ಉಪ

ಕ್ರಿಯೆಗಳನ್ನು ಇಲ್ಲಿ ಮಂಡಿಸಲಾಗಿದೆಯೋ ಆ ಉಪಕರಣಗಳು ಅತ್ಯಂತ ಪ್ರಾಚೀನ ಹಾಗೂ ಪರಿಚಿತವಿದ್ದು ಅವುಗಳನ್ನು ಸ್ಪಷ್ಟವಾಗಿ ತಿಳಿಹೇಳುವ ಅವಶ್ಯಕತೆ ಅನಿಸಿರಲಿಕ್ಕಿಲ್ಲ. ಹಾಗೂ ಮೂರನೆಯದಾಗಿ, ಈ ಮೂರು ಉಪಕ್ರಿಯೆಗಳು ವಿಚಾರಮಾಡಲು ಸುಲಭವಾಗಲೆಂದು ಬೇರೆಬೇರೆ ಕ್ರಿಯೆಗಳೆಂದು ಹೇಳಲಾಗಿದೆಯಾದರೂ ನಿಜವಾಗಿ ವಾಸ್ತವದಲ್ಲಿ ಅವೆಲ್ಲ ಒಂದರೊಳಗೊಂದು ಬೆರೆತೇ ಇರುತ್ತವೆ— ಕವಿಕರ್ಮದಲ್ಲಿಯ ಅಲಂಕರಣ ಕಲ್ಪನೆಯ ಅಂಗವನ್ನಾಗಲಿ, ಪ್ರಯೋಗಾಲಂಕಾರದಲ್ಲಿಯ ಕಾವ್ಯಾಲಂಕಾರದ ಅಂಗವನ್ನಾಗಲಿ ಪ್ರತ್ಯೇಕಿಸುವದು ಸುಲಭವಲ್ಲ. ಅದೇರೀತಿ, ಪ್ರಯೋಗಾಲಂಕಾರದಲ್ಲಿಯ ಭಾವಸಮಂದಯವೆಂಬ ಅಂಗವನ್ನಾಗಲಿ, ಆಸ್ವಾದನೆಯಲ್ಲಿಯಂ ಸಮಾರಾಧನೆಯೆಂಬ ಅಂಗವನ್ನಾಗಲಿ, ಪ್ರತ್ಯೇಕಿಸಿಡುವದು ಸುಲಭವಲ್ಲ.

ಅಷ್ಟೊಂದು ಸೂಕ್ಷ್ಮಬುದ್ಧಿಯಿಲ್ಲದ ವಾಚಕರಿಗೆ ಕೂಡ ಅನಿಸುವ ಇನ್ನೊಂದು ಸಂಶಯವೆಂದರೆ— ಇಷ್ಟೊಂದು ಸಂಪ್ರಸಿದ್ಧವಾದ ರಸದ ಸಂಕಲ್ಪನೆಯಿದೆಯಲ್ಲಾ ಅದರ ವಿಷಯವೇ ಇನ್ನೂ ಬಂದಿಲ್ಲವಲ್ಲ ಎಂಬುದು. 'ರಸ' ಈ ಪದದ ಉಪಯೋಗವೇ ವಾದಗ್ರಸ್ತವಿದ್ದುದರಿಂದ ಬೇರೆ ಬೇರೆ ವಾಚಕರ ಮನಸ್ಸಿನಲ್ಲಿ ಬೇರೆ ಬೇರೆ ಅರ್ಥಗಳು ಮೂಡಬಹುದಾಗಿತ್ತಾದ್ದರಿಂದ ನಾಟ್ಯಪ್ರಕ್ರಿಯೆಯ ವರ್ಣನೆಯಲ್ಲಿ ರಸ-ವಿಚಾರ ಒಂದು ಅಡ್ಡಗಲ್ಲಾಗಿ ನಿಲ್ಲಬಹುದಾಗಿತ್ತು. ಅದಕ್ಕಾಗಿಯೆ ಆ ಪದವನ್ನು ಮುದ್ದಾಮಾಗಿಯೇ ಬದಿಗಿಡಲಾಯಿತು. [29] ಇನ್ನು ರಸ-ವಿಚಾರದ ಬಗ್ಗೆ ಒಂದಿಷ್ಟು ಚರ್ಚೆಮಾಡಲು ಅಡ್ಡಿಯಿಲ್ಲ. ಈ ಚರ್ಚೆ ಮಾಡುವಾಗ ನಮಗೆ ಮೂರನೆಯದೊಂದು ಸಂದೇಹಕ್ಕೆ ಉತ್ತರ ಸಿಗಬಹುದಾಗಿದೆ.

ಮೂರನೆಯ ಸಂದೇಹವೆಂದರೆ ಅದು ನಾವು ಸ್ವೀಕರಿಸಿದ ವರ್ಣನೆಯ ಚೌಕಟ್ಟಿನ ಮೂಲಕವೇ ಉದ್ಭವಿಸುವಂತ ಪದು. ನಾವು ಪ್ರತಿಯೊಂದು ಉಪಕ್ರಿಯೆಯ ನಾಲ್ಕು ಅಂಗಗಳ ಬಗ್ಗೆ ಚರ್ಚಿಸಿದ್ದೇವೆ. ಆದರೆ ಆ ಎಲ್ಲ ಅಂಗಗಳಲ್ಲಿ ವ್ಯಾಪಿಸಿರುವ ಶಕ್ತಿಯಾವುದು ? ಈ ಪ್ರಶ್ನೆಯ ಶೋಧವು ನಮ್ಮನ್ನು ನೇರವಾಗಿ ರಸಕಲ್ಪನೆಯತ್ತಲೇ ಒಯ್ಯುವದು.

< ಮೂರೂ ಉಪಕ್ರಿಯೆಗಳು ಕೂಡಿ ಒಂದೇ ನಾಟ್ಯ ಪ್ರಕ್ರಿಯೆಯಾಗಿರುವದನ್ನು ನಾವು ಗಮನಿಸಿದ್ದೇವೆ. ಹಾಗೂ ಆ ನಾಟ್ಯಪ್ರಕ್ರಿಯೆಗೆ ಚೈತನ್ಯಕೊಡುವ ಶಕ್ತಿ ಒಂದೇ ಆಗಿದೆ. > (ಈ ಶಕ್ತಿ ಮನಸ್ಸಿನಲ್ಲಿರುತ್ತದೆಯೇ ಅಥವಾ ವಸ್ತುಗತವಾಗಿರುತ್ತದೆಯೇ ಎಂಬ, ಆಧುನಿಕರಿಗೆ ಅನಿಸುವಂಥ, ಪ್ರಶ್ನೆ ಅತಿಪ್ರಾಚೀನವಾದ ಏಕಸಂಧವಾದ ಯಾತು–ದಿವ್ಯಕತೆ–ಸಂಬದ್ಧವಾದ ವಿಚಾರ ಕೋಶದಲ್ಲಿ ಉದ್ಭವಿಸುವದಿಲ್ಲ. ಹೆಚ್ಚೆಂದರೆ, ನಾವು ನಮ್ಮ ಭಾಷೆಯಲ್ಲಿ ಹೀಗೆ ಹೇಳಬಹುದು : ಆ ಶಕ್ತಿಗೆ ಎರಡು ರೂಪಗಳಿವೆ ಎಂದು. ಆದರೆ ಹಾಗೆ ಹೇಳುವದು ಕೂಡ ಕಾಲವಿಪರ್ಯಾಸದ ಮೂಲಕ ಸ್ವಲ್ಪ ತಪ್ಪೆಂದೇ ಭಾವಿಸಬೇಕು.)

< ಈ ಶಕ್ತಿಯು ಲೋಕವೃತ್ತ, ಕಾವ್ಯಬಂಧ (ಮತ್ತು ಕಾವ್ಯಾರ್ಥ), ನಾಟ್ಯವಸ್ತು ಇವುಗಳನ್ನು ಜೀವಂತಗೊಳಿಸುತ್ತದೆ ; ಕವಿಪ್ರತಿಭೆ, ನಾಟ್ಯಾಭಿನಯ ಹಾಗೂ ಪ್ರೇಕ್ಷಕ-ಸಹೃದಯತೆ ಇವುಗಳಲ್ಲಿ ಸಂಚರಿಸುತ್ತದೆ ; ಹಾಗೂ ಕಾವ್ಯಬಂಧನಿಷ್ಪತ್ತಿ, ಕಾವ್ಯವಸ್ತುನಿಷ್ಪತ್ತಿ, ಕಾವ್ಯಾನಂದ ನಿಷ್ಪತ್ತಿ ಇವುಗಳಿಗೆ ಸಂಚಾಲನೆಕೊಡುತ್ತದೆ. ಅದಕ್ಕೇ ಇವುಗಳಿಗೆ ರಸವೆನ್ನಬೇಕು. > (ಆಕೃತಿ 3 ನೋಡಿರಿ.)

< ಬೇರೆ ಬೇರೆ ಕ್ರಿಯೆ/ವ್ಯಾಪಾರಗಳಲ್ಲಿ ಅದರ ಚಲ–ಅವಿಷ್ಕಾರ ಕಾಣಿಸುತ್ತದೆ, ಬೇರೆ ಬೇರೆ ಭಾವ/ಅವಸ್ಥೆಗಳಲ್ಲಿ ಅದರ ಸ್ಥಿರ–ಅವಿಷ್ಕಾರ ಕಾಣಿಸುತ್ತದೆ. ವಿಶೇಷವಾಗಿ, ಅದರ ಅವಿಷ್ಕಾರವು ಸ್ಥಾಯೀಭಾವದಲ್ಲಿ ಕಾಣಿಸುತ್ತದೆ. (30) (31)

ರಸನಿಷ್ಪತ್ತಿ, ರಸನಿರ್ಮಿತಿ, ರಸಪೂರ್ಣತೆ, ರಸಿಕತೆ, ರಸನಾ ವ್ಯಾಪಾರ ಈ ಪದಗಳ ಅರ್ಥವನ್ನು ಮೇಲಿನ ಚರ್ಚೆಯಂ ಮುಖಾಂತರ ನಿಶ್ಚಿತಗೊಳಿಸುವದು ಸಾಧ್ಯ ಎಂದೆನಿಸುವದು. ಆದರಂತೆಯೇ ಅವುಗಳಲ್ಲಿಯ ಅರ್ಥಭೇದಗಳನ್ನೂ ನಾವೀಗ ಸ್ಪಷ್ಟವಾಗಿ ತಿಳಿದುಕೊಳ್ಳಿಬಹುದಾಗಿದೆ. ರಸ ಎಂಬ ಪದಕ್ಕೆ ಕಾಲಕ್ರಮೇಣವಾಗಿ ಬೇರೆ ಬೇರೆ ಅರ್ಥಗಳು ಪ್ರಾಪ್ತವಾಗಿಬಿಟ್ಟವು. ಅಥವಾ ಆ ಪದಕ್ಕೆ ಒಂದು ಅತ್ಯಂತ ವಿಲಕ್ಷಣವಾದ ರೀತಿಯಲ್ಲಿ ತರಲವಾದಂಥ ಅರ್ಥ ಪ್ರಾಪ್ತವಾಯಿತೆಂದೂ ಹೇಳಬಹುದು. 'ಭಾವ' ಎಂಬ ಪದದ ಕತೆಯೂ ಇದಕ್ಕಿಂತ ಬಹಳ ಬೇರೆಯಾಗಿಲ್ಲ. ಹೀಗೇಕಾಯಿತು ಅಥವಾ ಹೀಗಾದಂತೆ ನಮಗೆ ಯಾಕೆ ಕಾಣಿಸುತ್ತದೆ ? ಯಾಕಂದರೆ, ಅತೀ ಪ್ರಾಚೀನವಾದ ಏಕಸಂಧವಾದ ಯಾತು–ದಿವ್ಯಕಥಾ

ಸಂಬಂಧವಾದ ವಿಚಾರಕೋಶದ ಅಧಿಸತ್ತೆ ಆನಂತರದ ಕಾಲದಲ್ಲಿ ಆಷ್ಟೊಂದು ಸ್ಥಿರವಾಗಿ ಉಳಿಯಲಿಲ್ಲ ಹಾಗೂ ದ್ವಂದ್ವಾತ್ಮಕ ವೈಚಾರಿಕ ಶೋಧ ಪ್ರಾರಂಭವಾಯಿತು. ಆದ್ದರಿಂದ ರಸ ಎಂಬುದು ಕವಿಗತವೋ, ವಸ್ತು ಗತವೋ ಅಥವಾ ಪ್ರೇಕ್ಷಕಗತವೋ ಎಂಬ, ಅಥವಾ ಅದರಂತಹ, ಪ್ರಶ್ನೆಗಳು ನಂತರ ಶಾಸ್ತ್ರಜ್ಞರನ್ನು ಕಾಡಿಸ ತೊಡಗಿದವು. (ವಸ್ತುಗತವಾದಂಥ ರಸವು ನಟಗತವಾಗು ತ್ತದೆಯೆಂದೂ ಕೆಲವು ಮಂದಿ ಹೇಳಿಬಿಟ್ಟರು!) ಈ ಮತಭೇದದ ಚರ್ಚೆಗೆ ಸದ್ಯಕ್ಕೆ ಆಸ್ಪದವಿಲ್ಲ. ಈಗ ನಾವು ಇಷ್ಟನ್ನು ಮಾತ್ರ ಹೇಳಬಹುದು– 'ರಸನಿಷ್ಪತ್ತಿ' ಎಂಬ ಪದವನ್ನು ಕೆಲವರು ಎರಡನೆಯ ಹಾಗೂ ಮೂರ ನೆಯ ಉಪಪ್ರಕ್ರಿಯೆಗಳೆರಡಕ್ಕೂ ಕೂಡಿಯೇ ಉಪಯೋ ಗಿಸುತ್ತಾರೆ (ಉದಾಹರಣೆಗೆ ಭರತ), ಇನ್ನೂ ಕೆಲವರು ಆವುಗಳಲ್ಲಿ ಮೊದಲನೆಯದನ್ನೂ ಸಮಾವೇಶಗೊಳಿಸು ತ್ತಾರೆ, ಹಾಗೂ ಕೆಲವರು ಆ ಪದವನ್ನು ಮೂರನೆಯ ಉಪಪ್ರಕ್ರಿಯೆಗೆ ಮಾತ್ರ ಹಚ್ಚುತ್ತಾರೆ.

(ಈ ಲೇಖನವು ಡಾ. ಕೇಳಕರ ಅವರ 'ಪ್ರಾಚೀನ ಭಾರತೀಯ ಸಾಹಿತ್ಯ ಮೀಮಾಂಸಾ : ಏಕ ಆಕಲನ' ಎಂಬ ಮರಾಠೀ ಪುಸ್ತಿಕೆಯಲ್ಲಿಯ ಒಂದು ಭಾಗದ ಭಾಷಾಂತರ.)

ಟಿಪ್ಪಣಿಗಳು

1. ಭರತ, **ನಾಟ್ಯಶಾಸ್ತ್ರ** ೭ ಆರಂಭಃ ಭೂ ಶತೇ ಕರಣೇ ಧಾತುಃ । ತಥಾ ಚ ಭಾವಿತಂ ವಾಸಿತಂ ಕೃತಾಮಿತ್ಯನರ್ಥಾನ್ತ ರಮ್ । ಲೋಕೇ ಅಪಿ ಚ ಪ್ರಸಿದ್ಧಮ್ ಅಹೋ ಹಿ ಅನೇನ ಗಂಧೇನ ರಸೇನ ವಾ ಸರ್ವಮೇವ ಭವಿತಾಮಿತಿ ತಚ್ಚ ವಾಸ್ಯ ರ್ಥವತ್ ।

2. ಭರತ, ನಾಟ್ಯಶಾಸ್ತ್ರ ೧.೧೧೨, ೧.೧೧೯, ೧೯.೪೧.

3. ಭರತ, ನಾಟ್ಯಶಾಸ್ತ್ರ ೩೫.೩೧ ವಾಮನ, ಕಾವ್ಯಾಲಂ ಕಾರಸೂತ್ರ ೧.೩.೧೬ ಕವಿತ್ವಬೀಜಂ ಪ್ರತಿಭಾನವತ್ । ಭಾಮಹ, **ಕಾವ್ಯಾಲಂಕಾರ** ೧.೫, ಭರತ, ನಾಟ್ಯಶಾಸ್ತ್ರ ೯.೪೪ ಹಾಗೂ ಅದರ ಮೇಲೆ ಅಭಿನವಗುಪ್ತ, **ಅಭಿನವಭಾರತೀ** ಆನಂದವರ್ಧನ, **ಧ್ವನ್ಯಾಲೋಕ** ಹಾಗೂ ಅದರ ಮೇಲೆ ಅಭಿನವಗುಪ್ತ, **ಧ್ವನ್ಯಾಲೋಕಲೋಚನ**. ಮಮ್ಮಟ, **ಕಾವ್ಯ ಪ್ರಕಾಶ** ಅದರ ಮೇಲಿನ ಪ್ರದೀಪ ಟೀಕೆ. ಭಟ್ಟತೌತ, **ಕಾವ್ಯ ಕೌತುಕ** (ಉಪಲಬ್ಧವಿಲ್ಲ), ಅವತರಣ : ಮಾಣಿಕ್ಯಚಂದ್ರ, **ಕಾವ್ಯಪ್ರಕಾಶಸಂಕೇತ**.

ನಿರಂಕುಶಾಃ ಕವಯಃ (ಸಂದರ್ಭ ವಾಂಛಿತ) ಭಾಮಹ, **ಕಾವ್ಯಾಲಂಕಾರ** ೫,೬, ಆನಂದವರ್ಧನ, **ಧ್ವನ್ಯಾಲೋಕ** ೩.೪೧-೪೨ ವೃತ್ತಿ ; ೩-೧೧-೧೪ ವೃತ್ತಿ. ಕ್ಷೇಮೇಂದ್ರ : ನ ಶತಾಬ್ದಿಕಂ ಕೇವಲ ತಾರ್ತಿಕಂ ವಾ ಕುರ್ಯಾತ್ ಗುರು ಸೂಕ್ತಿವಿಕಾಸವಿಘ್ನಮ್, (ಸಂದರ್ಭ ವಾಂಛಿತ). ಕುಂತಕ, **ವಕ್ರೋಕ್ತಿಜೀವಿತ** ೧-೨೨ ರಿಂದ ಪ್ರಕರಣ ವಕ್ರತಾ, ಪ್ರಬಂಧ ವಕ್ರತಾ ಇವುಗಳ ಮೇಲಿನ ಭಾಗ. ಅಭಿನವಗುಪ್ತ, **ಅಭಿನವ ಭಾರತೀ**, ಭರತ, **ನಾಟ್ಯಶಾಸ್ತ್ರ**, ೬.೪೮. ಅಭಿನವಗುಪ್ತ, **ಧ್ವನ್ಯಾಲೋಕಲೋಚನ** ಆನಂದವರ್ಧನ, **ಧ್ವನ್ಯಾಲೋಕ** ೧.೧. ಅಪೂರ್ವವಸ್ತುನಿರ್ಮಾಣ.

ವಾಗ್ಭಟ, **ವಾಗ್ಭಟಾಲಂಕಾರ** : ಪ್ರತಿಭೈವ ಚ ಕವೀ ನಾಂ ಕಾವ್ಯಕರಣಕಾರಣಮ್ । ವ್ಯುತ್ಪತ್ತ್ಯಭ್ಯಾಸೌ ತಸ್ಯಾ ಏವ ಸಂಸ್ಕಾರಕಾರಣೌ ನ ತು ಕಾವ್ಯ ಹೇತೂ । ಮಮ್ಮಟ, **ಕಾವ್ಯ ಪ್ರಕಾಶ** ೧-೩ (ಪ್ರತಿಭಾ, ವ್ಯುತ್ಪತ್ತಿ, ಅಭ್ಯಾಸ ಈ ಮೂರು ಕಾವ್ಯಹೇತುಗಳು). ಭಟ್ಟತೌತ, **ಕಾವ್ಯಕೌತುಕ** (ಉಪಲಬ್ಧವಿಲ್ಲ), ಅವತರಣ – ಹೇಮಚಂದ್ರ, **ಕಾವ್ಯಾನು ಶಾಸನಂ** ಜಗನ್ನಾಥ, **ರಸಗಂಗಾಧರ**.

4. ಸಂದರ್ಭ ವಾಂಛಿತ.

5. ವಾಮನ, **ಕಾವ್ಯಾಲಂಕಾರಸೂತ್ರ** ೧.೧.೫ : ಕಾವ್ಯ ಸದ್ಗಹ್ವಾರ್ಥವತ್ ಪ್ರೀತಿಕೀರ್ತಿಹೇತುತ್ವಾತ್ । ಮಮ್ಮಟ, **ಕಾವ್ಯಪ್ರಕಾಶ** ೧. ೨: ಕಾವ್ಯಂ ಯಶಸೇಽರ್ಥಕೃತೇ ವ್ಯವ ಹಾರಾವಿದೇ ಶಿವೇತರಕ್ಷತಯೇ ಸದ್ಯಃ ಪರನಿವೃತಯೇ ಕಾಲಾ ಸಂಮಿತತನಯೋಪದೇಶಯುಜೇ ।

6. ಭಾಮಹ, **ಕಾವ್ಯಾಲಂಕಾರ** ೬.೬ : ಆನ್ಯಸಾರಸ್ವತಾ ನಾಮು ಸನ್ತ ನ್ಯೋಕ್ತಾನುವಾದಿನಃ ।

7. ಭರತ, ನಾಟ್ಯಶಾಸ್ತ್ರ, ೧೬.೬೩ : ಅರ್ಥಾಕಿಯಾಪೇಷಂ ಕಾವ್ಯಮ್ । ಅಭಿನವಗುಪ್ತ, **ಅಭಿನವಭಾರತಿ** (ಅವತರ : ಗ.ತ್ರ್ಯಂ. ದೇಶಪಾಂಡೆ, ಸಂ.೪೮, ಟಿಪ್ಪಣಿ ೫೬ ; ಹಾಗೂ ಕಾವ್ಯಬನ್ಧಾಃ ನರಾತ್ರಿಶಲ್ಲಕ್ಷಣಾನ್ವಿತಾಃ ಕರ್ತವ್ಯಾಃ ಇತ್ಯು ಕ್ತಮ್ । ತತ್ರ ಗುಣಾಲಙ್ಕಾರಾದಿರೀತಿವ್ಯತ್ಪಯಶ್ಚ ಕಾವ್ಯೇರು ಪ್ರಸಿದ್ಧೋಮಾರ್ಗಃ । ಲಕ್ಷಣಾನಿ ತು ನ ಪ್ರಸಿದ್ಧಾನಿ ।

8. ಭರತ, ನಾಟ್ಯಶಾಸ್ತ್ರ ೬-೬೧ : ನ ಹಿ ಸಸಾಹಚರ್ಯೇ ಕಶ್ಚಿ ದಪ್ಯರ್ಥಃ ಪ್ರವರ್ತತೇ । ವಿಭಾವನುಭಾವ್ಯಾಭಿನಿಸಂಯೋ ಗಾದ್ರಸಾನಿಷ್ಪತ್ತಿಃ । (ಕೊನೆಯ ವಾಕ್ಯಕ್ಕೆ ರಸಸೂತ್ರ ಎಂದು ಕರೆಯುವ ವಾಡಿಕೆಯಿದೆ.)

ಭರತ, **ನಾಟ್ಯಶಾಸ್ತ್ರ** ೭ ಆರಂಭ : ಭಾವಾ ಇತಿ ಕಸ್ಮಾತ್ । ಕಿಂ ಭವನ್ತೀತಿ ಭಾವಾಃ । ಕಿಂ ವಾ ಭಾವಯ ನ್ತೀತಿ ಭಾವಾಃ । ಉಚ್ಯತೇ ವಾಗಙ್ಗಸತ್ತ್ವೋಪೇತಾನ್ ಕಾವ್ಯಾರ್ಥಾನ್ ಭಾವಯನ್ತೀತಿ ಭಾವಾ ಇತಿ ।

9. 'ಅರ್ಥ'ವೆಂದರೆ ಪಾಶ್ಚೀನ ಭಾರತೀಯ ವಿಚಾರ ಪದ್ಧತಿಯಲ್ಲಿಯ ಒಂದು ಮಹತ್ವದ ಸಂಕಲ್ಪನೆ–ಮನುಷ್ಯನ ವೃತ್ತಿಯ ವಿಷಯವೆಂದೆ ಅರ್ಥ. ಉದಾಹರಣೆಗೆ ಮನುಷ್ಯನ ವೃತ್ತಿಯ ಬದಲಾಗುವ ಅರ್ಥ (ಕನ್ಸರ್ನ್ಡ್) ಅಂದರೆ ಧರ್ಮ, ಅರ್ಥ, ಕಾಮ, ಮೋಕ್ಷ ಇವು ನಾಲ್ಕು ಪುರುಷಾರ್ಥಗಳು...

10. ಭರತ, ನಾಟ್ಯಶಾಸ್ತ್ರ ೭ : ವಿಭಾವೋ ನಾಮ ವಿಜ್ಞಾನಾರ್ಥಃ |ವಿಭಾವಃ ಕಾರಣಂ ನಿಮಿತ್ತಂ ಹೇತುಃ ಇತಿ ಪರ್ಯಾಯಾಃ |...ವಿಭಾವಿತಂ ವಿಜ್ಞಾತಮಿತ್ಯನರ್ಥಾನ್ತರಮ್ |

ಧನಂಜಯ ದಶರೂಪಕ ೪.೨. ಆಲಮ್ಬಾನೋದ್ದೀಪನತ್ವ ಪ್ರಭೇದೇನಸಚದ್ವಿಧಾ |

11. ಭರತ, ನಾಟ್ಯಶಾಸ್ತ್ರ, (ಸಂದರ್ಭ ವಾಂಚಿತ).

12. ಭರತ, ನಾಟ್ಯಶಾಸ್ತ್ರ (ಸಂದರ್ಭ ವಾಂಛಿತ) : ಸತ್ತ್ವಾತಿರಿಕ್ತಮ್ ಅಭಿನಯಃ ಮನಸಃ ಸಮಾಧೋ ಸತ್ವಾನಿಷ್ಪಾತಿರ್ಭವತಿ |

13. ಭರತ ನಾಟ್ಯಶಾಸ್ತ್ರ ೮.೧೧, ೧೪.೨, ೨೧-೨-೫, ೨೨-೩-೪ ; ೧೭-೧, ೨೯.೧೭, ೨೭.೯೨

14. ಶ್ರೀಶಂಕುಕ (ಉಪಲಬ್ಧ ವಿಲ್ಲದ ಗ್ರಂಥ,), ಅವತರಣ–ಅಭಿನವಗುಪ್ತ, ಅಭಿನವಭಾರತಿ : ಸ್ಥಾಯೀ ತು ಕಾವ್ಯ ಬಲಾದಪಿ ನಾನುಸಂಧೇಯಃ...ನ ಹಿ ವಾಗೇವ ವಾಚಿಕಮ್... ಅಪಿ ತು ತಥಾ ನಿವೃತ್ತಿಮ್ | ಆನಂದವರ್ಧನ,ಧ್ವನ್ಯಾಲೋಕ (ಸಂದರ್ಭ ವಾಂಛಿತ).

15. ಹೋಲಿಸಿ ನೋಡಿರಿ: J. Warren Beach, "I like to distinguish between novelists that **tell** and those that **show**" (ಅವತರಣ ಹಾಗೂ ಚರ್ಚೆ Wayne C. Booth, **The Rhetoric of Fiction,** Chicago ; University of Chicago Press)

16. ಪ್ರತಿಭಾಸದ ಮೇಲೆ ಸಂದರ್ಭವಾಂಛಿತ.

17. ಭಟ್ಟನಾಯಕ, ಹೃದಯದರ್ಪಣ (ಉಪಲಬ್ಧ ವಿಲ್ಲ), ಅವತರಣ : ಅಭಿನವಗುಪ್ತ, ಅಭಿನವಭಾರತೀ (ಸಂದರ್ಭ ವಾಂಛಿತ).

18. ಪ್ರತಿಭಾಸ ಹಾಗೂ ಅವಭಾಸ. ಈ ಫಲಿತ ಗುಣಗಳ ಜೋಡಿಯೊಂದಿಗೆ ಹೋಲಿಸಿ ನೋಡುವದಕ್ಕೋಸ್ಕರ ಓದಿ : **Aristotle, Poetics Ch. 4.1448 b4-24(English translation by Leon Golden, Englewood Cliffs, N. J.; Prentice - Hall, 1968) : 'Speaking generally, the origin of the art of Poetry is to be found in two natural causes.**

For the process of imitation is natural to mankind from childhood on...imitation is given to us by nature, as are harmony and rhythm.' ಕೊನೆಯ ಎರಡು ಶಬ್ದಗಳ ಅರ್ಥ, ಅರಿಸ್ಟಾಟಲನ ಪ್ರಕಾರ, ಅನುಕ್ರಮವಾಗಿ, 'ರಚನಾ ಸೌಂದರ್ಯ' ಹಾಗೂ 'ಪ್ರವಾಹ ಸೌಂದರ್ಯ' ಎಂದಿದ್ದಿರಬೇಕು. ಕಾವ್ಯ ಕಲೆಯ ಉಗಮವು ಮನುಷ್ಯನಲ್ಲಿದ್ದ ನೈಸರ್ಗಿಕವಾದ ಅನುಕರಣಪ್ರಿಯತೆ ಹಾಗೂ ಸೌಂದರ್ಯಪ್ರಿಯತೆ ಈ ಎರಡು ಕಾರಣಗಳಲ್ಲಿದೆ ಎಂಬುದು ಅರಿಸ್ಟಾಟಲನ ಮತವಿದ್ದಿರಬೇಕು.

19. ಭರತ, ನಾಟ್ಯಶಾಸ್ತ್ರ ೧೬-೮೧, ೧೬-೭೩-೭೪.

20. ಅಭಿನವಗುಪ್ತ, ಅಭಿನವಭಾರತೀ : ಅಭಿನಯಸ್ಯ ದ್ವಿವಿಧಾ ಇತಿ ಕರ್ತವ್ಯತಾ ಲೋಕಧರ್ಮಿ ನಾಟ್ಯಧರ್ಮಿಚ| ಲೌಕಿಕಸ್ಯ ಮೂಲಭೂತತ್ವಾತ್ ನಾಟ್ಯಧರ್ಮಂ (ಪ್ರತಿ) ವ್ಯೆಚಿತ್ರ್ಯೋಲ್ಲೇಖಮಿತಿಸ್ಥಾನತ್ವಾತ್ ಇತಿ ಲೋಕಧರ್ಮಾ ಮೇವಾದೌ ಲಕ್ಷ್ಯತಿ | (ಸಂದರ್ಭ ವಾಂಛಿತ).

21. ಆಧುನಿಕ ಸಮೀಕ್ಷಕರ ಒಲವು ಮಾತ್ರ ಈ ಎರಡು ಪ್ರಕಾರಗಳ ವೃತ್ತಿಗಳಲ್ಲಿಯ ವಿರೋಧವಿದೆ ಎಂದು ಹೇಳುವದರತ್ತ ಇದೆ–ಈಗ ನ್ಯಾಚರಲಿಸ್ಟಿಕ್ | ಸ್ವಾಯ್ಲಾಯಜ್ಡ್, ಟ್ರಡೀಶನಲ್| ಇನೊವ್ಹೆಟಿವ್ಹ್, ಲೋಕಲ್ ಕಲರ್| ಯೂನಿವ್ಹರ್ಸಿಟೈಜೇಶನ್, ಫಂಕ್ಶನಲ್| ಡೆಕೊರೆಟಿವ್ಹ್ ಹಾಗೆ ಪರಸ್ಪರ ವ್ಯಾವರ್ತಕವಾದ ರೀತಿಗಳೆಂದು ಸಮೀಕ್ಷಕರು ಕಲಾಕಾರರ ಹಾಗೂ ರಸಿಕರ ಮುಂದೆ ಮಂಡಿಸುತ್ತಾರೆ. ಗಮನಿಸಬೇಕಾದ ಒಂದು ಮಾತೆಂದರೆ ಲೋಕಧರ್ಮಿ| ನಾಟ್ಯ ಧರ್ಮಿ ಈ ಜೋಡಿಯಲ್ಲಿ ಈ ಎಲ್ಲ ಜೋಡಿಗಳು ಸಮಾವೇಶಗೊಂಡಿವೆ. ಅವುಗಳನ್ನು ಬಿಡಿಸಿ ಬೇರ್ಪಡಿಸುವ ಕೆಲಸ ಪ್ರಾಚೀನ ಕಾಲದಿಂದಲೇ ಸುರುವಾಗಿದೆ : ಸ್ವಭಾವೋಕ್ತ| ಅತಿಶಯೋಕ್ತ, ಸರಲೋಕ್ತ | ವಕ್ರೋಕ್ತ, ಗ್ರಾಮ್ಯ | ಕಾಂಟೆಮಾನ ಹೀಗೆ ಕೆಲವು ಜೋಡಿಗಳನ್ನು ಸ್ವಭಾವೋಕ್ತ| ತತ್ರೋಕ್ತ ಎಂಬ ಜೋಡಿಯಲ್ಲಿ ಒಂದುಗೂಡಿಸುವ ಪ್ರಯತ್ನ ಪೂರ್ಣ ಯಶಸ್ವಿಯಾದಂತಿಲ್ಲ. ಹೀಗೆ ಹಿಂಜಿ ಹಿಂಜಿ ನಾವು ತಾರ್ಕಿಕ ಸ್ಪಷ್ಟತೆಯನ್ನು ಸಾಧಿಸಿದರೂ, ಹಿಂದಿನ ಈ ಒಂದು ಗೂಡಿಸುವಿಕೆಯಲ್ಲಿಯ ಒಂದು ಲಾಭವನ್ನು ಮಾತ್ರ ನಾವು ಕಳೆದುಕೊಳ್ಳುತ್ತೇವೆ. ಹಿಂಜಿಟ್ಟ ಜೋಡಿಗಳಲ್ಲಿ ಪ್ರಥಮ ನಿರ್ದಿಷ್ಟವಾದ ಗುಣಗಳ ಪರಸ್ಪರ ಅನ್ವಯ (ಪೊಜಿಟಿವ್ಹ್ ಕಾರಿಲೇಶನ್) ವಿದೆ ಹಾಗೂ ದ್ವಿತೀಯ ನಿರ್ದಿಷ್ಟ ಗುಣಗಳ ಪರಸ್ಪರ ಅನ್ವಯವಿದೆ. ಸ್ವಲ್ಪದರಲ್ಲಿ ಹೇಳುವದಾದರೆ, ಈ ಜೋಡಿಗಳು ಧ್ರುವೀಭೂತ (ಪೋಲರೈಜ್ಡ್) ವಾಗಿವೆ.

22. ಭರತ, ನಾಟ್ಯಶಾಸ್ತ್ರ ೨೭ .೫೬ಅಭಿನವಗುಪ್ತ, ಅಭಿನವ ಭಾರತಿ ೧-೨೮೩, ೨೯೩,೨೪೧.

23. ಆನಂದವರ್ಧನ, **ಧ್ವನ್ಯಾಲೋಕ** ೩-೩೦; ವಿವೇಯಾನುನ್ಮುಖೀ ಕರ್ತುಂ ಕಾವ್ಯಶೋಬಾರ್ಥಮೇವ ವಾ । ಅಭಿನವಗುಪ್ತ, **ಧ್ವನ್ಯಾಲೋಕಲೋಚನ** (ಸಂದರ್ಭ ವಾಂಛಿತ) : ಹೃದಯಾನು ಪ್ರವೇಶ ಮುಖೇನ ಚತುರ್ವರ್ಗೋಪಾಯವ್ಯುತ್ಪಾಂತಿರಾಧೆಯಾ ।; ತಚ್ಚರ್ವಣಾತ್ ಏವ ಪ್ರೀತಿವ್ಯುತ್ಪತ್ತಿಸ್ಥಿಃ ಕಿಂ ಅನ್ಯಾದರ್ಥನಿಯಮ್ ।; ರಸಾಸ್ವಾದೋಪಯಸ್ವಪ್ರತಿಭಾವಿಜೃಂಮ್ಭಾರೂಪಾಂ ವ್ಯುತ್ಪತ್ತಿಮ್ ।

24. ವ್ಯುತ್ಪತ್ತಿಯ ವಿಷಯದಲ್ಲಿ ನನಗೆ ಉಪಯೋಗಕ್ಕೆ ಬಂದಂಥ ಲೇಖನವೆಂದರೆ–ಮಾ. ವಾ. ಪಟವರ್ಧನ, **'Vyutpatti,** as a purpose of poetry, according to sanskrit poetics,' in M. G. Dhadphale (ed.), **Principal V. S. Apte Commemoration Volnme,** Pune ; Deccan Education Society, 1978, pp.33-40

25. ಭರತ, **ನಾಟ್ಯಶಾಸ್ತ್ರ,** ೬-೩೧ರ ನಂತರದ ಗದ್ಯ– ನಾನಾ ಭಾವಾಭಿನಯವ್ಯಾಂಜ್ಯಾತಾನ್ ವಾಚಗಂಗಸತ್ತ್ವಾಪೇತಾನ್ । ಸ್ಥಾಯೀಭಾವಾನಾಸ್ವಾದಯಾನ್ತಿ ಸುಮನಸಃ ಪ್ರೇಸಕಾಃ । ಭಟ್ಟನಾಯಕ, **ಹೃದಯದರ್ಪಣ** (ಉಪಲಬ್ಧವಿಲ್ಲ), ಆವ ತರಣ : ಅಭಿನವಗುಪ್ತ (ಸಂದರ್ಭ ವಾಂಛಿತ).

26. ಅಭಿನವಗುಪ್ತ, **ಅಭಿನವಭಾರತಿ** ೧.೨೭ : ಸ್ವಗತ ಪರಗತತ್ವಾದಿ ಚ ಪೂರ್ವವದ್ ವಿಕಲ್ಪ್ಯಮ್ । ನಚಪ್ರಗೀತಂ ರಸಾ್ವಸ್ತೇ ವ್ಯವಹಾರೇ ಯೋಗ್ಯಮ್ ।

27. ಸಂದರ್ಭ ವಾಂಛಿತ.

28. ರಂಜನೆಯಿಂದ ಚರ್ವಣದ ಕಡೆಗೆ ಸಂಕ್ರಮಣ–ಈ ಕಲ್ಪನೆ ಮಹತ್ವದ್ದು. ಹೋಲಿಕೆಗಾಗಿ ನೋಡಿ : L.C.Knights, **Some Shakespearean Themes,** London : Chatto & Windus, 1959, Foreword: 'We reach our understanding of literature, assimilate it, in some sense make it our own, not only when we are in direct contact with the 'words on the page'... (but also) when, apparently otherwise engaged, we recall what we have read, when we listen –or half-listen–to a lecture, or in talk with a friend. ಇಲ್ಲಿ ವರ್ಣಿಸಿದ ಎರಡನೆಯ ಅವಸ್ಥೆಯನ್ನು ನೋಡಬೇಕು. ಈ ಕ್ರಿಯೆಗೆ ಉಪಮೆ ಕೊಡಬೇಕು, ಯಾಕೆಂದರೆ ರಸನಿಷ್ಪತ್ತಿಗೆ ಜಿಹ್ವಾರಸ ನಿಷ್ಪತ್ತಿಯ ಉಪಮೆ ಕೊಡುವ ವಾಡಿಕೆಯೆಂತೂ ಇದ್ದೇ ಇದೆ.

29. ಪ್ರಾಚೀನ ಭಾರತೀಯ ತತ್ತ್ವಜ್ಞಾನವೆಂದರೆ ವೇದಾಂತ, ಭಾರತೀಯ ಸಾಹಿತ್ಯಮೀಮಾಂಸೆಯೆಂದರೆ ರಸಸಿದ್ಧಾಂತ, ಅಭಿಜಾತಸಂಗೀತದ ಚರ್ಚೆಯೆಂದರೆ ರಾಗ ಲಕ್ಷಣಗಳ ಚರ್ಚೆ ಎಂಬ ಸಮೀಕರಣದಿಂದ ನಮ್ಮ ಅಲ್ಪ ಸಂತುಷ್ಟ ಅಭ್ಯಾಸಕರು ಹೊರಗೆ ಬಂದಪ್ಪು ಉತ್ತ ವು ! 'ರಸ' ಎಂಬ ಪದದ ಪೇಪರವೇಟನ್ನು ಬದಿಗೆ ಸರಿಸಿ ಇಟ್ಟದ್ದರಿಂದ ಇತರ ಸಂಗತಿಗಳತ್ತ ವಾಚಕರ ಲಕ್ಷ್ಯ ಹರಿದರೆ ಕೆಟ್ಟೇನಿಲ್ಲ ! ಯಾರಿಗೆ ರಸಕಲ್ಪನೆ ಸಮ್ಮತವಿಲ್ಲವೋ ಅಂಥವರಿಗೆ ಈ ಸಾಹಿತ್ಯ ಮೀಮಾಂಸೆಯಲ್ಲಿ ತಾವು ಒಪ್ಪಬಹುದಾದ ಎಷ್ಟೋ ಸಂಗತಿ ಗಳಿವೆ ಎಂಬುದನ್ನು ಅರಿಯಲು ಅವಕಾಶ ಸಿಗುತ್ತದೆ.

30. ಭರತ, **ನಾಟ್ಯಶಾಸ್ತ್ರ** (ಸಂದರ್ಭ ವಾಂಛಿತ) : ಸ್ಥಾಯೀ ಭಾವಾತ್ ರಸತ್ವಮುಪಸ್ಯಾಪಃ । ಸ್ಥಾಯಿನೋಭಾವಾಃ ರಸತ್ವಮಾಪ್ನುವನ್ತಿ । ಜಗನ್ನಾಥ, **ರಸಗಂಗಾಧರ** : ರತ್ಯಾದಯ ವಾಸಿಷ್ಠಿನ್ನಾ ಭಗ್ನಾವರಣಾ ಚಿದೇವ ರಸಃ। ಜಗನಾಥನ ಅವತರಣವೆಂದು ಇದನ್ನು ಕೊಡುತ್ತಾನೆ—ತೈತ್ತರೀಯೋಪನಿಷತ್: ರಸೋ ವೈ ಸಃ । ರಸ್ಹಿವಾತಂ ಲಬ್ಧಾನ್ವಾssನನ್ದೀ ಭವತಿ । (ಸಂದರ್ಭ ಹಾಗೂ ಇತರ ಅವತರಣಗಳು ವಾಂಛಿತ)

31. ರಸವು ಸ್ವರೂಪಿಯಾಗಿದೆ ಎಂಬ ವಿಷಯದ ಚರ್ಚೆಗಾಗಿ ನೋಡಿರಿ : ಡಿ. ಕೆ. ಬೇಡೇಕರ, ರಸಸಿದ್ಧಾಂತಾಯೇ ಸ್ವರೂಪ ಭೇದತ : ಅಭಿವ್ಯಕ್ತಿಯೇ ಭಾರತೀಯ ತತ್ತ್ವ ; ಭಾವ–ವಿವೇಚನಾ, ಭೇದಕ ೮-೧೦. ಹಾಗೂ ಟಿಪ್ಪಣಿ (30)ರಲ್ಲಿಯ ಜಗನ್ನಾಥನ ಅವತರಣವನ್ನು ನೋಡಿರಿ.